ಸಂಖ್ಯೆ: ಕೃಇ 10 ಕೃವಸೇ 2019

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 14-02-2019.

ಇವರಿಂದ,
ಸರ್ಕಾರದ ಕಾರ್ಯದರ್ಶಿ,
ಕೃಷಿ ಇಲಾಖೆ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು-560 001.

ಇವರಿಗೆ,

ಕಾರ್ಯದರ್ಶಿಯವರು,
ಕರ್ನಾಟಕ ಸಭೆ
ವಿಧಾನಸೌಧ,
ಬೆಂಗಳೂರು-560 001.

ಮಾನ್ಯರೇ,

ವಿಷಯ: ಮಾನ್ಯ ವಿಧಾನ ಸಭೆ ಸದಸ್ಯರಾದ ಶ್ರೀ ದಿನಕರ್ ಕೇಶವ್ ಶೆಟ್ಟಿ (ಕುಮಟ) ಇವರು ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1064ಕ್ಕೆ ಉತ್ತರ ನೀಡುವ ಬಗ್ಗೆ.

*****

ಮಾನ್ಯ ವಿಧಾನ ಸಭೆ ಸದಸ್ಯರಾದ ಶ್ರೀ ದಿನಕರ್ ಕೇಶವ್ ಶೆಟ್ಟಿ (ಕುಮಟ) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1064ಕ್ಕೆ ಕೃಷಿ ಇಲಾಖೆಯ ಉತ್ತರದ 250 ಪ್ರತಿಗಳನ್ನು ಇದರೊಂದಿಗೆ ಮುಂದಿನ ಕ್ರಮಕ್ಕಾಗಿ ಲಗತ್ತಿಸಿ ಸಲ್ಲಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ವಿಶ್ವಾಸಿ,

(ಹೆಚ್.ಎನ್.ಲಕ್ಷ್ಮಣಗೌಡ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ (ಸೇವೆಗಳು ಮತ್ತು ಸಮನ್ವಯ).

ಕರ್ನಾಟಕ ವಿಧಾನ ಸಭೆ

ಸದಸ್ಯರ ಹೆಸರು	:	ಶ್ರೀ ದಿನಕರ್ ಕೇಶವ್ ಶೆಟ್ಟಿ (ಕುಮಟ)
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1064
ಉತ್ತರಿಸುವ ಸಚಿವರು	:	ಮಾನ್ಯ ಕೃಷಿ ಸಚಿವರು
ಉತ್ತರಿಸಬೇಕಾದ ದಿನಾಂಕ	:	15-02-2019

ಕ್ರ.ಸಂ.	ವಿಷಯ	ಉತ್ತರ
ಅ)	ರಾಜ್ಯದಲ್ಲಿರುವ ರೈತ ಸಂಪರ್ಕ ಕೇಂದ್ರಗಳಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕಳೆದ 5 ವರ್ಷಗಳಿಂದ ಲೆಕ್ಕಿಗರಾಗಿ ಸುಮಾರು 750ಕ್ಕೂ ಅಧಿಕ ಜನ ಕರ್ತವ್ಯ ನಿರ್ವಹಿಸುತ್ತಿರುವವರನ್ನು ಅಲ್ಲಿಯೇ ಮುಂದುವರಿಸಲು ಸರ್ಕಾರಕ್ಕೆ ಇರುವ ತೊಂದರೆಗಳೇನು;	ರೈತ ಸಂಪರ್ಕ ಕೇಂದ್ರಗಳಲ್ಲಿ ಲೆಕ್ಕಿಗರ ಹುದ್ದೆ ಮಂಜೂರಾಗದ ಕಾರಣ ಲೆಕ್ಕಿಗರ ಸೇವೆಯನ್ನು ಹೊರಗುತ್ತಿಗೆ ಆಧಾರದಲ್ಲಿ ಪಡೆಯಲಾಗುತ್ತಿದೆ.
ಆ)	ಇವರ ಬದಲಾಗಿ ಅದೇ ಹುದ್ದೆಗೆ ಡಿಪ್ಲೋಮಾ ಪದವೀಧರರನ್ನು ನೇಮಕ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;	ಇಲ್ಲ
ಇ)	ಒಂದು ವೇಳೆ ಡಿಪ್ಲೋಮ(ಕೃಷಿ) ಪದವೀಧರರನ್ನು ನೇಮಕ ಮಾಡಿಕೊಂಡಲ್ಲಿ ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವವರಿಗೆ ಯಾವ ರೀತಿ ನ್ಯಾಯ ಒದಗಿಸಲಾಗುವುದು (ವಿವರ ನೀಡುವುದು)?	ಅನ್ವಯಿಸುವುದಿಲ್ಲ

ಸಂಖ್ಯೆ: ಕೃಇ 10 ಕೃವಸೇ 2019

(ಎನ್.ಹೆಚ್.ಶಿವಶಂಕರ ರೆಡ್ಡಿ)
ಕೃಷಿ ಸಚಿವರು

N.M. SUBRAMANYA(?)
Agriculture Mi...



ಸಂಖ್ಯೆ : ಸಇ 55 ಎಂಆರ್ಇ 2019

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 14.02.2019

ಇವರಿಂದ :

ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಸಹಕಾರ ಇಲಾಖೆ,
ಬಹುಮಹಡಿಕಟ್ಟಡ,
ಬೆಂಗಳೂರು.

ಇವರಿಗೆ :

ಕಾರ್ಯದರ್ಶಿ,
ಕರ್ನಾಟಕ ವಿಧಾನಸಭೆ,
ವಿಧಾನಸೌಧ
ಬೆಂಗಳೂರು.

ಮಾನ್ಯರೇ,

ವಿಷಯ : ಕರ್ನಾಟಕ ವಿಧಾನ ಸಭೆಯ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:18ಕ್ಕೆ ಉತ್ತರಿಸುವ ಬಗ್ಗೆ

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಗುತ್ತೇದಾರ್ ಸುಭಾಷ್ ರುಕ್ಮಯ್ಯ (ಆಳಂದ) ಇವರು ಮಂಡಿಸಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:18ಕ್ಕೆ ದಿನಾಂಕ:15.02.2019ರಂದು ಉತ್ತರಿಸಬೇಕಿದ್ದು, ಸದರಿ ಪ್ರಶ್ನೆಗೆ ಉತ್ತರದ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.

ತಮ್ಮ ನಂಬುಗೆಯ,
V. Ratna 14/02/19
(ವಿ.ರತ್ನಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ-1,
ಸಹಕಾರ ಇಲಾಖೆ.

ಕರ್ನಾಟಕ ವಿಧಾನಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 18
2. ಸದಸ್ಯರ ಹೆಸರು : ಶ್ರೀ ಗುತ್ತೇದಾರ್ ಸುಭಾಷ್ ರುಕ್ಮಯ್ಯ (ಆಳಂದ)
3. ಉತ್ತರಿಸಬೇಕಾದ ದಿನಾಂಕ : 15.02.2019
4. ಉತ್ತರಿಸುವ ಸಚಿವರು : ಮಾನ್ಯ ಸಹಕಾರ ಸಚಿವರು

ಕ್ರ ಸಂ	ಪ್ರಶ್ನೆ	ಉತ್ತರ
ಅ	ಕಲಬುರಗಿ ಜಿಲ್ಲೆ ವ್ಯಾಪ್ತಿಯಲ್ಲಿ ಬರುವ ಎಪಿಎಂಸಿ ಮಾರುಕಟ್ಟೆಗಳಲ್ಲಿ ರೈತರುಗಳಿಂದ ಖರೀದಿಸುವ ತರಕಾರಿ, ಹಣ್ಣು, ದವಸ ಧಾನ್ಯಗಳಿಗೆ ಕಮೀಷನ್ ಹಣವನ್ನು ಪಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:	ಬಂದಿದೆ.
ಆ	ಬಂದಿದ್ದಲ್ಲಿ, ಯಾವ ಕ್ರಮ ಕೈಗೊಳ್ಳಲಾಗಿದೆ? (ಸಂಪೂರ್ಣ ವಿವರ ನೀಡುವುದು)	ಕಲಬುರಗಿ ಜಿಲ್ಲೆ ವ್ಯಾಪ್ತಿಯಲ್ಲಿ ಕಲಬುರಗಿ, ಸೇಡಂ, ಚಿತ್ತಾಪುರ, ಜೇವರ್ಗಿ, ಆಳಂದ, ಚಿಂಚೋಳಿ, ಅಫಜಲಪುರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳು ಕಾರ್ಯನಿರ್ವಹಿಸುತ್ತಿವೆ. ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ 1966ರ ಕಲಂ 78ರಡಿಯಲ್ಲಿ ಖರೀದಿದಾರರಿಂದ ಕಮಿಷನ್ ಪಡೆಯಲು ಈ ಕೆಳಕಂಡಂತೆ ಕಮಿಷನ್ ದರ ನಿಗದಿಪಡಿಸಿದ್ದು, ಕಾಯ್ದೆಯಲ್ಲಿ ರೈತರಿಂದ ಯಾವುದೇ ಕಮಿಷನ್ ಪಡೆಯಲು ಅವಕಾಶವಿಲ್ಲದಂತೆ ನಿರ್ಬಂಧಿಸಿದೆ. 1. ಆಹಾರ ಧ್ಯಾನಗಳು, ಬೇಳೆಕಾಳು, ಎಣ್ಣೆಬೀಜ, ಸಾಂಬಾರು ಪದಾರ್ಥಗಳು ಮುಂತಾದ ವಹಿವಾಟಿಗೆ ಶೇ.02ರಂತೆ 2. ಶೀಘ್ರ ಹಾಳಾಗುವ ಉತ್ಪನ್ನಗಳಾದ ಹಣ್ಣು, ತರಕಾರಿ, ಹೂವು ವಹಿವಾಟಿಗೆ ಶೇ.5ರಂತೆ ರಾಜ್ಯದಲ್ಲಿನ ಎಲ್ಲಾ ಮಾರುಕಟ್ಟೆ ಸಮಿತಿಗಳಿಗೆ ಕಾಯೆ ಕಲಂ 75, 78ಎ ಹಾಗೂ ಅನಧಿಕೃತ ಕಡಿತಗಳ ತಡೆಗಟ್ಟುವಿಕೆಗೆ ಸಂಬಂಧಿಸಿದಂತೆ ನಿಯಮಿತವಾಗಿ ಪರಿಶೀಲನೆ, ಮೇಲ್ವಿಚಾರಣೆ ಮಾಡಲು ಎಲ್ಲಾ ಸಮಿತಿಗಳಿಗೆ ಸುತ್ತೋಲೆ ನಿರ್ದೇಶನಗಳನ್ನು ನೀಡಲಾಗಿದೆ. ಕಾಯ್ದೆಯಲ್ಲಿನ ಅವಕಾಶದ ವಿರುದ್ಧ ನಡೆಯುವ ದಲ್ಲಾಲರ ಕುರಿತು ಮಾರುಕಟ್ಟೆ ಸಮಿತಿಯು ಸ್ಥಳೀಯ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಲು ಅವಕಾಶಿಸಿದೆ.

....2

		ಕಲಬುರಗಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯಲ್ಲಿ ರೈತರಾದ ಶ್ರೀ ಗುರುಶಾಂತ ಗೌಡ ಎಸ್.ಪಾಟೀಲ್ ಇವರು ಹಣ್ಣು ಮತ್ತು ತರಕಾರಿ ಮಾರಾಟದ ಮೇಲೆ ಶೇ.10ರಂತೆ ಅನಧಿಕೃತವಾಗಿ ಕಡಿತಗೊಳಿಸಿರುವ ಬಗ್ಗೆ ಈ ಕೆಳಕಂಡ ಸಂಸ್ಥೆಗಳ ವಿರುದ್ಧ ದೂರು ಸಲ್ಲಿಸಿರುತ್ತಾರೆ. 1. ಮೆ:ಎ.ಜಿ.ತುಗಾಂವ ಸಂಸ್ಥೆ ಇವರು ಮಾರಾಟದ ಬಿಲ್ ಮೌಲ್ಯ ರೂ.27,070/-ಕ್ಕೆ ಶೇ.10ರಂತೆ ರೂ.2,707/- ಹಾಗೂ ಮಾರಾಟದ ಬಿಲ್ ಮೌಲ್ಯ ರೂ.6,765/-ಕ್ಕೆ ಶೇ.10ರಂತೆ ರೂ.676/- ಒಟ್ಟು ರೂ.3,383/-ಗಳು 2. ಮೆ: ಎಸ್.ಎಸ್.ಕಲಶೇಟ್ಟಿ ಸಂಸ್ಥೆ ಇವರು ಮಾರಾಟದ ಬಿಲ್ ಮೌಲ್ಯ ರೂ.14,750/-ಕ್ಕೆ ಶೇ.10ರಂತೆ ರೂ.1475/- ಹಾಗೂ ಮಾರಾಟದ ಬಿಲ್ ಮೌಲ್ಯ ರೂ.7,315/-ಕ್ಕೆ ಶೇ.10ರಂತೆ ರೂ.731/- ಒಟ್ಟು ರೂ.2,206/-ಗಳು. ಮೇಲ್ಕಂಡ ಸಂಸ್ಥೆಗಳು ಅನಧಿಕೃತವಾಗಿ ಕಡಿತಗೊಳಿಸಿರುವ ಮೊತ್ತವನ್ನು ದೂರು ನೀಡಿರುವ ರೈತರಿಗೆ ಮರು ಸಂದಾಯ ಮಾಡಿಸಲಾಗಿದೆ ಹಾಗೂ ಆದೇಶ ಸಂಖ್ಯೆ:ಕೃಮಾಇ/ಕೃಉಮಾಸ/ಕ/414-415/2017-18, ದಿನಾಂಕ:03.06.2017ರನ್ವಯ ಕಲಬುರಗಿ ಸಮಿತಿಯ ಕಾರ್ಯದರ್ಶಿಯವರು ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ 1966ರ ಕಲಂ 73(2)(ಬಿ)ರಡಿಯಲ್ಲಿ ಮೇಲ್ಕಂಡ ಎರಡು ಸಂಸ್ಥೆಗಳ ಲೈಸನ್ಸ್‌ಗಳನ್ನು ದಿನಾಂಕ:03.06.2017 ರಿಂದ ಜಾರಿಗೆ ಬರುವಂತೆ ಒಂದು ವಾರದ ಅವಧಿಗೆ ಅಮಾನತ್ತುಗೊಳಿಸಲಾಗಿದೆ. ಮುಂದುವರೆದು, ಕಲಬುರಗಿ ಜಿಲ್ಲೆಯ ವ್ಯಾಪ್ತಿಯಲ್ಲಿನ ಉಳಿದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿ ರೈತರಿಂದ ಕಮಿಷನ್ ಪಡೆಯುತ್ತಿರುವ ಕುರಿತು ಯಾವುದೇ ದೂರುಗಳು ಸ್ವೀಕೃತಗೊಂಡಿರುವುದಿಲ್ಲ.

ಸಂಖ್ಯೆ: ಸಇ 55 ಎಂಆರ್‌ಇ 2019

(ಬಂಡೆಪ್ಪ ಕಾಶೆಂಪೂರ)

ಸಹಕಾರ ಸಚಿವರು.



ಕರ್ನಾಟಕ ಸರ್ಕಾರ

ಸಂ:ಬಿಸಿಡಬ್ಲ್ಯೂ 172 ಬಿಎಂಎಸ್ 2019

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ:14.02.2019

ಇವರಿಂದ:
ಸರ್ಕಾರದ ಕಾರ್ಯದರ್ಶಿಗಳು,
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ,
ವಿಕಾಸಸೌಧ,
ಬೆಂಗಳೂರು.

ಇವರಿಗೆ:
ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ/ಪರಿಷತ್ತು,
ವಿಧಾನಸೌಧ,
ಬೆಂಗಳೂರು.

ಮಾನ್ಯರೇ,

ವಿಷಯ: ಮಾನ್ಯ ವಿಧಾನ ಸಭೆ/ಪರಿಷತ್ತಿನ ಸದಸ್ಯರಾದ ಡಾ. ಅಜಯ್ ಸಿಂಗ್ ಕೆ.ಬಿ. ಇವರ ಚುಕ್ಕೆ ಗುರುತಿನ/ಗುರುತಿಲ್ಲದ ಪ್ರ.ಸಂ. 1224 ಕ್ಕೆ ಉತ್ತರಿಸುವ ಕುರಿತು.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಮಾನ್ಯ ವಿಧಾನ ಸಭೆ/ಪರಿಷತ್ತಿನ ಸದಸ್ಯರಾದ ಡಾ. ಅಜಯ್ ಸಿಂಗ್ ಕೆ.ಬಿ. ಇವರ ಚುಕ್ಕೆ ಗುರುತಿನ/ಗುರುತಿಲ್ಲದ ಪ್ರ.ಸಂ. 1224 ಕ್ಕೆ ಸಂಬಂಧಿಸಿದಂತೆ ಉತ್ತರದ 250 ಪ್ರತಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ ಮುಂದಿನ ಅಗತ್ಯ ಕ್ರಮಕ್ಕಾಗಿ ಕಳುಹಿಸಿಕೊಡಲಾಗಿದೆ.

ತಮ್ಮ ನಂಬುಗೆಯ,

(ಸಹಿ) 14/2

ಶಾಖಾಧಿಕಾರಿ,
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	1224
ಮಾನ್ಯ-ಸದಸ್ಯರ ಹೆಸರು	ಶ್ರೀ ಅಶೋಕ್ ನಾಯಕ್ ಕೆ.ಬಿ (ಶಿವಮೊಗ್ಗ ಗ್ರಾಮಾಂತರ)
ಉತ್ತರಿಸಬೇಕಾದ ದಿನಾಂಕ	15.02.2019
ಉತ್ತರಿಸುವ ಸಚಿವರು	ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
ಅ)	ಶಿವಮೊಗ್ಗ ಗ್ರಾಮಾಂತರ ವಿಧಾನ ಸಭಾ ಕ್ಷೇತ್ರದಲ್ಲಿ ಕಳೆದ 3 ವರ್ಷಗಳಲ್ಲಿ ಮಂಜೂರಾದ ಸಮುದಾಯ ಭವನಗಳೆಷ್ಟು;	ಶಿವಮೊಗ್ಗ ಗ್ರಾಮಾಂತರ ವಿಧಾನ ಸಭಾ ಕ್ಷೇತ್ರಕ್ಕೆ ಕಳೆದ ಮೂರು ವರ್ಷಗಳಲ್ಲಿ 10 ಸಮುದಾಯ ಭವನಗಳು ಮಂಜೂರಾಗಿದ್ದು, ವಿವರಗಳನ್ನು ಅನುಬಂಧ-1 ರಲ್ಲಿ ಒದಗಿಸಿದೆ.
ಆ)	ಬಿಡುಗಡೆಯಾದ ಅನುದಾನ ಮತ್ತು ವೆಚ್ಚ ಎಷ್ಟು;(ಗ್ರಾಮವಾರು, ಕಾಮಗಾರಿವಾರು ಸಂಪೂರ್ಣ ವಿವರ ನೀಡುವುದು)	ಮಾಹಿತಿಯನ್ನು ಅನುಬಂಧ-1 ರಲ್ಲಿ ನೀಡಲಾಗಿದೆ.
ಇ)	ಗ್ರಾಮಾಂತರ ವಿಧಾನ ಸಭಾ ಕ್ಷೇತ್ರದಲ್ಲಿ ಮಂಜೂರಾದ ಸಮುದಾಯ ಭವನಗಳಲ್ಲಿ ನಿರ್ಮಾಣ ಮಾಡಲು ಬಾಕಿ ಇರುವ ಸಮುದಾಯ ಭವನಗಳು ಎಷ್ಟು; (ವಿವರ ನೀಡುವುದು)	ಮಾಹಿತಿಯನ್ನು ಅನುಬಂಧ-2 ರಲ್ಲಿ ನೀಡಲಾಗಿದೆ.
ಈ)	ನಿರ್ಮಾಣ ಮಾಡಲು ಬಾಕಿ ಇರುವ ಸಮುದಾಯ ಭವನಗಳನ್ನು ಯಾವಾಗ ಪೂರ್ಣಗೊಳಿಸಲಾಗುವುದು?	ನಿರ್ಮಾಣ ಮಾಡಲು ಬಾಕಿ ಇರುವ ಸಮುದಾಯ ಭವನಗಳನ್ನು ಲಭ್ಯವಿರುವ ಅನುದಾನ ಹಾಗೂ ರಾಜ್ಯದ ಒಟ್ಟಾರೆ ಬೇಡಿಕೆಯನ್ನು ಅಧರಿಸಿ ಭವನಗಳನ್ನು ಪೂರ್ಣಗೊಳಿಸಲು ಕ್ರಮವಹಿಸಲಾಗುವುದು.

ಸಂ: ಹಿಂವಕ 172 ಬಿಎಂಎಸ್ 2019

(ಸಿ.ಪುಟ್ಟರಂಗಶೆಟ್ಟಿ)
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.

ಅನುಬಂಧ-1

ವಿವಿಧ ಸಮುದಾಯಗಳ ಅಭಿವೃದ್ಧಿ ಕಾರ್ಯಕ್ರಮದಡಿ ಕಳೆದ ಮೂರು ವರ್ಷಗಳಲ್ಲಿ ಶಿವಮೊಗ್ಗ ಗ್ರಾಮಾಂತರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಗೆ ಸಮುದಾಯ ಭವನ/ವಿದ್ಯಾರ್ಥಿನಿಲಯ ಕಟ್ಟಡಗಳ ನಿರ್ಮಾಣಕ್ಕೆ ಮಂಜೂರಾದ ಅನುದಾನ, ಬಿಡುಗಡೆಯಾದ ಅನುದಾನ ಮತ್ತು ಕಟ್ಟಡ ಪ್ರಗತಿ ವಿವರಗಳು:

ಜಿಲ್ಲೆಯ ಹೆಸರು: ಶಿವಮೊಗ್ಗ.					ರೂ. ಲಕ್ಷಗಳಲ್ಲಿ						
ಕ್ರ. ಸಂ	ಸಂಸ್ಥೆಯ ಹೆಸರು ಮತ್ತು ವಿಳಾಸ	ವಿಧಾನಸಭಾ ಕ್ಷೇತ್ರ	ಮಂಜೂರಾತಿ ವರ್ಷ	ಉದ್ದೇಶ (ಸಮುದಾಯ ಭವನ/ವಿದ್ಯಾರ್ಥಿ ನಿಲಯ)	ಮಂಜೂರಾದ ಮೊತ್ತ	ಜಿಲ್ಲಾಧಿಕಾರಿಗೆ ಬಿಡುಗಡೆಯಾದ ಮೊತ್ತ	ಸಂಸ್ಥೆಗೆ ಬಿಡುಗಡೆ ಮಾಡಿರುವ ಮೊತ್ತ	ಸಂಸ್ಥೆಗೆ ಬಿಡುಗಡೆಗೆ ಪಿ.ಡಿ. ಖಾತೆಯಲ್ಲಿ ಬಾಕಿ ಇರುವ ಮೊತ್ತ		ಕಟ್ಟಡ ಕಾಮಗಾರಿ ಪ್ರಗತಿ ಹಂತ	ಷರಾ
								ಪಿ.ಡಿ.ಖಾತೆ	ಖಜಾನೆಯಲ್ಲಿ		
1	2	3	4	5	6	7	8	9	10	11	12
1	ಶ್ರೀ ಭಗೀರಥ ಉಪ್ಪಾರ ಸಮಾಜ (ರಿ), ಮಾರಶೆಟ್ಟಿಹಳ್ಳಿ, ಭದ್ರಾವತಿ ತಾಲ್ಲೂಕು	ಶಿವಮೊಗ್ಗ ಗ್ರಾಮಂತರ	2016-17	ಸಮುದಾಯ ಭವನ	30.00	22.50	22.50	-	-	ಆರ್.ಸಿ.ಸಿ ಕಾಮಗಾರಿ ಮುಕ್ತಾಯವಾಗಿರುತ್ತದೆ	-
2	ಶ್ರೀ ಮೈಲಾರೇಶ್ವರ ಸಮುದಾಯ ಭವನ, ಹೊಳೆಹೊನ್ನೂರು ಗ್ರಾಮ, ಭದ್ರಾವತಿ ತಾಲ್ಲೂಕು.	ಶಿವಮೊಗ್ಗ ಗ್ರಾಮಂತರ	2017-18	ಸಮುದಾಯ ಭವನ	25.00	25.00	25.00	-	-	ಆರ್.ಸಿ.ಸಿ ಕಾಮಗಾರಿ ಮುಕ್ತಾಯವಾಗಿರುತ್ತದೆ	
3	ಶ್ರೀ ಮೈಲಾರೇಶ್ವರ ಸೇವಾ ಸಮಿತಿ (ರಿ), ಹೊಳೆಹೊನ್ನೂರು ಗ್ರಾಮ ಭದ್ರಾವತಿ ತಾಲ್ಲೂಕು ಶಿವಮೊಗ್ಗ ಜಿಲ	ಶಿವಮೊಗ್ಗ ಗ್ರಾಮಂತರ	2017-18	ಸಮುದಾಯ ಭವನ	20.00	5.00	5.00	-	-	ಆರ್.ಸಿ.ಸಿ ಕಾಮಗಾರಿ ಮುಕ್ತಾಯವಾಗಿರುತ್ತದೆ	ಹೆಚ್ಚುವರಿ ಸಹಾಯಧನ ಮಂಜೂರಾಗಿರುತ್ತದೆ
4	ಶ್ರೀ ಕರಿಯಮ್ಮ ದೇವಿ ಸೇವಾ ಸಮಿತಿ, ವಿದ್ಯಾನಗರ, ಹೊಳೆಹೊನ್ನೂರು, ಭದ್ರಾವತಿ ತಾಲ್ಲೂಕು.	ಶಿವಮೊಗ್ಗ ಗ್ರಾಮಂತರ	2017-18	ಸಮುದಾಯ ಭವನ	10.00	10.00	10.00	-	-	ಕಾಮಗಾರಿ ಪ್ರಗತಿಯಲ್ಲಿರುತ್ತದೆ.	

ಕ್ರ. ಸಂ	ಸಂಸ್ಥೆಯ ಹೆಸರು ಮತ್ತು ವಿಳಾಸ	ವಿಧಾನಸಭಾ ಕ್ಷೇತ್ರ	ಮಂಜೂರಾತಿ ವರ್ಷ	ಉದ್ದೇಶ (ಸಮುದಾಯ ಭವನ/ವಿದ್ಯಾರ್ಥಿ ನಿಲಯ)	ಮಂಜೂರಾದ ಮೊತ್ತ	ಜಿಲ್ಲಾಧಿಕಾರಿಗಳಿಗೆ ಬಿಡುಗಡೆಯಾದ ಮೊತ್ತ	ಸಂಸ್ಥೆಗೆ ಬಿಡುಗಡೆ ಮಾಡಿರುವ ಮೊತ್ತ	ಸಂಸ್ಥೆಗೆ ಬಿಡುಗಡೆಗೆ ಪಿ.ಡಿ. ಖಾತೆಯಲ್ಲಿ ಬಾಕಿ ಇರುವ ಮೊತ್ತ		ಕಟ್ಟಡ ಕಾಮಗಾರಿ ಪ್ರಗತಿ ಹಂತ	ಷರಾ
								ಪಿ.ಡಿ.ಖಾತೆ	ಖಜಾನೆಯಲ್ಲಿ		
5	ಶ್ರೀ ಕರಿಯಮ್ಮ ದೇವಿ ಸೇವಾ ಸಮಿತಿ(ರಿ) ಕಲ್ಯಾಣ ನಗರ ಕರಿಯಮ್ಮನ ಬೀದಿ. ಹೊಳೆಹೊನ್ನೂರು ಭದ್ರಾವತಿ ಶಿವಮೊಗ್ಗ ಜಿಲ್ಲೆ	ಶಿವಮೊಗ್ಗ ಗ್ರಾಮಾಂತರ	2017-18	ಸಮುದಾಯ ಭವನ	20.00	5.00	-	5.00	-	ಕಾಮಗಾರಿ ಪ್ರಗತಿಯಲ್ಲಿರುತ್ತದೆ.	ಹೆಚ್ಚುವರಿ ಸಹಾಯಧನ ಮಂಜೂರಾಗಿರುತ್ತದೆ
6	ಶಿವಮೊಗ್ಗ ಜಿಲ್ಲೆಯ ಶಿವಮೊಗ್ ತಾಲ್ಲೂಕು ಬಿ.ಬೀರನಹಳ್ಳಿ ಗ್ರಾಮ ಯಾದವ ಸಮುದಾಯ ಭವನ	ಶಿವಮೊಗ್ಗ ಗ್ರಾಮಾಂತರ	2017-18	ಸಮುದಾಯ ಭವನ	10.00	2.50	-	2.50	-	-	ಸಂಸ್ಥೆಯವರು ಅವಶ್ಯ ದಾಖಲಾತಿಗಳನ್ನು ಸಲ್ಲಿಸಿರುವುದಿಲ್ಲ ಅನುದಾನ ಬಿಡುಗಡೆ ಮಾಡಿರುವುದಿಲ್ಲ. ದಾಖಲಾತಿಗಳನ್ನು ಸಲ್ಲಿಸುವಂತೆ ಸೂಚಿಸಲಾಗಿದೆ.
7	ಶಿವಮೊಗ್ಗ ಜಿಲ್ಲೆಯ ಶಿವಮೊಗ್ ತಾಲ್ಲೂಕು ಕಾಚಿಗೆರೆ ಗ್ರಾಮ ಯಾದವ ಸಮುದಾಯ ಭವನ	ಶಿವಮೊಗ್ಗ ಗ್ರಾಮಾಂತರ	2017-18	ಸಮುದಾಯ ಭವನ	10.00	2.50	-	2.50	-	-	ಸಂಸ್ಥೆಯವರು ಅವಶ್ಯ ದಾಖಲಾತಿಗಳನ್ನು ಸಲ್ಲಿಸಿರುವುದಿಲ್ಲ ಅನುದಾನ ಬಿಡುಗಡೆ ಮಾಡಿರುವುದಿಲ್ಲ. ದಾಖಲಾತಿಗಳನ್ನು ಸಲ್ಲಿಸುವಂತೆ ಸೂಚಿಸಲಾಗಿದೆ.
8.	ಶ್ರೀ ರೇಣುಕಾಂಬ ಸಮುದಾಯ ಭವನ. ಭದ್ರಾಪುರ ಗ್ರಾಮ. ಶಿವಮೊಗ್ಗ ತಾ|| ಜಿ||	ಶಿವಮೊಗ್ಗ ಗ್ರಾಮಾಂತರ	2017-18	ಸಮುದಾಯ ಭವನ	10.00	2.50	2.50	-	-	ತಳಪಾಯದ ಕಾಮಗಾರಿ ಮುಕ್ತಾಯವಾಗಿದ್ದು, ಗೋಡೆ ಕಾಮಗಾರಿ ಪ್ರಾರಂಭಿಸಿರುತ್ತಾರೆ.	

ಕ್ರ. ಸಂ	ಸಂಸ್ಥೆಯ ಹೆಸರು ಮತ್ತು ವಿಳಾಸ	ವಿಧಾನಸಭಾ ಕ್ಷೇತ್ರ	ಮಂಜೂರಾತಿ ವರ್ಷ	ಉದ್ದೇಶ (ಸಮುದಾಯ ಭವನ/ವಿದ್ಯಾರ್ಥಿ ನಿಲಯ)	ಮಂಜೂರಾದ ಮೊತ್ತ	ಜಿಲ್ಲಾಧಿಕಾರಿಳಗೆ ಬಿಡುಗಡೆಯಾದ ಮೊತ್ತ	ಸಂಸ್ಥೆಗೆ ಬಿಡುಗಡೆ ಮಾಡಿರುವ ಮೊತ್ತ	ಸಂಸ್ಥೆಗೆ ಬಿಡುಗಡೆಗೆ ಪಿ.ಡಿ. ಖಾತೆಯಲ್ಲಿ ಬಾಕಿ ಇರುವ ಮೊತ್ತ		ಕಟ್ಟಡ ಕಾಮಗಾರಿ ಪ್ರಗತಿ ಹಂತ	ಷರಾ
								ಪಿ.ಡಿ.ಖಾತೆ	ಖಜಾನೆಯಲ್ಲಿ		
9	ಶ್ರೀ ವೀರಭದ್ರೇಶ್ವರ ಸ್ವಾಮಿ ಸಮುದಾಯ ಭವನ. ಕೊಟ್ಟಣಗರ ಬೀದಿ. ಭದ್ರಾವತಿ ತಾಲ್ಲೂಕು ಶಿವಮೊಗ್ಗ ಜಿಲ್ಲೆ	ಶಿವಮೊಗ್ಗ ಗ್ರಾಮಂತರ	2017-18	ಸಮುದಾಯ ಭವನ	15.00	3.75	3.75	-	-	ಆರ್.ಸಿ.ಸಿ ಕಾಮಗಾರಿ ಮುಕ್ತಾಯವಾಗಿರುತ್ತದೆ	
10	ಮರಾಠ ಸಮಾಜ (ರಿ). ಮಾರಶೆಟ್ಟಿಹಳ್ಳಿ ಗ್ರಾಮ. ಕಲ್ಲಿಹಾಳ ಅಂಚೆ. ಭದ್ರಾವತಿ ತಾಲ್ಲೂಕು	ಶಿವಮೊಗ್ಗ ಗ್ರಾಮಂತರ	2017-18	ಸಮುದಾಯ ಭವನ	10.00	2.50	2.50	-		ಆರ್.ಸಿ.ಸಿ ಕಾಮಗಾರಿ ಮುಕ್ತಾಯವಾಗಿರುತ್ತದೆ	
	ಒಟ್ಟು ಮೊತ್ತ				130.00	58.75	48.75	10.00	0.00		

ಅನುಬಂಧ-2

ವಿವಿಧ ಸಮುದಾಯಗಳ ಅಭಿವೃದ್ಧಿ ಕಾರ್ಯಕ್ರಮದಡಿ 2015-16 ನೇ ಸಾಲಿನಿಂದ 2018-19ನೇ ಸಾಲಿನವರೆಗೂ (ಕಳೆದ ಮೂರು ವರ್ಷಗಳ) ಶಿವಮೊಗ್ಗ ಗ್ರಾಮಾಂತರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಗೆ ಸಮುದಾಯ ಭವನ/ವಿದ್ಯಾರ್ಥಿನಿಲಯ ಕಟ್ಟಡಗಳ ನಿರ್ಮಾಣಕ್ಕೆ ಅನುದಾನ ಬಿಡುಗಡೆಯಾಗಿದ್ದು, ನಿರ್ಮಾಣ ಮಾಡಲು ಬಾಕಿ ಇರುವ ಸಮುದಾಯ ಭವನಗಳ ಸಂಖ್ಯೆ:

ಜಿಲ್ಲೆಯ ಹೆಸರು: ಶಿವಮೊಗ್ಗ.											
ಕ್ರ. ಸಂ	ಸಂಸ್ಥೆಯ ಹೆಸರು ಮತ್ತು ವಿಳಾಸ	ವಿಧಾನಸಭಾ ಕ್ಷೇತ್ರ	ಮಂಜೂರಾತಿ ವರ್ಷ	ಉದ್ದೇಶ (ಸಮುದಾಯ ಭವನ/ವಿದ್ಯಾರ್ಥಿ ನಿಲಯ)	ಮಂಜೂರಾದ ಮೊತ್ತ	ಜಿಲ್ಲಾಧಿಕಾರಿಗೆ ಬಿಡುಗಡೆಯಾದ ಮೊತ್ತ	ಸಂಸ್ಥೆಗೆ ಬಿಡುಗಡೆ ಮಾಡಿರುವ ಮೊತ್ತ	ಸಂಸ್ಥೆಗೆ ಬಿಡುಗಡೆಗೆ ಪಿ.ಡಿ. ಖಾತೆಯಲ್ಲಿ ಬಾಕಿ ಇರುವ ಮೊತ್ತ		ಕಟ್ಟಡ ಕಾಮಗಾರಿ ಪ್ರಗತಿ ಹಂತ	ಷರಾ
								ಪಿ.ಡಿ.ಖಾತೆ	ಖಜಾನೆಯಲ್ಲಿ		
1	2	3	4	5	6	7	8	9	10	11	12
1	ಶಿವಮೊಗ್ಗ ಜಿಲ್ಲೆಯ ಶಿವಮೊಗ್ ತಾಲ್ಲೂಕು ಬಿ.ಬೀರನಹಳ್ಳಿ ಗ್ರಾಮ ಯಾದವ ಸಮುದಾಯ ಭವನ	ಶಿವಮೊಗ್ಗ ಗ್ರಾಮಂತರ	2017-18	ಸಮುದಾಯ ಭವನ	10.00	2.50	-	2.50	-	-	ಸಂಸ್ಥೆಯವರು ಅವಶ್ಯ ದಾಖಲಾತಿಗಳನ್ನು ಸಲ್ಲಿಸಿರುವುದಿಲ್ಲ ಅನುದಾನ ಬಿಡುಗಡೆ ಮಾಡಿರುವುದಿಲ್ಲ. ದಾಖಲಾತಿಗಳನ್ನು ಸಲ್ಲಿಸುವಂತೆ ಸೂಚಿಸಲಾಗಿದೆ.
2	ಶಿವಮೊಗ್ಗ ಜಿಲ್ಲೆಯ ಶಿವಮೊಗ್ ತಾಲ್ಲೂಕು ಕಾಟಿಗೆರೆ ಗ್ರಾಮ ಯಾದವ ಸಮುದಾಯ ಭವನ	ಶಿವಮೊಗ್ಗ ಗ್ರಾಮಂತರ	2017-18	ಸಮುದಾಯ ಭವನ	10.00	2.50	-	2.50	-	-	ಸಂಸ್ಥೆಯವರು ಅವಶ್ಯ ದಾಖಲಾತಿಗಳನ್ನು ಸಲ್ಲಿಸಿರುವುದಿಲ್ಲ ಅನುದಾನ ಬಿಡುಗಡೆ ಮಾಡಿರುವುದಿಲ್ಲ. ದಾಖಲಾತಿಗಳನ್ನು ಸಲ್ಲಿಸುವಂತೆ ಸೂಚಿಸಲಾಗಿದೆ.
	ಒಟ್ಟು ಮೊತ್ತ				20.00	5.00	0.00	5.00	0.00		



ಕರ್ನಾಟಕ ಸರ್ಕಾರ

ಸಂಖ್ಯೆ: ಪಸಂಮೀ 21 ಪಸಸೇ 2019

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸ ಸೌಧ
ಬೆಂಗಳೂರು ದಿನಾಂಕ: 14.02.2019

ಇವರಿಂದ :-
ಸರ್ಕಾರದ ಕಾರ್ಯದರ್ಶಿ,
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ,
ಬೆಂಗಳೂರು.

ಇವರಿಗೆ :-
ಕಾರ್ಯದರ್ಶಿಗಳು,
ಕರ್ನಾಟಕ ವಿಧಾನಸಭೆ
ವಿಧಾನ ಸೌಧ,
ಬೆಂಗಳೂರು.

ಮಾನ್ಯರೇ,

ವಿಷಯ:- ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀ.ಸೋಮಲಿಂಗಪ್ಪ.ಎಂ.ಎಸ್ (ಸಿರಗುಪ್ಪ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1176 ಕ್ಕೆ ಉತ್ತರಿಸುವ ಬಗ್ಗೆ.

****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀ.ಸೋಮಲಿಂಗಪ್ಪ.ಎಂ.ಎಸ್ (ಸಿರಗುಪ್ಪ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1176 ಕ್ಕೆ ಕನ್ನಡ ಉತ್ತರದ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

(ಎಂ. ಧನಂಜಯ) 14/2/19
ಪೀಠಾಧಿಕಾರಿ-2,
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ,
(ಪಶುಸಂಗೋಪನೆ-ಎ)
14/2/19

ಪ್ರತಿ:

ಮಾನ್ಯ ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1176
ಸದಸ್ಯರ ಹೆಸರು	:	ಶ್ರೀ. ಸೋಮಲಿಂಗಪ್ಪ.ಎಂ.ಎಸ್ (ಸಿರಗುಪ್ಪ)
ಉತ್ತರಿಸುವ ದಿನಾಂಕ	:	15.02.2019
ಉತ್ತರಿಸುವ ಸಚಿವರು	:	ಪಶು ಸಂಗೋಪನೆ ಮತ್ತು ಮೀನುಗಾರಿಕೆ ಸಚಿವರು

ಕ್ರ.ಸಂ	ಪ್ರಶ್ನೆಗಳು	ಉತ್ತರಗಳು
ಅ)	ಸಿರಗುಪ್ಪ ವಿಧಾನಸಭಾ ಕ್ಷೇತ್ರದಲ್ಲಿರುವ ಪಶು ಆಸ್ಪತ್ರೆಗಳ ಸಂಖ್ಯೆ ಎಷ್ಟು; ಮಂಜೂರಾದ ಹುದ್ದೆಗಳ ಸಂಖ್ಯೆ ಎಷ್ಟು; ಖಾಲಿ ಇರುವ ಒಟ್ಟು ಹುದ್ದೆಗಳೆಷ್ಟು (ವಿವರ ನೀಡುವುದು)	ಸಿರಗುಪ್ಪ ವಿಧಾನಸಭಾ ಕ್ಷೇತ್ರದಲ್ಲಿ ಕೆಳಕಂಡಂತೆ ಪಶುವೈದ್ಯ ಆಸ್ಪತ್ರೆಗಳು ಕಾರ್ಯ ನಿರ್ವಹಿಸುತ್ತಿವೆ.

ವಿಧಾನಸಭಾ ಕ್ಷೇತ್ರ	ಪಶು ಆಸ್ಪತ್ರೆ	ಪಶು ಚಿಕಿತ್ಸಾಲಯ	ಸಂಚಾರಿ ಪಶು ಚಿಕಿತ್ಸಾಲಯ	ಒಟ್ಟು
ಸಿರಗುಪ್ಪ	4	8	1	13

ಕ್ರ. ಸಂ	ಹುದ್ದೆಗಳ ವಿವರ	ಸಿರುಗುಪ್ಪ		
		ಮಂಜೂರು	ಭರ್ತಿ	ಖಾಲಿ
1	ಸಹಾಯಕ ನಿರ್ದೇಶರು/ ಮುಖ್ಯ ಪಶುವೈದ್ಯಾಧಿಕಾರಿಗಳು (ಆಡಳಿತ)/ಮುಖ್ಯ /ಹಿರಿಯ ಪಶುವೈದ್ಯಾಧಿಕಾರಿಗಳು/ ಪಶುವೈದ್ಯಾಧಿಕಾರಿಗಳು	14	4	10
2	ಜಾನುವಾರು ಅಭಿವೃದ್ಧಿ ಅಧಿಕಾರಿ	1	0	1
3	ಜಾನುವಾರು ಅಧಿಕಾರಿ	3	2	1
4	ಹಿರಿಯ ಪಶುವೈದ್ಯಕೀಯ ಪರೀಕ್ಷಕರು	1	1	0
5	ಪಶುವೈದ್ಯಕೀಯ ಪರೀಕ್ಷಕರು	8	5	3
6	ಪಶುವೈದ್ಯಕೀಯ ಸಹಾಯಕರು	3	1	2

7	ದ್ವಿತೀಯ ದರ್ಜೆ ಸಹಾಯಕರು	1	1	0
8	ವಾಹನ ಚಾಲಕರು	1	0	1
9	ಡಿ–ದರ್ಜೆ ನೌಕರರು	24	7	17
	ಒಟ್ಟು	**56**	**21**	**35**

ಆ)	ಈ ಪಶು ಚಿಕಿತ್ಸಾಲಯಗಳಲ್ಲಿ ಸಿಬ್ಬಂದಿಯ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು.
ಇ)	ಈ ಪಶು ಚಿಕಿತ್ಸಾಲಯಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಯಾವ ಕ್ರಮ ಕೈಗೊಳ್ಳಲಾಗಿದೆ;	ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಕೈಗೊಂಡ ಕ್ರಮದ ವಿವರ ಈ ಕೆಳಕಂಡಂತೆ ನೀಡಲಾಗಿದೆ. **ಪಶುವೈದ್ಯಾಧಿಕಾರಿಗಳ** ಹುದ್ದೆಗೆ ಸಂಬಂಧಿಸಿದಂತೆ:– 2017–18 ನೇ ಸಾಲಿನ ಹೈದ್ರಾಬಾದ್ ಕರ್ನಾಟಕ ಪ್ರದೇಶದಲ್ಲಿನ ನೇಮಕಾತಿಯಲ್ಲಿ ಸಿರುಗುಪ್ಪ ತಾಲ್ಲೂಕು 01 ಪಶುವೈದ್ಯಾಧಿಕಾರಿ ಹುದ್ದೆಗೆ ನೇಮಕಾತಿ ಮೂಲಕ ಭರ್ತಿ ಮಾಡಲಾಗಿದೆ ಹಾಗೂ ಹೈದ್ರಾಬಾದ್ ಕರ್ನಾಟಕ ಪ್ರದೇಶದ ಅಭ್ಯರ್ಥಿಗಳಿಗೆ ಮೀಸಲಿಟ್ಟ 65 ಹುದ್ದೆಗಳಿಗೆ ನೇಮಕಾತಿ ಮಾಡಲು ವಿಶೇಷ ನೇರನೇಮಕಾತಿ ನಿಯಮ ರಚನೆಗೆ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ **ಪಶುವೈದ್ಯಕೀಯ ಪರೀಕ್ಷಕರು:–** ಹೈದ್ರಾಬಾದ್ ಕರ್ನಾಟಕ ಪ್ರದೇಶದ ಅಭ್ಯರ್ಥಿಗಳಿಗೆ ಮೀಸಲಿಟ್ಟ 32 ಹುದ್ದೆಗಳಿಗೆ ನೇಮಕಾತಿ ಮಾಡಲು ವಿಶೇಷ ನೇರನೇಮಕಾತಿ ನಿಯಮ ರಚನೆಗೆ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ. **ಪಶುವೈದ್ಯಕೀಯ ಸಹಾಯಕರು:–** ಹೈದ್ರಾಬಾದ್ ಕರ್ನಾಟಕ ಪ್ರದೇಶದ ಅಭ್ಯರ್ಥಿಗಳಿಗೆ ಮೀಸಲಿಟ್ಟ 83 ಹುದ್ದೆಗಳಿಗೆ ನೇಮಕಾತಿ ಮಾಡಲು ವಿಶೇಷ ನೇರನೇಮಕಾತಿ ನಿಯಮ ರಚನೆಗೆ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ. **ವಾಹನ ಚಾಲಕರು:–** ಹೈದ್ರಾಬಾದ್ ಕರ್ನಾಟಕ ಪ್ರದೇಶದ ಅಭ್ಯರ್ಥಿಗಳಿಗೆ ಮೀಸಲಿಟ್ಟ 15 ಹುದ್ದೆಗಳಿಗೆ ನೇಮಕಾತಿ ಮಾಡಲು ವಿಶೇಷ ನೇರನೇಮಕಾತಿ ನಿಯಮ ರಚನೆಗೆ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ. **ಡಿ–ದರ್ಜೆ ನೌಕರರು:–** ಹೈದ್ರಾಬಾದ್ ಕರ್ನಾಟಕ ಪ್ರದೇಶದ ಅಭ್ಯರ್ಥಿಗಳಿಗೆ ಮೀಸಲಿಟ್ಟ 466 ಹುದ್ದೆಗಳಿಗೆ ನೇಮಕಾತಿ ಮಾಡಲು ವಿಶೇಷ ನೇರನೇಮಕಾತಿ ನಿಯಮ ರಚನೆಗೆ ಪ್ರಕ್ರಿಯೆ

		ಚಾಲ್ತಿಯಲ್ಲಿರುತ್ತದೆ. ಹಾಗೂ ಸಿರಗುಪ್ಪ ವಿಧಾನ ಸಭಾ ವ್ಯಾಪ್ತಿಯಲ್ಲಿ ಖಾಲಿ ಇರುವ 17 ಡಿ ದರ್ಜೆ ಹುದ್ದೆಗಳಲ್ಲಿ 5 ಹುದ್ದೆಗಳಿಗೆ ಹೊರಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲಾಗಿದೆ.
ಈ)	ಪಶು ವೈದ್ಯರ ಕೊರತೆಯಿಂದ ಸರಿಯಾದ ಸಮಯಕ್ಕೆ ಚಿಕಿತ್ಸೆ ಸಿಗದೆ ಹಲವಾರು ಜಾನುವಾರುಗಳು ಮರಣ ಹೊಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಚಿಕಿತ್ಸೆ ಇಲ್ಲದೆ ಜಾನುವಾರುಗಳು ಮರಣ ಹೊಂದಿರುವ ಯಾವುದೇ ವರದಿಗಳು ಇರುವುದಿಲ್ಲ.
ಉ)	ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?	ಅನ್ವಯಿಸುವುದಿಲ್ಲ.

ಸಂ: ಪಸಂಮೀಇ 21 ಪಸಸೇ 2019

(ವೆಂಕಟರಾವ್ ನಾಡಗೌಡ)
ಪಶುಸಂಗೋಪನೆ ಹಾಗೂ ಮೀನುಗಾರಿಕೆ ಸಚಿವರು



ಕರ್ನಾಟಕ ಸರ್ಕಾರ

ಸಂಖ್ಯೆ:ಪಸಂಮೀ 30 ಸಲೆವಿ 2019

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸ ಸೌಧ
ಬೆಂಗಳೂರು, ದಿನಾಂಕ:14.02.2019

ಇವರಿಂದ:

ಸರ್ಕಾರದ ಕಾರ್ಯದರ್ಶಿ,
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ,
ಬೆಂಗಳೂರು.

ಇವರಿಗೆ:

ಕಾರ್ಯದರ್ಶಿ,
ಕರ್ನಾಟಕ ವಿಧಾನಸಭೆ ಸಚಿವಾಲಯ.
ವಿಧಾನ ಸೌಧ,
ಬೆಂಗಳೂರು.

ಮಾನ್ಯರೇ,

ವಿಷಯ: ವಿಧಾನಸಭೆ ಮಾನ್ಯ ಸದಸ್ಯರಾದ ಡಾ॥ ಯತೀಂದ್ರ ಸಿದ್ದರಾಮಯ್ಯ (ವರುಣ) ವಿಧಾನ ಸಭಾ ಕ್ಷೇತ್ರ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:55 ಕ್ಕೆ ಉತ್ತರ ಕಳುಹಿಸುವ ಬಗ್ಗೆ.

***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ವಿಧಾನಸಭೆ ಮಾನ್ಯ ಸದಸ್ಯರಾದ ಡಾ॥ ಯತೀಂದ್ರ ಸಿದ್ದರಾಮಯ್ಯ (ವರುಣ) ವಿಧಾನ ಸಭಾ ಕ್ಷೇತ್ರ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:55 ಕ್ಕೆ ಕನ್ನಡ ಭಾಷೆಯಲ್ಲಿ ಉತ್ತರದ 150 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ

14/02/2019
(ಟಿ.ಹನುಮಂತೇಗೌಡ)
ಸರ್ಕಾರದ ಅಧೀನ ಕಾರ್ಯದರ್ಶಿ,
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ,
(ಪಶುಸಂಗೋಪನೆ)

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	55
ಸದಸ್ಯರ ಹೆಸರು	:	ಡಾ॥ ಯತೀಂದ್ರ ಸಿದ್ದರಾಮಯ್ಯ (ವರುಣ)
ಉತ್ತರಿಸುವ ದಿನಾಂಕ	:	**15.02.2019**
ಉತ್ತರಿಸುವ ಸಚಿವರು	:	ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವರು

ಕ್ರ.ಸಂ.	ಪ್ರಶ್ನೆಗಳು	ಉತ್ತರಗಳು
ಅ)	ರಾಜ್ಯದಲ್ಲಿ ಗುರುತಿಸಲಾಗಿರುವ ಜಾನುವಾರುಗಳೆಷ್ಟು; ಹಾಲಿ ಕಾರ್ಯನಿರ್ವಹಿಸುತ್ತಿರುವ ಪಶು ಚಿಕಿತ್ಸಾಲಯಗಳಿಗೆ ಜಾನುವಾರುಗಳ ಸಂಖ್ಯೆಗನುಗುಣವಾಗಿ ಸಮರ್ಪಕವಾಗಿ ಔಷಧಿಗಳನ್ನು ಸರಬರಾಜು ಮಾಡಲಾಗುತ್ತಿದೆಯೇ; (ವಿವರ ನೀಡುವುದು)	19ನೇ ಜಾನುವಾರು ಗಣತಿ –2012 ರನ್ವಯ ರಾಜ್ಯದಲ್ಲಿರುವ ಒಟ್ಟು ಜಾನುವಾರುಗಳ ಸಂಖ್ಯೆ: 2.90.00.784. (ಕೆಳಗಿನ ಕೋಷ್ಟಕ ನೋಡಿ)

ದನಗಳು	9516484
ಎಮ್ಮೆಗಳು	3470505
ಕುರಿಗಳು	9583761
ಮೇಕೆಗಳು	4796147
ಹಂದಿಗಳು	304798
ಇತರೆ *	1329089
ಒಟ್ಟು	**2,90,00,784**

(*ಕುದುರೆಗಳು, ಸಣ್ಣಕುದುರೆಗಳು, ಹೇಸರಗತ್ತೆಗಳು, ಕತ್ತೆಗಳು, ಒಂಟೆಗಳು, ನಾಯಿಗಳು, ಮೊಲಗಳು ಮತ್ತು ಆನೆಗಳು)

ಜಾನುವಾರುಗಳ ಸಂಖ್ಯೆಗಳಿನುಗುಣವಾಗಿ ಪ್ರತಿ ಜಾನುವಾರಿಗೆ ಚಿಕಿತ್ಸೆಗಾಗಿ ದಿನವೊಂದಕ್ಕೆ 47 ಪೈಸೆಗಳಂತೆ ಅವಶ್ಯಕತೆಯಿದ್ದು, ಅನುದಾನ ಲಭ್ಯತೆಗನುಸಾರ ಸಮರ್ಪಕವಾಗಿ ಔಷಧಿಗಳನ್ನು ಸರಬರಾಜು ಮಾಡಲಾಗುತ್ತಿದೆ.

ಕ್ರ.ಸಂ.	ಪ್ರಶ್ನೆಗಳು	ಉತ್ತರಗಳು
ಆ)	ಕಳೆದ ಮೂರು ವರ್ಷಗಳಿಂದ ವರುಣ ವಿಧಾನಸಭಾ ಕ್ಷೇತ್ರದಲ್ಲಿ ಗುರುತಿಸಲಾದ ಜಾನುವಾರುಗಳೆಷ್ಟು; ಎಷ್ಟು ಜಾನುವಾರುಗಳಿಗೆ ಚಿಕಿತ್ಸೆ ನೀಡಲಾಗಿದೆ; ಸಕಾಲದಲ್ಲಿ ಚಿಕಿತ್ಸೆ ಕೊರತೆ ಹಾಗೂ ಔಷಧಿಗಳ ಕೊರತೆಯ ಕಾರಣದಿಂದ ಜಾನುವಾರುಗಳು ಮರಣ ಹೊಂದಿರುವ ಪ್ರಕರಣಗಳಿವೆಯೇ;	ವರುಣ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ 19ನೇ ಜಾನುವಾರುಗಣತಿ 2012ರಂತೆ ಜಾನುವಾರು ಸಂಖ್ಯೆ ಈ ಕೆಳಕಂಡಂತಿರುತ್ತದೆ.

ಮಿಶ್ರತಳಿ ದನ	:	11523
ಸ್ಥಳೀಯ ದನ	:	4715
ಎಮ್ಮೆ	:	1336
ಕುರಿ	:	11548
ಮೇಕೆ	:	3812
ಒಟ್ಟು:	:	32934

ವರುಣ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಪಶುವೈದ್ಯ ಸಂಸ್ಥೆಗಳಲ್ಲಿ ಕಳೆದ 3 ವರ್ಷಗಳಲ್ಲಿ ಚಿಕಿತ್ಸೆ ನೀಡಿದ ಜಾನುವಾರುಗಳ ಸಂಖ್ಯೆ ಈ ಕೆಳಕಂಡಂತಿರುತ್ತದೆ.

2016–17	2017–18	2018–19
16520	15016	18473 (ಜನವರಿ 2019ರ ಅಂತ್ಯಕ್ಕೆ)

ಚಿಕಿತ್ಸೆಯ ಕೊರತೆ ಹಾಗೂ ಔಷಧಿಗಳ ಕೊರತೆಯ ಕಾರಣದಿಂದ ಯಾವುದೇ ಜಾನುವಾರುಗಳು ಮರಣ ಹೊಂದಿರುವುದಿಲ್ಲ.

ಕ್ರ.ಸಂ.	ಪ್ರಶ್ನೆಗಳು	ಉತ್ತರಗಳು
ಇ)	ಇದ್ದಲ್ಲಿ, ಇದಕ್ಕೆ ಪರಿಹಾರ ಪಾವತಿಸಿರುವ ಬಗ್ಗೆ ವಿವರ ನೀಡುವುದು?	ಅನ್ವಯಿಸುವುದಿಲ್ಲ.

ಸಂಖ್ಯೆ: ಪಸಂಮೀ 30 ಸಲೆವಿ 2019

(ವೆಂಕಟರಾವ್ ನಾಡಗೌಡ)
ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವರು



ಕರ್ನಾಟಕ ಸರ್ಕಾರ

ಸಂ:ಬಿಸಿಡಬ್ಲ್ಯೂ 153 ಬಿಎಂಎಸ್ 2019

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ: 14.02.2019

ಇವರಿಂದ:

ಸರ್ಕಾರದ ಕಾರ್ಯದರ್ಶಿಗಳು,
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ,
ವಿಕಾಸಸೌಧ,
ಬೆಂಗಳೂರು.

ಇವರಿಗೆ:

ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ/ಪರಿಷತ್ತು,
ವಿಧಾನಸೌಧ,
ಬೆಂಗಳೂರು.

ಮಾನ್ಯರೇ,

ವಿಷಯ: ಮಾನ್ಯ ವಿಧಾನ ಸಭೆ/ಪರಿಷತ್ತಿನ ಸದಸ್ಯರಾದ ಶ್ರೀ/ಶ್ರೀಮತಿ ರವಿ ಡಿ.ಸಿ. ಚನ್ನಣ್ಣವರ ಇವರ ಚುಕ್ಕೆ ಗುರುತಿನ/ಗುರುತಿಲ್ಲದ ಪ್ರ.ಸಂ. 284 ಕ್ಕೆ ಉತ್ತರಿಸುವ ಕುರಿತು.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಮಾನ್ಯ ವಿಧಾನ ಸಭೆ/ಪರಿಷತ್ತಿನ ಸದಸ್ಯರಾದ ಶ್ರೀ/ಶ್ರೀಮತಿ ರವಿ ಡಿ.ಸಿ. ಚನ್ನಣ್ಣವರ ಇವರ ಚುಕ್ಕೆ ಗುರುತಿನ/ಗುರುತಿಲ್ಲದ ಪ್ರ.ಸಂ. 284 ಕ್ಕೆ ಸಂಬಂಧಿಸಿದಂತೆ ಉತ್ತರದ 250 ಪ್ರತಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ ಮುಂದಿನ ಅಗತ್ಯ ಕ್ರಮಕ್ಕಾಗಿ ಕಳುಹಿಸಿಕೊಡಲಾಗಿದೆ.

ತಮ್ಮ ನಂಬುಗೆಯ,

(ಸಹಿ) 14/2

ಶಾಖಾಧಿಕಾರಿ
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	284
ಮಾನ್ಯ ಸದಸ್ಯರ ಹೆಸರು	ಶ್ರೀ ರವಿ.ಸಿ.ಟಿ (ಚಿಕ್ಕಮಗಳೂರು)
ಉತ್ತರಿಸಬೇಕಾದ ದಿನಾಂಕ	15.02.2019
ಉತ್ತರಿಸುವ ಸಚಿವರು	ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ	ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಕಳೆದ ಮೂರು ವರ್ಷಗಳಲ್ಲಿ ಚಿಕ್ಕಮಗಳೂರು ಜಿಲ್ಲೆಗೆ ಬಿಡುಗಡೆ ಮಾಡಿರುವ ಅನುದಾನವೆಷ್ಟು (ತಾಲ್ಲೂಕುವಾರು ವಿವರ ಒದಗಿಸುವುದು);	ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಕಳೆದ ಮೂರು ವರ್ಷಗಳಲ್ಲಿ ಚಿಕ್ಕಮಗಳೂರು ಜಿಲ್ಲೆಗೆ ಬಿಡುಗಡೆ ಮಾಡಿರುವ ಮತ್ತು ಖರ್ಚು ಮಾಡಿರುವ ಅನುದಾನದ ತಾಲ್ಲೂಕುವಾರು ವಿವರವನ್ನು **ಅನುಬಂಧ-1ರಲ್ಲಿ ನೀಡಲಾಗಿದೆ.**
ಆ	ಈ ಅನುದಾನವನ್ನು ಯಾವ ಯಾವ ಉದ್ದೇಶಗಳಿಗಾಗಿ ವೆಚ್ಚ ಮಾಡಲಾಗಿದೆ;	
ಇ	ಈ ಅನುದಾನದಲ್ಲಿ ಅಲೆಮಾರಿ ಹಾಗೂ ಅರೆಅಲೆಮಾರಿ ಜನಾಂಗದವರು ವಾಸಿಸುವ ಗ್ರಾಮಗಳಲ್ಲಿ ಮೂಲಸೌಕರ್ಯ ಒದಗಿಸಲು ಎಷ್ಟು ವೆಚ್ಚ ಮಾಡಲಾಗಿದೆ? (ವರ್ಷವಾರು ತಾಲ್ಲೂಕುವಾರು ಕಾಮಗಾರಿಗಳ ವಿವರ ಒದಗಿಸುವುದು)	ಅಲೆಮಾರಿ ಹಾಗೂ ಅರೆಅಲೆಮಾರಿ ಜನಾಂಗದವರು ವಾಸಿಸುವ ಗ್ರಾಮಗಳಲ್ಲಿ ಮೂಲಸೌಕರ್ಯ ಕಾಮಗಾರಿಗಳಿಗೆ ಬಿಡುಗಡೆ ಮತ್ತು ವೆಚ್ಚ ಮಾಡಲಾದ ವರ್ಷವಾರು, ತಾಲ್ಲೂಕುವಾರು ವಿವರವನ್ನು **ಅನುಬಂಧ-2ರಲ್ಲಿ ನೀಡಲಾಗಿದೆ.**

ಸಂ: ಹಿಂವಕ 153 ಬಿಎಂಎಸ್ 2019

(ಸಿ.ಪುಟ್ಟರಂಗಶೆಟ್ಟಿ)
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.

ಅನುಬಂಧ-1

ವರ್ಷ: 2017-18

ಜಿಲ್ಲೆಯ ಹೆಸರು: ಚಿಕ್ಕಮಗಳೂರು

ಕ್ರ. ಸಂ	ಕಾರ್ಯಕ್ರಮದ ಹೆಸರು ಮತ್ತು ಲೆಕ್ಕಶೀರ್ಷಿಕೆ	ಜಿಲ್ಲಾ ಕಛೇರಿ, ಚಿಕ್ಕಮಗಳೂರು		ತಾಲ್ಲೂಕಿನ ಹೆಸರು: ಚಿಕ್ಕಮಗಳೂರು		ತಾಲ್ಲೂಕಿನ ಹೆಸರು: ಕಡೂರು		ತಾಲ್ಲೂಕಿನ ಹೆಸರು: ಕೊಪ್ಪ		ತಾಲ್ಲೂಕಿನ ಹೆಸರು: ಮೂಡಿಗೆರೆ		ತಾಲ್ಲೂಕಿನ ಹೆಸರು: ನರಸಿಂಹರಾಜಪುರ		ತಾಲ್ಲೂಕಿನ ಹೆಸರು: ಶೃಂಗೇರಿ		ತಾಲ್ಲೂಕಿನ ಹೆಸರು: ತರೀಕೆರೆ	
		ಬಿಡುಗಡೆ ಯಾಗಿರುವ ಮೊತ್ತ	ಖರ್ಚಾಗಿರುವ ಮೊತ್ತ	ಬಿಡುಗಡೆ ಯಾಗಿರುವ ಮೊತ್ತ	ಖರ್ಚಾಗಿರುವ ಮೊತ್ತ	ಬಿಡುಗಡೆ ಯಾಗಿರುವ ಮೊತ್ತ	ಖರ್ಚಾಗಿರುವ ಮೊತ್ತ	ಬಿಡುಗಡೆ ಯಾಗಿರುವ ಮೊತ್ತ	ಖರ್ಚಾಗಿರುವ ಮೊತ್ತ	ಬಿಡುಗಡೆ ಯಾಗಿರುವ ಮೊತ್ತ	ಖರ್ಚಾಗಿರುವ ಮೊತ್ತ	ಬಿಡುಗಡೆ ಯಾಗಿರುವ ಮೊತ್ತ	ಖರ್ಚಾಗಿರುವ ಮೊತ್ತ	ಬಿಡುಗಡೆ ಯಾಗಿರುವ ಮೊತ್ತ	ಖರ್ಚಾಗಿರುವ ಮೊತ್ತ	ಬಿಡುಗಡೆ ಯಾಗಿರುವ ಮೊತ್ತ	ಖರ್ಚಾಗಿರುವ ಮೊತ್ತ
	ರಾಜ್ಯ ವಲಯ ಯೋಜನೇತರ																
1	ಅತ್ಯಂತ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ಲಿಮಿಟೆಡ್ 2225-03-102-0-12	-		-	-	-	-	-	-	-	-						
2	ವಿವಿಧ ಸಮುದಾಯಗಳ ಅಭಿವೃದ್ಧಿ 2225-03-001-0-05	413.75	413.75	-	-	-	-			--	--						
3	ತರಬೇತಿ, ಅರಿವು ಮತ್ತು ಪ್ರೋತ್ಸಾಹ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗಾಗಿ ಕಾರ್ಯಕ್ರಮ : 2225-03-277-2-37	15.07	12.83	1.13	1.13	-	-	-	-	-	-			0.43	0.43	5.62	5.62
4	ಹಿಂ ವ ವಿದ್ಯಾರ್ಥಿಗಳಿಗೆ ಮೆ ನಂ ವಿ ವೇತನ (ಕೇಂ.ಪು.ಯೋ) 2225-03-277-2-51	-	-	32.78	32.78	0.26	0.26	2.72	2.72	2.80	2.80			0.08	0.08	0.57	0.57
5	ಹಿಂ ವ ವಿದ್ಯಾರ್ಥಿಗಳಿಗೆ ಮೆ ಪೂ ವಿ ವೇತನ (ಕೇಂ.ಪು.ಯೋ) 2225-03-277-2-52	-	-	0.03	0.03	38.42	38.42	9.73	9.73	12.09	12.09	7.55	5.47	0.02	0.02	17.85	17.85
6	2225-03-277-2-53 ಮೆಟ್ರಿಕ್ ಪೂರ್ವ/ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳು OBJECT CODE:059	-	-	161.25	161.25	67.24	67.24			12.00	11.87					16.33	16.33
		-	-	-	-	-	-	-	-			6.87	4.55	19.01	19.01		
	OBJECT CODE: 034	-	-	25.62	25.62	-	-	-	-	2.42	2.42	5.03	4.81	3.58	3.58	3.10	3.06
	OBJECT CODE: 423	-	-	4.12	4.12	4.25	4.25	-	-	0.90	0.90	1.17	0.40	0.51	0.51	0.51	0.51
	OBJECT CODE: 422	-	-	20.60	20.60	1.55	1.55	-	-	0.59	0.59	2.73	0.99	1.50	1.50	1.53	1.51
7	ಆಹಾರ ಮತ್ತು ವಸತಿ ಸಹಾಯ - ವಿದ್ಯಾಸಿರಿ2225-03-800-0-31	93.53	93.50	-	-	-	-	-	-	-	-			-			
8	2225-03-277-3-11 ತಾಲ್ಲೂಕು ಕಛೇರಿಗಳಿಗೆ ಡಾಟಾ ಎಂಟ್ರಿ ಅಪರೇಟರ್ ಗ್ರೇಡ್-2 ಸಿಬ್ಬಂದಿಗಳ ಗೌರವಧನ ಪಾವತಿ(034)	-	-	1.92	1.92	0.66	0.66	3.20	2.14	2.06	2.06	2.00	1.34	1.71	1.71	1.04	0.97
	ವಾಹನ ಬಾಡಿಗೆ(059)	-	-	1.00	1.00	1.08	1.08	-	-	-	-	1.27	0.99	0.87	0.52	1.48	1.47
	ಗ್ರೂಪ್ ಡಿ ನೌಕರರ ವೇತನ(051)	-	-	0.42	0.42	0.42	0.42	-	-	1.36	1.36	1.09	0.84				
	ಒಟ್ಟು	522.35	520.08	248.87	248.87	113.88	113.88	15.65	14.59	34.22	34.09	27.71	19.39	27.71	27.36	18.03	17.89
	ಜಿಲ್ಲಾವಲಯ ಯೋಜನೇತರ																
1	[illegible]			4.00	4.00	4.50	4.50	2.00	1.98	2.50	2.50	3.00	2.81				
2	ಜಿಲ್ಲಾ ಕಛೇರಿ 2225-00-103-0-39	53.00	52.96	-	-					-							

ಕ್ರ. ಸಂ	ಯೋಜನೆ ಹೆಸರು ಮತ್ತು ಲೆಕ್ಕಶೀರ್ಷಿಕೆ	ಜಿಲ್ಲಾ ಕಛೇರಿ, ಚಿಕ್ಕಮಗಳೂರು		ತಾಲ್ಲೂಕಿನ ಹೆಸರು: ಚಿಕ್ಕಮಗಳೂರು		ತಾಲ್ಲೂಕಿನ ಹೆಸರು: ಕಡೂರು		ತಾಲ್ಲೂಕಿನ ಹೆಸರು: ಕೊಪ್ಪ		ತಾಲ್ಲೂಕಿನ ಹೆಸರು: ಮೂಡಿಗೆರೆ		ತಾಲ್ಲೂಕಿನ ಹೆಸರು: ನ.ರಾ.ಪುರ		ತಾಲ್ಲೂಕಿನ ಹೆಸರು: ಶೃಂಗೇರಿ		ತಾಲ್ಲೂಕಿನ ಹೆಸರು: ತರೀಕೆರೆ	
		ಬಿಡುಗಡೆಯಾಗಿರುವ ಮೊತ್ತ	ಖರ್ಚಾಗಿರುವ ಮೊತ್ತ	ಬಿಡುಗಡೆಯಾಗಿರುವ ಮೊತ್ತ	ಖರ್ಚಾಗಿರುವ ಮೊತ್ತ	ಬಿಡುಗಡೆಯಾಗಿರುವ ಮೊತ್ತ	ಖರ್ಚಾಗಿರುವ ಮೊತ್ತ	ಬಿಡುಗಡೆಯಾಗಿರುವ ಮೊತ್ತ	ಖರ್ಚಾಗಿರುವ ಮೊತ್ತ	ಬಿಡುಗಡೆಯಾಗಿರುವ ಮೊತ್ತ	ಖರ್ಚಾಗಿರುವ ಮೊತ್ತ	ಬಿಡುಗಡೆಯಾಗಿರುವ ಮೊತ್ತ	ಖರ್ಚಾಗಿರುವ ಮೊತ್ತ	ಬಿಡುಗಡೆಯಾಗಿರುವ ಮೊತ್ತ	ಖರ್ಚಾಗಿರುವ ಮೊತ್ತ	ಬಿಡುಗಡೆಯಾಗಿರುವ ಮೊತ್ತ	ಖರ್ಚಾಗಿರುವ ಮೊತ್ತ
	ವಿದ್ಯಾರ್ಥಿ ನಿಲಯಗಳ ನಿರ್ವಹಣೆ 2225-00-103-0-26 (091)	-	-	490.02	490.02	162.55	162.55	26.30	24.87	113.00	111.63	29.00	27.47	15.30	12.16	63.10	63.10
	ವಿದ್ಯಾರ್ಥಿ ನಿಲಯಗಳ ನಿರ್ವಹಣೆ 2225-00-103-0-26 (090)	-	-	-	-	756.35	756.35	65.00	65.00			70.00	66.72	108.82	108.82	199.01	199.01
	ಹೊರಗುತ್ತಿಗೆ ವೇತನ 2225-00-103-0-26 (034)	-	-	80.95	80.875	73.20	73.20	24.30	24.30	15.12	15.12	26.00	25.12	26.20	26.20	41.77	41.76
4	[illegible] ತರಬೇತಿ ಕೇಂದ್ರಗಳ ನಿರ್ವಹಣೆ 2225-00-103-0-53	-	-	-	-	-	-	5.00	5.00	-	-			-	-	-	-
5	ಕಟ್ಟಡಗಳ ವೆಚ್ಚ ಮತ್ತು ನಿರ್ವಹಣೆ 2225-00-103-0-40	55.00	55.00	-	-	-	-	-	-	-	-			-	-	-	-
6	ಹಿಂದುಳಿದ ವರ್ಗಗಳ ತಾಲ್ಲೂಕು ವಿಸ್ತರಣಾ ಕಛೇರಿಗಳು 2225-00-103-0-74	-	-	1.75	1.75	7.00	3.92	1.50	1.50	8.24	5.66	5.75	4.28	7.66	1.41	5.69	5.33
7	ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ 2225-00-103-0-66	-	-	110.00	110.00	100.00	96.19	25.00	24.99	28.00	26.42	27.98	27.98	26.00	22.78	61.77	43.24
8	[illegible] ಶಿಷ್ಯವೇತನ 2225-00-103-0-58	4.00	3.99	-	-	-	-	-	-	-	-			-	-	-	-
9	ವಿದ್ಯಾರ್ಥಿ ನಿಲಯಗಳಲ್ಲಿರುವವರಿಗೆ ಪ್ರೋತ್ಸಾಹ 2225-00-103-0-79	-	-	8.50	8.50	10.28	4.73	1.18	0.55	1.71	0.62	1.00	1.00	2.41	1.00	2.51	0.61
10	ಉಪಕರಣಗಳು 2225-00-103-0-47	17.49	ಹಿಂದಿರುಗಿಸಲಾಗಿದೆ.	-	-			-	-	-	-			-	-	-	-
11	ಇತರೆ ಹಿಂ ವರ್ಗಗಳಿಗೆ ಶುಲ್ಕ ವಿನಾಯಿತಿ 2225-00-103-0-28	623.75	623.62	-	-	-	-	-	-	-	-			-	-	-	-
12	[illegible] ಪುರಸ್ಕಾರ 2225-00-103-0-56	-	-	1.00	1.00	-	-	-	-	-	-			-	-	-	-
13	ಹೊಲಿಗೆ ತರಬೇತಿ ಕೇಂದ್ರಗಳ ನಿರ್ವಹಣೆ 2225-00-103-0-78	-	-	-	-	4.00	4.00	-	-	-	-			-	-	-	-
14	ಅನಾಥಾಲಯಗಳಿಗೆ ಸಹಾಯಧನ 2225-00-103-0-73	-	-	-	-	-	-	-	-	-	-			-	-	-	-
	ಒಟ್ಟು	753.24	735.57	696.22	696.15	1117.88	1105.44	150.28	148.19	168.57	161.95	162.73	155.41	188.39	174.37	376.35	355.55

ಅನುಬಂಧ-2

ಮೂಲ ಸೌಕರ್ಯ ಕಾಮಗಾರಿಗಳ ವರ್ಷವಾರು, ತಾಲ್ಲೂಕುವಾರು ವಿವರ

ಕ್ರ ಸಂ	ವರ್ಷ	ತಾಲ್ಲೂಕು	ಸ್ಥಳ	ಕಾಮಗಾರಿ ವಿವರ	ಕಾಮಗಾರಿ ಯನ್ನು ವಹಿಸಿರುವ ಏಜೆನ್ಸಿಯ ಹೆಸರು, ವಿಳಾಸ	ಬಿಡುಗಡೆ ಮಾಡಲಾದ ಅನುದಾನ	ವಿನಿಯೋಗಿಸಿರುವ ಅನುದಾನ
1	2015-16	ಕಡೂರು	ಮಂಗೇನಹಳ್ಳಿ, ಗೊಲ್ಲರಹಟ್ಟಿ	ಸಿಸಿ ರಸ್ತೆ ಮತ್ತು ಬಾಕ್ಸ್ ಚರಂಡಿ ನಿರ್ಮಾಣ	ಪಂ.ರಾ.ಇಂ. ವಿಭಾಗ. ಚಿಕ್ಕಮಗಳೂರು	10.00	8.345
			ದೊಂಬಿದಾಸರ ಕಾಲೋನಿ (1.ಜೋಡಿಹೋಚಿಹಳ್ಳಿ ಗ್ರಾ.ಪಂ. ದಾಸರಹಟ್ಟಿ, 2.ನಿಡಘಟ್ಟ ಗ್ರಾ.ಪಂ. ದಾಸರಹಟ್ಟಿ 3. ದೇವನೂರು ಗ್ರಾ.ಪಂ. ಜಡಕನಕಟ್ಟೆ ದಾಸರಹಟ್ಟಿ 4.ಘುಲ್ಲೇನಹಳ್ಳಿ ಗ್ರಾ.ಪಂ. ಬ್ಯಾಗಡೇಹಳ್ಳಿ ದಾಸರಹಟ್ಟಿ)			15.00	13.233
			ಚೀಲನಹಳ್ಳಿ ಕಾಲೋನಿ			15.00	14.78
			ಒಟ್ಟು			40.00	36.36
2	2016-17	ತರೀಕೆರೆ	ಕಾರೇಹಳ್ಳಿ ಗೊಲ್ಲರಹಟ್ಟಿ	ಸಿಸಿ ರಸ್ತೆ ಮತ್ತು ಚರಂಡಿ ನಿರ್ಮಾಣ	ಪಂ.ರಾ.ಇಂ. ವಿಭಾಗ. ಚಿಕ್ಕಮಗಳೂರು	8.00	-
			ಅರಬಲ ಗೊಲ್ಲರಹಟ್ಟಿ			8.00	6.832
			ಬಾಳಯ್ಯನ ಹೊಸೂರು ಗೊಲ್ಲರಹಟ್ಟಿ			5.00	4.892
		ತರೀಕೆರೆ	ಶಿವನಿ ಹೋಬಳಿ ಚಾವೂರು ಗ್ರಾಮ			8.00	6.361
			ಅಜ್ಜಂಪುರ ಹೋಬಳಿಯ ಅಜ್ಜಂಪುರ ಗ್ರಾಮ			8.00	6.832

	[illegible]	ತಾಲ್ಲೂಕು	ಸ್ಥಳ	ಕಾಮಗಾರಿ ವಿವರ	ಕಾಮಗಾರಿ ಯನ್ನು ವಹಿಸಿರುವ ಏಜೆನ್ಸಿಯ ಹೆಸರು, ವಿಳಾಸ	ಬಿಡುಗಡೆ ಮಾಡಲಾದ ಅನುದಾನ	ವಿನಿಯೋಗಿಸಿರುವ ಅನುದಾನ
		ತರೀಕೆರೆ	ಲಕ್ಕವಳ್ಳಿ ಹೋಬಳಿ ದಾಸರಹಟ್ಟಿ ಗ್ರಾಮ	ಸಿಸಿ ರಸ್ತೆ ಮತ್ತು ಚರಂಡಿ ನಿರ್ಮಾಣ	ಪಂ.ರಾ.ಇಂ. ವಿಭಾಗ, ಚಿಕ್ಕಮಗಳೂರು	8.00	6.298
			ಶಿವನಿ ಹೋಬಳಿ ಹುಚ್ಚೇನಹಟ್ಟಿ ಗ್ರಾಮ			8.00	6.060
		ಕಡೂರು	ಎಮ್ಮೆದೊಡ್ಡಿ			10.00	7.79
			ಡಿ.ದೇವರಾಜು ಅರಸು ಹೆಳವರ ಹಟ್ಟಿ			10.00	9.971
			ಹೋಚಿಹಳ್ಳಿ			10.00	-
			ಟಿ.ಬಿ.ಕಾವಲು (ದೊಂಬಿದಾಸ)			8.00	7.727
			ನಿಡಘಟ್ಟ(ಬುಂಡೆಬೆಸ್ತ)			10.00	8.05
			ಡಿ.ಕಾರೇಹಳ್ಳಿ			10.00	7.751
	2016-17	ಚಿಕ್ಕಮಗಳೂರು	ಅಜ್ಜನಹಟ್ಟಿ	ಸಿಸಿ ರಸ್ತೆ ಮತ್ತು ಚರಂಡಿ ನಿರ್ಮಾಣ	ಉಪ ನಿರ್ದೇಶಕರು, ಕೆ.ಆರ್.ಐ.ಡಿ. ಎಲ್. ಚಿಕ್ಕಮಗಳೂರು	10.00	10.00
			ಜೋಡಿ ಹೋಚಿಹಳ್ಳಿ ಗೊಲ್ಲರಹಟ್ಟಿ			10.00	10.00
			ಮಂಗೇನಹಳ್ಳಿ ಗೊಲ್ಲರಹಟ್ಟಿ			10.00	10.00
			ಒಟ್ಟು			141.00	108.56
3	2017-18	ಕಡೂರು	ತ್ಯಾಗದಹಳ್ಳಿ	ಸಿಸಿ ರಸ್ತೆ ಮತ್ತು ಬಾಕ್ಸ್ ಚರಂಡಿ ನಿರ್ಮಾಣ	ಕೆ.ಆರ್.ಐ. ಡಿ.ಎಲ್. ಚಿಕ್ಕಮಗಳೂರು	10.00	10.00
			ಪುರಾಯ ಪಟ್ಟಣ ಹೋಬಳಿ, ನಿಡಘಟ್ಟ ಗ್ರಾ. ಪಂ. ಟಿ.ಬಿ.ಕಾವಲು. ದಾಸರ ಹಟ್ಟಿ			10.00	10.00
			ಜರಕನಕಟ್ಟೆ			10.00	10.00
			ದಾಸರಹಟ್ಟಿ ಗ್ರಾಮ ಕರೇಕಲ್ಲಹಳ್ಳಿ			8.00	8.00
			ಪುರಾಯಪಟ್ಟಣ ಹೋಬಳಿ, ಜೋಡಿಹೋಚಿಹಳ್ಳಿ ಗ್ರಾಮ ಪಂಚಾಯಿತಿ ಗೊಲ್ಲರಹಟ್ಟಿ ಗ್ರಾಮ	ಸಿಸಿ ರಸ್ತೆ ಮತ್ತು ಬಾಕ್ಸ್ ಚರಂಡಿ ನಿರ್ಮಾಣ	ಕೆ.ಆರ್.ಐ. ಡಿ.ಎಲ್. ಚಿಕ್ಕಮಗಳೂರು	10.00	10.00
			ಪುರಾಯಪಟ್ಟಣ ಹೋಬಳಿ, ನಾಗರಾಳು ಗ್ರಾಮ ಪಂಚಾಯಿತಿ ಮಂಗೇನಹಳ್ಳಿ ಬಸವರಾಜ ಮನೆಯಿಂದ ಈರಣ್ಣನ ಮನೆಯವರೆಗೆ			10.00	10.00

ಕ್ರ ಸಂ	ವರ್ಷ	ತಾಲ್ಲೂಕು	ಸ್ಥಳ	ಕಾಮಗಾರಿ ವಿವರ	ಕಾಮಗಾರಿ ಯನ್ನು ವಹಿಸಿರುವ ಏಜೆನ್ಸಿಯ ಹೆಸರು. ವಿಳಾಸ	ಬಿಡುಗಡೆ ಮಾಡಲಾದ ಅನುದಾನ	ವಿನಿಯೋಗಿಸಿರುವ ಅನುದಾನ
	2017-18	ಕಡೂರು	ದೇವರಾಜು ಅರಸು ಹೆಳವರ ಹಟ್ಟಿ	ಸಿಸಿ ರಸ್ತೆ ಮತ್ತು ಬಾಕ್ಸ್ ಚರಂಡಿ ನಿರ್ಮಾಣ	ಕೆ.ಆರ್.ಐ. ಡಿ.ಎಲ್. ಚಿಕ್ಕಮಗಳೂರು	10.00	10.00
			ಹರಳಘಟ್ಟ			10.00	10.00
		ತರೀಕೆರೆ	ಕೆಸರುಕೊಪ್ಪ			10.00	10.00
			ದಾಸರಹಟ್ಟಿ ಗ್ರಾಮ			10.00	10.00
			ಶಿವನಿ ಶ್ರೀರಗಲಿಪುರ			10.00	10.00
		ಒಟ್ಟು				108.00	108.00
	2017-18	ಕಡೂರು	ಕಲ್ಕೆರೆ ಪಂಚಾಯ್ತಿ, ಕೆ.ಗೊಲ್ಲರಹಟ್ಟಿ ಗ್ರಾಮ	ಸಿಸಿ ರಸ್ತೆ ಮತ್ತು ಚರಂಡಿ ನಿರ್ಮಾಣ	ಪಂ.ರಾ.ಇಂ. ವಿಭಾಗ. ಚಿಕ್ಕಮಗಳೂರು	8.00	8.00
			ಅಂತರಘಟ್ಟೆ ಪಂಚಾಯ್ತಿ ಪಿ.ಡಿ. ಗೊಲ್ಲರಹಟ್ಟಿ ಗ್ರಾಮ			5.00	5.00
			ಜೋಡಿಹೋಚಿಹಳ್ಳಿ ಗ್ರಾ.ಪಂ. ಹೋಚಿಹಳ್ಳಿ ಗೊಲ್ಲರಹಟ್ಟಿ			5.00	5.00
			ಸಖರಾಯಪಟ್ಟಣ ಲಕ್ಯಾ ಹೋಬಳಿ, ನಾಗರಾಳು ಗ್ರಾ. ಪಂ. ಮಂಗೇನಹಳ್ಳಿ ಗೊಲ್ಲರಹಟ್ಟಿ, ಭಾಗ್ಯಮ್ಮನ ಮನೆಯಿಂದ ಕದಿರಮ್ಮನ ಮನೆಯವರೆಗೆ			4.00	4.00
		ತರೀಕೆರೆ	ಗೇರುಮರಡಿ		ಕೆ.ಆರ್.ಐ. ಡಿ.ಎಲ್. ಚಿಕ್ಕಮಗಳೂರು	5.00	-
			ಮಂಡ್ರೇ			5.00	-
			ವೋದಿಹಳ್ಳಿ			5.00	-
		ಚಿಕ್ಕಮಗಳೂರು	ಎಸ್.ಬಿದರೆ ಗೊಲ್ಲರಹಟ್ಟಿ	ಸಿಸಿ ರಸ್ತೆ ಮತ್ತು ಚರಂಡಿ ನಿರ್ಮಾಣ	ಪಂ.ರಾ.ಇಂ. ವಿಭಾಗ. ಚಿಕ್ಕಮಗಳೂರು	5.00	4.50
			ಅಜ್ಜನಗೊಲ್ಲರಹಟ್ಟಿ			4.00	-
		ಒಟ್ಟು				46.00	26.50

	ವರ್ಷ	ತಾಲ್ಲೂಕು	ಸ್ಥಳ	ಕಾಮಗಾರಿ ವಿವರ	ಕಾಮಗಾರಿ ಯನ್ನು ವಹಿಸಿರುವ ಏಜೆನ್ಸಿಯ ಹೆಸರು. ವಿಳಾಸ	ಬಿಡುಗಡೆ ಮಾಡಲಾದ ಅನುದಾನ.	ವಿನಿಯೋಗಿಸಿರುವ ಅನುದಾನ
	2017-18	ಕಡೂರು	ಬೀರೂರು ಹೋಬಳಿ ಹರಳಘಟ್ಟ ಪಂಚಗುಂಟಲು ಹೆಳವರ ಕಂಗಲಿ ಚಂದ್ರಮ್ಮ ಹೆಳವರ ಇವರ ಮನೆಯಿಂದ ಈಶ್ವರಪ್ಪನವರ ಮನೆಯವರೆಗೆ	ಸಿಸಿ ರಸ್ತೆ / ಚರಂಡಿ ನಿರ್ಮಾಣ	ಕೆ.ಆರ್.ಐ. ಡಿ.ಎಲ್. ಚಿಕ್ಕಮಗಳೂರು	10.00	10.00
			ದೇವರಾಜ ಅರಸು ಹೆಳವರಹಟ್ಟಿ ದೊರೆ ಹೆಳವರ್ ಮನೆಯಿಂದ ಹೆಳವ ಜನಾಂಗದ ಸರ್ಕಾರಿ ಶಾಲೆಯವರೆಗೆ			10.00	10.00
		ಒಟ್ಟು				20.00	20.00



ಕರ್ನಾಟಕ ಸರ್ಕಾರ

ಸಂಖ್ಯೆ: ಪಸಂಮೀ 37 ಪಅಸೇ 2019

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸ ಸೌಧ
ಬೆಂಗಳೂರು ದಿನಾಂಕ: 14.02.2019

ಇವರಿಂದ:
ಸರ್ಕಾರದ ಕಾರ್ಯದರ್ಶಿ,
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ,
ಬೆಂಗಳೂರು.

ಇವರಿಗೆ:
ಕಾರ್ಯದರ್ಶಿಗಳು,
ಕರ್ನಾಟಕ ವಿಧಾನ ಸಭೆ
ವಿಧಾನ ಸೌಧ,
ಬೆಂಗಳೂರು.

ಮಾನ್ಯರೇ,

ವಿಷಯ:- ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಸಂಜೀವ ಮಠಂದೂರ್(ಪುತ್ತೂರು), ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1102 ರ ಬಗ್ಗೆ.

*****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಸಂಜೀವ ಮಠಂದೂರ್(ಪುತ್ತೂರು), ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1102 ಕ್ಕೆ ಕನ್ನಡ ಉತ್ತರದ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

(ಎಂ. ಧನಂಜಯ) 14/2/19
ಪೀಠಾಧಿಕಾರಿ-2,
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ,
(ಪಶುಸಂಗೋಪನೆ-ಎ)

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1102
ಸದಸ್ಯರ ಹೆಸರು	:	ಶ್ರೀ. ಸಂಜೀವ ಮಠಂದೂರ್(ಪುತ್ತೂರು)
ಉತ್ತರಿಸುವ ದಿನಾಂಕ	:	15.02.2019
ಉತ್ತರಿಸುವ ಸಚಿವರು	:	ಪಶು ಸಂಗೋಪನೆ ಮತ್ತು ಮೀನುಗಾರಿಕೆ ಸಚಿವರು

ಕ್ರ.ಸಂ	ಪ್ರಶ್ನೆಗಳು	ಉತ್ತರಗಳು
ಅ)	ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲ್ಲೂಕಿನ ಕೊಯಿಲಾ ದಲ್ಲಿ ಆರಂಭ ಮಾಡಿರುವ ಪಶುಸಂಗೋಪನಾ ಕಾಲೇಜು 2019-20ರಲ್ಲಿ ಶೈಕ್ಷಣಿಕ ತರಗತಿಗಳನ್ನು ಆರಂಭಿಸಲಿದೆಯೇ;	ಪಶುಸಂಗೋಪನಾ ಕಾಲೇಜು 2019-20 ರ ಶೈಕ್ಷಣಿಕ ವರ್ಷದಲ್ಲಿ ತರಗತಿಗಳನ್ನು ಪ್ರಾರಂಭಿಸಲು ಸಾಧ್ಯವಾಗುವುದಿಲ್ಲ.
ಆ)	2019-20ರಲ್ಲಿ ತರಗತಿಗಳು ಆರಂಭಿಸಲು ಸಾಧ್ಯವಾಗದಿದ್ದರೆ ಅದಕ್ಕೆ ಕಾರಣಗಳೇನು?	ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲ್ಲೂಕಿನ ಕೊಯಿಲಾ ದಲ್ಲಿನ ಪಶುಸಂಗೋಪನಾ ಕಾಲೇಜಿನ ಕಟ್ಟಡದ ಕಾಮಗಾರಿ ಪ್ರಗತಿಯ ಹಂತದಲ್ಲಿರುವುದರಿಂದ 2019-20 ರಲ್ಲಿ ಶೈಕ್ಷಣಿಕ ವರ್ಷದಲ್ಲಿ ತರಗತಿಗಳನ್ನು ಪ್ರಾರಂಭಿಸಲು ಸಾಧ್ಯವಾಗುವುದಿಲ್ಲ.

ಸಂ: ಪಸಂಮೀ 37 ಪಅಸೇ 2019

(ವೆಂಕಟರಾವ್ ನಾಡಗೌಡ)
ಪಶುಸಂಗೋಪನೆ ಹಾಗೂ ಮೀನುಗಾರಿಕೆ ಸಚಿವರು



ಕರ್ನಾಟಕ ಸರ್ಕಾರ

ಸಂ:ಬಿಸಿಡಬ್ಲ್ಯೂ 165 ಬಿಎಂಎಸ್ 2019

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ: 02.2019

ಇವರಿಂದ:
ಸರ್ಕಾರದ ಕಾರ್ಯದರ್ಶಿಗಳು,
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ,
ವಿಕಾಸಸೌಧ,
ಬೆಂಗಳೂರು.

ಇವರಿಗೆ:
ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ/ಪರಿಷತ್ತು,
ವಿಧಾನಸೌಧ,
ಬೆಂಗಳೂರು.

ಮಾನ್ಯರೇ,

ವಿಷಯ: ಮಾನ್ಯ ವಿಧಾನ ಸಭೆ/ಪರಿಷತ್ತಿನ ಸದಸ್ಯರಾದ ಡಾ. ಬಸನಗೌಡ ದದ್ದಲ್ ಇವರ ಚುಕ್ಕೆ ಗುರುತಿನ/ಗುರುತಿಲ್ಲದ ಪ್ರ.ಸಂ. 233ಕ್ಕೆ ಉತ್ತರಿಸುವ ಕುರಿತು.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಮಾನ್ಯ ವಿಧಾನ ಸಭೆ/ಪರಿಷತ್ತಿನ ಸದಸ್ಯರಾದ ಡಾ. ಬಸನಗೌಡ ದದ್ದಲ್ ಇವರ ಚುಕ್ಕೆ ಗುರುತಿನ/ಗುರುತಿಲ್ಲದ ಪ್ರ.ಸಂ. 233ಕ್ಕೆ ಸಂಬಂಧಿಸಿದಂತೆ ಉತ್ತರದ 250 ಪ್ರತಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ ಮುಂದಿನ ಅಗತ್ಯ ಕ್ರಮಕ್ಕಾಗಿ ಕಳುಹಿಸಿಕೊಡಲಾಗಿದೆ.

ತಮ್ಮ ನಂಬುಗೆಯ,

(ಸಹಿ)

ಶಾಖಾಧಿಕಾರಿ
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	933
ಮಾನ್ಯ ಸದಸ್ಯರ ಹೆಸರು	ಶ್ರೀ ಬಸನಗೌಡ ದದ್ದಲ್ (ರಾಯಚೂರು ಗ್ರಾಮಾಂತರ)
ಉತ್ತರಿಸಬೇಕಾದ ದಿನಾಂಕ	15.02.2019
ಉತ್ತರಿಸುವ ಸಚಿವರು	ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಹಿಂದುಳಿದ ವರ್ಗಗಳ ಸಮುದಾಯ ಭವನಗಳ ನಿರ್ಮಾಣಕ್ಕೆ ಸರ್ಕಾರ ಎಷ್ಟು ಅನುದಾನ ಒದಗಿಸಿದೆ; (ಜಿಲ್ಲಾವಾರು ಮಾಹಿತಿ ಒದಗಿಸುವುದು)	ರಾಜ್ಯದಲ್ಲಿ ಹಿಂದುಳಿದ ವರ್ಗಗಳ ಸಮುದಾಯ ಭವನಗಳ ನಿರ್ಮಾಣಕ್ಕೆ 2018-19 ನೇ ಸಾಲಿನಲ್ಲಿ ರೂ. 3500.00 ಲಕ್ಷಗಳನ್ನು ಒದಗಿಸಿದ್ದು, ಜಿಲ್ಲಾವಾರು ಅನುದಾನ ಒದಗಿಸುವುದಿಲ್ಲ ಹಾಗೂ ರಾಜ್ಯದ ಒಟ್ಟಾರೆ ಬೇಡಿಕೆ ಮತ್ತು ಅನುದಾನದ ಲಭ್ಯತೆಗೆ ಒಳಪಟ್ಟು ಅನುದಾನ ಬಿಡುಗಡೆ ಮಾಡಲಾಗುತ್ತಿದೆ.
ಆ)	ರಾಯಚೂರು ಗ್ರಾಮೀಣ ಕ್ಷೇತ್ರದಲ್ಲಿ ಸಮುದಾಯ ಭವನಗಳ ನಿರ್ಮಾಣಕ್ಕೆ ಇರುವ ಪ್ರಸ್ತಾವನೆಗಳೆಷ್ಟು?	ರಾಯಚೂರು ಗ್ರಾಮಾಂತರ ವಿಧಾನ ಸಭಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ 21 ಸಮುದಾಯ ಭವನಗಳ ಮನವಿಗಳು ಬಂದಿದ್ದು ಇದು ಪರಿಶೀಲನೆಯಲ್ಲಿದೆ.

ಸಂ: ಹಿಂವಕ 165 ಬಿಎಂಎಸ್ 2019

(ಸಿ.ಪುಟ್ಟರಂಗಶೆಟ್ಟಿ)
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.



ಕರ್ನಾಟಕ ಸರ್ಕಾರ

ಸಂ:ಬಿಸಿಡಬ್ಲ್ಯೂ 171 ಬಿಎಂಎಸ್ 2019

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ:14.02.2019

ಇವರಿಂದ:

ಸರ್ಕಾರದ ಕಾರ್ಯದರ್ಶಿಗಳು,
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ,
ವಿಕಾಸಸೌಧ,
ಬೆಂಗಳೂರು.

ಇವರಿಗೆ:

ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ/ಪರಿಷತ್ತು,
ವಿಧಾನಸೌಧ,
ಬೆಂಗಳೂರು.

ಮಾನ್ಯರೇ,

ವಿಷಯ: ಮಾನ್ಯ ವಿಧಾನ ಸಭೆ/ಪರಿಷತ್ತಿನ ಸದಸ್ಯರಾದ ಶ್ರೀ/ಶ್ರೀಮತಿ ಅಶೋಕ ನಾಯಕ ಕೆ.ಬಿ. ಶಿವಮೊಗ್ಗ ಇವರ ಚುಕ್ಕೆ ಗುರುತಿನ/ಗುರುತಿಲ್ಲದ ಪ್ರ.ಸಂ.1223 ----ಕ್ಕೆ ಉತ್ತರಿಸುವ ಕುರಿತು.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಮಾನ್ಯ ವಿಧಾನ ಸಭೆ/ಪರಿಷತ್ತಿನ ಸದಸ್ಯರಾದ ಶ್ರೀ/ಶ್ರೀಮತಿ ಅಶೋಕ ನಾಯಕ ಕೆ.ಬಿ. ಶಿವಮೊಗ್ಗ ಇವರ ಚುಕ್ಕೆ ಗುರುತಿನ/ಗುರುತಿಲ್ಲದ ಪ್ರ.ಸಂ.1223 ---ಕ್ಕೆ ಸಂಬಂಧಿಸಿದಂತೆ ಉತ್ತರದ 250 ಪ್ರತಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ ಮುಂದಿನ ಅಗತ್ಯ ಕ್ರಮಕ್ಕಾಗಿ ಕಳುಹಿಸಿಕೊಡಲಾಗಿದೆ.

ತಮ್ಮ ನಂಬುಗೆಯ,

(ಸಹಿ)

ಶಾಖಾಧಿಕಾರಿ,
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	1223
ಮಾನ್ಯ ಸದಸ್ಯರ ಹೆಸರು	ಶ್ರೀ ಅಶೋಕ್ ನಾಯ್ಕ್ ಕೆ.ಬಿ. (ಶಿವಮೊಗ್ಗ ಗ್ರಾಮಾಂತರ)
ಉತ್ತರಿಸಬೇಕಾದ ದಿನಾಂಕ	15.02.2019
ಉತ್ತರಿಸುವ ಸಚಿವರು	ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

ಕ್ರಸಂ	ಪ್ರಶ್ನೆ	ಉತ್ತರ
ಅ	ಶಿವಮೊಗ್ಗ ನಗರದಲ್ಲಿ ಶಿಕ್ಷಣ ಪಡೆಯಲು ಬೇರೆ ತಾಲ್ಲೂಕು, ಜಿಲ್ಲೆಗಳ ಗ್ರಾಮೀಣ ಭಾಗದ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಿರುವುದರಿಂದ ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶ ಲಭ್ಯವಾಗದೇ ಬಡ ವಿದ್ಯಾರ್ಥಿಗಳು ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
ಆ	ಬಂದಿದ್ದಲ್ಲಿ, ಬೇಡಿಕೆ ಇರುವ ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶಾವಕಾಶಗಳನ್ನು ಹೆಚ್ಚಿಸಲು ತೆಗೆದುಕೊಂಡ ಕ್ರಮಗಳೇನು;	ಶಿವಮೊಗ್ಗ ನಗರದಲ್ಲಿನ 6 ಮೆಟ್ರಿಕ್-ನಂತರದ ವಿದ್ಯಾರ್ಥಿನಿಲಯಗಳಿಗೆ ಪ್ರವೇಶಾವಕಾಶವನ್ನು ಹೆಚ್ಚಿಸುವ ಸಂಬಂಧ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಶಿವಮೊಗ್ಗ ಇವರಿಂದ ಪ್ರಸ್ತಾವನೆಯು ಬಂದಿದ್ದು, ಇದು ಪರಿಶೀಲನೆಯಲ್ಲಿದೆ.
ಇ	ಶಿವಮೊಗ್ಗ ನಗರದಲ್ಲಿ ವಿದ್ಯಾರ್ಥಿಗಳಿಗೆ ವಸತಿನಿಲಯದ ಕೊರತೆ ಇರುವುದರಿಂದ ಹೊಸದಾಗಿ ವಸತಿನಿಲಯಗಳನ್ನು ಮಂಜೂರು ಮಾಡಲು ತೆಗೆದುಕೊಂಡ ಕ್ರಮಗಳೇನು?	ಶಿವಮೊಗ್ಗ ನಗರಕ್ಕೆ ಹೊಸ ವಿದ್ಯಾರ್ಥಿನಿಲಯಗಳ ಮಂಜೂರಾತಿಗೆ ಯಾವುದೇ ಬೇಡಿಕೆ ಇರುವುದಿಲ್ಲ. ಆದಾಗ್ಯೂ, ಹೊಸ ವಿದ್ಯಾರ್ಥಿನಿಲಯಗಳ ಮಂಜೂರಾತಿಯು ರಾಜ್ಯದ ಒಟ್ಟಾರೆ ಬೇಡಿಕೆ ಹಾಗೂ ಅನುದಾನದ ಲಭ್ಯತೆಯನ್ನು ಅವಲಂಬಿಸಿರುತ್ತದೆ.

ಸಂ: ಹಿಂವಕ 171 ಬಿಎಂಎಸ್ 2019

(ಸಿ.ಪುಟ್ಟರಂಗಶೆಟ್ಟಿ)
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.



ಕರ್ನಾಟಕ ಸರ್ಕಾರ

ಸಂಖ್ಯೆ:ಪಸಂಮೀ 31 ಸಲೆವಿ 2019

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸ ಸೌಧ
ಬೆಂಗಳೂರು, ದಿನಾಂಕ:14.02.2019

ಇವರಿಂದ:

ಸರ್ಕಾರದ ಕಾರ್ಯದರ್ಶಿ,
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ,
ಬೆಂಗಳೂರು.

ಇವರಿಗೆ:

ಕಾರ್ಯದರ್ಶಿ,
ಕರ್ನಾಟಕ ವಿಧಾನಸಭೆ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು.

ಮಾನ್ಯರೇ,

ವಿಷಯ: ವಿಧಾನಸಭೆ ಮಾನ್ಯ ಸದಸ್ಯರಾದ ಶ್ರೀ ಬಸವರಾಜ ಬಿ. ಮತ್ತಿಮುಡ (ಗುಲ್ಬರ್ಗಾ ಗ್ರಾಮಾಂತರ) ವಿಧಾನ ಸಭಾ ಕ್ಷೇತ್ರ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1128 ಕ್ಕೆ ಉತ್ತರ ಕಳುಹಿಸುವ ಬಗ್ಗೆ.

***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ವಿಧಾನಸಭೆ ಮಾನ್ಯ ಸದಸ್ಯರಾದ ಶ್ರೀ ಬಸವರಾಜ ಬಿ. ಮತ್ತಿಮುಡ (ಗುಲ್ಬರ್ಗಾ ಗ್ರಾಮಾಂತರ) ವಿಧಾನ ಸಭಾ ಕ್ಷೇತ್ರ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1128 ಕ್ಕೆ ಕನ್ನಡ ಭಾಷೆಯಲ್ಲಿ ಉತ್ತರದ 150 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ

ಹನುಮಂತೇಗೌಡ 14/02/2019
(ಟಿ.ಹನುಮಂತೇಗೌಡ)
ಸರ್ಕಾರದ ಅಧೀನ ಕಾರ್ಯದರ್ಶಿ,
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ,
(ಪಶುಸಂಗೋಪನೆ)

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **1128**
ಸದಸ್ಯರ ಹೆಸರು : ಶ್ರೀ ಬಸವರಾಜ ಬಿ. ಮತ್ತಿಮುಡ (ಗುಲ್ಬರ್ಗಾ ಗ್ರಾಮಾಂತರ)
ಉತ್ತರಿಸುವ ದಿನಾಂಕ : **15.02.2019**
ಉತ್ತರಿಸುವ ಸಚಿವರು : ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವರು

ಕ್ರಮ ಸಂಖ್ಯೆ	ಪ್ರಶ್ನೆಗಳು	ಉತ್ತರಗಳು
ಅ)	ರಾಜ್ಯದಲ್ಲಿ ರೈತರಿಗೆ ಹೈನುಗಾರಿಕೆ ಎಮ್ಮೆ ಮತ್ತು ಹಸುಗಳನ್ನು ಖರೀದಿಸಲು ಸಹಾಯಧನ ಮಂಜೂರು ಮಾಡಲು ಅನುಸರಿಸುತ್ತಿರುವ ಮಾನದಂಡಗಳೇನೆ;	ಆಯಾ ವಿಧಾನಸಭಾ ಕ್ಷೇತ್ರದ ಮಾನ್ಯ ಶಾಸಕರ ನೇತೃತ್ವದಲ್ಲಿ ಪಶುಭಾಗ್ಯ ಯೋಜನೆಯ ಫಲಾನುಭವಿ ಆಯ್ಕೆ ಸಮಿತಿಯನ್ನು ರಚಿಸಿದ್ದು, ಸಮಿತಿಯು ಆಯ್ಕೆ ಮಾಡಿದ ಫಲಾನುಭವಿಗಳಿಗೆ ಬ್ಯಾಂಕಿನಿಂದ ಸಾಲ ಮಂಜೂರಾದ ಮೇಲೆ ಸಹಾಯಧನವನ್ನು ಬ್ಯಾಂಕ್‌ಗಳ ವ್ಯವಸ್ಥಾಪಕರ Collection Account ಖಾತೆಗೆ ಜಮಾ ಮಾಡಿ ಸ್ವತ್ತನ್ನು ಖರೀದಿಸಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗುವುದು.
ಆ)	ಈ ಯೋಜನೆಯಡಿ ಕಲಬುರ್ಗಿ ಗ್ರಾಮೀಣ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಎಷ್ಟು ರೈತರಿಗೆ ಸಹಾಯಧನ ನೀಡಲು ಗುರಿ ನಿಗದಿಪಡಿಸಲಾಗಿದೆ ಮತ್ತು ರೈತರಿಂದ ಎಷ್ಟು ಅರ್ಜಿಗಳನ್ನು ಸ್ವೀಕರಿಸಲಾಗಿದೆ;	ಈ ಯೋಜನೆಯಡಿ ಕಲಬುರ್ಗಿ ಗ್ರಾಮೀಣ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ 198 ಭೌತಿಕ ಗುರಿ ನಿಗಧಿಪಡಿಸಿದ್ದು, ಸಹಾಯ ಧನವಾಗಿ ರೂ 85.20 ಲಕ್ಷಗಳ ಗುರಿಯನ್ನು ನಿಗಧಿಪಡಿಸಿದೆ. ಹಾಗೂ ಕಲಬುರಗಿ ಗ್ರಾಮೀಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ 1692 ರೈತರಿಂದ ಅರ್ಜಿಗಳನ್ನು ಸ್ವೀಕರಿಸಲಾಗಿದೆ.
ಇ)	ಕಡಿಮೆ ಗುರಿ ನೀಡಿದ್ದರಿಂದ ರೈತರಿಗೆ ಸೂಕ್ತ ಸಹಾಯಧನ ಸಿಗದೆ ಸಂಕಷ್ಟ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಸಾಮಾನ್ಯ ವರ್ಗದ ಫಲಾನುಭವಿಗಳಿಗೆ ಕಡಿಮೆ ಗುರಿ ನೀಡಿರುವುದು ಗಮನಕ್ಕೆ ಬಂದಿದೆ.
ಈ)	ಹಾಗಿದ್ದಲ್ಲಿ ಈ ಕೊರತೆಯನ್ನು ನೀಗಿಸಲು ಹೆಚ್ಚಿನ ಗುರಿ ಕಲ್ಪಿಸಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಳ್ಳಲು ಉದ್ದೇಶಿಸಲಾಗಿದೆ?	ಈ ಕೊರತೆಯನ್ನು ನೀಗಿಸಲು ಕ್ರಮ ಕೈಗೊಳ್ಳಲಾಗುವುದು.

ಸಂಖ್ಯೆ: ಪಸಂಮೀ 31 ಸಲೆವಿ 2019

(ವೆಂಕಟರಾವ್ ನಾಡಗೌಡ)
ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವರು



ಕರ್ನಾಟಕ ಸರ್ಕಾರ

ಸಂಖ್ಯೆ:ಪಸಂಮೀ 24 ಮೀಇಇ 2019

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸಸೌಧ
ಬೆಂಗಳೂರು, ದಿನಾಂಕ: 14-02-2019

ಇವರಿಂದ
ಸರ್ಕಾರದ ಕಾರ್ಯದರ್ಶಿ,
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ,
ವಿಕಾಸಸೌಧ,
ಬೆಂಗಳೂರು-1.

ಇವರಿಗೆ
ಕಾರ್ಯದರ್ಶಿಗಳು,
ಕರ್ನಾಟಕ ವಿಧಾನಸಭೆ ಸಚಿವಾಲಯ,
ವಿಧಾನಸೌಧ
ಬೆಂಗಳೂರು.

ಮಾನ್ಯರೆ,

ವಿಷಯ:- ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀ ಸುಕುಮಾರ್ ಶೆಟ್ಟಿ ಬಿ.ಎಂ. (ಬೈಂದೂರು)ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1199ಕ್ಕೆ ಉತ್ತರ ಒದಗಿಸುವ ಬಗ್ಗೆ.

******

ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀ ಸುಕುಮಾರ್ ಶೆಟ್ಟಿ ಬಿ.ಎಂ. (ಬೈಂದೂರು) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1199ಕ್ಕೆ ಸಂಬಂಧಿಸಿದ ಉತ್ತರದ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಮುಂದಿನ ಸೂಕ್ತ ಕ್ರಮಕ್ಕಾಗಿ ತಮಗೆ ಕಳುಹಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ

(signature) 14/2/19

(ರಶ್ಮಿ ಶ್ರೀಕಾಂತ ಗಜರೆ)
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ
(ಮೀನುಗಾರಿಕೆ)

(initials) 14/2/19

ಕರ್ನಾಟಕ ವಿಧಾನಸಭೆ

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1199

2) ಸದಸ್ಯರ ಹೆಸರು : ಶ್ರೀ ಸುಕುಮಾರ್ ಶೆಟ್ಟಿ ಬಿ.ಎಂ. (ಬೈಂದೂರು)

3) ಉತ್ತರಿಸುವ ದಿನಾಂಕ : 15-02-2019

4) ಉತ್ತರಿಸಬೇಕಾದ ಸಚಿವರು : ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವರು

	ಪ್ರಶ್ನೆ	ಉತ್ತರ
ಅ)	ಮೀನುಗಾರಿಕೆ ಇಲಾಖೆಯಡಿಯಲ್ಲಿ ಬರುವ ಯೋಜನೆಗಳು ಯಾವುವು;	ಮೀನುಗಾರಿಕೆ ಇಲಾಖೆಯ ಯೋಜನೆಗಳ ವಿವರಗಳನ್ನು **ಅನುಬಂಧ-1**ರಲ್ಲಿ ಒದಗಿಸಲಾಗಿದೆ.
ಆ)	ಕಳೆದ 3 ವರ್ಷಗಳಲ್ಲಿ ಬೈಂದೂರು ವಿಧಾನಸಭಾ ಕ್ಷೇತ್ರಕ್ಕೆ ಯಾವ ಯಾವ ಯೋಜನೆಗಳಲ್ಲಿ ಎಷ್ಟೆಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ; (ಅನುದಾನವಾರು, ಯೋಜನಾವಾರು ತಾಲ್ಲೂಕುವಾರು ಸಂಪೂರ್ಣ ವಿವರ ಒದಗಿಸುವುದು)	ಕಳೆದ ಮೂರು ವರ್ಷಗಳಲ್ಲಿ ಬೈಂದೂರು ವಿಧಾನಸಭಾ ಕ್ಷೇತ್ರಕ್ಕೆ ಬಿಡುಗಡೆಯಾದ ಅನುದಾನ ಹಾಗೂ ವೆಚ್ಚದ ವಿವರಗಳನ್ನು **ಅನುಬಂಧ-2**ರಲ್ಲಿ ಒದಗಿಸಲಾಗಿದೆ..
ಇ)	ತಾಲ್ಲೂಕು ಸಹಾಯಕ ನಿರ್ದೇಶಕರು ಅನುಷ್ಠಾನಗೊಳಿಸುವ ಯೋಜನೆಗಳು ಯಾವುವು? (ವಿವರ ಒದಗಿಸುವುದು)	ತಾಲ್ಲೂಕು ಮಟ್ಟದ ಅಧಿಕಾರಿಗಳು **ಅನುಬಂಧ-1**ರಲ್ಲಿ ನೀಡಲಾದ ಎಲ್ಲಾ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಾರೆ.

ಸಂಖ್ಯೆ: ಪಸಂಮೀ 24 ಮೀಇಇ 2019

(ವೆಂಕಟರಾವ್ ನಾಡಗೌಡ)
ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವರು

ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀ ಸುಕುಮಾರಶೆಟ್ಟಿ ಬಿ.ಎಂ. (ಬೈಂದೂರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1199 ರ

ಅನುಬಂಧ-1

2018-19 ನೇ ಸಾಲಿನ ಮೀನುಗಾರಿಕೆ ಇಲಾಖೆಯ ಯೋಜನೆಗಳ ವಿವರ

1. ಒಳನಾಡು ಮೀನುಗಾರಿಕೆ ಅಭಿವೃದ್ಧಿಗಾಗಿ ಸಹಾಯ (2405-00-101-0-03)

ಈ ಯೋಜನೆಯಲ್ಲಿ ಒದಗಿಸಿರುವ ಅನುದಾನದಿಂದ ಸಿಬ್ಬಂದಿ ವೆಚ್ಚ, ಮೀನುಮರಿ ಉತ್ಪಾದನೆ/ ಸಾಕಾಣಿಕೆ ಕೇಂದ್ರಗಳ ನಿರ್ವಹಣಾ ವೆಚ್ಚ, ವಾಹನಗಳ ನಿರ್ವಹಣೆ, ಮೀನುಮರಿ ಕೇಂದ್ರಗಳ ಸಿಬ್ಬಂದಿ ವೆಚ್ಚ, ಮೀನುಮರಿ ಖರೀದಿ ಹಾಗೂ ಮೀನು ಮರಿ ಉತ್ಪಾದನಾ ಪಾಲನಾ ಕೇಂದ್ರಗಳ ಕೊಳಗಳ ದುರಸ್ತಿ ಮತ್ತು ನಿರ್ವಹಣೆ ನದಿಗಳಲ್ಲಿರುವ ಮತ್ಸ್ಯಧಾಮಗಳ ಅಭಿವೃದ್ಧಿ ಕೈಗೊಳ್ಳಲಾಗುವುದು.

"ಮತ್ಸ್ಯ ಕೃಷಿ ಆಶಾ ಕಿರಣ" ಯೋಜನೆಯಡಿ ಕೆರೆಗಳಲ್ಲಿ ಮೀನು ಉತ್ಪಾದನೆಯನ್ನು ಹೆಚ್ಚಿಸಲು ಹಾಗೂ ಮೀನು ಕೃಷಿಗೆ ಉತ್ತೇಜನ ನೀಡಲು, ಪ್ರತಿ ಹೆಕ್ಟೇರ್‌ಗೆ 4,000 ಬಲಿತ ಮೀನು ಮರಿಗಳನ್ನು ಹಾಗೂ 2 ಟನ್ ಕೃತಕ ಆಹಾರವನ್ನು ಖರೀದಿಸಲು ಘಟಕ ವೆಚ್ಚದ ಶೇ.50 ರಷ್ಟು ಹಾಗೂ ಗರಿಷ್ಠ 27,000 ರೂ.ಗಳನ್ನು ನೀಡಲಾಗುವುದು.

ಹೊಸ ಘಟಕ: ರಾಜ್ಯದ 20,000 ಹೆಕ್ಟೇರ್ ಜಲ ಪ್ರದೇಶದಲ್ಲಿ ಪ್ರತಿ ಹೆಕ್ಟೇರ್ ಉಪಯುಕ್ತಾ ಜಲವಿಸ್ತೀರ್ಣಕ್ಕೆ 2000 ಬಲಿತ ಬಿತ್ತನೆ ಮೀನುಮರಿಗಳನ್ನು ಮೀನುಗಾರರ ಸಹಕಾರ ಸಂಘಗಳ ಮುಖಾಂತರ ಉಚಿತವಾಗಿ ಬಿತ್ತನೆ ಮಾಡಿ ಒಳನಾಡು ಮೀನು ಉತ್ಪಾದನೆಯನ್ನು ಹೆಚ್ಚಿಸಲು "ಒಳನಾಡು ಮೀನು ಕೃಷಿಗೆ ಪ್ರೋತ್ಸಾಹ" ಯೋಜನೆಯಡಿ 4 ಕೋಟಿ ಮರಿಗಳನ್ನು ಬಿತ್ತನೆ ಮಾಡಲಾಗುವುದು.

ಅನುದಾನ: ರೂ.766.00 ಲಕ್ಷ

2. ಒಳನಾಡು ಮೀನುಗಾರಿಕೆ ಅಂಕಿ ಅಂಶಗಳು(ಕೇಂದ್ರ ವಲಯ ಯೋಜನೆ)(2405-00-101-0-06)

ಈ ಲೆಕ್ಕ ಶೀರ್ಷಿಕೆಯಡಿ ಒಳನಾಡು ಮತ್ತು ಕರಾವಳಿ ಮೀನುಗಾರಿಕೆಯ ಅಂಕಿಅಂಶಗಳನ್ನು ಸಂಗ್ರಹಿಸಲು ಮಾದರಿ ವಿಧಾನಗಳನ್ನು ಅಭಿವೃದ್ಧಿ ಪಡಿಸಲು ಮಂಜೂರು ಮಾಡಿರುವ ಹುದ್ದೆಗಳ ಸಿಬ್ಬಂದಿ ವೆಚ್ಚ, ಗಣಕೀಕೃತ ಯಂತ್ರಗಳನ್ನು ಖರೀದಿ, ಗಣತೀದಾರರನ್ನು ನೇಮಕಕ್ಕೆ ಅವಕಾಶ ಕಲ್ಪಿಸಲಾಗಿದೆ. ಇದು ಶೇ.100 ರಷ್ಟು ಕೇಂದ್ರ ವಲಯ ಯೋಜನೆಯಾಗಿದ್ದು ಪೂರ್ಣ ವೆಚ್ಚವನ್ನು ಕೇಂದ್ರ ಸರ್ಕಾರದಿಂದ ಭರಿಸಲಾಗುವುದು.

ಅನುದಾನ ರೂ:27.00 ಲಕ್ಷ (ಕೇಂದ್ರದ ಪಾಲು: ರೂ.27.00 ಲಕ್ಷ)

3. ಮೀನು ಮರಿ ಖರೀದಿಸಲು ನೆರವು (2405-00-101-0-28)

ಸರ್ಕಾರ ಸ್ವಾಮ್ಯದ ಉತ್ಪಾದನಾ ಮತ್ತು ಪಾಲನಾ ಕೇಂದ್ರಗಳಿಂದ ಖರೀದಿಸಿದ ಎಲ್ಲಾ ತಳಿಗಳ ಮೀನುಮರಿ ಬೆಲೆಯ ಶೇ.50 ರಷ್ಟು ಅಂದರೆ ವ್ಯಕ್ತಿಗತ ಗರಿಷ್ಠ ರೂ.5,000/- ಹಾಗೂ ಸಂಘ ಸಂಸ್ಥೆಗಳಿಗೆ ಗರಿಷ್ಠ ರೂ.20,000/- ಕ್ಕೆ ಮಿತಿಗೊಳಪಟ್ಟು ಸಹಾಯಧನವನ್ನು ನೀಡಲಾಗುವುದು. ಮೀನುಗಾರಿಕೆ ಇಲಾಖೆಯಿಂದ ನೋಂದಾಯಿಸಿಕೊಂಡು ಸ್ವಂತ ಕೊಳ್ಳಗಳಲ್ಲಿ ಮೀನು ಮರಿ ಪಾಲನೆ ಕೈಗೊಳ್ಳಲು ಮೀನು ಕೃಷಿಕರಿಗೆ ಪ್ರತಿ ಹೆಕ್ಟೇರ್ ಜಲವಿಸ್ತೀರ್ಣಕ್ಕೆ 50 ಲಕ್ಷ ಸ್ಪಾನ್ ಅಥವಾ 10 ಲಕ್ಷ ಫ್ರೈ ಖರೀದಿಸಲು ಶೇ.50 ರಷ್ಟು ಗರಿಷ್ಠ ರೂ.25,000 ಗಳ ಸಹಾಯಧನ ಪಡೆಯಲು ಅವಕಾಶ ಕಲ್ಪಿಸಲಾಗಿದೆ.

ಅನುದಾನ ರೂ.10.00 ಲಕ್ಷ

4. ಜಲಾಶಯಗಳಲ್ಲಿ ಮೀನು ಮರಿ ಬಿತ್ತನೆ (2405-00-101-0-54):

ರಾಜ್ಯದ ಆಯ್ದ ಜಲಾಶಯಗಳಲ್ಲಿ ಬೆರಳುದ್ದದ ಮೀನು ಮರಿ (Advanced fingerlings) ಬಿತ್ತನೆ ಮಾಡುವ ಮೂಲಕ ಮೀನುಗಾರಿಕೆ ಅಭಿವೃದ್ಧಿ ಕೈಗೊಳ್ಳುವುದು. ಅಗತ್ಯವಾದ ಬೆರಳುದ್ದದ ಮೀನುಮರಿಗಳನ್ನು ನೊಂದಾಯಿತ ಮೀನುಮರಿ ಸಾಕಾಣಿಕೆದಾರರಿಂದ ಸರ್ಕಾರವು ನಿಗದಿಪಡಿಸಿದ ದರದಲ್ಲಿ ಖರೀದಿಸಲಾಗುವುದು.

ಅನುದಾನ : ರೂ. 50.00 ಲಕ್ಷ

5. ಒಳನಾಡು ಮೀನುಗಾರರಿಗೆ ಫೈಬರ್ ಗ್ಲಾಸ್ ಹರಿಗೋಲುಗಳ ವಿತರಣೆ (2405-00-101-0-56)

ರಾಜ್ಯದ ಎಲ್ಲಾ ಒಳನಾಡು ಜಿಲ್ಲೆಗಳ ಕೆರೆ, ಜಲಾಶಯ ಹಾಗೂ ನದಿಭಾಗಗಳಲ್ಲಿ ಮೀನುಗಾರಿಕೆಯಲ್ಲಿ ತೊಡಗಿರುವ ಮೀನುಗಾರರಿಗೆ ಸದ್ರಿ ಯೋಜನೆಯಡಿ ಒಂದು ಫೈಬರ್‌ಗ್ಲಾಸ್ ಹರಿಗೋಲು ಹಾಗೂ ಎರಡು ಹುಟ್ಟುಗಳನ್ನು ಖರೀದಿಸಲು ಅವಕಾಶ ಮಾಡಲಾಗಿದೆ. ಇದರ ಘಟಕ ವೆಚ್ಚ ರೂ.10,000/- ಗಳಾಗಿದ್ದು ಶೇ.100 ರಷ್ಟು ಸಹಾಯಧನ ನೀಡಲಾಗವುದು.

ಅನುದಾನ: ರೂ. 40.00 ಲಕ್ಷ

6. ನೀಲಿ ಕ್ರಾಂತಿ – ಮೀನುಗಾರಿಕೆ ಸಮಗ್ರ ಅಭಿವೃದ್ಧಿ ಮತ್ತು ನಿರ್ವಹಣೆ (ಕೇಂದ್ರ ಪುರಸ್ಕೃತ ಯೋಜನೆ) (2405-00-101-0-58)

ಕೇಂದ್ರ ಸರ್ಕಾರದ ನೀಲಿಕ್ರಾಂತಿ ಸಮಗ್ರ ಮೀನುಗಾರಿಕೆ ಅಭಿವೃದ್ಧಿ ಮತ್ತು ನಿರ್ವಹಣೆ ಯೋಜನೆಯಡಿ ಕರಾವಳಿ ಮೀನುಗಾರಿಕೆ, ಮೂಲಭೂತ ಸೌಲಭ್ಯ ಮತ್ತು ಹಿಡುವಳಿ ನಂತರದ ಕಾರ್ಯಾಚರಣೆಗಳ ಅಭಿವೃದ್ಧಿ, ಮೀನುಗಾರರ ಕಲ್ಯಾಣಕ್ಕಾಗಿ ರಾಷ್ಟ್ರೀಯ ಯೋಜನೆ, ಒಳನಾಡು ಮೀನುಗಾರಿಕೆ ಮತ್ತು ಜಲಕೃಷಿ ಅಭಿವೃದ್ಧಿ, ರಾಷ್ಟ್ರೀಯ ಮೀನುಗಾರಿಕೆ ಅಭಿವೃದ್ಧಿ ಮಂಡಳಿ ಮತ್ತು ಅದರ ಚಟುವಟಿಕೆಗಳು ಮತ್ತು ಇತರೆ ಕಾರ್ಯಕ್ರಮಗಳನ್ನು ಕೇಂದ್ರ ಸರ್ಕಾರದ ಶೇ.24 ರಷ್ಟು ನೆರವಿನೊಂದಿಗೆ ಅನುಷ್ಠಾನಗೊಳಿಸಲು ಅವಕಾಶ ಕಲ್ಪಿಸಲಾಗಿದೆ.

ಅನುದಾನ: ರೂ.100.00 ಲಕ್ಷ

7. ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪಯೋಜನೆ ಕಾಯ್ದೆ 2013 ರಡಿ ಬಳಕೆಯಾಗದೆ ಇರುವ ಮೊತ್ತ (2405-00-101-0-66)

ಅನುಸೂಚಿತ ಜಾತಿ ಮತ್ತು ಪಂಗಡಕ್ಕೆ ಸೇರಿದ ಮೀನುಗಾರರಿಗೆ ಮೀನುಗಾರಿಕೆ ಸಲಕರಣೆ ಕಿಟ್ ಮತ್ತು ಫೈಬರ್ ಗ್ಲಾಸ್ ಹರಿಗೋಲು ವಿತರಣೆಗೆ ಅವಕಾಶ ಮಾಡಲಾಗಿದೆ.

ಅನುದಾನ: ರೂ. 8.00 ಲಕ್ಷ

8. ಉತ್ತರ ಕರ್ನಾಟಕ ಒಳನಾಡು ಮೀನುಗಾರಿಕೆ ಅಭಿವೃದ್ಧಿ ಕೇಂದ್ರ ಸ್ಥಾಪನೆ (2405-00-101-0-67)

ಉತ್ತರ ಕರ್ನಾಟಕದಲ್ಲಿ ಸುಮಾರು 1.64 ಲಕ್ಷ ಹೆಕ್ಟೇರ್ ವಿಸ್ತೀರ್ಣದ ಜಲಾಶಯಗಳು 42,195 ಹೆಕ್ಟೇರ್ ವಿಸ್ತೀರ್ಣದ ದೊಡ್ಡಕೆರೆಗಳು, 20667 ಹೆಕ್ಟೇರ್ ವಿಸ್ತೀರ್ಣದ ಗ್ರಾಮ ಪಂಚಾಯತ್ ಕೆರೆಗಳು, ನದಿಗಳು ಮತ್ತು ಕಾಲುವೆಗಳಿದ್ದು, ಒಳನಾಡು ಮೀನುಗಾರಿಕೆ ಅಭಿವೃದ್ಧಿಗೆ ವಿಫುಲ ಅವಕಾಶವನ್ನು ನೀಡುತ್ತವೆ. ಈ ಹಿನ್ನೆಲೆಯಲ್ಲಿ "ನಿಜ ಶರಣ ಶ್ರೀ.ಅಂಬಿಗರ ಚೌಡಯ್ಯ ಉತ್ತರ ಕರ್ನಾಟಕ ಒಳನಾಡು ಮೀನುಗಾರಿಕೆ ಅಭಿವೃದ್ಧಿ ಸಂಸ್ಥೆ" ಎಂಬ ಸಂಸ್ಥೆಯನ್ನ ಸ್ಥಾಪಿಸಲಾಗಿದೆ. ಉದ್ದೇಶಿತ ಸಂಸ್ಥೆಯ ಮುಖ್ಯ ಉದ್ದೇಶಗಳೆಂದರೆ,

- ಉತ್ತರ ಕರ್ನಾಟಕದ ಸಮಗ್ರ ಮೀನುಗಾರಿಕೆ ಅಭಿವೃದ್ಧಿಗೆ ಸ್ಥಳೀಯ ಅಗತ್ಯತೆಗೆ ಅನುಗುಣವಾಗಿ ಕಾರ್ಯಕ್ರಮಗಳನ್ನು ರೂಪಿಸಿ, ಅನುಷ್ಠಾನಗೊಳಿಸುವುದು.
- ಅಗತ್ಯ ಯೋಜನಾ ವರದಿ ಸಿದ್ಧಪಡಿಸಿ ವಿವಿಧ ಮೂಲಗಳಿಂದ ಮೀನುಗಾರಿಕೆ ಚಟುವಟಿಕೆಗಳಿಗೆ ಅನುದಾನವನ್ನು ಪಡೆದು ಕಾರ್ಯಕ್ರಮ ಅನುಷ್ಠಾನಗೊಳಿಸುವುದು. ಮತ್ತು
- ಮೀನುಗಾರಿಕೆ ಶಿಕ್ಷಣ, ಸಂಶೋಧನೆ, ವಿಸ್ತರಣೆ ಮತ್ತು ಅಭಿವೃದ್ಧಿಯಲ್ಲಿ ನಿರತರಾಗಿರುವ ಸಂಸ್ಥೆಗಳು ಹಾಗೂ ಮೀನುಗಾರರ ಸಂಘಟನೆಗಳ ಸಹಯೋಗದೊಂದಿಗೆ ಉತ್ತರ ಕರ್ನಾಟಕದ ಮೀನುಗಾರಿಕೆ ಮತ್ತು ಮೀನು ಕೃಷಿ ಅಭಿವೃದ್ಧಿಗೆ ಕ್ರಮವಹಿಸುವುದು.

ಅನುದಾನ: ರೂ. 1.00 ಲಕ್ಷ

9. ಕ್ಲಸ್ಟರ್ ಮಾದರಿಯಲ್ಲಿ ಮೀನುಗಾರಿಕೆ ಅಭಿವೃದ್ಧಿ (2405-00-101-0-68)

ಸಮಗ್ರ ಮೀನು ಕೃಷಿಗೆ ಕ್ಲಸ್ಟರ್ ಮಾದರಿಯಲ್ಲಿ ಆಯ್ದ 14 ಜಂಟಿ ತಾಲ್ಲೂಕುಗಳಲ್ಲಿ ಸಮಗ್ರವಾಗಿ ಮತ್ತು ಸುಸಂಘಟಿತ ಮಾದರಿಯಲ್ಲಿ ಮೀನು ಕೃಷಿಯ ಅಭಿವೃದ್ಧಿಯನ್ನು ಕೈಗೊಳ್ಳಲಾಗುವುದು. ಈ ಯೋಜನೆಯಡಿ ಕೃಷಿಕರಿಗೆ ಮೀನು ಸಾಕಾಣಿಕೆಗೆ ಕೊಳ ಮತ್ತು ಇತರೆ ಮೂಲಭೂತ ಸೌಕರ್ಯಗಳ ಸೃಷ್ಟಿಗೆ ಸಹಾಯಧನ ನೀಡಲಾಗುವುದು. ಕ್ಲಸ್ಟರ್ ಪ್ರದೇಶದಲ್ಲಿ ಕೃಷಿಗೆ ಅನುಪಯುಕ್ತವಾಗಿರುವ ಜೌಗು-ಚೌಳು ಪ್ರದೇಶಗಳಲ್ಲಿ ಮೀನು ಸಾಕಾಣಿಕೆಗೆ ಆದ್ಯತೆ ನೀಡಲಾಗುವುದು.

ಅನುದಾನ: ರೂ. 20.00 ಲಕ್ಷ

10. ಮೀನುಗಾರಿಕೆ ಬಂದರು ಮತ್ತು ಇಳಿದಾಣಗಳ ಅಭಿವೃದ್ಧಿ ಮತ್ತು ನಿರ್ವಹಣೆ (2405-00-103-0-14)

ಈ ಯೋಜನೆಯಡಿ ಸಿಬ್ಬಂದಿ ವೇತನ, ಕಛೇರಿ ವೆಚ್ಚ ರಾಜ್ಯದ ಪ್ರಮುಖ ಮೀನುಗಾರಿಕೆ ಬಂದರುಗಳಾದ ಮಲ್ಪೆ, ಮಂಗಳೂರು, ತದಡಿ, ಕಾರವಾರ, ಗಂಗೊಳ್ಳಿ, ಕೊಡೇರಿ, ಆಮದಳ್ಳಿ, ಭಟ್ಕಳ ಮತ್ತು ಹೊನ್ನಾವರ ಮೀನುಗಾರಿಕೆ ಬಂದರುಗಳ / ಇಳಿದಾಣ ಕೇಂದ್ರಗಳ ನಿರ್ವಹಣೆ ವೆಚ್ಚಗಳು, ಮೀನುಗಾರಿಕೆ ಬಂದರು ಮತ್ತು ತಂಗುದಾಣಗಳಲ್ಲಿ ಲಘು ಕಾಮಗಾರಿಗಳನ್ನು ಕೈಗೊಳ್ಳುವ ಹಾಗೂ ಬಂದರುಗಳ ನಿರ್ಮಾಣಕ್ಕೆ ಅಗತ್ಯವಿರುವ ಮಾದರಿ ಅಧ್ಯಯನ ಕೈಗೊಳ್ಳುವ ವೆಚ್ಚ ಭರಿಸಲು ಅವಕಾಶ ಮಾಡಲಾಗಿದೆ.

ಅನುದಾನ: ರೂ. 232.00 ಲಕ್ಷ

11. ಸಂಕಷ್ಟ ಪರಿಹಾರ ನಿಧಿಗೆ ಅಂಶದಾನಗಳು (2405-00-103-0-15):

ಸಂಕಷ್ಟ ಪರಿಹಾರ ನಿಧಿಗೆ ಸರ್ಕಾರದಿಂದ ಮೂಲ ಬಂಡವಾಳ ನೀಡುವ ಸಲುವಾಗಿ ಆಯವ್ಯಯದಲ್ಲಿ ಅವಕಾಶ ಕಲ್ಪಿಸಲಾಗಿದೆ. ಈ ನಿಧಿಯಿಂದ ಮೀನುಗಾರಿಕೆಯಲ್ಲಿ ತೊಡಗಿರುವಾಗ ನೈಸರ್ಗಿಕ ವಿಕೋಪಗಳಿಂದ ಮರಣ ಹೊಂದಿದ ಮೀನುಗಾರರ ಅವಲಂಬಿತರಿಗೆ ಹಾಗೂ ಶಾಶ್ವತ ಅಂಗವಿಕಲರಾದ ಮೀನುಗಾರರಿಗೆ ರೂ.3.00 ಲಕ್ಷ ಪರಿಹಾರ ಮತ್ತು ಭಾಗಶಃ ಅಂಗವಿಕಲರಾದವರಿಗೆ ರೂ.1.00 ಲಕ್ಷ ಪರಿಹಾರ ನೀಡಲು ಹಾಗೂ ಬಲೆಹಾನಿ, ದೋಣಿಹಾನಿ ಮತ್ತು ವೈದ್ಯಕೀಯ ವೆಚ್ಚಗಳಿಗೆ ಗರಿಷ್ಠ ರೂ.1.00 ಲಕ್ಷ ಮೀನುಗಾರಿಕೆ ಬಂದರು/ ಇಳಿದಾಣ ಕೇಂದ್ರದಲ್ಲಿ ಕೆಲಸದಲ್ಲಿದ್ದಾಗ ಮರಣ ಹೊಂದಿದ್ದಲ್ಲಿ ರೂ.1.00 ಲಕ್ಷ, ಸಮುದ್ರದಲ್ಲಿ ಮೀನುಗಾರಿಕೆಗೆ ಹೋದಾಗ ಅನಾರೋಗ್ಯದಿಂದ ಮರಣ ಹೊಂದಿದಲ್ಲಿ ರೂ.2.00 ಲಕ್ಷ ನೆರವು ನೀಡಲು ಅವಕಾಶವಿದ್ದೆ. ಸಮುದ್ರದಲ್ಲಿ ಮೀನುಗಾರಿಕೆ ಮಾಡುವಾಗ ಪ್ರಕೃತಿ ವಿಕೋಪದಿಂದ ದೋಣಿ ಅವಘಡದಿಂದ ಮೃತರಾದ ಮೀನುಗಾರರ ಕುಟುಂಬದವರಿಗೆ ರೂ 6.00 ಲಕ್ಷ ಪರಿಹಾರ ನೀಡಲಾಗುವುದು.

ಅನುದಾನ: ರೂ. 1.00 ಲಕ್ಷ

12. ಮತ್ಸ್ಯಾಶ್ರಯ ಯೋಜನೆ (2405-00-103-0-20)

ವಸತಿ ರಹಿತ ಮೀನುಗಾರರಿಗೆ ಶೇ.100 ಸಹಾಯಧನದೊಂದಿಗೆ ವಸತಿ ಸೌಲಭ್ಯವನ್ನು ಕಲ್ಪಿಸಲು ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಈ ಯೋಜನೆಯಡಿ ಮನೆ ನಿರ್ಮಾಣಕ್ಕೆ ಸಾಮಾನ್ಯ ಮೀನುಗಾರರಿಗೆ ರೂ.1.20 ಲಕ್ಷ, ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಗಳ ಫಲಾನುಭವಿಗಳಿಗೆ ಗ್ರಾಮೀಣ ಪ್ರದೇಶದಲ್ಲಿ ರೂ 1.75 ಲಕ್ಷ ಹಾಗೂ ನಗರ ಪ್ರದೇಶದಲ್ಲಿ ರೂ 2.00 ಲಕ್ಷ ಸಹಾಯಧನ ನೀಡಲಾಗುವ್ವದು.

ಅನುದಾನ: ರೂ. 400.00 ಲಕ್ಷ

13. ಮೀನುಗಾರಿಕೆ ದೋಣಿಗಳಿಗೆ ಡೀಸಲ್ ಮಾರಾಟ ತೆರಿಗೆ ಮರುಪಾವತಿ (2405-00-103-0-23)

ಯಾಂತ್ರೀಕೃತ ಮೀನುಗಾರಿಕೆ ದೋಣಿಗಳು ಬಳಸುವ ಡೀಸೆಲ್ ಮೇಲಿನ ರಾಜ್ಯ ಮಾರಾಟ ಕರಕ್ಕೆ ಸಮನಾದ ಮೊತ್ತವನ್ನು ಸಹಾಯಧನವಾಗಿ ದೋಣಿಗಳ ಮಾಲೀಕರ ಬ್ಯಾಂಕ್ ಖಾತೆಗೆ ನೇರವಾಗಿ ಬಿಡುಗಡೆ ಮಾಡುವ ಮೂಲಕ ಮರುಪಾವತಿ ಮಾಡುವುದು ಈ ಯೋಜನೆಯ ಉದ್ದೇಶ. ವಾರ್ಷಿಕ ಯಾಂತ್ರೀಕೃತ ಮೀನುಗಾರಿಕೆ ದೋಣಿಗಳಿಗೆ 1,50,000 ಕಿಲೋ ಲೀಟರ್ ಡೀಸಲ್ ಮೇಲಿನ ಮಾರಾಟ ಕರಕ್ಕೆ ಸಹಾಯಧನ ನೀಡಲಾಗುವುದು.

ಅನುದಾನ: ರೂ. 13500.00 ಲಕ್ಷ

14. ಮೀನು ಮಾರುಕಟ್ಟೆಗಳ ನಿರ್ಮಾಣಕ್ಕಾಗಿ ಸಹಾಯ: (2405-00-105-0-09)

ರಾಷ್ಟ್ರೀಯ ಮೀನುಗಾರಿಕೆ ಅಭಿವೃದ್ಧಿ ಮಂಡಳಿ, ಹೈದರಾಬಾದ್ ಇವರ ಅರ್ಥಿಕ ನೆರವಿನೊಂದಿಗೆ ನಿರ್ಮಿಸಲಾಗುತ್ತಿರುವ ಮಾರುಕಟ್ಟೆಗಳ ನಿರ್ಮಾಣಕ್ಕೆ ರಾಜ್ಯದ ಪಾಲು ಬಿಡುಗಡೆ ಮಾಡಲು ಅವಕಾಶ ಮಾಡಲಾಗಿದೆ.

ಮೀನುಗಾರರ ಸಹಕಾರ ಸಂಘಗಳಿಗೆ ತಮ್ಮ ಸ್ವಂತ ನಿವೇಶನದಲ್ಲಿ ನೀರು, ವಿದ್ಯುಚ್ಛಕ್ತಿ ಮತ್ತು ಇತರ ಸೌಲಭ್ಯಗಳೊಂದಿಗೆ ಕನಿಷ್ಠ 500 ಚದರಡಿಯ ಮೀನು ಸಂಗ್ರಹಣೆ ಹಾಗೂ ಮಾರುಕಟ್ಟೆ ಕಟ್ಟಡವನ್ನು ನಿರ್ಮಿಸಲು ಅಂದಾಜು 10 ಲಕ್ಷ ರೂ.ಗಳ ಘಟಕ ವೆಚ್ಚದಲ್ಲಿ ಶೇ.75 ರಷ್ಟು ಸಹಾಯಧನವನ್ನು ಒದಗಿಸುವ ಮೂಲಕ ನೆರವು ನೀಡಲಾಗುವುದು.

2018-19 ನೇ ಸಾಲಿನಲ್ಲಿ ಮೀನು ಮಾರಾಟಗಾರರು ಮಾರಾಟವಾಗದೇ ಉಳಿಯುವ ಮೀನನ್ನು ಮೀನು ಮಾರುಕಟ್ಟೆಗಳಲ್ಲಿ ಶೀಥಲೀಕೃತ ಘಟಕದಲ್ಲಿ ಸಂಗ್ರಹಿಸಲು "ಮತ್ಸ್ಯ ಜೋಪಾಸನೆ ಯೋಜನೆ"ಯಡಿ ರಾಜ್ಯದಲ್ಲಿ 10 ಶೀಥಲೀಕೃತ ಘಟಕಗಳನ್ನು ತಲಾ 10 ಲಕ್ಷ ರೂ. ವೆಚ್ಚದಲ್ಲಿ ಸ್ಥಾಪಿಸಲು ಪ್ರಸಾವಿಸಲಾಗಿದೆ.

ಅನುದಾನ: ರೂ. 150.00 ಲಕ್ಷ

15. ಸಂಶೋಧನೆ, ವಿಸ್ತರಣೆ, ಪ್ರದರ್ಶನ ಮತ್ತು ತರಬೇತಿ (2405-00-109-0-01):

ಮೀನುಗಾರಿಕೆ ಅಭಿವೃದ್ಧಿ ಬಗ್ಗೆ ತಾಂತ್ರಿಕ ತರಬೇತಿ, ಪ್ರಾತ್ಯಕ್ಷತೆ, ವಸ್ತು ಪ್ರದರ್ಶನಗಳನ್ನು ಏರ್ಪಡಿಸಲು ಲೇಖನಗಳನ್ನು ಪ್ರಕಟಿಸಲು, ಇಲಾಖೆಯ ಕಾರ್ಯಚಟುವಟಿಕೆಗಳ ಬಗ್ಗೆ ಹಸ್ತಪ್ರತಿಗಳನ್ನು ಮುದ್ರಿಸಲು ಮತ್ತು ಪ್ರಚಾರ ಪಡಿಸಲು ಆಯವ್ಯಯದಲ್ಲಿ ಅವಕಾಶ ಕಲ್ಪಿಸಲಾಗಿದೆ. ಮೀನುಗಾರಿಕೆ ಕುರಿತಾದ ಸಂಶೋಧನೆಗೆ ಅನುದಾನ ಬಿಡುಗಡೆಗೆ ಈ ಯೋಜನೆಯಡಿ ಅವಕಾಶವಿದೆ. ಮತ್ಸ್ಯ ಮೇಳಗಳನ್ನು ಏರ್ಪಡಿಸಲು ಅವಕಾಶ ಮಾಡಲಾಗಿದೆ. ವಿಸ್ತರಣಾ ಚಟುವಟಿಕೆಯಲ್ಲಿರುವ ಸಿಬ್ಬಂದಿಗಳ ವೇತನ, ಕಛೇರಿ ವೆಚ್ಚವನ್ನು ಭರಿಸಲು ಅವಕಾಶ ಕಲ್ಪಿಸಲಾಗಿದೆ.

ಅನುದಾನ: ರೂ. 167.00 ಲಕ್ಷ

16. ಮೀನು ಹಿಡಿಯುವ ದೋಣಿಗಳ ಯಾಂತ್ರೀಕರಣ ಮತ್ತು ಸುಧಾರಣೆ (2405-00-110-0-01).

ಸದರಿ ಯೋಜನೆಯಡಿ ಸಿಬ್ಬಂದಿ ಹಾಗೂ ಕಛೇರಿ ವೆಚ್ಚ ಭರಿಸಲಾಗುತ್ತಿದೆ.

ಅನುದಾನ: ರೂ.11.00 ಲಕ್ಷ

17. ಮೀನುಗಾರಿಕೆ ಸಲಕರಣೆ ಕಿಟ್ಟುಗಳ ವಿತರಣೆ (2405-00-110-0-02)

ಕರಾವಳಿ ಮತ್ತು ಒಳನಾಡಿನಲ್ಲಿ ಸಾಂಪ್ರದಾಯಿಕ ಮೀನುಗಾರರಿಗೆ ಮೀನು ಹಿಡುವಳಿಗೆ ಬೇಕಾದ ಬಲೆ, ಮತ್ತು ಪೂರಕ ಸಾಮಗ್ರಿಗಳನ್ನು ಕಿಟ್ ರೂಪದಲ್ಲಿ ಖರೀದಿಸಲು ಅವಕಾಶ ಮಾಡಲಾಗಿದೆ. ಈ ಯೋಜನೆಯ ಘಟಕ ವೆಚ್ಚ ಗರಿಷ್ಠ ರೂ.10,000 ಗಳಾಗಿದ್ದು, ಶೇ.100 ರಷ್ಟು ಸಹಾಯಧನ ನೀಡಲು ಅವಕಾಶ ಮಾಡಲಾಗಿದೆ.

2018-19 ನೇ ಸಾಲಿನಲ್ಲಿ ಮೀನು ಮರಿಗಳನ್ನು ಹಿಡಿಯುವುದನ್ನು ತಪ್ಪಿಸಿ ಮತ್ಸ್ಯ ಸಂಪತ್ತನ್ನು ರಕ್ಷಿಸಲು ಮೀನುಗಾರರಿಗೆ ಕಾಡ್ ಎಂಡ್‌ನಲ್ಲಿ 35 ಎಂಎಂ ಸ್ಕ್ವೇರ್ ಮೆಶ್ ಬಲೆಗಳನ್ನು ಉಚಿತವಾಗಿ ನೀಡಲು ಉದ್ದೇಶಿಸಲಾಗಿದೆ. ಇದಕ್ಕಾಗಿ, 2500 ಟ್ರಾಲ್ ದೋಣಿಗಳಿಗೆ ತಲಾ 10,000 ರೂ.ಗಳಂತೆ ವಿತರಿಸಲು ಪ್ರಸ್ತಾವಿಸಲಾಗಿದೆ.

ಅನುದಾನ: ರೂ. 300.00 ಲಕ್ಷ

18. ಮಂಜುಗಡ್ಡೆ ಸ್ಥಾವರ ಉಪಯೋಗಿಸುವ ವಿದ್ಯುತ್ ಮೇಲೆ ಸಹಾಯಧನ(2405-00-110-0-03)

ಈ ಯೋಜನೆಯಡಿ ಮಂಜುಗಡ್ಡೆ ಘಟಕಗಳು ಉಪಯೋಗಿಸಿದ ವಿದ್ಯುತ್ ಮೇಲೆ ಪ್ರತಿ ಯೂನಿಟ್‌ಗೆ ರೂ.1.50 ರಂತೆ ಸಹಾಯಧನ ನೀಡಲು ಅವಕಾಶ ಕಲ್ಪಿಸಲಾಗಿದೆ. ಪ್ರತಿ ಘಟಕಕ್ಕೆ ವಾರ್ಷಿಕ ಗರಿಷ್ಠ ರೂ.3.00 ಲಕ್ಷ ಸಹಾಯಧನ ನೀಡಲಾಗುವುದು.

2017-18 ನೇ ಸಾಲಿನಿಂದ ವಿದ್ಯುತ್ ಮೇಲೆ ಪ್ರತಿ ಯೂನಿಟ್‌ಗೆ ರೂ.1.75 ರಂತೆ ಸಹಾಯಧನ ನೀಡಲು ಪ್ರಸ್ತಾಪಿಸಲಾಗಿದೆ. ಪ್ರತಿ ಘಟಕಕ್ಕೆ ವಾರ್ಷಿಕ ರೂ.3.50 ಲಕ್ಷ ಸಹಾಯಧನ ನೀಡಲು ಪ್ರಸ್ತಾಪಿಸಲಾಗಿದೆ.

ಅನುದಾನ: ರೂ. 400.00 ಲಕ್ಷ

19. ಮೀನುಗಾರರ ಕಲ್ಯಾಣ ಯೋಜನೆಗಳು (ಕೇಂದ್ರ ಪುರಸ್ಕೃತ ಯೋಜನೆ)(2405-00-120-0-07)

ಅ) ಕಡಲ ಮೀನುಗಾರರಿಗೆ ಉಳಿತಾಯ ಮತ್ತು ಪರಿಹಾರ ಯೋಜನೆ (100-ಧನ ಸಹಾಯ)

ಉಳಿತಾಯ ಹಾಗೂ ಪರಿಹಾರ ಯೋಜನೆಯಡಿ ಕರಾವಳಿ ಮೀನುಗಾರರಿಂದ ರೂ.1500/- ಗಳನ್ನು ಮೀನುಗಾರಿಕೆ ಅವಧಿಯಲ್ಲಿ ವಸೂಲಿ ಮಾಡಿ ಈ ಮೊತ್ತಕ್ಕೆ ಕೇಂದ್ರ ಸರ್ಕಾರ ರೂ.1500/- ಮತ್ತು ರಾಜ್ಯ ಸರ್ಕಾರ ರೂ.1500/- ಸೇರಿಸಿ ಹೀಗೆ ಒಟ್ಟು ರೂ.4500/- ಗಳನ್ನು ಮೀನುಗಾರಿಕೆ ಇಲ್ಲದ 3 ತಿಂಗಳುಗಳಲ್ಲಿ ಪ್ರತಿ ತಿಂಗಳಿಗೆ ರೂ.1500 ರಂತೆ ಪ್ರತಿ ಮೀನುಗಾರರಿಗೆ ನೀಡಲಾಗುವುದು. ಅನುದಾನ: ರೂ.1.00 ಲಕ್ಷ

ಆ) ಸಾಮೂಹಿಕ ವಿಮಾ ಯೋಜನೆ (106-ಸಹಾಯಧನ):

ರಾಜ್ಯದ 2.04 ಲಕ್ಷ ಮೀನುಗಾರರಿಗೆ ಗುಂಪು ವಿಮಾ ಸೌಲಭ್ಯ ಒದಗಿಸಲು ರಾಜ್ಯದ ವಿಮಾ ಕಂತನ್ನು ಪಾವತಿಸಲು ಅನುದಾನ ಒದಗಿಸಲಾಗಿದೆ. ಈ ಯೋಜನೆಯಡಿ ವಿಮಾ ಸೌಲಭ್ಯವನ್ನು ಮೀನುಗಾರಿಕೆಯಲ್ಲಿ ತೊಡಗಿರುವಾಗ ನೈಸರ್ಗಿಕ ವಿಕೋಪಗಳಿಂದ ಮರಣ ಹೊಂದಿದ ಮೀನುಗಾರರ ಅವಲಂಬಿತರಿಗೆ ಹಾಗೂ ಶಾಶ್ವತ ಅಂಗವಿಕಲರಾದ ಮೀನುಗಾರರಿಗೆ ರೂ.200,000/- ಗಳ ಪರಿಹಾರ ಮತ್ತು ಭಾಗಶಃ ಅಂಗವಿಕಲರಾದವರಿಗೆ

ರೂ.100,000 ಗಳ ಪರಿಹಾರ ನೀಡಲಾಗುವುದು. ವಿಮಾ ಕಂತಿನ ಹಣ ಪ್ರತಿ ವರ್ಷ ದೆಹಲಿಯಲ್ಲಿರುವ ಮೀನುಗಾರರ ಸಹಕಾರ ಸಂಘಗಳ ರಾಷ್ಟ್ರೀಯ ಮಂಡಳಿ, ದೆಹಲಿಗೆ ಬಿಡುಗಡೆ ಮಾಡಲಾಗುವುದು. **ಅನುದಾನ: ರೂ.13.00 ಲಕ್ಷ**

ಈ ಯೋಜನೆಯ ಒಟ್ಟು ಅನುದಾನ: ರೂ.14.00 ಲಕ್ಷ

20. ವಾಣಿಜ್ಯ ಬ್ಯಾಂಕುಗಳಿಗೆ ಬಡ್ಡಿ ವ್ಯತ್ಯಾಸವನ್ನು ತುಂಬಿಕೊಡುವುದು (2405-00-195-0-01)

ಮೀನುಗಾರರು ಮೀನುಗಾರಿಕೆ ಚಟುವಟಿಕೆಗಳಿಗೆ ವಾಣಿಜ್ಯ ಬ್ಯಾಂಕುಗಳಿಂದ ಅಲ್ಪಾವಧಿ ಸಾಲ ತೆಗೆದುಕೊಂಡು ಕೈಗೊಳ್ಳಲು ಅನುಕೂಲವಾಗುವಂತೆ ವ್ಯತ್ಯಾಸದ ಬಡ್ಡಿಯನ್ನು ತುಂಬಿಕೊಡಲು ಈ ಯೋಜನೆಯಡಿ ಅವಕಾಶ ಕಲ್ಪಿಸಲಾಗಿದೆ. ಮೀನುಗಾರರು ರೂ.50,000 ಗಳ ವರೆಗೆ ಸಾಲ ಪಡೆಯಲು ಅವಕಾಶವಿರುತ್ತದೆ.

ಮೀನುಗಾರಿಕೆ ಚಟುವಟಿಕೆಗಳನ್ನು ಕೈಗೊಳ್ಳಲು ಮಹಿಳಾ ಮೀನುಗಾರರಿಗೆ 50,000 ರೂ.ಗಳವರೆಗೆ ಶೇ.2ರ ಬಡ್ಡಿ ದರದಲ್ಲಿ ವಾಣಿಜ್ಯ / ಗ್ರಾಮೀಣ ಪ್ರಾದೇಶಿಕ ಬ್ಯಾಂಕ್‌ಗಳಿಂದ ನೀಡುತ್ತಿರುವ ಸಾಲವನ್ನು 2018-19ನೇ ಸಾಲಿನಿಂದ ಶೂನ್ಯ ಬಡ್ಡಿ ದರದಲ್ಲಿ ನೀಡಲು ಪ್ರಸ್ತಾವಿಸಲಾಗಿದೆ.

ಅನುದಾನ: ರೂ. 500.00 ಲಕ್ಷ

21. ಮೀನುಗಾರಿಕೆ ಕೂಡು ರಸ್ತೆಗಳ ನಿರ್ವಹಣೆ (2405-00-337-0-01)

ರಾಜ್ಯದ ಕರಾವಳಿಯ ಮೂರು ಜಿಲ್ಲೆಗಳಲ್ಲಿ ಒಟ್ಟು 355.13 ಕಿಮೀ ಉದ್ದದ 218 ಮೀನುಗಾರಿಕೆ ಕೊಂಡಿ ರಸ್ತೆಗಳಿರುತ್ತವೆ. ಮಳೆ ಹಾಗೂ ಮೀನು ಸಾಗಾಣಿಕೆಯಿಂದ ಈ ಮೀನುಗಾರಿಕೆ ಕೊಂಡಿ ರಸ್ತೆಗಳು ಹಾಳಾಗುತ್ತದೆ. ಇವುಗಳ ದುರಸ್ತಿ ಹಾಗೂ ನಿರ್ವಹಣೆಯನ್ನು ಕೈಗೊಳ್ಳಲಾಗುವುದು.

ಅನುದಾನ: ರೂ. 300.00 ಲಕ್ಷ

22. ಗಿರಿ ಜನ ಉಪ ಯೋಜನೆ (2405-00-796-0-00)

ಈ ಯೋಜನೆಯಡಿ ಪರಿಶಿಷ್ಠ ಪಂಗಡದ ಮೀನುಗಾರರಿಗೆ ಅನುಕೂಲವಾಗುವಂತೆ ಸಂಚಾರಿ/ ರೀಟೇಲ್ ಮೀನು ಖಾದ್ಯಗಳ ಕ್ಯಾಂಟೀನ್/ ತಾಜಾ ಮೀನು ಮಾರಾಟ ಮಳಿಗೆ ಸ್ಥಾಪಿಸಲು ಸಹಾಯ (ಘಟಕ ವೆಚ್ಚ ರೂ.10.00 ಲಕ್ಷ ; ಸಹಾಯಧನ : ಶೇ.70 ರಷ್ಟು ಗರಿಷ್ಠ ರೂ.7.00 ಲಕ್ಷ) ನೆರವು ನೀಡಲಾಗುವುದು.

ಅನುದಾನ: ರೂ. 103.00 ಲಕ್ಷ

23. ವೇತನಕ್ಕಾಗಿ ಹೆಚ್ಚುವರಿ ಅನುದಾನ-6 ನೇ ವೇತನ ಆಯೋಗ

ಈ ಯೋಜನೆಯಡಿ 6 ನೇ ವೇತನ ಆಯೋಗದ ಅನುಷ್ಠಾನಕ್ಕೆ ಅಗತ್ಯವಿರುವ ಅನುದಾನ ಒದಗಿಸಲಾಗಿದೆ.

<u>ಜಿಲ್ಲಾ ಪಂಚಾಯತ್ ಯೋಜನೆಗಳು</u>

1. ಮೀನುಗಾರಿಕೆ ಕಟ್ಟಡಗಳು ಮತ್ತು ಸೌಲಭ್ಯಗಳ ನಿರ್ಮಾಣ ಮತ್ತು ನಿರ್ವಹಣೆ (2405-00-101-0-27)

ಈ ಲೆಕ್ಕ ಶೀರ್ಷಿಕೆಯಡಿ ಕಛೇರಿ ಕಟ್ಟಡಗಳ ನಿರ್ಮಾಣ ಮತ್ತು ನಿರ್ವಹಣೆ, ಮೀನು ಮರಿ ಉತ್ಪಾದನಾ ಕೇಂದ್ರಗಳ ಮತ್ತು ತಾಲ್ಲೂಕು ಮಟ್ಟದ ನರ್ಸರಿಗಳ ದುರಸ್ತಿ ಮತ್ತು ಸುಧಾರಣೆ, ಕರಾವಳಿ ಜಿಲ್ಲೆಗಳಲ್ಲಿ ಮೀನುಗಾರಿಕೆ ಜೆಟ್ಟಿಗಳ, ಇಳಿದಾಣ ಕೇಂದ್ರಗಳ, ಹರಾಜು ಪ್ರಾಂಗಣಗಳ ನಿರ್ಮಾಣ ಮತ್ತು ನಿರ್ವಹಣೆ, ಕಾರವಾರ, ಹಾಸನ, ಬೆಳಗಾವಿ,

ಹೊಂದಿದ ಕೃಷಿಕರಿಗೆ ಮೀನು ಕೃಷಿಯ ಬಗ್ಗೆ ತರಬೇತಿ ನೀಡುವುದು, ಮತ್ಸ್ಯಪಾಲನೆ ಮತ್ತು ಇಲಾಖಾ ಕಾರ್ಯಕ್ರಮಗಳ ಬಗ್ಗೆ ಮಾಹಿತಿ ನೀಡಲಾಗುವುದು. **ಅನುದಾನ: ರೂ.91.20 ಲಕ್ಷ**

5. ಜಿಲ್ಲಾ ಮತ್ತು ಇತರೆ ಸಿಬ್ಬಂದಿ (2405-00-101-0-26)

ಈ ಯೋಜನೆಯಡಿ ಸಿಬ್ಬಂದಿ ವೇತನ ಹಾಗೂ ಕ್ಷೇರಿ ವೆಚ್ಚವನ್ನ ಭರಿಸಲಾಗುವುದು.

ಅನುದಾನ: ರೂ.1778.00 ಲಕ್ಷ

ಈ ಯೋಜನೆಗಳಲ್ಲದೆ ಮೀನುಗಾರಿಕೆ ಇಲಾಖೆಯಿಂದ ಈ ಕೆಳಕಂಡ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

- **ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ:**

ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಮೀನು ಮರಿ ಉತ್ಪಾದನಾ ಕೇಂದ್ರಗಳ ಉನ್ನತೀಕರಣ, ಮೀನುಗಾರಿಕೆ ಸಲಕರಣೆ ಕಿಟ್ ವಿತರಣೆ, ಫೈಬರ್ ಗ್ಲಾಸ್ ಹರಿಗೋಲು ವಿತರಣೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

- **ಕೆರೆಗಳ ಅಭಿವೃದ್ಧಿ:**

ರಾಜ್ಯದಲ್ಲಿರುವ ಒಳನಾಡು ಜಲಸಂಪನ್ಮೂಲಗಳನ್ನು ಅಭಿವೃದ್ಧಿ ಪಡಿಸಲು ಹೊಸ ಗುತ್ತಿಗೆ ನಿಯಮಾವಳಿಗಳನ್ನು ರೂಪಿಸಿದ್ದು, ಈ ನಿಯಮಾವಳಿ ಪ್ರಕಾರ ಈ ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕಿನ ಗುತ್ತಿಗೆಯನ್ನು ಪಡೆಯಲು ನೋಂದಾಯಿಸಲ್ಪಟ್ಟ ಮೀನುಗಾರರ ಸಹಕಾರ ಸಂಘಗಳಿಗೆ ಅವಕಾಶ ಕಲ್ಪಿಸಲಾಗಿದೆ. ಗುತ್ತಿಗೆಗೆ ಕೋರದ ಕೆರೆಗಳನ್ನು ಸಾರ್ವಜನಿಕವಾಗಿ ಟೆಂಡರ್ ಕಂ ಹರಾಜು ಮೂಲಕ ವಿಲೇವಾರಿ ಮಾಡಿ ಅಭಿವೃದ್ಧಿಪಡಿಸಲಾಗುವುದು. ಕೆರಗಳ ಶೇ.50ರ ಜಲ ವಿಸ್ತೀರ್ಣವನ್ನು ಗಣನೆಗೆ ತೆಗೆದುಕೊಂಡು ಪ್ರತಿ ಹೆಕ್ಟೇರ್ ಜಲ ವಿಸ್ತೀರ್ಣಕ್ಕೆ ರೂ.300/- ರಂತೆ ಹಾಗೂ ಹಿಂದಿನ 3 ವರ್ಷಗಳ ಸರಾಸರಿ ಗುತ್ತಿಗೆ ಮೊತ್ತ, ಇವುಗಳಲ್ಲಿ ಯಾವುದು ಹೆಚ್ಚೋ ಆ ಮೊತ್ತವನ್ನು ಗುತ್ತಿಗೆ ಮೊತ್ತವಾಗಿ ನಿಗದಿಪಡಿಸಿ ಗರಿಷ್ಠ 5 ವರ್ಷಗಳ ಅವಧಿಗೆ ಮೀನುಕೃಷಿಗೆ ನೀಡಲಾಗುವುದು.

ಕಲಬುರ್ಗಿ, ದಕ್ಷಿಣ ಕನ್ನಡ, ಬೀದರ್, ಕೋಲಾರ, ಕೊಡಗು ಮತ್ತು ವಿಜಯಪುರ ಜಿಲ್ಲೆಗಳ ಮತ್ಸ್ಯಾಲಯಗಳ ನಿರ್ವಹಣೆ ವೆಚ್ಚ ಮತ್ತು ಇತರ ಸಾಮಗ್ರಿಗಳ ಖರೀದಿಗೆ ಅನುದಾನವನ್ನು ಒದಗಿಸಲಾಗಿದೆ. **ಅನುದಾನ: ರೂ.418.00 ಲಕ್ಷ**

2. ಒಳನಾಡು ಮೀನುಗಾರಿಕೆ ಅಭಿವೃದ್ಧಿಗಾಗಿ ಸಹಾಯ (2405-00-101-0-28):

ಈ ಯೋಜನೆಯಡಿ ಜೌಗು ಹಾಗೂ ಚೌಳು ಪ್ರದೇಶಗಳಲ್ಲಿ ಒಂದು ಎಕರೆ ಮೀನು ಕೃಷಿ ಕೊಳ ನಿರ್ಮಿಸಲು ಪ್ರತಿ ಎಕರೆ ಮೀನು ಕೃಷಿ ಕೊಳ ನಿರ್ಮಾಣ ಹಾಗೂ ಮೊದಲ ವರ್ಷದ ಆವರ್ತಕ ವೆಚ್ಚದ ಶೇಕಡ 25 ರಷ್ಟು ಅಂದರೆ ಗರಿಷ್ಠ ರೂ.30,000/- ಸಹಾಯಧನವಾಗಿ ನೀಡಲಾಗುತ್ತದೆ. ಒಂದು ಎಕರೆ ಸ್ವಂತ ಜಮೀನಿನಲ್ಲಿ ಮೀನುಕೃಷಿ ಕೊಳವನ್ನು ನಿರ್ಮಾಣ ಮಾಡಿ ಮೀನುಗಾರಿಕೆಯನ್ನು ತೆಗೆದುಕೊಳ್ಳಲು ಖಾಸಗಿ ವ್ಯಕ್ತಿಗಳಿಗೆ ರೂ.10,000.00 ಗಳ ಸಹಾಯಧನವಾಗಿ ನೀಡಲಾಗುತ್ತದೆ. ಅಲ್ಲದೆ, ಹುಲ್ಲುಗೆಂಡೆ ಮೀನುಮರಿಗಳನ್ನು ಕೆರೆಗಳಲ್ಲಿ ಬಿತ್ತನೆ ಮಾಡಿದ ಕೃಷಿಕರಿಗೆ ಶೇಕಡ 50 ರಷ್ಟು ಗರಿಷ್ಠ ರೂ.5000 ಗಳಿಗೆ ಮೀರದಂತೆ ಸಹಾಯಧನವನ್ನು ನೀಡಲಾಗುವುದು ಹಾಗೂ ಬಾವಿ ಮತ್ತು ನೀರಾವರಿ ಹೊಂಡಗಳಲ್ಲಿ ಮೀನು ಕೃಷಿಗಾಗಿ 250 ಸಾಮಾನ್ಯ ಗೆಂಡೆ ಮರಿಗಳನ್ನು ಉಚಿತವಾಗಿ ಸರಬರಾಜು ಮಾಡಿ ಮೀನು ಕೃಷಿಯನ್ನು ಪ್ರೋತ್ಸಾಹಿಸಲಾಗುವುದು.

ಈ ಯೋಜನೆಯಡಿ ಅನುದಾನವನ್ನು ಮೀನುಮರಿ ಕೇಂದ್ರದಲ್ಲಿ ಮೀನುಮರಿ ಉತ್ಪಾದನೆಗೆ, ತಾಲ್ಲೂಕು ಮಟ್ಟದ ನರ್ಸರಿಗಳಲ್ಲಿ, ಫಾರಂಗಳಲ್ಲಿ, ಕೇಜ್ ಮತ್ತು ಪೆನ್‌ಗಳಲ್ಲಿ ಮೀನುಮರಿ ಪಾಲನೆಗೆ, ಹಾಗೂ ನಿರ್ವಹಣೆಗೆ ತಗಲುವ ವೆಚ್ಚಗಳಿಗೆ, ಮೀನುಮರಿ ಖರೀದಿ ಮತ್ತು ಸಾಗಾಣಿಕೆಗೆ, ವಾಹನಗಳ ಖರೀದಿ, ನಿರ್ವಹಣೆ ಮತ್ತು ಇತರ ಸಲಕರಣೆಗಳ ಖರೀದಿಗೆ ಉಪಯೋಗಿಸಲು ಅವಕಾಶ ಕಲ್ಪಿಸಲಾಗಿದೆ. **ಅನುದಾನ: ರೂ.575.30 ಲಕ್ಷ**

3: ಮೀನು ಮಾರುಕಟ್ಟೆಗಳ ನಿರ್ಮಾಣ ಮತ್ತು ಮೀನು ಮಾರಾಟಕ್ಕೆ ಸಹಾಯ (2405-00-101-0-30)

ಮೀನುಗಾರರು ಮೀನನ್ನು ತಾಜಾ ಹಾಗೂ ಆರೋಗ್ಯಕರ ಸ್ಥಿತಿಯಲ್ಲಿ ಮಾರಾಟ ಮಾಡಲು ಅನುಕೂಲವಾಗುವಂತೆ ಶಾಖ ನಿರೋಧಕ ಪೆಟ್ಟಿಗೆ ಮತ್ತು ಸೈಕಲ್ಲುಗಳನ್ನು ಖರೀದಿಸಲು ಪ್ರತಿಶತ 50ರ ನೆರವಿನೊಂದಿಗೆ ಗರಿಷ್ಠ ರೂ.2000 ಸಹಾಯ ಧನವನ್ನು ಹಾಗೂ ದ್ವಿಚಕ್ರ ವಾಹನ ಮತ್ತು ಶಾಖ ನಿರೋಧಕ ಪೆಟ್ಟಿಗೆ ಖರೀದಿಸಲು ಶೇ.25 ರಷ್ಟು ಗರಿಷ್ಠ ರೂ.10000/- ಗಳ ಸಹಾಯಧನವನ್ನು ನೀಡಲಾಗುವುದು.

[illegible]	[illegible]	ಸಿದ್ದಲಿಂಗಯ್ಯ	50	99	96	D.S. ರಮೇಶ್	8315
[illegible]	[illegible]	ರಂಗಸ್ವಾಮಯ್ಯ	50	100	97	M. ಶಿವಯ್ಯ	50
7	[illegible]	ಕೃಷ್ಣಪ್ಪ	50	101	47	ರಂಗರಾಜು	4985
8	~~70~~	D.C. ನರಸಿಂಹಮೂರ್ತಿ	50	102	98	Dr. ಚಂದ್ರಶೇಖರ್	7050
9	71	R. ರಾಜು	50				
0	72	K. ಮುನಿ ಗಿರಿಯಪ್ಪ	50				
1	73	ಸಿದ್ದಲಿಂಗಯ್ಯ	50			ಒಟ್ಟು	46535
2	74	ಶೇಷಾದ್ರಿ	50				
3	75	ಮಂಜಯ್ಯ	50				
4	76	ರಂಗಸ್ವಾಮಯ್ಯ	50				
5	77	ಕರಿಯಣ್ಣ	50				
6	78	ಚಂದ್ರಯ್ಯ	50				
7	79	ದೇವರಾಜು	50				
8	80	ನಾಗಭೂಷಣ	50				
9	81	T.H. ಹನುಮಂತಪ್ಪ	50				
30	82	ಚಿಕ್ಕಣ್ಣಯ್ಯ	50				
1	83	ಕೃಷ್ಣಪ್ಪ	50				
2	84	ಶಿವರಂಗಯ್ಯ	50				
3	85	ದುರ್ಗಯ್ಯ	50				
4	86	ರಾಮಾಂಜನಪ್ಪ	50				
5	87	T. ರಮೇಶ್	50				
6	88	A.M. ಶಿವಲಿಂಗಯ್ಯ	50				
7	89	ತಿಮ್ಮನಪ್ಪ	7050				
8	90	ನಾಗರಾಜಪ್ಪ	50				
9	91	ಗಂಗಾಧರಯ್ಯ	50				
0	92	ತಿಮ್ಮಸ್ವಾಮಿ	50				
1	93	ಬಸವರಾಜು	50				
2	93	A.S. ಬಸವರಾಜು	7050				
3	93	N. ಮಂಜುನಾಥ್	50				
4	94	ದಯಾನಂದ	50				
[illegible]	94	ಚಿಕ್ಕಣ್ಣ	50				
[illegible]	95	M. ಮಲ್ಲಿಕಾರ್ಜುನ	50				
7	95	A.R. ಜಯಣ್ಣ	50				
[illegible]	96	ಕೃಷ್ಣಪ್ಪ	7050				

[signature]

ಕಾರ್ಯದರ್ಶಿ
ತುಮಕೂರು ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆಯ ಮಹಾಮಂಡಳಿ
ಜಿಲ್ಲಾ ಮೀನುಗಾರಿಕೆ ಸಹಕಾರ ಸಂಘ ನಿ.,
[illegible] 572 215, ತುಮಕೂರು

ಪರಿಶೀಲಿಸಿದೆ
[illegible]

~~[illegible]~~ [illegible] ತಾ: [illegible]

2010.11 ರಂದ ಕಾರ್ಯಕಾರಿ ಮಂಡಳಿ ಸದಸ್ಯರ ವಿವರಗಳು

ಕ್ರ.ಸಂ	ನಿಯುಕ್ತರಾದ	ಹುದ್ದೆ
1	[illegible]	ಅಧ್ಯಕ್ಷರು
2	[illegible]	ನಿರ್ದೇಶಕರು
3	[illegible]	ನಿರ್ದೇಶಕರು
4	[illegible]	ನಿರ್ದೇಶಕರು
5	[illegible]	ನಿರ್ದೇಶಕರು
6	[illegible]	ನಿರ್ದೇಶಕರು
7	[illegible]	ನಿರ್ದೇಶಕರು
8	[illegible]	
9	[illegible]	

ಸಿಬ್ಬಂದಿ ವಿವರ

1	[illegible]	ಕಾರ್ಯದರ್ಶಿ
2	[illegible] 500 PM	~~[illegible]~~

ಆಸ್ತಿಯ ದಾಸ್ತಾನು

1	ಪಶು ಆಹಾರ	[illegible]
2	ಬಿಜ ಮಿಶ್ರಣ	

ಪರಿಶೀಲಿಸಿದ

(ಕೆ.ವಿ. ವೆಂಕಟರಮಣಪ್ಪ)
ಸಹಕಾರ ಸಂಘಗಳ ಹಿರಿಯ ಲೆಕ್ಕಪರಿಶೋಧಕರು.
ಸಹಕಾರ ಸಂಘಗಳ ಹಿರಿಯ ಲೆಕ್ಕಪರಿಶೋಧಕರು

ವ್ಯವಸ್ಥಾಪಕರು ಕಾರ್ಯದರ್ಶಿ
ತುಮಕೂರು ಮೀನು ಕೃಷಿಕರ ಅಭಿವೃದ್ಧಿ
ಸಂಸ್ಥೆಯ ಫಲಾನುಭವಿಗಳ ಜಿಲ್ಲಾ ಮೀನುಗಾರಿಕೆ
ಸಹಕಾರ ಸಂಘ ನಿಯಮಿತ, ಮುಂಡ.
ಮುಂಡ ಅಂಚೆ, [illegible] ತಾ||-572 215
ತುಮಕೂರು ಜಿಲ್ಲೆ.

...ಪುರ ಹೋಬಳಿ, ... ಸಹಕಾರ ಸಂಘ ನಿ., ಗುಬ್ಬಿ ತಾಲ್ಲೂಕು.

ಸದಸ್ಯರ ಷೇರು ಬಂಡವಾಳ ಪಟ್ಟಿ ದಿ: 31.3.2008ಕ್ಕೆ ಇದ್ದಂತೆ.

ಕ್ರ. ಸಂ.	ಸದ. ಸಂ.	ಸದಸ್ಯರ ಹೆಸರು	ಗಂಡ/ತಂದೆ ಹೆಸರು	ಗ್ರಾಮ	ಷೇರು ಮೊಬಲಗು	ಷರಾ
1	1	ವೆಂಕಟಲಕ್ಷ್ಮಮ್ಮ	ರುದ್ರಯ್ಯ	ಗಟ್ಟಿಹಳ್ಳಿ	100.00	
2	2	ಗಂಗಮ್ಮ	ಮರಿಯಣ್ಣ	ಹಿಂಡಿಸ್ಕೆರ	100.00	
3	3	ಯಶೋದ	ಪುಟ್ಟಯ್ಯ	ಹಿಂಡಿಸ್ಕೆರ	100.00	
4	4	ಹೇಮಾವತಿ		ಹಿಂಡಿಸ್ಕೆರ	100.00	
5	5	ಲಕ್ಷ್ಮಮ್ಮ		ಹಿಂಡಿಸ್ಕೆರ	100.00	
6	6	ಜಯಲಕ್ಷ್ಮಮ್ಮ	ಗೋವಿಂದಯ್ಯ	ಗೊಲ್ಲರಹಟ್ಟಿ	100.00	
7	7	ಲಕ್ಷ್ಮಮ್ಮ	ಕೋಡಿ ದೊಡ್ಡವಲ್ಲಯ್ಯ	ಹಿಂಡಿಸ್ಕೆರ	100.00	
8	8	ರತ್ನಮ್ಮ	ವೆಂಕಟಯ್ಯ	ನಾರನಹಳ್ಳಿ	100.00	
9	9	ಗಂಗಮ್ಮ	ಮುನಿಯಪ್ಪ	ನಾರನಹಳ್ಳಿ	100.00	
10	10	ಶಿವಮ್ಮ	ಈರಣ್ಣ	ಹಿಂಡಿಸ್ಕೆರ	100.00	
11	11	ಗಂಗಮ್ಮ	ಪರಶುರಾಮಯ್ಯ	ಹಿಂಡಿಸ್ಕೆರ	100.00	
12	12	ಲತಾ	ನಾಗರಾಜು	ಹಿಂಡಿಸ್ಕೆರ	100.00	
13	13	ರಾಮಮ್ಮ	ರಾಮಣ್ಣ	ಹಿಂಡಿಸ್ಕೆರ	100.00	
14	14	ಗಂಗಮ್ಮ	ಬೀಮಯ್ಯ	ಬೆಳ್ಳಿಹಳ್ಳಿ	100.00	
15	15	ಲಕ್ಷ್ಮಮ್ಮ	ಬುಡ್ಡೇಗೌಡ	ಬೆಳ್ಳಿಹಳ್ಳಿ	100.00	
16	16	ಪದ್ಮ	ಕಮ್ಮಯ್ಯ	ದೊಡ್ಡಬಂಗಾವಿ	100.00	
17	17	ಜಯಮ್ಮ	ಹೆಚ್ ಡಿ ನಾಗಣ್ಣ	ಹಿಂಡಿಸ್ಕೆರ	100.00	
18	18	ಹೊಸೂರಮ್ಮ	ರಾಮಚಂದ್ರಯ್ಯ	ಹಿಂಡಿಸ್ಕೆರ	100.00	
19	19	ಜಯಮ್ಮ	ವೀರಭದ್ರಯ್ಯ	ಹಿಂಡಿಸ್ಕೆರ	100.00	
20	20	ಗೌರಮ್ಮ	ಮರಿಯಪ್ಪ	ಹಿಂಡಿಸ್ಕೆರ	100.00	
21	21	ಪುಟ್ಟಗಂಗಮ್ಮ	ದೊಡ್ಡವಲ್ಲಯ್ಯ	ಹಿಂಡಿಸ್ಕೆರ	100.00	
22	22	ಚಂದ್ರಮ್ಮ	ಸಂಡಿಗರಾಯಪ್ಪ	ಹಿಂಡಿಸ್ಕೆರ	100.00	
23	23	ಈರಮ್ಮ	ರಾಮಯ್ಯ	ಹಿಂಡಿಸ್ಕೆರ	100.00	
24	24	ಗೌರಮ್ಮ	ಎಲ್ಲಪ್ಪ	ಹಿಂಡಿಸ್ಕೆರ	100.00	
25	25	ಗಾಯಿತ್ರಿ	ಕೃಷ್ಣಪ್ಪ	ಹಿಂಡಿಸ್ಕೆರ	100.00	
26	26	ಗಿರಿಯಮ್ಮ	ಹೊನ್ನಪ್ಪ	ಹಿಂಡಿಸ್ಕೆರ	100.00	
27	27	ಗಿರಿಯವಮ್ಮ	ಗಂಗಣ್ಣ	ಹಿಂಡಿಸ್ಕೆರ	100.00	
28	28	ಈರಮ್ಮ	ದೊಡ್ಡೇಗೌಡ	ಸಿ ಎಸ್ ಪುರ	100.00	
29	29	ಕೆ ಎಸ್ ವಸಂತ	ಟಿ ಎಂ ಲಕ್ಷ್ಮಣ	ಸಿ ಎಸ್ ಪುರ	100.00	
30	30	ಲಲಿತಮ್ಮ	ಮರಿಗೌಡ	ಹಿಂಡಿಸ್ಕೆರ	100.00	
31	31	ಸುಧಾ	ಮರಿಗೌಡ	ಹಿಂಡಿಸ್ಕೆರ	100.00	
32	32	ಸಿದ್ದಮ್ಮ	ಎಲ್ಲಪ್ಪ	ಹಿಂಡಿಸ್ಕೆರ	100.00	
33	33	ಗಂಗಮ್ಮ	ಗಂಗಣ್ಣ	ಹಿಂಡಿಸ್ಕೆರ	100.00	
34	34	ಲಕ್ಷ್ಮಮ್ಮ	ಕೋಡಿ ದೊಡ್ಡವಲ್ಲಯ್ಯ		100.00	

			ಹೆಸರು	ಗ್ರಾಮ	[illegible]	[illegible]
	35	ಮುಯಮ್ಮ	ತಮ್ಮಯ್ಯಪ್ಪ	ಬ್ಯಾಡರಹಳ್ಳಿ	100.00	
35	36	ಗರಿಯಮ್ಮ	ಮರಿರಂಗಯ್ಯ	ಸಿ.ಮ್ ಪುರ	100.00	
36	37	ಗೌರಮ್ಮ	ಕಂಪೇಗೌಡ	ಹಿಂಡಿಸ್ಕೆರೆ	100.00	
37	38	ಮಮತ	ನಾರಾಯಣಪ್ಪ	ಹಿಂಡಿಸ್ಕೆರೆ	100.00	
38	39	ರೂಪ	ಗೋವಿಂದಪ್ಪ	ಹಿಂಡಿಸ್ಕೆರೆ	100.00	
39	40	ಜಿಎಸ್ ರೂಪ	ಶಿವಣ್ಣ	ಗದ್ದೆಹಳ್ಳಿ	100.00	
40	41	ಶಾರದಮ್ಮ	ರಾಜಣ್ಣ	ಆವರಹಳ್ಳಿ	100.00	
41	42	ಲತಾ	ಶ್ರೀನಿವಾಸ	ಗದ್ದೆಹಳ್ಳಿ	100.00	
42	43	ಲಕ್ಷ್ಮಮ್ಮ	ಭದ್ರೇಗೌಡ	ಗದ್ದೆಹಳ್ಳಿ	100.00	
43	44	ಲಲಿತಾ	ರುದ್ರಯ್ಯ	ಗದ್ದೆಹಳ್ಳಿ	100.00	
44	45	ಟಿ ಎಂ ಭವ್ಯ	ಎಸ್ ಆರ್ ಜಗದೀಶ	ಗದ್ದೆಹಳ್ಳಿ	100.00	
45	46	ಪಾರ್ವತಮ್ಮ	ಕ ರುದ್ರಯ್ಯ	ಗದ್ದೆಹಳ್ಳಿ	100.00	
46	47	ರತ್ನಮ್ಮ	ನಾಗರಾಜು	ನರಸಿಂಹದೇವರಹಳ್ಳಿ	100.00	
47	48	ಗಂಗಮ್ಮ		-"-	100.00	
45	49	ಲಕ್ಷ್ಮಮ್ಮ	ಶಿವಣ್ಣ	-"-	100.00	
49 / 50	50	ವಿನೋದಮ್ಮ	ನರಸಿಂಹಯ್ಯ	-"-	100.00	
51	51	ಸಣ್ಣೀರಮ್ಮ	ಗಂಗಣ್ಣ	-"-	100.00	
52	52	ಸಿದ್ದಗಂಗಮ್ಮ	ದಾಸೇಗೌಡ	-"-	100.00	
53	53	ಕಂಪಮ್ಮ	ಗಂಗನರಸಮ್ಮ	-"-	100.00	
54	54	ಕರಿಯಮ್ಮ	ನರಸೇಗೌಡ	-"-	100.00	
55	55	ಶಿವಮ್ಮ	ಗಂಗಣ್ಣ	-"-	100.00	
56	56	ನಿಂಗಮ್ಮ	ನಿಂಗಮ್ಮ	-"-	100.00	
57	57	ಲಲಿತಮ್ಮ	ಮುದ್ದಯ್ಯ	ನದೂ ಹಟ್ಟಿ	100.00	
58	58	ಈರಮ್ಮ	ಚಿಕ್ಕೀರಯ್ಯ	ನದೂ ಹಟ್ಟಿ	100.00	
59	59	ದೊಡ್ಡಮ್ಮ	ಕುರಿನರಸಯ್ಯ	ನದೂ ಹಟ್ಟಿ	100.00	
60	60	ಪುಟ್ಟಮ್ಮ	ಉಗ್ರಯ್ಯ	ನದೂ ಹಟ್ಟಿ	100.00	
61	61	ಕಂಪಮ್ಮ	ಚಿಕ್ಕಣ್ಣ	ನದೂ ಹಟ್ಟಿ	100.00	
62	62	ಮುದ್ದಮ್ಮ	ಹಾಲಿಂಗಯ್ಯ	ನದೂ ಹಟ್ಟಿ	100.00	
63	63	ಸಣ್ಣನರಸಮ್ಮ	ಶಿವರಾಜು	ನದೂ ಹಟ್ಟಿ	100.00	
64	64	ಶಿವಮ್ಮ	ಕೆಂಗಯ್ಯ	ನದೂ ಹಟ್ಟಿ	100.00	
65	65	ಕಂಪಮ್ಮ	ಚಿಕ್ಕೋಡಯ್ಯ	ಹಳೇಹಟ್ಟಿ	100.00	
66	66	ಕರಿಯಮ್ಮ	ಪಾತಯ್ಯ	ಗದ್ದೇಹಳ್ಳಿ	100.00	
67	67	ಲಲಿತಮ್ಮ	ಸಿದ್ದರಾಜು	ಗದ್ದೇಹಳ್ಳಿ	100.00	
68	68	ಗೀತಾ	ರಾಜಣ್ಣ	ಗದ್ದೇಹಳ್ಳಿ	100.00	
69	69	ಲಕ್ಷಮ್ಮ	ಪಾತಯ್ಯ	ಗದ್ದೇಹಳ್ಳಿ	100.00	
70	70	ಹುಲ್ಲೂರಮ್ಮ	ನಾಗರಾಜು	ಗದ್ದೇಹಳ್ಳಿ	100.00	
71	71	ಮಂಗಳ	ಮೂರ್ತಿ	ಗದ್ದೇಹಳ್ಳಿ	100.00	
72	72	ರುದ್ರಮ್ಮ	ಎಲ್ಲೇಗೌಡ	ಗದ್ದೇಹಳ್ಳಿ	100.00	

ಕ್ರ.ಸಂ	[illegible]	ಸದಸ್ಯರ ಹೆಸರು	ಗಂಡ/ತಂದೆ ಹೆಸರು	ಗ್ರಾಮ	ಷೇರು ಮೊಬಲಗು
73	73	ಮಂಜುಳ	ಪಾತೇಗೌಡ	ಗದ್ದೇಹಳ್ಳಿ	100.0
74	74	ಲಕ್ಷ್ಮಮ್ಮ	ಎಳವಣ್ಣ	ಗದ್ದೇಹಳ್ಳಿ	100.0
75	75	ನರಸಮ್ಮ	ಕೂಂಚಯ್ಯ	ಗದ್ದೇಹಳ್ಳಿ	100.0
76	76	ರಮಾಬಾಯಿ	ರಾಮರಾವ್	ಗದ್ದೇಹಳ್ಳಿ	100.0
77	77	ನಂದಸಮ್ಮ	ಗೋವಿಂದಪ್ಪ	ಕರಕೂಡಿ ಹಳ್ಳಿ	100.0
78	78	ಸಿದ್ದಲಿಂಗಮ್ಮ	ಗುರುವಯ್ಯ	ಕರಕೂಡಿ ಹಳ್ಳಿ	100
79	79	ವೆಂಕಟಲಕ್ಷ್ಮಮ್ಮ	ರಂಗಣ್ಣ	ಬೈರಪ್ಪನಪಾಳ್ಯ	100
80	80	ಶಿವಮ್ಮ	ಶಿವಣ್ಣ	ಬೈರಪ್ಪನಪಾಳ್ಯ	100
81	81	ಪದ್ಮಾವತಿ	ಶ್ರೀನಿವಾಸ	ಅಂಕಲಕೊಪ್ಪ	100
82	82	ಎಸ್ ಸರಸ್ವತಮ್ಮ	ವಿ ಎಸ್ ನಂಗಪ್ಪ	ವೀರಣ್ಣಗುಡಿ	100
83	83	ವೆಂಕಟಲಕ್ಷ್ಮಮ್ಮ	ಗಂಗಣ್ಣ	ವೀರಣ್ಣಗುಡಿ	100
84	84	ಪುಟ್ಟಮ್ಮ	ನರಸಿಂಹಯ್ಯ	ಸಿ ಎಳವನಹಳ್ಳಿ	100
85	85	ರೇಣುಕಮ್ಮ	ಅಂತೂರಯ್ಯ	ಸಿ ಎಳವನಹಳ್ಳಿ	100.00
86	86	ಲಕ್ಷ್ಮಮ್ಮ	ಶಿವರಾಜು	ಸಿ ಎಸ್ ಪುರ	100.00
87	87	ಅಂತೂರಮ್ಮ	ಕಂಬಯ್ಯ	ಗದ್ದೇನಹಳ್ಳಿ	100.00
88	88	ಭಾಗ್ಯಮ್ಮ	ಚಿಕ್ಕರಂಗಯ್ಯ	ದೊಡ್ಡಬಂಗಾವಿ	100.00
89	89	ಸಿ ಭಾಗ್ಯಮ್ಮ	ಬೋಜಣ್ಣ	ದೊಡ್ಡಬಂಗಾವಿ	100.00
90	90	ಹರಿಯಮ್ಮ	ಪಾತಯ್ಯ	ಗದ್ದೇನಹಳ್ಳಿ	100.00
91	91	ನರಸಮ್ಮ	ರಾಜಣ್ಣ	ಗದ್ದೇನಹಳ್ಳಿ	100.00
92	92	ರಂಗಮ್ಮ	ವೆಂಕಟಯ್ಯ	ಚಿಕ್ಕಎಡೆಯೂರು	100.00
93	1/2.	ಗಂಗಮ್ಮ	ಪಾತಯ್ಯ	ಹಿಂಡಿಸ್ಕೆರೆ	100.00
94	2	ಚಿಕ್ಕತಾಯಮ್ಮ	ಚಿಕ್ಕಎಲ್ಲಯ್ಯ	ಹಿಂಡಿಸ್ಕೆರೆ	100.00
95	3	ಮಂಗಳಮ್ಮ	ಪ್ರಕಾಶ	ಹಿಂಡಿಸ್ಕೆರೆ	100.00
96	4	ಪುಟ್ಟಲಕ್ಷ್ಮಮ್ಮ	ಲೇಟ್ ರಾಜಣ್ಣ	ಹಿಂಡಿಸ್ಕೆರೆ	100.00
97	5	ತಿಮ್ಮಕ್ಕ	ಬೋಜಯ್ಯ	ಹಿಂಡಿಸಕರೆ	100.00
98	6	ಪುಟ್ಟರಂಗಮ್ಮ	ಈರಣ್ಣ	ಬೇಲೂರಟ್ಟಿ	100.00
99	7	ಲಲಿತಮ್ಮ	ಶಿವಣ್ಣ	ಬೇಲೂರಟ್ಟಿ	100.00
100	8	ಕರಿಯಮ್ಮ	ಬೋರಲಿಂಗಯ್ಯ	ಹಿಂಡಿಸಕರೆ	100.00
101	9	ಚಿಕ್ಕಮ್ಮ	ಬೇಲಾಕಟ್ಟ	ಬೇಲೂರಟ್ಟಿ	100.00
102	10	ಈರಮ್ಮ	ಮಾರುತಿ	ಬೇಲೂರಟ್ಟಿ	100.00
103	11	ಜುಂಜಮ್ಮ	ಬಸವರಾಜು	ಬೇಲೂರಟ್ಟಿ	100.00
104	12	ಸಾವಿತ್ರಮ್ಮ	ರಾಜಣ್ಣಯ್ಯ	ಬೇಲೂರಟ್ಟಿ	100.00
105	13	ಗಂಗಮ್ಮ	ಶಿವಲಿಂಗಯ್ಯ	ಬೇಲೂರಟ್ಟಿ	100.00
106	14	ಶಿವಮ್ಮ	ಮರಿಯಪ್ಪ	ಬೇಲೂರಟ್ಟಿ	100.00
107	15	ಶಾರದಮ್ಮ	ರೇರೋ	ಬೇವಾರಟ್ಟಿ	100.00
108	16	ಕಾಳಮ್ಮ	ವಣ್ಣ	ಬೇವಾರಟ್ಟಿ	100.00
109	17	ತಿಮ್ಮಮ್ಮ	ಬಟ್ಟರಿಗಯ್ಯ	ಸಿ.ಎಸ್.ಪುರ	100.00
110	18	ಜಯಮ್ಮ	ರಾಮಾಂನಯ್ಯ	ಯಡವನಹಳ್ಳಿ	100.00

ಕ್ರ ಸಂ	ಕ್ರಮ ಸಂ	ಫಲಾನುಭವಿಯ ಹೆಸರು	ಗಂಡ/ತಂದೆ ಹೆಸರು	ಗ್ರಾಮ	ಮೊಬಲಗು
	19	ವಿಜಯಲಕ್ಷ್ಮಮ್ಮ	ನರಸಿಂಹಯ್ಯ	ಉಂಗ್ರ	10
111	20	ಲಕ್ಷ್ಮಮ್ಮ	ಕುಂಟಿ ನರಸಯ್ಯ	ಉಂಗ್ರ	1
112	21	ನರಸಮ್ಮ	ಮುದ್ದರಸಯ್ಯ	ಉಂಗ್ರ	10
113	22	ತಿಮ್ಮಮ್ಮ	ಕರಿಬಟ್ಟ	ಉಂಗ್ರ	10
114	23	ನಂಜಮ್ಮ	ನರಸಿಂಹಯ್ಯ	ಉಂಗ್ರ	10
115	24	ಕೆಂಪಮ್ಮ	ಕೆಂಪೇಗೌಡ	ಉಂಗ್ರ	100
116	25	ಭಾಗ್ಯಮ್ಮ	ರಾಮಣ್ಣ	ಉಂಗ್ರ	100
117	26	ಅನಿತಾ	ಬೊಂಬಾಯ್ಯ	ಉಂಗ್ರ	100
118	27	ಪಾರ್ವತಮ್ಮ	ಲಕ್ಷ್ಮಯ್ಯ	ಮಾವಿನಹಳ್ಳಿ	100
119	28	ಮಲ್ಲಮ್ಮ	ರಂಗರಾಮಯ್ಯ	ಮಾವಿನಹಳ್ಳಿ	100
120	29	ತಿಮ್ಮಮ್ಮ	ಮೂರ್ತಿ	ಗದ್ದೇಹಳ್ಳಿ	100
121	30	ಸಿದ್ದಲಿಂಗಮ್ಮ	ಲಕ್ಷ್ಮಣ	ಹಿಂಡಿಸ್ಕರ	100
122	31	ಕೆಂಪಮ್ಮ	ಕಲಬಾಯಿಮರಿಯ	ಹಿಂಡಿಸ್ಕರ	100
123	32	ರೇಣುಕಮ್ಮ	ಪರಮೇಶ	ಹಿಂಡಿಸ್ಕರ	100
124	33	ಭಾಗ್ಯಮ್ಮ	ನಾಗಣ್ಣ	ಹಿಂಡಿಸ್ಕರ	100
125	34	ಯಶೋಧ	ಚಿಕ್ಕಎಲ್ಲಯ್ಯ	ಹಿಂಡಿಸ್ಕರ	100.0
126	35	ತಿಮ್ಮಮ್ಮ	ಚಿಕ್ಕಎಲ್ಲಯ್ಯ	ಹಿಂಡಿಸ್ಕರ	100.0
127	36	ಗಂಗಮ್ಮ	ಎಲ್ಲಪ್ಪ	ಹಿಂಡಿಸ್ಕರ	100.0
128	37	ಹೊನ್ನಮ್ಮ	ದೊಡ್ಡಯ್ಯ	ಹಿಂಡಿಸ್ಕರ	100.0
129	38	ಕೆಂಪಮ್ಮ	ಕೆಂಗಣ್ಣ	ಹಿಂಡಿಸ್ಕರ	100.0
130	39	ಶಿವಮ್ಮ	ಗುಗೂಲಿದಜಜಾ	ಹಿಂಡಿಸ್ಕರ	100.0
131	40	ವಸಂತಮ್ಮ	ನಾಗಣ್ಣ	ಹಿಂಡಿಸ್ಕರ	100.0
132	41	ಸಿದ್ದಲಕ್ಷ್ಮಮ್ಮ	ಯಲ್ಲಪ್ಪ	ಹಿಂಡಿಸ್ಕರ	100.00
133	42	ಲಕ್ಷ್ಮೀದೇವಮ್ಮ	ತಿಮ್ಮೇಗೌಡ	ಹಿಂಡಿಸ್ಕರ	100.00
134	43	ಪುಷ್ಪಮಾಲಾ	ಹೆಚ್ ಎಸ್ ಮಂಜು	ಹಿಂಡಿಸ್ಕರ	100.00
135	44	ಲತಾ	ಸುಧಾಕರ್	ಹಿಂಡಿಸ್ಕರ	100.00
136	45	ರೇಣುಕಮ್ಮ	ಶಾಂತರಾಜು	ಹಿಂಡಿಸ್ಕರ	100.00
137	46	ಯಶೋಧಮ್ಮ	ರಾಜಣ್ಣ	ಸಿ ಎಸ್ ಪುರ	100.00
138	47	ಚೌಡಮ್ಮ	ವಸಂತಕುಮಾರ	ಸಿ ಎಸ್ ಪುರ	100.00
139	48	ಟಿ ಪಿ ಹೇಮಾ	ಬಿ ಎನ್ ದೇವರಾಜು	ಬೋರನಹಳ್ಳಿ	100.00
140	49	ಲಕ್ಷ್ಮೀ	ಬೋಜರಾಜು	ಬೋರನಹಳ್ಳಿ	100.00
141	50	ತಿಮ್ಮವ್ವ	ಕೇಶವಮೂರ್ತಿ	ಬೋರನಹಳ್ಳಿ	100.00
142	51	ನಾಗರತ್ನ	ಶಿವಲಿಂಗಯ್ಯ	ಬೋರನಹಳ್ಳಿ	100.00
143	52	ಹುಚ್ಚಮ್ಮ	ಫೆಂಡಿರಂಗಯ್ಯ	ಬೋರನಹಳ್ಳಿ	100.00
144	53	ನರಸಮ್ಮ	ತಿಮ್ಮೇಗೌಡ	ಜನ್ನೇನಹಳ್ಳಿ	100.00
145	54	ಶಿವಮ್ಮ	ಶಿವಮ್ಮ	ಜನ್ನೇನಹಳ್ಳಿ	100.00
146	55	ಲಕ್ಷ್ಮಮ್ಮ	ರಾಮಯ್ಯ	ಜನ್ನೇನಹಳ್ಳಿ	100.00
147	56	ಚಿಕ್ಕಮ್ಮ	ಲಕ್ಷ್ಮಣ	ಜನ್ನೇನಹಳ್ಳಿ	100.00
148					

		ಸದಸ್ಯರ ಹೆಸರು	ಗಂಡ/ತಂದೆ ಹೆಸರು	ಗ್ರಾಮ	ಠೇವಣಿ ಮೊಬಲಗು	ಷರಾ
[illegible]	57	ಲಕ್ಷ್ಮಮ್ಮ	ಜಯಣ್ಣ	ಹಿಂಡಿಸ್ಕರ	100.00	
[illegible]	[illegible]	[illegible]	[illegible]	[illegible]	100.00	
[illegible]	[illegible]	[illegible]	[illegible]	ಸಿ ಎಸ್ ಪುರ	100.00	
[illegible]	60	ಗೌರಮ್ಮ	ಗೋವಿಂದಪ್ಪ	[illegible]	100.00	
[illegible]	61	[illegible]	[illegible]	ಉಂಗ್ರ	100.00	
[illegible]	62	[illegible]	[illegible]	ಹಿಂಡಿಸ್ಕರ	100.00	
[illegible]	63	[illegible]	[illegible]	ಉಂಗ್ರ	100.00	
[illegible]	64	[illegible]	[illegible]	ಹಿಂಡಿಸ್ಕರ	100.00	
[illegible]	65	ರೇಣುಕಮ್ಮ	[illegible]	ಹಿಂಡಿಸ್ಕರ	100.00	
[illegible]	66	ಲಕ್ಷ್ಮೀದೇವಮ್ಮ	ಗೋವಿಂದರಾಜು	ಹಿಂಡಿಸ್ಕರ	100.00	
[illegible]	67	ಸಾವಿತ್ರಮ್ಮ	ಗಣೇಶ	ಹಿಂಡಿಸ್ಕರ	100.00	
[illegible]	68	ಜಯಮ್ಮ	ಕರಿಯಣ್ಣ	ಹಿಂಡಿಸ್ಕರ	100.00	
161	69	ವಂಕಟಮ್ಮ	ರುದ್ರಯ್ಯ	ಗದ್ದೇಹಳ್ಳಿ	100.00	
162	70	ದೇವಿರಾ	ಪರಮೇಶ	ಹಿಂಡಿಸ್ಕರ ಗದ್ದೇಹಳ್ಳಿ	100.00	
163	71	ನರಸಮ್ಮ	ನರಸಿಂಹಯ್ಯ	ಗದ್ದೇಹಳ್ಳಿ	100.00	
164	72	ಸಾವಿತ್ರಮ್ಮ	ರುದ್ರಯ್ಯ	ಗದ್ದೇಹಳ್ಳಿ	100.00	
165	73	ಮಂಜಮ್ಮ	ಗಂಗಣ್ಣ	ಹೊರಕರ	100.00	
166	74	ಸಾಕಮ್ಮ	ಭೋರಲಿಂಗಯ್ಯ	ಸಿ ಎಸ್ ಪುರ	100.00	
167	75	ಗೌರಮ್ಮ		ಗದ್ದೇಹಳ್ಳಿ	100.00	
168	76	ಶಾರದಮ್ಮ	ಸಿದ್ದಲಿಂಗಯ್ಯ	ಹಿಂಡಿಸ್ಕರ	100.00	
169	77	ಶಾಕಿರಾ	ಲಾಲದಸಾಬ್ರು	ಸಿ ಎಸ್ ಪುರ	100.00	
170	78	ಯಶೋದಮ್ಮ	ಬಸವರಾಜು	ಜನ್ನೇನಹಳ್ಳಿ	100.00	
171	79	ಲಕ್ಷ್ಮಮ್ಮ	ಮುನಿರಂಗಯ್ಯ	ಜನ್ನೇನಹಳ್ಳಿ	100.00	
172	80	ಜಯಮ್ಮ	ನರಸಿಂಹಯ್ಯ	ಜನ್ನೇನಹಳ್ಳಿ	100.00	
173	81	ಗಂಗಮ್ಮ	ರಾಜಣ್ಣ	ಜನ್ನೇನಹಳ್ಳಿ	100.00	
174	82	ಲಕ್ಷ್ಮೀದೇವಮ್ಮ	ಅಕ್ಕಣ್ಣ	ಸಿ ಎಸ್ ಪುರ	100.00	
175	83	ಜಯಮ್ಮ	ಹನುಮರಂಗಯ್ಯ	ಸಿ ಎಸ್ ಪುರ	100.00	
176	84	ಗೌರಮ್ಮ	ನರಸಿಂಹದೇವರಟ್ಟಿ		100.00	
177	85	ಶಾರದಮ್ಮ	ರಾಜಣ್ಣ	ಹಿಂಡಿಸ್ಕರ	100.00	
178	86	ಗಂಗಮ್ಮ	ತಮ್ಮಯ್ಯ	ಹಿಂಡಿಸ್ಕರ	100.00	
179	87	ಕಮಲಮ್ಮ	ಶಿವಣ್ಣ	ಹುರಳಿಗೆರೆ	100.00	
180	88	ಲಕ್ಷ್ಮಮ್ಮ	ನರಸಿಂಹಮೂರ್ತಿ	ಉಂಗ್ರ	100.00	
181	89	ಜಯಮ್ಮ	ಕರಿಯಣ್ಣ	ಮಾವಿನಹಳ್ಳಿ	100.00	
182	90	ಲಕ್ಷ್ಮಮ್ಮ	ರೇವಣ್ಣ	ಯಡವನಹಳ್ಳಿ	100.00	
183	91	ಮಲ್ಲಮ್ಮ	ವೈಯಿಟ್ಟನಾರಾಯ	ನಾರನಹಳ್ಳಿ	100.00	
184	92	ನಂಜಮ್ಮ	ಮೂಡ್ಲಯ್ಯ	ಸಿ ಎಸ್ ಪುರ	100.00	
185	93	ಜಯಮ್ಮ	ರಾಜಣ್ಣ	ಕಾಳಯ್ಯನಪಾಳ್ಯ	100.00	
186	1/3.	ರತ್ನಮ್ಮ	ಎಲ್ಲಪ್ಪ	ಹಿಂಡಿಸ್ಕರ	100.00	

ಕ್ರ ಸಂ	ಸದಸ್ಯರ ಹೆಸರು	[illegible]	[illegible]	[illegible]
34	ಮುರಳಿಧರ ಸಿ ಹೆಚ್			
35	ಸುಜ್ಞಾ		200.00	
36	ನಾಗರತ್ನಮ್ಮ		200.00	
37	ಶ್ರೀನಿವಾಸ್		200.00	
38	ನಿಂಗರಾಜ್		200.00	
39	ಲಕ್ಷ್ಮಿ		200.00	
40	ಗೋವಿಂದಯ್ಯ		200.00	
41	ತಿಮ್ಮರಾಜು		200.00	
42	ಬೋರೇಗೌಡ		200.00	
43	ರಶೀದ್		200.00	
44	ಚಂದ್ರಮ್ಮ		200.00	
45	ರಾಮಯ್ಯ		200.00	
46	ಜಾನಕಮ್ಮ		200.00	
47	ಯಶೋದ		200.00	
48	ನಿಂಗಮ್ಮ		200.00	
49	ಲಕ್ಷ್ಮೀನಾರಾಯಣ		200.00	
50	ಗಂಗಲಕ್ಷ್ಮಮ್ಮ		200.00	
51	ದೇವರಾಜು ಸಿ ಜಿ		200.00	
52	ಜಯಂತ		200.00	
53	ತಿಮ್ಮಮ್ಮ		200.00	
54	ಜ್ಯೋತಿ ಸಿ ವಿ		200.00	
55	ಗಂಗಮ್ಮ		200.00	
56	ಸುಬ್ರಮಣ್ಯ		200.00	
57	ರಮೇಶ್ ಚಂದ್ರ		200.00	
58	ಜಿ ಎಸ್ ನಾರಾಯಣ		200.00	
59	ದೊಡ್ಡಯ್ಯ		200.00	
60	ಲಕ್ಷ್ಮಣ		200.00	
61	ಸತ್ಯನಾರಾಯಣ ಸಿ		200.00	
62	ಸೂರ್ಯನಾರಾಯಣ ಸಿ ವಿ		200.00	
63	ಗಂಗಾಧರಯ್ಯ		200.00	
64	ಸಾವಿತ್ರಮ್ಮ		200.00	
65	ನೆಜಜಮ್ಮ		200.00	
66	ಜಯಮ್ಮ		200.00	
67	ಗೌರಮ್ಮ		200.00	
68	ಭಾಗ್ಯಮ್ಮ		200.00	
69	ಪವನ್		1000.00	
70	ನರಸೇಗೌಡ		200.00	

ಕ್ರ ಸಂ	ಸದಸ್ಯರ ಹೆಸರು	[illegible]	ಷೇರು ಮೊತ್ತ	ಸಹಿ
71	ವೆಂಕಟೇಶ್			
72	ಗೋವಿಂದಮ್ಮ		200.00	
73	ಹನುಮಯ್ಯ		200.00	
74	ಯಶೋದ		200.00	
75	ಮಂಗಳಗೌರಿ		200.00	
76	ನಾಗರಾಜು ಸಿ ಎನ್		200.00	
77	ಎನ್ ಪ್ರದೀಪ್.		200.00	
78	ಯೋಗಾನಾಥ್		200.00	
79	ಮುಜಾಹಿದ್		200.00	
80	ನಸೀಯಾ		200.00	
81	ಮಂಜುನಾಥ		200.00	
82	ನಾಗರಾಜು		200.00	
83	ಲಲಿತ ಕುಮಾರಿ		200.00	
8	ಹರೀಶ್ ಸಿ ಎಲ್		200.00	
5	ನಾಗರತ್ನ		200.00	
[illegible]	ನಟರಾಜ		200.00	
87	ಟಿ ಎಸ್ ಮಂಜುಳಾ		200.00	
88	ರಘು		200.00	
89	ತಯ್ಯಬ್		200.00	
90	ಮೊಹಮದ್ ವಜೀರ್		200.00	
91	ಜಕ್ರೀಯಾ ಬಾನು		200.00	
92	ಫಿಯಾಜ್		200.00	
93	ಗೀತಾ		200.00	
94	ಸಿ ಶಂಕರ್		200.00	
95	ಗೀತಾ		200.00	
96	ಕೆಂಪಣ್ಣ		200.00	
	ಒಟ್ಟು		20000.00	

ಕಾರ್ಯದರ್ಶಿ ದರ್ಜೆ
ಶ್ರೀ ಜೋರಕೇರ[illegible] [illegible]ಗಾರರ [illegible] ಸಹಕಾರ
ಸಂಘ ನಿ., [illegible]ಪುರ, [illegible]

ಪರಿಶೀಲಿಸಿದೆ

(ಕೆ ಎಸ್ ಸುರೇಶ್)
ಸಹಕಾರ ಸಂಘಗಳ ಸಹಾಯಕ ನಿಬಂಧಕರು
[illegible] ಲೆಕ್ಕಪರಿಶೋಧಕರು, [illegible] ಉಪ ವಿಭಾಗ,

ಅನುಬಂಧ -[illegible]

ಶ್ರೀ ಕೊರಟಗೆರಮ್ಮ [illegible] ಸಹಕಾರ ಸಂಘ ನಿಯಮಿತ,

ಸಿ ಎಸ್ ಪುರ, ಗುಬ್ಬಿ ತಾಲ್ಲೂಕು, ತುಮಕೂರು ಜಿಲ್ಲೆ

ಸದಸ್ಯರ ಷೇರು ಬಂಡವಾಳ ಪಟ್ಟಿ ದಿ 31.3.2014ಕ್ಕೆ ಇದ್ದಂತೆ

ಕ್ರಸಂ	[illegible]	[illegible]	[illegible]	[illegible]
1	ಕೃಷ್ಣೇಗೌಡ ಸಿ ಜಿ		200.00	
2	ರಮೇಶ್		200.00	
3	ದೊರೇಗೌಡ		200.00	
4	ಮುದ್ದಯ್ಯ		200.00	
5	ನಾರಾಯಣ ಸ್ವಾಮಿ [illegible]		200.00	
6	ಕೆ ಕಮಲಮ್ಮ		200.00	
7	ಮುತ್ತುರಾಜ್ [illegible]		200.00	
8	ವೆಂಕಟೇಶ್		200.00	
9	ಕಲ್ಯಾಣಮ್ಮ		200.00	
10	ಸದಾಶಿವಕುಮಾರ್		200.00	
11	ಆಶಾ		200.00	
12	[illegible] ಸಿ ಎಸ್		200.00	
13	ಬಿ ಹೆಚ್ ಗೀತಾ ಲಕ್ಷ್ಮೀ		200.00	
14	ಜಯಮ್ಮ		200.00	
15	ರಾಧಮಣಿ		200.00	
16	ಗಾಯಿತ್ರಮ್ಮ		200.00	
17	ನಾರಾಯಣಪ್ಪ		200.00	
18	ಗಂಗಾಧರ್ ಸಿ.ಸಿ		200.00	
19	ಕೆಂಪಯ್ಯ		200.00	
20	[illegible]		200.00	
21	[illegible]		200.00	
22	ಗೋವಿಂದಯ್ಯ ಸಿ ಬಿ		200.00	
23	ರಾಮಯ್ಯ		200.00	
24	ಶ್ರೀನಿವಾಸ್		200.00	
25	ಹನುಮೇಗೌಡ		200.00	
26	ಸಿ ಬಿ ಕೃಷ್ಣ		200.00	
27	ಮಂಜುಳ		200.00	
28	ಹರೀಶ್		200.00	
29	[illegible]		200.00	
30	[illegible]		200.00	
31	[illegible]		200.00	
32	[illegible]		200.00	
33	ಸಿ ಕೆ [illegible]		200.00	

ಕ್ರ ಸಂ	ಸದಸ್ಯರ ಹೆಸರು	ಷೇರು ಹಣ	ಠೇವಣಿ ಮೊಬಲಗು	ಸಹಿ
34	ಮುರಳಿಧರ ಸಿ ಹೆಚ್			
35	ಸುಬ್ಬಣ್ಣ		200.00	
36	ನಾಗರತ್ನಮ್ಮ		200.00	
37	ಶ್ರೀನಿವಾಸ್		200.00	
38	ನಿಂಗರಾಜ್		200.00	
39	ಲಕ್ಷ್ಮಿ		200.00	
40	ಗೋವಿಂದಯ್ಯ		200.00	
41	ತಿಮ್ಮರಾಜು		200.00	
42	ಬೋರೇಗೌಡ		200.00	
43	ರಶೀದ್		200.00	
44	ಚಂದ್ರಮ್ಮ		200.00	
45	ರಾಮಯ್ಯ		200.00	
46	ಕಾನಕಮ್ಮ		200.00	
47	ಯಶೋದ		200.00	
48	ನಿಂಗಮ್ಮ		200.00	
49	ಲಕ್ಷ್ಮೀನಾರಾಯಣ		200.00	
50	ಗಂಗಲಕ್ಷ್ಮಮ್ಮ		200.00	
51	ದೇವರಾಜು ಸಿ ಜಿ		200.00	
52	ಜಯಂತ		200.00	
53	ತಿಮ್ಮಮ್ಮ		200.00	
54	ಜ್ಯೋತಿ ಸಿ ಡಿ		200.00	
55	ಗಂಗಮ್ಮ		200.00	
56	ಸುಬ್ರಮಣ್ಯ		200.00	
57	ರಮೇಶ್ ಚಂದ್ರ		200.00	
58	ಜಿ ಎಸ್ ನಾರಾಯಣ		200.00	
59	ದೊಡ್ಡಯ್ಯ		200.00	
60	ಲಕ್ಷ್ಮಣ		200.00	
61	ಸತ್ಯನಾರಾಯಣ ಸಿ		200.00	
62	ಸೂರ್ಯನಾರಾಯಣ ಸಿ ವಿ		200.00	
63	ಗಂಗಾಧರಯ್ಯ		200.00	
64	ಸಾವಿತ್ರಮ್ಮ		200.00	
65	ನಂಜಮ್ಮ		200.00	
66	ಜಯಮ್ಮ		200.00	
67	ಗೌರಮ್ಮ		200.00	
68	ಭಾಗ್ಯಮ್ಮ		200.00	
69	ಪವನ್		1000.00	
70	ನರಸೇಗೌಡ		200.00	

Page [illegible]

ಕ್ರ ಸಂ	[illegible]	[illegible]	[illegible]	[illegible]
71	ವೆಂಕಟೇಶ್			
72	ಗೋವಿಂದಮ್ಮ			
73	ಸುಮಯ್ಯ [illegible]		20[illegible]	
74	ಯಶೋದ		20[illegible]	
75	ಮಂಗಳಗಾಂ		20[illegible]	
76	ನಾಗರಾಜು ಸಿ ಎನ್		20[illegible]00	
77	ಎನ್ ಪ್ರದೀಪ್		2[illegible]00	
78	ಯೋಗಾನಾಥ್		2[illegible]00	
79	ಮುಜಾಹಿದ್		2[illegible]0.00	
80	ನಸೀಯಾ		2[illegible]0.00	
81	ಮಂಜುನಾಥ		2[illegible]0.00	
82	ನಾಗರಾಜು		[illegible]00.00	
83	ಲಲಿತ ಕುಮಾರಿ		[illegible]00.00	
8	ಹರೀಶ್ ಸಿ ಎಲ್		200.00	
5	ನಾಗರತ್ನ		200.00	
[illegible]	ನಟರಾಜ		200.00	
87	ಟಿ ಎಸ್ ಮಂಜುಳಾ		200.00	
88	ರಘು		200.00	
89	ತಯ್ಯಬ್		200.00	
90	ಮೊಹಮದ್ ವಸೀರ್		200.00	
91	ಜಕ್ರೀಯಾ ಬಾನು		200.00	
92	ಫಯಾಜ್		200.00	
93	ಗೀತಾ		200.00	
94	ಸಿ ಶಂಕರ್		200.00	
95	ಗೀತಾ		200.00	
96	ಕೆಂಪಣ್ಣ		200.00	
	ಒಟ್ಟು		20000.00	

[signature]
ಕಾರ್ಯದರ್ಶಿ ಸಹಿ
ಶ್ರೀ [illegible] ಸಹಕಾರ [illegible]
ಸಂಘ ನಿ., [illegible]

ಪರಿಶೀಲಿಸಿದೆ
[signature]

ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀ ಮಸಾಲ ಜಯರಾಮ್ (ತುರುವೇಕೆರೆ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1220 ರ

ಅನುಬಂಧ - II

ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವಾಲಯ

ವಿಷಯ:- ಕರ್ನಾಟಕ ರಾಜ್ಯದ ಸರ್ಕಾರಿ ಸ್ವಾಮ್ಯದ ಜಲಸಂಪನ್ಮೂಲಗಳಾದ ಜಲಾಶಯಗಳು, ಕೆರೆಗಳು, ನದಿಗಳು, ತೊರೆಗಳು ಮತ್ತು ಅಳಿವೆಗಳು ಹಾಗೂ ಇತರೆ ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕಿನ ವಿಲೇವಾರಿಗೆ ಸಂಬಂಧಪಟ್ಟಂತೆ ರೂಪಿಸಿರುವ ಪರಿಷ್ಕೃತ ನಿಯಮಗಳ ಒಳನಾಡು ~~ಮೀನುಗಾರಿಕಾ~~ ಕಾರ್ಯನೀತಿ-2014ನ್ನು ಹೊರಡಿಸುವ ಬಗ್ಗೆ.

ಓದಲಾಗಿದೆ:- (1) ಸರ್ಕಾರದ ಆದೇಶ ಸಂಖ್ಯೆ:ಪಸಂಮೀ 167 ಮೀಇಇ 2005 ದಿನಾಂಕ:28/01/2006.

(2) ಮೀನುಗಾರಿಕೆ ನಿರ್ದೇಶಕರ ಪತ್ರ ಸಂಖ್ಯೆ:ಹಗುಪ (2)/130/2011-12, ದಿನಾಂಕ:14-11-2013 ಮತ್ತು 21-11-2013.

ಪ್ರಸ್ತಾವನೆ:

ರಾಜ್ಯದ ಹಿನ್ನೀರು ಮತ್ತು ಒಳನಾಡು ಜಲಸಂಪನ್ಮೂಲಗಳಲ್ಲಿ ಸುಸ್ಥಿರ ಮೀನುಗಾರಿಕೆ ಉತ್ತೇಜಿಸಲು ಮೀನುಗಾರಿಕೆ ಹಕ್ಕುಗಳ ವಿಲೇವಾರಿ ಸಂಬಂಧ 2006ರಲ್ಲಿ ಪ್ರಕಟಿಸಲಾದ ಗುತ್ತಿಗೆ ನಿಯಮಗಳನ್ನು ಪರಿಷ್ಕರಿಸಲು ಸರ್ಕಾರವು ನಿರ್ಧರಿಸಿದೆ.

ಕರ್ನಾಟಕ ರಾಜ್ಯದಲ್ಲಿ ಮೀನುಗಾರಿಕೆ ಇಲಾಖೆಯ ಆಡಳಿತ ವ್ಯಾಪ್ತಿಯಲ್ಲಿ ಒಟ್ಟು 5.65 ಲಕ್ಷ ಹೆಕ್ಟೇರ್ ಜಲವಿಸ್ತೀರ್ಣವುಳ್ಳ ಜಲಾಶಯಗಳು ಮತ್ತು ಕೆರೆಗಳು ಇರುತ್ತವೆ. ಇವುಗಳಲ್ಲಿ 2.72 ಲಕ್ಷ ಹೆ. ಜಲವಿಸ್ತೀರ್ಣವುಳ್ಳ 82 ಜಲಾಶಯಗಳು, 1.72 ಲಕ್ಷ ಹೆ. ಜಲವಿಸ್ತೀರ್ಣವುಳ್ಳ 3399 ಕೆರೆಗಳು, 1.21 ಲಕ್ಷ ಹೆ. ಜಲವಿಸ್ತೀರ್ಣವುಳ್ಳ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕೆರೆಗಳು ಇರುತ್ತವೆ. ಅಲ್ಲದೆ, ಸುಮಾರು 5813 ಕಿ.ಮೀ. ಉದ್ದದ ನದಿಗಳು ಮತ್ತು ತೊರೆಗಳು ಇದ್ದು, ಈ ಎಲ್ಲಾ ಜಲಸಂಪನ್ಮೂಲಗಳಿಂದ ಕರ್ನಾಟಕದ ಒಳನಾಡು ಮೀನಿನ ಉತ್ಪಾದನೆ ಸುಮಾರು 2.00 ಲಕ್ಷ ಟನ್‌ನಷ್ಟಿದೆ. ಇದು ರಾಜ್ಯದ ಒಟ್ಟು ಮೀನಿನ ಉತ್ಪಾದನೆಯ ಶೇ.48ರಷ್ಟು ಇರುತ್ತದೆ. ಮುಂದಿನ ದಿನಗಳಲ್ಲಿ ಒಳನಾಡಿನ ಮೀನು ಉತ್ಪಾದನೆ ತೀವ್ರಗತಿಯಲ್ಲಿ ಬೆಳವಣಿಗೆಯಾಗುವ ನಿರೀಕ್ಷೆಯಿದ್ದು, ರಾಜ್ಯದ ಒಟ್ಟು ಮೀನು ಉತ್ಪಾದನೆಯಲ್ಲಿ ಹೆಚ್ಚಿನ ಉತ್ಪಾದನೆಯನ್ನು ಒಳನಾಡು ಮೀನು ಕೃಷಿಯಿಂದ ಒದಗಿಸುವ ಹೆಚ್ಚಿನ ಸಾಧ್ಯತೆಗಳಿರುತ್ತದೆ.

ರಾಜ್ಯದಲ್ಲಿರುವ ಬಹುಪಾಲು ಒಳನಾಡು ಜಲಸಂಪನ್ಮೂಲಗಳು ನೀರಿಗಾಗಿ ಮಳೆಯನ್ನೇ ಅವಲಂಬಿಸಿದ್ದು, ಹಲವು ಕೆರೆಗಳು ಮುಂಗಾರು ಮಳೆಯಿಂದ ತುಂಬುವ ಸಾಧ್ಯತೆಗಳಿದ್ದು, ಕೆಲವು ಕೆರೆಗಳು ಹಿಂಗಾರು ಮಳೆಯನ್ನು ಆಶ್ರಯಿಸಿರುತ್ತವೆ. ಹಾಗಾಗಿ ಒಳನಾಡು ಜಲಸಂಪನ್ಮೂಲಗಳಲ್ಲಿ ಸದಾ ನೀರು ನಿಲ್ಲುವ ಸರ್ವಕಾಲಿಕ ಕೆರೆಗಳ ಸಂಖ್ಯೆ ಬಹಳ ಕಡಿಮೆ ಇರುತ್ತವೆ. ಗರಿಷ್ಠ ಸಂಖ್ಯೆಯ ಕೆರೆಗಳು ಅರೆಕಾಲಿಕ ಕೆರೆಗಳಾಗಿದ್ದು, ಕೇವಲ 4-5 ತಿಂಗಳು ಅವಧಿಗೆ ನೀರು ನಿಲ್ಲುವ ಸಾಧ್ಯತೆ ಇದ್ದು, ಹಲವಾರು ಸಂದರ್ಭಗಳಲ್ಲಿ ಮಳೆಯನ್ನು ನಿರೀಕ್ಷಿಸಿ ಜಲಸಂಪನ್ಮೂಲಗಳಲ್ಲಿ ನೀರು ಶೇಖರಣೆ ಆಗಬಹುದೆಂದು ಭಾವಿಸಿ ಮೀನು ಕೃಷಿಕರು ಮೀನು ಪಾಶುವಾರು ಹಕ್ಕನ್ನು ಪಡೆದು ನಷ್ಟಗೊಂಡಿರುವ ಹಲವು ನಿದರ್ಶನಗಳಿವೆ. ಅಲ್ಲದೆ, ಮೀನು ಕೃಷಿಗೆ ಬಹು ಮುಖ್ಯವಾಗಿ ಮೀನುಮರಿಗಳ ಲಭ್ಯತೆ ಮುಂಗಾರು ಅವಧಿಯಲ್ಲಿರುವುದರಿಂದ, ಈ ಅವಧಿಗೆ ಮುಂಚೆ ಕೆರೆಗಳ ಮೀನು ಪಾಶುವಾರು ಹಕ್ಕನ್ನು ವಿಲೇವಾರಿ ಮಾಡಿ ಅರ್ಹ ಸಹಕಾರ ಸಂಘಗಳು ಮತ್ತು ವ್ಯಕ್ತಿಗೆ ಗುತ್ತಿಗೆಯನ್ನು ವರ್ಗಾಯಿಸದಿದ್ದಲ್ಲಿ ಮೀನು ಉತ್ಪಾದನೆ ಮೇಲೆ ಪ್ರತಿಕೂಲ ಪರಿಣಾಮ ಉಂಟಾಗುವ ಸಾಧ್ಯತೆಗಳು ಇರುತ್ತವೆ.

ಒಳನಾಡು ಜಲಸಂಪನ್ಮೂಲಗಳಲ್ಲಿ ಗರಿಷ್ಠ ಮೀನು ಉತ್ಪಾದನೆ ಮಾಡುವುದು ಸರ್ಕಾರದ ಮುಖ್ಯ ಗುರಿಯಾಗಿದ್ದು, ಇದಕ್ಕೆ ಪೂರಕವಾಗಿ ಮೀನು ಪಾಶುವಾರು ಹಕ್ಕಿನ ಗುತ್ತಿಗೆ ಆದೇಶಗಳನ್ನು ಸಕಾಲದಲ್ಲಿ ಅರ್ಹ ಸಹಕಾರ ಸಂಘಗಳಿಗೆ / ವ್ಯಕ್ತಿಗಳಿಗೆ ತಲುಪಿಸುವುದು, ಮತ್ತು ಉತ್ತಮ ತಳಿಯ ಗುಣಮಟ್ಟದ ಮೀನುಮರಿಗಳನ್ನು ಸಕಾಲದಲ್ಲಿ ಮೀನು ಕೃಷಿಕರಿಗೆ ಒದಗಿಸುವುದು ಸರ್ಕಾರದ ಉದ್ದೇಶವಾಗಿರುತ್ತದೆ.

ಕರ್ನಾಟಕ ರಾಜ್ಯದಲ್ಲಿ ಒಟ್ಟು ಸುಮಾರು 5.50 ಲಕ್ಷಕ್ಕೂ ಮೀರಿದ ಒಳನಾಡು ಮೀನುಗಾರರಿದ್ದು, ಅವರಲ್ಲಿ ಸುಮಾರು 1.50 ಲಕ್ಷಕ್ಕೂ ಮೀರಿದ ಮೀನುಗಾರರು ಸಕ್ರಿಯವಾಗಿ ಮೀನುಗಾರಿಕೆಯಲ್ಲಿ ತೊಡಗಿಸಿಕೊಂಡಿರುತ್ತಾರೆ. ಈ ಎಲ್ಲಾ ಮೀನುಗಾರರ ಸರ್ವತೋಮುಖ ಅಭಿವೃದ್ಧಿ, ಸಮಗ್ರ ಮೀನುಗಾರಿಕಾ ಚಟುವಟಿಕೆಗಳ ಮೇಲೆ ಅವಲಂಬಿತವಾಗಿರುತ್ತದೆ. ಈ ನಿಟ್ಟಿನಲ್ಲಿ ಮೀನುಗಾರರಿಗೆ ಗುಣಮಟ್ಟದ ಮೀನು ತಳಿಗಳನ್ನು ಅಭಿವೃದ್ಧಿಪಡಿಸಿ, ಸಕಾಲದಲ್ಲಿ ಒದಗಿಸುವುದಕ್ಕಾಗಿ ಮೀನುಗಾರಿಕೆ ಇಲಾಖೆಯು ಕಾರ್ಯೋನ್ಮುಖವಾಗಿರುತ್ತದೆ. ಹೆಚ್ಚಿನ ಪಾಲಿನ ಮೀನುಗಾರರು ಸರ್ಕಾರಿ ಸ್ವಾಮ್ಯದ ಜಲಸಂಪನ್ಮೂಲಗಳನ್ನು ಗುತ್ತಿಗೆ ಪಡೆದು, ಮೀನು ಕೃಷಿ ಕೈಗೊಳ್ಳುವುದರಿಂದ, ಕ್ಲುಪ್ತ ಸಮಯದಲ್ಲಿ ಜಲಸಂಪನ್ಮೂಲಗಳ ಗುತ್ತಿಗೆ ಆದೇಶಗಳು ಅವರ ಕೈ ಸೇರುವುದು ಅತಿ ಮುಖ್ಯವಾಗಿರುತ್ತದೆ. ಆದುದರಿಂದ, ಒಳನಾಡು ಜಲಸಂಪನ್ಮೂಲಗಳನ್ನು ಗುತ್ತಿಗೆ ಪಡೆಯುವ ಕಾರ್ಯ ವಿಧಾನವನ್ನು ಸರಳೀಕರಿಸಿ, ಮೀನುಗಾರರನ್ನೇ ಕೇಂದ್ರ ಬಿಂದುವನ್ನಾಗಿರಿಸಿಕೊಂಡು ನೀತಿಯನ್ನು ರೂಪಿಸಿ, ಮೀನುಗಾರರು ಮತ್ತು ಅವರ ಸಹಕಾರ ಸಂಘಗಳಿಗೆ ಆದ್ಯತೆ ನೀಡಿ, ಗುತ್ತಿಗೆ ನೀಡುವ ಅಧಿಕಾರವನ್ನು ವಿಕೇಂದ್ರೀಕರಿಸಿ, "ಸಕಾಲ"ದಲ್ಲಿ ಗುತ್ತಿಗೆ ಆದೇಶಗಳು ಮೀನುಗಾರರ ಕೈ ಸೇರಬೇಕೆನ್ನುವ ಉದ್ದೇಶ ಸರ್ಕಾರದ್ದಾಗಿರುತ್ತದೆ.

ಪ್ರಸ್ತುತ ಜಾರಿಯಲ್ಲಿರುವ ಒಳನಾಡು ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕಿನ ವಿಲೇವಾರಿ ನಿಯಮಗಳು 2006 ರಿಂದ ಜಾರಿಗೆ ಬಂದಿದ್ದು, ಸುಮಾರು 8 ವರ್ಷಗಳಿಂದ ಈ ನಿಯಮಾನುಸಾರ ಒಳನಾಡು ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕನ್ನು ವಿಲೇವಾರಿ ಮಾಡಲಾಗುತ್ತಿದೆ. ಕಳೆದ 8 ವರ್ಷಗಳಿಂದ ಈ ನಿಯಮಗಳ ಅನುಷ್ಠಾನದ ಅವಧಿಯಲ್ಲಿ ದ್ವಂದ್ವತೆಗಳು, ನ್ಯೂನ್ಯತೆಗಳು, ಕೆರೆಗಳನ್ನು ವಿಲೇವಾರಿ ಮಾಡುವ "ಕಾಲಕಪಟ್ಟಿ" ಯಲ್ಲಿ ಹೊಂದಾಣಿಕೆಯಿಲ್ಲದೆ ಇರುವುದು ಮತ್ತು ಈ ನಿಯಮಗಳ ಮೇಲೆ ರಾಜ್ಯದ ಹಲವು ನ್ಯಾಯಾಲಯಗಳಲ್ಲಿ, ಪ್ರಮುಖವಾಗಿ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಪ್ರಸ್ತುತ ಚಾಲ್ತಿಯಲ್ಲಿರುವ ಒಳನಾಡು ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕಿನ ನಿಯಮಗಳನ್ನು ಹಾಗೂ ಗುತ್ತಿಗೆ ಆದೇಶಗಳನ್ನು ಪ್ರಶ್ನಿಸಿ ದಾವೆಗಳು ದಾಖಲಾಗಿದ್ದು, ಈ ದಾವೆಗಳಲ್ಲಿ ನೀಡಿದ ತೀರ್ಪಿನ ಹಿನ್ನೆಲೆಯಲ್ಲಿ ಚಾಲ್ತಿಯಲ್ಲಿರುವ ಮೀನು ಪಾಶುವಾರು ಹಕ್ಕಿನ ವಿಲೇವಾರಿ ನಿಯಮಗಳನ್ನು ಪರಿಷ್ಕರಿಸುವುದು ಅಗತ್ಯವೆಂದು ಸರ್ಕಾರವು ಮನಗಂಡಿರುತ್ತದೆ.

ಆದುದರಿಂದ, ರಾಜ್ಯದ ಸರ್ಕಾರಿ ಸ್ವಾಮ್ಯದ ಎಲ್ಲಾ ಒಳನಾಡು ಜಲಸಂಪನ್ಮೂಲಗಳಲ್ಲಿ ಮೀನು ಉತ್ಪಾದನೆಯನ್ನು ಗರಿಷ್ಠ ಪ್ರಮಾಣಕ್ಕೇರಿಸುವ, ಮೀನು ಕೃಷಿಯನ್ನು ಜೀವನಾಧಾರವಾಗಿ ಅವಲಂಬಿಸಿರುವ ಒಳನಾಡು ಮೀನುಗಾರರಿಗೆ ಸ್ವಯಂ ಉದ್ಯೋಗವನ್ನು ಕಲ್ಪಿಸಿಕೊಡುವುದರ ಮುಖಾಂತರ ಅವರ ಸಾಮಾಜಿಕ ಮತ್ತು ಆರ್ಥಿಕ ಸಬಲೀಕರಣಕ್ಕೆ ಒತ್ತು ನೀಡುವ ಹಾಗೂ ಚಾಲ್ತಿಯಲ್ಲಿರುವ ಗುತ್ತಿಗೆ ನಿಯಮಾವಳಿಗಳಲ್ಲಿರುವ ನ್ಯೂನ್ಯತೆಗಳನ್ನು ಸರಿಪಡಿಸಿ ಮತ್ತು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ತೀರ್ಪಿನ ಅಂಶಗಳನ್ನು ಅಳವಡಿಸಿಕೊಂಡು ಸಮಗ್ರವಾದ ಒಳನಾಡು ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕಿನ ವಿಲೇವಾರಿ ನಿಯಮಾವಳಿಗಳನ್ನು ರೂಪಿಸಲು ನಿರ್ಧರಿಸಿ ಈ ಕೆಳಕಂಡಂತೆ ಆದೇಶಿಸಲಾಗಿದೆ.

ಆದೇಶ ಸಂಖ್ಯೆ:ಪಸಂಮೀ 125 ಮೀಇಇ 2013, ಬೆಂಗಳೂರು ದಿನಾಂಕ:21-02-2014

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಈ ವಿಷಯವನ್ನು ಕೂಲಂಕಷವಾಗಿ ಪರಿಶೀಲಿಸಿ ಮೀನುಗಾರಿಕೆ ಇಲಾಖೆಯ / ಅರಣ್ಯ ಇಲಾಖೆಯ / ಗ್ರಾಮ ಪಂಚಾಯತ್‌ಗಳ / ಜಲಸಂವರ್ಧನೆ ಯೋಜನಾ ಸಂಘದ / ಕೆರೆ ಅಭಿವೃದ್ಧಿ ಪ್ರಾಧಿಕಾರದ / ಇತರೆ ಇಲಾಖೆಗಳ / ಪ್ರಾಧಿಕಾರಗಳ / ಸರ್ಕಾರಿ ಸ್ವಾಮ್ಯದ ಸಂಸ್ಥೆಗಳ ವ್ಯಾಪ್ತಿಯಲ್ಲಿನ ಹಾಗೂ ಸರ್ಕಾರಿ ಸ್ವಾಮ್ಯದ ಒಳನಾಡು ಜಲಸಂಪನ್ಮೂಲಗಳಾದ ಜಲಾಶಯಗಳ / ಕೆರೆಗಳ / ಕೊಳಗಳ / ನದಿಗಳ / ತೊರೆಗಳ / ಅಳಿವೆಗಳ ಇತ್ಯಾದಿ ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕಿನ ವಿಲೇವಾರಿಗೆ ಸಂಬಂಧಪಟ್ಟಂತೆ ಹೊರಡಿಸಲಾಗಿದ್ದ ದಿನಾಂಕ:28-01-2006ರ ಆದೇಶ ಸಂಖ್ಯೆ:ಪಸಂಮೀ/167/~~ಮೀಇಇ/2005~~ ವನ್ನು ~~ರದ್ದುಪಡಿಸಿ~~—ಮೀನುಗಾರಿಕಾ ಜಲಸಂಪನ್ಮೂಲಗಳ ವಿಲೇವಾರಿ ಕಾರ್ಯನೀತಿ-2014ಕ್ಕೆ ಅನುಮೋದನೆ ನೀಡಲಾಗಿದೆ ಹಾಗೂ ಈ ಕಾರ್ಯನೀತಿಯು 2014-15ನೇ ಸಾಲಿನ ಮೀನುಗಾರಿಕಾ ಫಸಲಿ ವರ್ಷದಿಂದ ಮುಂದಿನ ಆದೇಶದವರೆಗೆ ಈ ಕೆಳಕಂಡ ಸಮಗ್ರವಾದ ಒಳನಾಡು ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕಿನ ವಿಲೇವಾರಿ ನಿಯಮಗಳನ್ನು ಜಾರಿಗೊಳಿಸಿ ಆದೇಶಿಸಿದೆ.

ಕಂಡಿಕೆ-1:-

ಸರ್ಕಾರಿ ಸ್ವಾಮ್ಯದ ಜಲಸಂಪನ್ಮೂಲಗಳ ಒಡೆತನವು ಯಾವುದೇ ಇಲಾಖೆಯ / ಪ್ರಾಧಿಕಾರದ / ಸರ್ಕಾರಿ ಸ್ವಾಮ್ಯದ ಸಂಸ್ಥೆಯ ವ್ಯಾಪ್ತಿಗೆ ಒಳಪಟ್ಟಿದ್ದರೂ ಕೂಡ, ಅಂತಹ ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕಿನ ವಿಲೇವಾರಿಯ ವಿಷಯವು ಮೀನುಗಾರಿಕೆ ಇಲಾಖೆಯ ವ್ಯಾಪ್ತಿಗೆ ಒಳಪಟ್ಟಿರುತ್ತದೆ.

ಕಂಡಿಕೆ-2:-

ಸರ್ಕಾರವು ಈ ಹಿಂದೆ ಹೊರಡಿಸಿದ್ದ ಸಂಖ್ಯೆ:ಪಸಂಮೀ/167/ಮೀಇಇ/2005, ದಿನಾಂಕ: 28-01-2006ರ ಆದೇಶದಲ್ಲಿನ ವಿಲೇವಾರಿ ನಿಯಮಗಳ ಪ್ರಕಾರ ವಿಲೇವಾರಿಯಾದ ಎಲ್ಲಾ ಜಲಸಂಪನ್ಮೂಲಗಳ ವಿಲೇವಾರಿ ಅವಧಿ ಮುಗಿದನಂತರ ಆ ಜಲಸಂಪನ್ಮೂಲಗಳಿಗೆ ಸಂಬಂಧಿಸಿದಂತೆ ಈ ಆದೇಶ ಜಾರಿಗೆ ಬರುತ್ತದೆ.

ಕಂಡಿಕೆ-3:-

ಒಳನಾಡು ಜಲಸಂಪನ್ಮೂಲಗಳ ವರ್ಗೀಕರಣ

I) ಕೆರೆಗಳ ವರ್ಗೀಕರಣ:

(1) ಮೀನುಗಾರಿಕೆ ಇಲಾಖಾ ವ್ಯಾಪ್ತಿಯ ಕೆರೆಗಳು:-

ಅ) 40 ಹೆಕ್ಟೇರ್‌ಗಿಂತ ಹೆಚ್ಚು ಅಚ್ಚುಕಟ್ಟು ಪ್ರದೇಶವುಳ್ಳ ಸರ್ಕಾರಿ ಸ್ವಾಮ್ಯದ ಎಲ್ಲಾ ಜಲಸಂಪನ್ಮೂಲಗಳು.

ಆ) ಗ್ರಾಮಪಂಚಾಯಿತಿಗಳಿಲ್ಲದ ಪಟ್ಟಣ ಪಂಚಾಯಿತಿ, ಪುರಸಭೆ, ನಗರಸಭೆ, ನಗರಪಾಲಿಕೆ, ಮಹಾನಗರಪಾಲಿಕೆ ಇತ್ಯಾದಿ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯ 40 ಹೆಕ್ಟೇರ್‌ಗಿಂತ ಕಡಿಮೆ ಅಚ್ಚುಕಟ್ಟು ಪ್ರದೇಶದವರೆಗಿನ ಸರ್ಕಾರಿ ಸ್ವಾಮ್ಯದ ಎಲ್ಲಾ ಜಲಸಂಪನ್ಮೂಲಗಳು.

(2) ಗ್ರಾಮಪಂಚಾಯತಿ ವ್ಯಾಪ್ತಿಯ ಕೆರೆಗಳು:-

40 ಹೆಕ್ಟೇರ್ ಅಚ್ಚುಕಟ್ಟು ಪ್ರದೇಶದವರೆಗಿನ ಸರ್ಕಾರಿ ಸ್ವಾಮ್ಯದ ಜಲಸಂಪನ್ಮೂಲಗಳು (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಆದೇಶ ಸಂ.ಗ್ರಾಅಪ 165 ಜಿಪಸ 2002 ದಿನಾಂಕ 01/03/2004 ಮತ್ತು 05/04/2004ರಲ್ಲಿ 40 ಹೆಕ್ಟೇರ್ ಅಚ್ಚುಕಟ್ಟು ಪ್ರದೇಶದವರೆಗಿನ ಸರ್ಕಾರಿ ಸ್ವಾಮ್ಯದ ಜಲಸಂಪನ್ಮೂಲಗಳ ಮೀನುಗಾರಿಕೆ ಅಭಿವೃದ್ಧಿ ಮತ್ತು ಮೀನು ಪಾಶುವಾರು ಹಕ್ಕು ವಿಲೇವಾರಿಯನ್ನು ಗ್ರಾಮಪಂಚಾಯತಿಗಳಿಗೆ ನೀಡಿ ಸರ್ಕಾರವು ಆದೇಶಿಸಿರುವುದನುಸಾರ).

II) ಜಲಾಶಯಗಳ ವರ್ಗೀಕರಣ:-

(1) ಸಣ್ಣ ಜಲಾಶಯಗಳು (1000 ಹೆಕ್ಟೇರ್ ಜಲವಿಸ್ತೀರ್ಣಕ್ಕಿಂತ ಕಡಿಮೆ ಜಲವಿಸ್ತೀರ್ಣ ಹೊಂದಿರುವ ಜಲಾಶಯಗಳು).

(2) ಮಧ್ಯಮ ಜಲಾಶಯಗಳು (1001 ರಿಂದ 5000 ಹೆಕ್ಟೇರ್ ಜಲವಿಸ್ತೀರ್ಣ ಹೊಂದಿರುವ ಜಲಾಶಯಗಳು)

(3) ದೊಡ್ಡ ಜಲಾಶಯಗಳು (5001 ಹೆಕ್ಟೇರ್ ಜಲವಿಸ್ತೀರ್ಣಕ್ಕಿಂತ ಮೇಲ್ಪಟ್ಟ ಜಲಾಶಯಗಳು)

III) ನದಿ ಭಾಗ:-

1) ನದಿಯ 25 ಕಿ.ಮೀ. ಉದ್ದದ ಭಾಗ ಅಥವಾ ಆ ತಾಲ್ಲೂಕಿನ ಗಡಿಯೊಳಗೆ ಬರುವ 25 ಕಿ.ಮೀ. ಗಿಂತ ಕಡಿಮೆ ಇರುವ ಭಾಗ.

IV) ಅಳಿವೆಗಳು:-

ಕಂಡಿಕೆ-4:-

ವಿಲೇವಾರಿ ವಿಧಾನಗಳು

1) ಗುತ್ತಿಗೆ:-

(ಅ) ಜಲಸಂಪನ್ಮೂಲಗಳನ್ನು ಮೊದಲು ಅರ್ಹ ಮೀನುಗಾರರ ಸಹಕಾರ ಸಂಘಗಳಿಂದ ಅರ್ಜಿಗಳನ್ನು ಆಹ್ವಾನಿಸಿ ಗರಿಷ್ಠ 5 ವರ್ಷಗಳ ಅವಧಿಗೆ ಗುತ್ತಿಗೆಗೆ ನೀಡಲಾಗುವುದು. ಅರ್ಜಿ ಸಲ್ಲಿಸಿದ ಮೀನುಗಾರರ ಸಹಕಾರ ಸಂಘಗಳು ಈ ಆದೇಶದ ಅನುಬಂಧ-1ರಲ್ಲಿ ನಮೂದಿಸಿರುವ ಅರ್ಹತೆಗಳನ್ನು ಹೊಂದಿರಬೇಕು ಹಾಗೂ ದಾಖಲಾತಿಗಳನ್ನು ಸಲ್ಲಿಸಬೇಕು.

(ಆ) ಪ್ರತಿ ಅರ್ಹ ಮೀನುಗಾರರ ಸಹಕಾರ ಸಂಘಕ್ಕೆ, ಆ ಸಂಘದ ಬೈಲಾ ಪ್ರಕಾರ, ಅದರ ಕಾರ್ಯ ವ್ಯಾಪ್ತಿಯಲ್ಲಿ ಗರಿಷ್ಠ 300 ಹೆಕ್ಟೇರ್ ಜಲವಿಸ್ತೀರ್ಣಕ್ಕೆ ಮೀರದಂತೆ ಗರಿಷ್ಠ ಎರಡು ಕೆರೆ ಅಥವಾ ಈ ಆದೇಶದ ಅನುಬಂಧ-2 ರಲ್ಲಿ ಪಟ್ಟಿ ಮಾಡಿರುವ ಗರಿಷ್ಠ ಒಂದು ಜಲಾಶಯದ ಅಥವಾ

ಗರಿಷ್ಠ ಎರಡು ನದಿ ಭಾಗ ಮಾತ್ರ ಗುತ್ತಿಗೆಗೆ ನೀಡುವುದು. (300 ಹೆ. ಜಲವಿಸ್ತೀರ್ಣ ಮೀರಿದ ಜಲಸಂಪನ್ಮೂಲಗಳಲ್ಲಿ ಸಂದರ್ಭದಲ್ಲಿ ಕೇವಲ ಒಂದು ಜಲಸಂಪನ್ಮೂಲದ ಮೀನು ಪಾಶುವಾರು ಹಕ್ಕನ್ನು ಮಾತ್ರ ಗುತ್ತಿಗೆ ಪಡೆಯಲು ಸದರಿ ಮೀನುಗಾರರ ಸಹಕಾರ ಸಂಘ ಅರ್ಹತೆಯನ್ನು ಹೊಂದಿರುತ್ತದೆ.)

(ಇ) ಒಂದೇ ಕೆರೆಗೆ, ಕೆರೆಯ ವ್ಯಾಪ್ತಿಯ ಹಲವಾರು ಮೀನುಗಾರಿಕೆ ಸಹಕಾರಿ ಸಂಘಗಳು ಅರ್ಜಿಗಳನ್ನು ಸಲ್ಲಿಸಿದಲ್ಲಿ ಮೊದಲನೆಯ ಆದ್ಯತೆಯನ್ನು ಗ್ರಾಮ ಮಟ್ಟದ ಮೀನುಗಾರಿಕೆ ಸಹಕಾರ ಸಂಘಕ್ಕೆ, ನಂತರದ ಆದ್ಯತೆಯನ್ನು ಅನುಕ್ರಮವಾಗಿ ಹೋಬಳಿ ಮಟ್ಟದ, ತಾಲ್ಲೂಕು ಮಟ್ಟದ ಅಥವಾ ಜಿಲ್ಲಾ ಮಟ್ಟದ ಮೀನುಗಾರರ ಸಹಕಾರ ಸಂಘಕ್ಕೆ ನೀಡುವುದು.

(ಈ) ಒಂದೇ ಆದ್ಯತೆಯಲ್ಲಿ ಬರುವ ಒಂದಕ್ಕಿಂತ ಹೆಚ್ಚಿನ ಮೀನುಗಾರರ ಸಹಕಾರ ಸಂಘಗಳು ಒಂದೇ ಜಲಸಂಪನ್ಮೂಲಕ್ಕೆ ಅರ್ಜಿ ಸಲ್ಲಿಸಿದ್ದಲ್ಲಿ, ಅರ್ಜಿ ಸಲ್ಲಿಸಿರುವ ಅರ್ಹ ಮೀನುಗಾರರ ಸಹಕಾರ ಸಂಘಗಳ ನಡುವೆ ಮಾತ್ರ ಹರಾಜು ನಡೆಸಿ ವಿಲೇವಾರಿ ಮಾಡುವುದು.

(ಉ) ಕೆಲವು ಆಯ್ದ ನದಿ ಭಾಗಗಳನ್ನು / ಅಳಿವೆಗಳನ್ನು ಮಾತ್ರ ಮೀನುಗಾರರ ಸಹಕಾರ ಸಂಘಗಳು ಅಥವಾ ಮತ್ಸ್ಯ ಪ್ರಭೇದಗಳ ಸಂರಕ್ಷಣೆ ಜೀವ ವೈವಿಧ್ಯಗಳ ಸಂರಕ್ಷಣೆ ಅಥವಾ ಕರ್ನಾಟಕದ ವಿಶೇಷ ಮೀನು ಪ್ರಭೇದಗಳ ಸಂರಕ್ಷಣೆಗೋಸ್ಕರ ಸಂಘಟಿಸಿರುವ ವನ್ಯ ಜೀವಿ ಸಂಘಗಳು, ಜೀವ ವೈವಿಧ್ಯ ಸಂರಕ್ಷಣಾ ಸಂಘಗಳಿಗೆ ಗರಿಷ್ಠ ಎರಡು ನದಿ ಭಾಗಗಳನ್ನು ಮಾತ್ರ ಗುತ್ತಿಗೆ ನೀಡಬಹುದು. ಈ ವನ್ಯ ಜೀವಿ ಸಂಘಗಳು ನೋಂದಾಯಿತ ಸಂಘಗಳಾಗಿರಬೇಕು. ಮೀನು ಪ್ರಭೇದಗಳ ಸಂರಕ್ಷಣೆಯಲ್ಲಿ ತೊಡಗಿಸಿಕೊಂಡಿರಬೇಕು. ಹಾಗೂ ಅವರ ಬೈಲಾಗಳಲ್ಲಿ ಮೀನು ಸಂರಕ್ಷಣೆ ಒಂದು ಪ್ರಮುಖ ಉದ್ದೇಶವಾಗಿರಬೇಕು.

2) ಟೆಂಡರ್ ಮತ್ತು ಹರಾಜು:–

ಗುತ್ತಿಗೆಗೆ ಕೋರದ ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕನ್ನು ಟೆಂಡರ್–ಕಂ–ಹರಾಜು ಮೂಲಕ ಹೆಚ್ಚಿನ ಪ್ರಚಾರ ನೀಡಿ ಗರಿಷ್ಠ 5 (ಐದು) ವರ್ಷಗಳ ಅವಧಿಗೆ ವಿಲೇವಾರಿ ಮಾಡತಕ್ಕದ್ದು.... ಈ ವಿಧಾನದಲ್ಲಿ ಮೊದಲು ಹರಾಜನ್ನು ನಡೆಸುವುದು. ನಂತರ ಟೆಂಡರ್ ಅರ್ಜಿಗಳನ್ನು ತೆರೆಯುವುದು. ಟೆಂಡರ್ ಅರ್ಜಿಗಳಲ್ಲಿ ನಮೂದಿಸಿರುವ ಅತಿ ಹೆಚ್ಚಿನ ಮೊತ್ತ ಅಥವಾ ಹರಾಜಿನಲ್ಲಿ ಸೂಚಿಸಿರುವ ಅತಿ ಹೆಚ್ಚಿನ ಬಿಡ್ ಮೊತ್ತ ಈ ಎರಡರಲ್ಲಿ ಯಾವುದು ಹೆಚ್ಚೋ ಆ ಮೊತ್ತವನ್ನು ಪ್ರಥಮ ವರ್ಷದ ಅಖೈರಾದ ಗುತ್ತಿಗೆ ಮೊತ್ತವೆಂದು ಪರಿಗಣಿಸತಕ್ಕದ್ದು.

3) ಪರವಾನಗಿ:–

ವೃತ್ತಿಪರ ಮೀನುಗಾರರಿಗೆ ಅಥವಾ ಕ್ರೀಡಾ ಮೀನುಗಾರರಿಗೆ ನಿರ್ದಿಷ್ಟ ಮೊತ್ತವನ್ನು ನಿಗಧಿಪಡಿಸಿ, ನಿಗಧಿತ ಜಲಸಂಪನ್ಮೂಲದಲ್ಲಿ, ನಿಗಧಿತ ಅವಧಿಗೆ ಪರವಾನಗಿ ಮೂಲಕ ಮೀನು ಹಿಡಿಯಲು ಅವಕಾಶ ನೀಡುವ ವಿಧಾನ. ರಾಜ್ಯದ ಆಯ್ದ ಜಲಾಶಯಗಳನ್ನು (ಈ ಆದೇಶದ ಅನುಬಂಧ–3ರಲ್ಲಿ ಪಟ್ಟಿ ಮಾಡಿರುವ ಜಲಾಶಯಗಳು), ಎಲ್ಲಾ ಅಳಿವೆಗಳನ್ನು ಮತ್ತು ಗುತ್ತಿಗೆಗೆ ಕೋರದ ನದಿ ಭಾಗಗಳನ್ನು ಮೀನುಗಾರರಿಗೆ ಪರವಾನಗಿ ನೀಡುವ ಮುಖಾಂತರ ಮಾತ್ರ ಮೀನುಗಾರಿಕೆ ಕೈಗೊಳ್ಳತಕ್ಕದ್ದು. ಪರವಾನಗಿ ಶುಲ್ಕಗಳನ್ನು ಕಂಡಿಕೆ–15ರಲ್ಲಿ ನಿಗಧಿಪಡಿಸಿರುವಂತೆ ವಿಧಿಸುವುದು.

ಕಂಡಿಕೆ–5:–

ವಿಶೇಷ ಕಾರಣಾಂತರಗಳಿಂದಾಗಿ, ಎಲ್ಲೆಲ್ಲಿ ಒಳನಾಡು ಕೆರೆಗಳ / ಜಲಾಶಯಗಳ ಮೀನು ಪಾಶುವಾರು ಹಕ್ಕನ್ನು ಮೀನುಗಾರಿಕೆ ಇಲಾಖೆಯಿಂದ ನೇರ ಗುತ್ತಿಗೆ ಮುಖಾಂತರವಾಗಲೀ ಅಥವಾ ಟೆಂಡರ್–ಕಂ–ಹರಾಜು ಮುಖಾಂತರವಾಗಲೀ ವಿಲೇವಾರಿ ಮಾಡಲು ಸಾಧ್ಯವಾಗದಿದ್ದ ಪಕ್ಷದಲ್ಲಿ, ಅಂತಹ ಜಲಸಂಪನ್ಮೂಲಗಳಲ್ಲಿನ ಮೀನು ಪಾಶುವಾರು ಹಕ್ಕನ್ನು ಮೀನುಗಾರಿಕೆ ನಿರ್ದೇಶಕರ ಅನುಮತಿಯ ಮೇರೆಗೆ ಸ್ಥಳೀಯ ಮೀನುಗಾರರಿಗೆ ಪರವಾನಗಿ ನೀಡುವ ಮುಖಾಂತರ ಮೀನುಗಾರಿಕೆಯನ್ನು ಕೈಗೊಳ್ಳತಕ್ಕದ್ದು.

ಕಂಡಿಕೆ–6:–

ಮೀನುಗಾರಿಕೆ ವರ್ಷ ಮತ್ತು ಗುತ್ತಿಗೆ ಅವಧಿ

ಪ್ರತಿ ವರ್ಷದ ಜುಲೈ 1 ರಿಂದ ಮುಂದಿನ ವರ್ಷದ ಜೂನ್ 30ರವರೆಗಿನ ಅವಧಿಯನ್ನು "ಮೀನುಗಾರಿಕೆ ವರ್ಷ" ವೆಂದು ಪರಿಗಣಿಸುವುದು. ಗುತ್ತಿಗೆ ಮುಖಾಂತರವಾಗಲಿ ಅಥವಾ ಟೆಂಡರ್ ಮತ್ತು ಹರಾಜು ಮುಖಾಂತರವಾಗಲಿ ನೀಡಲಾಗುವ ಮೀನು ಪಾಶುವಾರು ಹಕ್ಕಿನ ಗುತ್ತಿಗೆಯನ್ನು ಗರಿಷ್ಠ 5 ವರ್ಷಗಳಿಗೆ ನೀಡತಕ್ಕದ್ದು. ಆದರೆ, ವೃತ್ತಿಪರ ಮೀನುಗಾರರ ಪರವಾನಗಿಗಳು ಆ ವರ್ಷದ ಮೀನುಗಾರಿಕೆ ವರ್ಷಕ್ಕೆ ಸೀಮಿತಗೊಳ್ಳುತ್ತವೆ. ಮೀನುಗಾರಿಕಾ ವರ್ಷದ ಮಧ್ಯಂತರದ ಯಾವುದೇ ಅವಧಿಯಲ್ಲಿ ಗುತ್ತಿಗೆ/ಪರವಾನಗಿ ನೀಡಲಾಗಿದ್ದರೂ ಸಹ, ಮೀನುಗಾರಿಕೆ ವರ್ಷದ ಅಂತ್ಯದಲ್ಲಿ ಗುತ್ತಿಗೆಯು ಕೊನೆಗೊಳ್ಳುತ್ತದೆ.

ಕಂಡಿಕೆ–7:–

ಉಪಯುಕ್ತತಾ ಜಲವಿಸ್ತೀರ್ಣ ಪ್ರದೇಶ ಮತ್ತು ಗುತ್ತಿಗೆ ಮೊತ್ತದ ನಿಗಧಿ

(ಅ) ಹೊಸದಾಗಿ ಮೀನು ಪಾಶುವಾರು ಹಕ್ಕನ್ನು ಗುತ್ತಿಗೆಗೆ ನೀಡಲಾಗುವ ಜಲಸಂಪನ್ಮೂಲದ ಒಟ್ಟು ಜಲ ವಿಸ್ತೀರ್ಣದ ಶೇಕಡ 50ರಷ್ಟು ಜಲವಿಸ್ತೀರ್ಣವನ್ನು ಉಪಯುಕ್ತತಾ ಜಲವಿಸ್ತೀರ್ಣ ಪ್ರದೇಶವೆಂದು (ಇಜಿಜಿಜಛಿಣಾತಿಜ ಫಾಚಿಣಜಡಿ ಖಿಠಿಡಿಜಚಿಜ ಂಡಿಜಚಿ) ಗಣನೆಗೆ ತೆಗೆದುಕೊಂಡು, ಈ ರೀತಿ ಗಣನೆಗೆ ತೆಗೆದುಕೊಂಡ ಉಪಯುಕ್ತತಾ ಜಲವಿಸ್ತೀರ್ಣಕ್ಕೆ ಮೊದಲನೇ ವರ್ಷ ಪ್ರತಿ ಹೆಕ್ಟೇರಿಗೆ ರೂ.500–00ರಂತೆ (ರೂಪಾಯಿ ಐದು ನೂರು ಮಾತ್ರ) ಬರುವ ಮೊತ್ತ ಅಥವಾ ಹಿಂದಿನ ಮೂರು ವರ್ಷಗಳ ಸರಾಸರಿ ಆದಾಯ ಇವೆರಡರಲ್ಲಿ ಯಾವುದು ಹೆಚ್ಚೋ ಅದನ್ನು ಪ್ರಥಮ ವರ್ಷದ ಗುತ್ತಿಗೆ ಮೊತ್ತವೆಂದು ನಿಗದಿಪಡಿಸತಕ್ಕದ್ದು. ಈ ರೀತಿ ನಿಗದಿಪಡಿಸಿದ ಗುತ್ತಿಗೆ ಮೊತ್ತಕ್ಕೆ ಉಳಿದ 4 ವರ್ಷಗಳ ಗುತ್ತಿಗೆ ಅವಧಿಯಲ್ಲಿ ಪ್ರತಿ ವರ್ಷ ಹಿಂದಿನ ವರ್ಷದ ಗುತ್ತಿಗೆ ಮೊತ್ತಕ್ಕೆ ಶೇ.5ರಷ್ಟು ಹೆಚ್ಚಿಸಿ ಗುತ್ತಿಗೆ ಮೊತ್ತವನ್ನು ನಿಗದಿಪಡಿಸತಕ್ಕದ್ದು.

(ಆ) ನದಿಗಳನ್ನು ಗುತ್ತಿಗೆ ನೀಡುವ ಪ್ರತಿ ಕಿ.ಮೀ. ಉದ್ದದ ಭಾಗಕ್ಕೆ ರೂ.500.00ರಂತೆ ಮೊದಲನೇ ವರ್ಷದ ಗುತ್ತಿಗೆ ಮೊತ್ತವನ್ನು ನಿಗಧಿಪಡಿಸುವುದು. ಉಳಿದ 4 ವರ್ಷಗಳ ಗುತ್ತಿಗೆ ಅವಧಿಯಲ್ಲಿ ಪ್ರತಿ ವರ್ಷ ಹಿಂದಿನ ವರ್ಷದ ಗುತ್ತಿಗೆ ಮೊತ್ತಕ್ಕೆ ಶೇ.5ರಷ್ಟು ಹೆಚ್ಚಿಸಿ ಗುತ್ತಿಗೆ ಮೊತ್ತವನ್ನು ನಿಗಧಿಪಡಿಸತಕ್ಕದ್ದು. ನದಿ ಭಾಗಗಳನ್ನು ಮೀನುಗಾರರ ಸಹಕಾರ ಸಂಘಗಳಿಗೆ ಕಂಡಿಕೆ–10ರಲ್ಲಿ ನಮೂದಿಸಿರುವ ಗುತ್ತಿಗೆ ನೀಡುವ ಪ್ರಾಧಿಕಾರಗಳು ಗುತ್ತಿಗೆ ನೀಡುವುದು. ಆದರೆ ವಿಶೇಷವಾದ ವನ್ಯಜೀವಿ ಸಂರಕ್ಷಣಾ ಸಂಘಗಳಿಗೆ ಗುತ್ತಿಗೆ ನೀಡುವ ಅಧಿಕಾರ ಮೀನುಗಾರಿಕೆ ನಿರ್ದೇಶಕರಿಗೆ ಮಾತ್ರ ಪ್ರದತ್ತವಾಗಿರುತ್ತದೆ.

(ಗ) ಈ ರೀತಿಯಾಗಿ ನೀಡಲಾದ 5 ವರ್ಷಗಳ ಪ್ರಥಮ ಗುತ್ತಿಗೆ ಅವಧಿಯು (ಮೊದಲನೇ ಬ್ಲಾಕ್) ಮುಗಿದನಂತರ ಸದರಿ ಜಲಸಂಪನ್ಮೂಲಕ್ಕೆ ಸಂಬಂಧಿಸಿದಂತೆ ಹೊಸದಾಗಿ 5 ವರ್ಷಗಳ ಎರಡನೇ ಗುತ್ತಿಗೆ ಅವಧಿಗೆ (ಎರಡನೇ ಬ್ಲಾಕ್) ಪ್ರಸ್ತಾವನೆಯನ್ನು ಸಲ್ಲಿಸುವ ಸಮಯದಲ್ಲಿ ಪುನ: ಆ ಜಲಸಂಪನ್ಮೂಲದ ಒಟ್ಟು ಜಲವಿಸ್ತೀರ್ಣದ ಶೇ.50ರಷ್ಟನ್ನು ಉಪಯುಕ್ತತಾ ಜಲವಿಸ್ತೀರ್ಣವೆಂದು ಗಣನೆಗೆ ತೆಗೆದುಕೊಂಡು ಆ ರೀತಿ ಗಣನೆಗೆ ತೆಗೆದುಕೊಂಡ ಜಲವಿಸ್ತೀರ್ಣದ ಪ್ರತಿ ಹೆಕ್ಟೇರಿಗೆ ರೂ.500-00ರಂತೆ ಮತ್ತು ನದಿ ಭಾಗಕ್ಕೆ ಪ್ರತಿ ಕಿ.ಮೀ.ಗೆ ರೂ.500.00ರಂತೆ ಅಥವಾ ಹಿಂದಿನ ಮೂರು ವರ್ಷಗಳ ಸರಾಸರಿ ಆದಾಯ ಇವೆರಡರಲ್ಲಿ ಯಾವುದು ಹೆಚ್ಚೋ ಅದನ್ನು ಗುತ್ತಿಗೆ ಮೊತ್ತವೆಂದು ನಿಗದಿಪಡಿಸತಕ್ಕದ್ದು. ಈ ರೀತಿ ನಿಗದಿಪಡಿಸಿದ ಗುತ್ತಿಗೆ ಮೊತ್ತಕ್ಕೆ ಆ ಬ್ಲಾಕ್‌ನ ಉಳಿದ 4 ವರ್ಷಗಳ ಗುತ್ತಿಗೆ ಅವಧಿಯಲ್ಲಿ ಪ್ರತಿವರ್ಷ ಹಿಂದಿನ ವರ್ಷದ ಗುತ್ತಿಗೆ ಮೊತ್ತಕ್ಕೆ ಶೇ.5ರಷ್ಟು ಹೆಚ್ಚಿಸಿ ಗುತ್ತಿಗೆ ಮೊತ್ತವನ್ನು ನಿಗದಿಪಡಿಸತಕ್ಕದ್ದು. ಇದೇ ರೀತಿ ಮುಂದಿನ ಮೂರು ಮತ್ತು ನಂತರದ ಬ್ಲಾಕ್‌ಗಳಿಗೆ ಗುತ್ತಿಗೆ ಮೊತ್ತ ನಿಗಧಿಪಡಿಸುವುದು.

ಕಂಡಿಕೆ-8:-

ಮೀನುಗಾರಿಕೆ ನಿಷೇಧ -

ಮುಂಗಾರು ಮಳೆಗಾಲದ ಅವಧಿಯಲ್ಲಿ ಮೀನುಗಳ ವಂಶಾಭಿವೃದ್ಧಿ ಚಟುವಟಿಕೆಗಳು ನಡೆಯುವುದರಿಂದ ಪ್ರತಿ ವರ್ಷದ ಜೂನ್ 01 ರಿಂದ ಜುಲೈ 30ರವರೆಗೆ ರಾಜ್ಯದ ಎಲ್ಲಾ ಸರ್ವಋತು ಕೆರೆಗಳು, ಜಲಾಶಯಗಳು, ತೊರೆಗಳು, ಅಳಿವೆಗಳು ಮತ್ತು ನದಿಗಳಲ್ಲಿ ಮೀನು ಹಿಡಿಯುವುದನ್ನು ಪೂರ್ಣವಾಗಿ ನಿಷೇಧಿಸಲಾಗಿರುತ್ತದೆ.

ಕಂಡಿಕೆ-9:-

ಜಲಾಶಯಗಳಲ್ಲಿ "ಪಂಜರದಲ್ಲಿ ಮೀನು ಕೃಷಿ"

ರಾಜ್ಯದಲ್ಲಿರುವ ಆಯ್ದ ಜಲಾಶಯಗಳಲ್ಲಿ ಸೂಕ್ತ ಸ್ಥಳಗಳನ್ನು ಗುರುತಿಸಿ ಆ ಸ್ಥಳಗಳಲ್ಲಿ "ಪಂಜರದಲ್ಲಿ ಮೀನು ಕೃಷಿ" ಕೈಗೊಳ್ಳಲು ಇಲಾಖೆಯಿಂದ ಕ್ರಮಕೈಗೊಳ್ಳುವುದು ಅಥವಾ ಸಮರ್ಥ ಉದ್ಯಮಿಗಳಿಂದ/ಸಹಕಾರ ಸಂಘ/ಸಂಸ್ಥೆಗಳಿಗೆ ಪಾರದರ್ಶಕ ನಿಯಮಗಳನ್ನು ಪಾಲಿಸಿಕೊಂಡು ಗುತ್ತಿಗೆ ಮೂಲಕ ಸ್ಥಳವನ್ನು ಹಂಚಿಕೆ ಮಾಡುವುದು. ಜಲಾಶಯಗಳಲ್ಲಿ ಜಲವಿಸ್ತೀರ್ಣದ ಗರಿಷ್ಠ ಶೇಕಡ 10ರ ಭಾಗದಲ್ಲಿ "ಪಂಜರಗಳಲ್ಲಿ ಮೀನು ಕೃಷಿ" ಕೈಗೊಳ್ಳುವುದು. ಗುತ್ತಿಗೆ ನೀಡುವುದಾದಲ್ಲಿ ಗರಿಷ್ಠ 10 (ಹತ್ತು) ವರ್ಷಗಳ ಅವಧಿಗೆ ನೀಡತಕ್ಕದ್ದು. ಪ್ರತಿ ಘಟಕಕ್ಕೆ 0.25 ಹೆಕ್ಟೇರ್ ಜಲವಿಸ್ತೀರ್ಣವನ್ನು ಗುತ್ತಿಗೆ ನೀಡಬಹುದು. ಹಾಗೂ ಪ್ರತಿ ಘಟಕಕ್ಕೆ ಕನಿಷ್ಠ ರೂ.10,000/-ಗಳ ಗುತ್ತಿಗೆ ಮೊತ್ತವನ್ನು ನಿಗಧಿಗೊಳಿಸುವುದು. ಈ ರೀತಿ ವಿಲೇವಾರಿ ಮಾಡಿದ ನಂತರ ಉಳಿದ 9 ವರ್ಷಗಳಿಗೆ ಹಿಂದಿನ ವರ್ಷದ ಗುತ್ತಿಗೆ ಮೊತ್ತಕ್ಕೆ ಶೇಕಡ 5ರಷ್ಟು ಗುತ್ತಿಗೆ ಮೊತ್ತವನ್ನು ಹೆಚ್ಚಿಸುವುದು. ಒಬ್ಬ ಫಲಾನುಭವಿಗೆ ಒಂದು ಜಲಾಶಯದಲ್ಲಿ ಗರಿಷ್ಠ 4 ಘಟಕಗಳನ್ನು ಮಾತ್ರ ಗುತ್ತಿಗೆ ನೀಡುವುದು.

ಈ ಯೋಜನೆಯ ಅನುಷ್ಠಾನಕ್ಕೆ ಸೂಕ್ತ ಜಲಾಶಯಗಳನ್ನು ಮತ್ತು ಸ್ಥಳಗಳನ್ನು ಆಯ್ಕೆ ಮಾಡಲು ಹಾಗೂ ತತ್ಸಂಬಂಧ ಮಾರ್ಗಸೂಚಿಗಳನ್ನು ರೂಪಿಸಲು ಮೀನುಗಾರಿಕೆ ನಿರ್ದೇಶಕರವರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸುವುದು. ಈ ಸಮಿತಿಯು ಗುತ್ತಿಗೆ ಪಡೆಯಲು ಮುಂದೆ ಬರುವ ಅರ್ಜಿದಾರರನ್ನು ಪಾರದರ್ಶಕ ನಿಯಮಾನುಸಾರ ಆಯ್ಕೆ ಮಾಡಲು ಅಧಿಕಾರಯುಕ್ತ ಸಮಿತಿಯಾಗಿರುತ್ತದೆ.

ಕಂಡಿಕೆ-10:-

ಮೀನು ಪಾಶುವಾರು ಹಕ್ಕನ್ನು ವಿಲೇವಾರಿ ಮಾಡುವ ಸಂಬಂಧ ಅಧಿಕಾರ ವಿಕೇಂದ್ರೀಕರಣ

1. ನೇರ ಗುತ್ತಿಗೆ ಪ್ರಸ್ತಾವನೆಗಳು

ಗುತ್ತಿಗೆ ನೀಡುವ ಪ್ರಾಧಿಕಾರ	ಅಧಿಕಾರದ ಮಿತಿ (ವಾರ್ಷಿಕ ಗುತ್ತಿಗೆ ಮೊತ್ತ)
ಮೀನುಗಾರಿಕೆ ನಿರ್ದೇಶಕರು	ಪೂರ್ಣಾಧಿಕಾರ
ಮೀನುಗಾರಿಕೆ ಜಂಟಿ ನಿರ್ದೇಶಕರು	ರೂ. 1,00,000.00 ರವರೆಗೆ
ಮೀನುಗಾರಿಕೆ ಉಪನಿರ್ದೇಶಕರು	ರೂ. 50,000.00 ರವರೆಗೆ
ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ	ರೂ. 25,000.00 ರವರೆಗೆ

2. ಟೆಂಡರ್-ಕಂ-ಹರಾಜು ಪ್ರಸ್ತಾವನೆಗಳು

ದೃಢೀಕರಿಸುವ ಪ್ರಾಧಿಕಾರ	ಅಧಿಕಾರದ ಮಿತಿ (ವಾರ್ಷಿಕ ಗುತ್ತಿಗೆ ಮೊತ್ತ)
ಮೀನುಗಾರಿಕೆ ನಿರ್ದೇಶಕರು	ಪೂರ್ಣಾಧಿಕಾರ
ಮೀನುಗಾರಿಕೆ ಜಂಟಿನಿರ್ದೇಶಕರು	ರೂ. 1,50,000.00ರವರೆಗೆ
ಮೀನುಗಾರಿಕೆ ಉಪನಿರ್ದೇಶಕರು	ರೂ. 1,00,000.00ರವರೆಗೆ
ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ	ರೂ. 50,000.00ರವರೆಗೆ

ಕಂಡಿಕೆ-11:

ಮೀನು ಪಾಶುವಾರು ಹಕ್ಕಿನ ವಿಲೇವಾರಿಗೆ ಸಂಬಂಧಪಟ್ಟಂತೆ ತಾಲ್ಲೂಕು ಮೀನುಗಾರಿಕೆ ಅಧಿಕಾರಿಗಳು ಕಡ್ಡಾಯವಾಗಿ ಪಾಲಿಸಬೇಕಾದ ವಿಧಿ ವಿಧಾನಗಳು ಮತ್ತು ಮಾರ್ಗಸೂಚಿಗಳು

ಮೀನು ಪಾಶುವಾರು ಹಕ್ಕನ್ನು ಮೀನುಗಾರಿಕೆ ಇಲಾಖೆ ಮುಖಾಂತರ ನೇರ ಗುತ್ತಿಗೆ ಆಧಾರದ ಮೇರೆಗೆ, ಅಥವಾ ಟೆಂಡರ್-ಕಂ-ಹರಾಜು ಮೂಲಕ ಅಥವಾ ಪರವಾನಗಿ ಮೂಲಕ ವಿಲೇವಾರಿ ಮಾಡುವಾಗ ಅನುಕ್ರಮವಾಗಿ ಈ ಆದೇಶದ ಅನುಬಂಧ-4, ಅನುಬಂಧ-5 ಮತ್ತು ಅನುಬಂಧ-6ರಲ್ಲಿ ನಮೂದಿಸಲಾಗಿರುವ ವಿಧಿವಿಧಾನಗಳನ್ನು ಮತ್ತು ಮಾರ್ಗಸೂಚಿಗಳನ್ನು ತಾಲ್ಲೂಕು ಮಟ್ಟದ ಮೀನುಗಾರಿಕೆ ಅಧಿಕಾರಿಗಳು ಕಡ್ಡಾಯವಾಗಿ ಪಾಲಿಸತಕ್ಕದ್ದು.

ಕಂಡಿಕೆ-12:-

ವಿಲೇವಾರಿ ವಿನಾಯಿತಿ

(ಅ) ಅನಾವೃಷ್ಟಿಯಿಂದ ಒಳನಾಡು ಜಲಸಂಪನ್ಮೂಲಗಳಲ್ಲಿ ಸಾಕಷ್ಟು ನೀರು ಸಂಗ್ರಹಣೆಯಾಗದಿರುವುದು, ಅತಿವೃಷ್ಟಿಯಿಂದ ಕೆರೆಕಟ್ಟೆ ಒಡೆದುಹೋಗಿ ನೀರು ಸಂಪೂರ್ಣವಾಗಿ ಸೋರಿ ಹೋಗುವುದು, ಕೆರೆಗಳ ದುರಸ್ತಿ ಕೈಗೊಂಡಿರುವುದು, ಮುಂತಾದ ಇತರೆ ಕಾರಣಗಳಿಂದಾಗಿ ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕನ್ನು ವಿಲೇವಾರಿ ಮಾಡಲು ಸಾಧ್ಯವಾಗದೇ ಇರುವ ಸಂದರ್ಭಗಳಲ್ಲಿ ತಾಲ್ಲೂಕು ಮಟ್ಟದ ಮೀನುಗಾರಿಕೆ ಅಧಿಕಾರಿಗಳು ಅಂತಹ ಜಲಸಂಪನ್ಮೂಲಗಳಿಗೆ ಸಂಬಂಧಪಟ್ಟಂತೆ ವಿಲೇವಾರಿ ವಿನಾಯಿತಿ ಕೋರಿ ಪ್ರಸ್ತಾವನೆಗಳನ್ನು ಆಯಾ ಮೀನುಗಾರಿಕೆ ಫಸಲಿ ವರ್ಷದ ಡಿಸೆಂಬರ್ ಮಾಹೆಯ ಅಂತ್ಯದೊಳಗಾಗಿ ಮೇಲಾಧಿಕಾರಿಗಳ ಮುಖಾಂತರ ಮೀನುಗಾರಿಕೆ ನಿರ್ದೇಶಕರಿಗೆ ಸಲ್ಲಿಸಿ ವಿಲೇವಾರಿ ವಿನಾಯಿತಿ ಆದೇಶಗಳನ್ನು ಪಡೆದುಕೊಳ್ಳತಕ್ಕದ್ದು. ವಿಲೇವಾರಿ ವಿನಾಯಿತಿ ನೀಡುವ ಅಧಿಕಾರ ಮೀನುಗಾರಿಕೆ ನಿರ್ದೇಶಕರಿಗೆ ಪ್ರದತ್ತವಾಗಿರುತ್ತದೆ. ಇಂತಹ ಪ್ರಕರಣಗಳಲ್ಲಿ ಈ ಆದೇಶದ ಅನುಬಂಧ-7ರಲ್ಲಿ ನಮೂದಿಸಿರುವಂತೆ ತಾಲ್ಲೂಕು ಮಟ್ಟದ ಅಥವಾ ಜಿಲ್ಲಾ ಮಟ್ಟದ ಮೀನುಗಾರಿಕೆ ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿ ಛಾಯಚಿತ್ರದೊಂದಿಗೆ ಮಹಜರು ಮಾಡಿರತಕ್ಕದ್ದು. ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕು ವಿಲೇವಾರಿಯಾಗದೆ ಅಥವಾ ವಿಲೇವಾರಿ ವಿನಾಯಿತಿ ಪಡೆಯದೆ ಸರ್ಕಾರಕ್ಕೆ ಉಂಟಾಗುವ ಆರ್ಥಿಕ ನಷ್ಟಕ್ಕೆ ಹಾಗೂ ಇಂತಹ ಪ್ರಕರಣಗಳಲ್ಲಿ ಸೂಚಿಸಿರುವ ಮಾರ್ಗಸೂಚಿಗಳನ್ನು ಮತ್ತು ನಿಯಮಗಳನ್ನು ಪಾಲಿಸದೇ ಇದ್ದಲ್ಲಿ ಸಂಬಂಧಪಟ್ಟ ತಾಲ್ಲೂಕು ಮಟ್ಟದ ಮತ್ತು ಜಿಲ್ಲಾ ಮಟ್ಟದ ಮೀನುಗಾರಿಕೆ ಅಧಿಕಾರಿಗಳನ್ನು ಜಂಟಿ ಹೊಣೆಗಾರರನ್ನಾಗಿ ಮಾಡಿ ಶಿಸ್ತು ಕ್ರಮಕ್ಕೆ ಒಳಪಡಿಸಲಾಗುವುದು.

ಕಂಡಿಕೆ-13:-

ಮೇಲ್ಮನವಿ ಪ್ರಾಧಿಕಾರಗಳು

ರಾಜ್ಯದ ಒಳನಾಡು ಜಲಸಂಪನ್ಮೂಲಗಳ ವಿಲೇವಾರಿಯಲ್ಲಿ ಅನ್ಯಾಯವಾಗಿದ್ದಲ್ಲಿ ಅಥವಾ ನಿಯಮಬಾಹಿರವಾಗಿ ಗುತ್ತಿಗೆ ಅಥವಾ ಟೆಂಡರ್-ಕಂ-ಹರಾಜು ಪ್ರಕ್ರಿಯೆ ಮಾಡಿದ್ದಲ್ಲಿ ಗುತ್ತಿಗೆದಾರರು ಅಥವಾ ಟೆಂಡರುದಾರರು / ಹರಾಜುದಾರರು ತಮ್ಮ ದೂರುಗಳನ್ನು ಈ ಕೆಳಕಂಡ ಮೇಲ್ಮನವಿ ಪ್ರಾಧಿಕಾರಗಳಿಗೆ ಸಲ್ಲಿಸುವುದು.

ಗುತ್ತಿಗೆ ನೀಡಿರುವ ಪ್ರಾಧಿಕಾರ	ಮೇಲ್ಮನವಿ ಸಲ್ಲಿಸಬೇಕಾದ ಪ್ರಾಧಿಕಾರ
ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರು	ಮೀನುಗಾರಿಕೆ ಉಪ ನಿರ್ದೇಶಕರು
ಮೀನುಗಾರಿಕೆ ಉಪ ನಿರ್ದೇಶಕರು	ಮೀನುಗಾರಿಕೆ ನಿರ್ದೇಶಕರು
ಮೀನುಗಾರಿಕೆ ನಿರ್ದೇಶಕರು	ಸರ್ಕಾರ

ಕಂಡಿಕೆ-14:-

ಗ್ರಾಮ ಪಂಚಾಯತಿಗಳ ವ್ಯಾಪ್ತಿಯ ಒಳನಾಡು ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕನ್ನು ವಿಲೇವಾರಿ ಮಾಡುವ ಸಂಬಂಧ ಗ್ರಾಮ ಪಂಚಾಯತ್‌ಗಳಿಗೆ ಅನ್ವಯವಾಗುವ ಮಾರ್ಗಸೂಚಿಗಳು :

ಗ್ರಾಮಪಂಚಾಯತ್‌ಗಳ ವ್ಯಾಪ್ತಿಯ (40 ಹೆಕ್ಟೇರ್ ಮತ್ತು ಅದಕ್ಕಿಂತ ಕಡಿಮೆ ಅಚ್ಚುಕಟ್ಟು ಪ್ರದೇಶದವರೆಗೆ ಒಳಪಡುವ) ಕೆರೆಗಳ ಮೀನು ಪಾಶುವಾರು ಹಕ್ಕನ್ನು ವಿಲೇವಾರಿ ಮಾಡುವ ಸಂಬಂಧ ಗ್ರಾಮ ಪಂಚಾಯತಿಗಳಿಗೆ ಅನ್ವಯವಾಗುವ ಮಾರ್ಗಸೂಚಿಗಳು.

(1) ಮೀನು ಪಾಶುವಾರು ಹಕ್ಕಿನ ವಿಲೇವಾರಿಗಾಗಿ ಮೀನುಗಾರಿಕೆ ಫಸಲಿ ವರ್ಷವು ಜುಲೈ 1 ರಿಂದ ಮರು ವರ್ಷದ ಜೂನ್ 30ರವರೆಗೆ ಇರುವುದು.

(2) ಮೀನು ಕೃಷಿ ಮಾಡಲು ಗ್ರಾಮ ಪಂಚಾಯತ್‌ಗಳು ಮೀನುಗಾರಿಕೆ ಇಲಾಖೆಯಿಂದ ತಾಂತ್ರಿಕ ಸಲಹೆ, ಸಹಕಾರ ಮತ್ತು ಮಾರ್ಗದರ್ಶನ ಪಡೆಯುವುದು.

(3) ಗ್ರಾಮ ಪಂಚಾಯತ್‌ಗಳ ವ್ಯಾಪ್ತಿಗೆ ಬರುವ ಕೆರೆಗಳಲ್ಲಿ ಮೀನುಗಾರಿಕೆಯನ್ನು ಗ್ರಾಮ ಪಂಚಾಯತ್‌ಗಳೇ ಸ್ಥಳೀಯ ಮೀನುಗಾರರ ಮುಖಾಂತರ ಅಭಿವೃದ್ಧಿಪಡಿಸುವುದು ಅಥವಾ ಸ್ಥಳೀಯ ಮೀನುಗಾರಿಕೆ ಸಹಕಾರ ಸಂಘಗಳ ಮೂಲಕ ಅಭಿವೃದ್ಧಿಪಡಿಸುವುದು. ಇಲ್ಲವಾದಲ್ಲಿ, ಬಹಿರಂಗವಾಗಿ ಟೆಂಡರ್-ಕಂ-ಹರಾಜು ಮೂಲಕ ವಿಲೇವಾರಿ ಮಾಡುವುದು. ಯಶಸ್ವಿ ಟೆಂಡರುದಾರರು / ಬಿಡ್‌ದಾರರು ಮೀನುಗಾರಿಕೆಯಲ್ಲಿ ತರಬೇತಿ ಪಡೆದು ಮೀನು ಕೃಷಿ ಬಗ್ಗೆ ತಾಂತ್ರಿಕ ಜ್ಞಾನ ಮತ್ತು ಸರ್ಕಾರದಿಂದ ದೊರೆಯುವ ಸೌಲಭ್ಯಗಳನ್ನು ಪಡೆಯಬಹುದು.

(4) ವಿಲೇ ಮಾಡಿದ ಮೀನು ಪಾಶುವಾರು ಹಕ್ಕನ್ನು ಸಂಬಂಧಪಟ್ಟ ಗ್ರಾಮ ಪಂಚಾಯತ್‌ಗಳೇ ದೃಢೀಕರಿಸುವುದು.

(5) ಗ್ರಾಮ ಪಂಚಾಯತ್‌ಗಳು ಮತ್ತು ಬಹಿರಂಗವಾಗಿ ಟೆಂಡರ್-ಕಂ-ಹರಾಜು ಮೂಲಕ ಗುತ್ತಿಗೆಗೆ ಪಡೆದವರು ಸ್ಥಳೀಯ ಮೀನುಗಾರಿಕೆ ಅಧಿಕಾರಿಗಳ ಶಿಫಾರಸ್ಸಿನಂತೆ ಮೀನುಗಾರಿಕೆ ಇಲಾಖೆಯಿಂದಲೇ ಅಥವಾ ಮೀನುಗಾರಿಕೆ ಇಲಾಖೆಯಿಂದ ಅಂಗೀಕೃತಗೊಂಡ ಖಾಸಗಿ ಮೀನುಮರಿ ಉತ್ಪಾದನಾ / ಪಾಲನಾ ಕೇಂದ್ರಗಳಿಂದ ಮೀನುಮರಿಗಳನ್ನು ಖರೀದಿಸಿ ಕೆರೆಗಳಲ್ಲಿ ಬಿತ್ತನೆ ಮಾಡುವುದು.

(6) ನಿಷೇಧಿತ ಮೀನು ತಳಿಗಳಾದ ವಿದೇಶಿ ಕ್ಯಾಟ್ ಫಿಶ್‌ಗಳಾದ ಆಫ್ರಿಕನ್ ಕ್ಯಾಟ್ ಫಿಶ್ (ಆನೆ ಮೀನು) ಮತ್ತು ಚೈನೀಸ್ ಬಿಗ್ ಹೆಡ್ (ಆರೀಸ್ ದಕ್ತೀಸ್ ನೊಬಲಿಸ್). ಇತ್ಯಾದಿ ತಳಿಯ ಮೀನುಮರಿಗಳನ್ನು ಮತ್ತು ಸ್ಥಳೀಯ ಮೀನು ಸಂತತಿಯ ನಾಶಕ್ಕೆ ಕಾರಣವಾಗುವ ಮೀನು ತಳಿಗಳನ್ನು ಯಾವುದೇ ಕಾರಣಕ್ಕೂ ಕೆರೆಗಳಿಗೆ ಬಿತ್ತನೆ ಮಾಡತಕ್ಕದ್ದಲ್ಲ.

(7) ಕೆರೆಗಳಲ್ಲಿ ಸಿಡಿಮದ್ದು ಮತ್ತು ವಿಷ ಪ್ರಯೋಗ ಮಾಡಿ ಮೀನು ಹಿಡಿಯುವುದನ್ನು ನಿಷೇಧಿಸತಕ್ಕದ್ದು.

(8) ಗ್ರಾಮ ಪಂಚಾಯತ್‌ಗಳು ಅಥವಾ ಕೆರೆಗಳ ಮೀನು ಪಾಶುವಾರು ಹಕ್ಕನ್ನು ಪಡೆದವರು, ಗಳಿಸಿದ ಆದಾಯ, ಕೆರೆಗಳಿಗೆ ದಾಸ್ತಾನು ಮಾಡಿದ ಮೀನುಮರಿಗಳ ವಿವರ ಮತ್ತು ಮೀನು ಹಿಡುವಳಿ ಮಾಡಿದ ಅಂಕಿ ಅಂಶಗಳನ್ನು ತಾಲ್ಲೂಕು ಮಟ್ಟದ ಮೀನುಗಾರಿಕೆ ಅಧಿಕಾರಿಗಳಿಗೆ ಪ್ರತಿ ತಿಂಗಳ ಮೊದಲನೇ ವಾರದೊಳಗಾಗಿ ಒಪ್ಪಿಸುವುದು.

(9) ಕೆರೆಗಳ ಮೀನು ಪಾಶುವಾರು ಹಕ್ಕನ್ನು ವಿಲೇವಾರಿ ಮಾಡಿದ ಬಗ್ಗೆ, ಗಳಿಸಿದ ಆದಾಯದ ಬಗ್ಗೆ ಮತ್ತು ಉದ್ಯೋಗಾವಕಾಶದ ವಿವರಗಳನ್ನು ಸಂಬಂಧಪಟ್ಟ ಗ್ರಾಮ ಪಂಚಾಯತ್‌ಗಳು ಪ್ರತಿ ತಿಂಗಳು ಮೊದಲನೆಯ ವಾರದೊಳಗೆ ತಾಲ್ಲೂಕು ಮಟ್ಟದ ಮೀನುಗಾರಿಕೆ ಅಧಿಕಾರಿಗಳಿಗೆ ತಪ್ಪದೇ ಕಳುಹಿಸುವುದು.

(10) ಗ್ರಾಮ ಪಂಚಾಯಿತ್ ವ್ಯಾಪ್ತಿಗೆ ಬರುವ ಎಲ್ಲಾ ಕೆರೆಗಳಲ್ಲಿ ವೈಜ್ಞಾನಿಕವಾಗಿ ಮೀನು ಕೃಷಿ ಕೈಗೊಂಡು ಅಧಿಕ ಮೀನು ಉತ್ಪತ್ತಿ ಮಾಡಿ ಹೆಚ್ಚಿನ ಆದಾಯ ಪಡೆಯಲು ಕಾಲಕಾಲಕ್ಕೆ ತಾಲ್ಲೂಕು ಮಟ್ಟದ ಮೀನುಗಾರಿಕೆ ಇಲಾಖೆಯ ಅಧಿಕಾರಿಗಳು ಸಂಬಂಧಪಟ್ಟ ಗ್ರಾಮ ಪಂಚಾಯಿತಿಗಳಿಗೆ ಭೇಟಿ ನೀಡಿ ಸಲಹೆ ಮತ್ತು ಮಾರ್ಗದರ್ಶನ ನೀಡುವುದು. ಮತ್ತು ಗ್ರಾಮ ಪಂಚಾಯಿತಿಗಳು ಮತ್ತು ಕೆರೆಗಳು ಪಡೆದವರೂ ಸಹ ಮೀನುಗಾರಿಕೆ ಇಲಾಖಾಧಿಕಾರಿಗಳ ಮಾರ್ಗದರ್ಶನ ಪಾಲಿಸುವುದು.

11) ಸರ್ಕಾರದ ವಿಶೇಷ ಯೋಜನೆಗಳಡಿ (ವಿಶೇಷ ಘಟಕ ಯೋಜನೆಯಡಿ ಮತ್ತು ಗಿರಿಜನ ಉಪಯೋಜನೆಯಡಿ) ಗುರುತಿಸಿದ ಫಲಾನುಭವಿಗಳಿಗೆ ಕೆರೆಗಳನ್ನು ಆದ್ಯತೆಯ ಮೇರೆಗೆ ಐದು ವರ್ಷಗಳವರೆಗೆ ಗ್ರಾಮ ಪಂಚಾಯಿತಿಯವರು ಗುತ್ತಿಗೆ ನೀಡುವುದು.

12) ಮೀನುಗಾರರ ಸಹಕಾರ ಸಂಘ / ಜಲಸಂವರ್ಧನೆ ಯೋಜನೆಯಡಿ ನೋಂದಾಯಿಸಿದ ಸಂಘ ಸಂಸ್ಥೆಗಳಿಂದ ಬೇಡಿಕೆ ಬಂದಲ್ಲಿ, ಆದ್ಯತೆಯ ಮೇರೆಗೆ ಕೆರೆಗಳ ಗುತ್ತಿಗೆ ನೀಡುವುದು.

13) ಈ ಆದೇಶದಲ್ಲಿ ತಿಳಿಸದೇ ಇರುವ ವಿಷಯಗಳಿಗೆ ಸಂಬಂಧಿಸಿದಂತೆ ಸರ್ಕಾರದಿಂದ ಹಾಗೂ ಮೀನುಗಾರಿಕೆ ಇಲಾಖೆಯಿಂದ ಕಾಲಕಾಲಕ್ಕೆ ಹೊರಡಿಸಲಾದ / ಹೊರಡಿಸಿರುವ ಆದೇಶಗಳನ್ನು / ಸೂಚನೆಗಳನ್ನು ಯಥಾವತ್ತಾಗಿ ಅಳವಡಿಸಿಕೊಳ್ಳತಕ್ಕದ್ದು.

ಕಂಡಿಕೆ–15:–

ಒಳನಾಡು ಜಲಸಂಪನ್ಮೂಲಗಳಲ್ಲಿ ಮೀನು ಹಿಡುವಳಿಗೆ ಮೀನುಗಾರಿಕೆ ಇಲಾಖೆಯಿಂದ ನಿಗದಿಗೊಳಿಸಿರುವ ಪರವಾನಿಗೆ ಶುಲ್ಕಗಳು.

ಕ್ರ. ಸಂ.	ವಿವಿಧ ಮೀನು ಶಿಕಾರಿ ಪ್ರಾಕಾರಗಳ ವಿವರ	ಪರವಾನಿಗೆ ಶುಲ್ಕ		ಷರಾ
		ಜಲಾಶಯ / ಕೆರೆಗಳಿಗೆ	ನದಿಗಳಿಗೆ / ಅಳಿವೆಗಳಿಗೆ	
1	2½" ಮೇಲ್ಪಟ್ಟು ಕಣ್ಣಳತೆಯ ಗಿಲ್‌ನೆಟ್ ಮೂಲಕ ಹರಿಗೋಲು ಬಳಸಿ ಇಬ್ಬರು ಮೀನು ಗಾರರು ಸೇರಿ ಮೀನು ಶಿಕಾರಿ ಮಾಡುವುದು.	ಮೊದಲ 300ಮೀ.ವರೆಗಿನ ಉದ್ದಕ್ಕೆ ರೂ.3000/– ಮತ್ತು ನಂತರದ ಪ್ರತಿ 100 ಮೀ. ಉದ್ದದ ಬಲೆಗೆ ರೂ.500/– ರಂತೆ ಗರಿಷ್ಠ ಹೆಚ್ಚುವರಿ 200 ಮೀ. ವರೆಗೆ ಮಾತ್ರ	ಮೊದಲ 200 ಮೀ. ಉದ್ದಕ್ಕೆ ರೂ.1500/– ನಂತರ ಪ್ರತಿ 100 ಮೀ. ಉದ್ದದ ಬಲೆಗೆ ರೂ. 300/– ರಂತೆ ಗರಿಷ್ಠ ಹೆಚ್ಚುವರಿ 200 ಮೀ. ವರೆಗೆ ಮಾತ್ರ	–
2	2½" ಮೇಲ್ಪಟ್ಟು ಕಣ್ಣಳ ತೆಯ ಪ್ರತಿ ಬಿಡುಬಲೆ (ಗಿಲ್‌ನೆಟ್) ಮೂಲಕ ಒಬ್ಬ ಮೀನುಗಾರ ತೇಲು ಬುರುಡೆ / ಫ್ಲೋಟ್ ಬಳಸಿ ಮೀನು ಶಿಕಾರಿ ಮಾಡುವುದು.	ಮೊದಲ 300 ಮೀ. ವರಗಿನ ಉದ್ದಕ್ಕೆ ರೂ. 1500/– ಮತ್ತು ನಂತರದ ಪ್ರತಿ 100 ಮೀ. ಉದ್ದದ ಬಲೆಗೆ ರೂ.500/– ರಂತೆ ಗರಿಷ್ಠ ಹೆಚ್ಚುವರಿ 200 ಮೀ.ವರೆಗೆ ಮಾತ್ರ.	ಮೊದಲ 200 ಮೀ. ಉದ್ದಕ್ಕೆ ರೂ.1000/– ನಂತರ ಪ್ರತಿ 100 ಮೀ. ಉದ್ದದ ಹೆಚ್ಚುವರಿ ಬಲೆಗೆ ರೂ.150/–ರಂತೆ ಗರಿಷ್ಠ ಹೆಚ್ಚುವರಿ 200 ಮೀ. ವರೆಗೆ ಮಾತ್ರ	–
3	ಹರಿಗೋಲು ಬಳಸಿ ಬೀಸು ಬಲೆಯಲ್ಲಿ (ಇಬ್ಬರು ಮೀನುಗಾರರು ಸೇರಿ) ಮೀನು ಶಿಕಾರಿ ಮಾಡುವುದು.	ವಾರ್ಷಿಕ ರೂ.2000/–	ವಾರ್ಷಿಕ ರೂ.1250/–	–
4	ಲಾಂಗ್‌ಲೈನ್ ಬಳಸಿ ಹರಿಗೋಲು ಸಹಾಯ ದಿಂದ ಮೀನು ಶಿಕಾರಿ	ವಾರ್ಷಿಕ ರೂ.1500/–	ವಾರ್ಷಿಕ ರೂ. 1000/–	–
5	ಗಾಳ / ರಾಡ್ ಮತ್ತು ಲೈನ್ ಬಳಸಿ ಮೀನು ಶಿಕಾರಿ ಪ್ರತಿ ಒಬ್ಬ ವ್ಯಕ್ತಿಗೆ (ವೃತ್ತಿಪರ ಮೀನುಗಾರರಿಗೆ)	ವಾರ್ಷಿಕ ರೂ.1000/– ಅಥವಾ ಪ್ರತಿ ತಿಂಗಳಿಗೆ ರೂ.400/–	ವಾರ್ಷಿಕ ರೂ.1000/– ಅಥವಾ ಪ್ರತಿ ತಿಂಗಳಿಗೆ ರೂ.300/–	–
6	ಗಾಳ / ರಾಡ್ ಮತ್ತು ಲೈನ್ ಬಳಸಿ ಮೀನು ಶಿಕಾರಿ ಪ್ರತಿ ಒಬ್ಬ ವ್ಯಕ್ತಿಗೆ (ಕ್ರೀಡಾ ಮೀನುಗಾರಿಕೆ)	ಮಾಸಿಕ ರೂ.400/– ಪ್ರತಿ ವಾರಕ್ಕೆ ರೂ.150/–	ಮಾಸಿಕ ರೂ. 400/– ಪ್ರತಿ ವಾರಕ್ಕೆ ರೂ.150/–	ಕೆರೆಯಲ್ಲಿ ಕ್ರೀಡಾ ಮೀನುಗಾರಿಕೆಯನ್ನು ಮಾಡಲಿಚ್ಛಿಸುವವರಿಗೆ ಅಂತಹ ಕೆರೆಯ ಬಿಡ್‌ದಾರರು/ಗುತ್ತಿಗೆದಾರರು ಪರವಾನಿಗೆ ಯನ್ನು ನೀಡುವ ಅಧಿಕಾರ ಹೊಂದಿರುತ್ತಾರೆ.

ಕಂಡಿಕೆ-16:-

ಮೀನುಗಾರಿಕೆ ಇಲಾಖೆಯಿಂದ ಅಧಿಕೃತವಾಗಿ ಗುತ್ತಿಗೆ ಆದೇಶ ಅಥವಾ ಟೆಂಡರ್ / ಹರಾಜು ದೃಢೀಕರಣ ಆದೇಶ ಪಡೆದ ಗುತ್ತಿಗೆದಾರರಿಗೆ ಅವರು ಪಡೆದಿರುವ ಜಲಸಂಪನ್ಮೂಲವನ್ನು ಅಭಿವೃದ್ಧಿಪಡಿಸಲು ಗ್ರಾಮಸ್ಥರು ಅಥವಾ ಇತರೆ ಸಾರ್ವಜನಿಕರು ಅಡ್ಡಿಪಡಿಸಿದಲ್ಲಿ ಗುತ್ತಿಗೆದಾರರಿಗೆ ನಿಯಮಾನುಸಾರ ಪೊಲೀಸ್ ಇಲಾಖೆಯು ಸೂಕ್ತ ರಕ್ಷಣೆ ಒದಗಿಸುವುದು. ಈ ಸಂಬಂಧ ಮೀನುಗಾರಿಕೆ ಇಲಾಖೆಯ ಅಧಿಕಾರಿಗಳು ಗುತ್ತಿಗೆದಾರರಿಗೆ ರಕ್ಷಣೆ ಒದಗಿಸಿಕೊಡಲು ಸಹಕರಿಸಬೇಕು.

ಕಂಡಿಕೆ-17:-

ಈ ಆದೇಶದಲ್ಲಿನ ನಿಯಮಗಳ ಬಗ್ಗೆ ಸ್ಪಷ್ಟೀಕರಣವು ಅಗತ್ಯವೆನಿಸಿದ್ದಲ್ಲಿ ಸರ್ಕಾರದಿಂದ ಪಡೆಯತಕ್ಕದ್ದು. ಸರ್ಕಾರದ ನಿರ್ಣಯವೇ ಅಂತಿಮವಾಗಿರುತ್ತದೆ.

ಈ ಆದೇಶವನ್ನು ಆರ್ಥಿಕ ಇಲಾಖೆ ಟಿಪ್ಪಣಿ ಸಂಖ್ಯೆ:ಆಇ/72/ವೆಚ್ಚ-4/2014, ದಿನಾಂಕ:25-01-2014ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಕೆ.ಹೆಚ್. ಅಶ್ವತ್ಥನಾರಾಯಣ ಗೌಡ

ಸರ್ಕಾರದ ಕಾರ್ಯದರ್ಶಿ

ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ.

ಆದೇಶ ಸಂಖ್ಯೆ:ಪಸಂಮೀ 125 ಮೀಇಕ 2013, ಬೆಂಗಳೂರು ದಿನಾಂಕ:21-02-2014

ಅನುಬಂಧ-1

ಮೀನುಗಾರರ ಸಹಕಾರ ಸಂಘಗಳು ಒಳನಾಡು ಜಲಸಂಪನ್ಮೂಲದ ಮೀನು ಪಾಶುವಾರು ಹಕ್ಕನ್ನು ಗುತ್ತಿಗೆಗೆ ಪಡೆಯಲು ಇರಬೇಕಾದ ಅರ್ಹತೆಗಳು ಮತ್ತು ಸಲ್ಲಿಸಬೇಕಾದ ದಾಖಲಾತಿಗಳು

1) ಗುತ್ತಿಗೆ ಕೋರಿರುವ ಮೀನುಗಾರರ ಸಹಕಾರ ಸಂಘವು, ಹಾಲಿ ಕಾರ್ಯನಿರ್ವಹಿಸುತ್ತಿರಬೇಕು. ಬರ್ಖಾಸ್ತು (ಸೂಪರ್‌ಸೀಡ್) ಆಗಿರಬಾರದು. ಹಾಗೂ ಕರ್ನಾಟಕ ಸಹಕಾರಿ ಕಾಯ್ದೆಯನ್ವಯ ನಿಯಮಾನುಸಾರ ಆಡಳಿತ ಮಂಡಳಿಯ ಸಭೆಗಳನ್ನು ಮತ್ತು ಮಹಾಸಭೆಗಳನ್ನು ನಡೆಸಿರಬೇಕು.

2) ಗುತ್ತಿಗೆ ಕೋರಿರುವ ಜಲಸಂಪನ್ಮೂಲವು ಮೀನುಗಾರರ ಸಹಕಾರಿ ಸಂಘದ ಕಾರ್ಯವ್ಯಾಪ್ತಿಯಲ್ಲಿರಬೇಕು.

3) ಕರ್ನಾಟಕ ಸಹಕಾರಿ ಕಾಯ್ದೆಯನ್ವಯ ಸಹಕಾರ ಸಂಘವು ಚುನಾವಣೆಯನ್ನು ನಡೆಸಿರಬೇಕು. ಮತ್ತು ಆಡಳಿತ ಮಂಡಳಿ ರಚನೆಯಾಗಿರಬೇಕು.

4) ಸಂಘವು ಕಳೆದ 5 ವರ್ಷಗಳ ಅವಧಿಯಲ್ಲಿ ಯಾವುದಾದರೂ ಮೂರು ವರ್ಷಗಳ ಲೆಕ್ಕ ಪರಿಶೋಧನಾ ವರದಿಯನ್ನು ಸಹಕಾರಿ ಇಲಾಖೆ ನಡೆಸಿದ ಮತ್ತು ಅವುಗಳ ಅನುಪಾಲನಾ ವರದಿಯನ್ನು ಸಲ್ಲಿಸಬೇಕು.

5) ಈ ಹಿಂದೆ ಸಂಘವು ಕೆರೆಗಳನ್ನು ಗುತ್ತಿಗೆಗೆ ಪಡೆದಿದ್ದಲ್ಲಿ ಹಿಂದಿನ 5 ವರ್ಷಗಳ ಅವಧಿಯಲ್ಲಿ ಕನಿಷ್ಠ 2 ವರ್ಷಗಳಲ್ಲಿ ಸಂಘವು ಲಾಭದಲ್ಲಿರಬೇಕು. ನಷ್ಟದಲ್ಲಿರುವ ಸಹಕಾರ ಸಂಘ ಗುತ್ತಿಗೆ ಪಡೆಯಲು ಅನರ್ಹವಾಗುತ್ತದೆ.

6) ಸಂಘವು ಗುತ್ತಿಗೆಗೆ ಕೋರುತ್ತಿರುವ ಜಲಸಂಪನ್ಮೂಲದಲ್ಲಿ ಪ್ರತಿ ಹೆಕ್ಟೇರ್ ಉಪಯುಕ್ತತಾ ಜಲವಿಸ್ತೀರ್ಣಕ್ಕೆ ಕನಿಷ್ಠ 2000 ಬಲಿತ ಬಿತ್ತನೆ ಮೀನುಮರಿಗಳನ್ನು ಬಿತ್ತನೆ ಮಾಡಲು / ಖರೀದಿಸಲು ಬೇಕಾದ ಮೊತ್ತ ಮತ್ತು ಕೆರೆಯ ಗುತ್ತಿಗೆ ಮೊತ್ತ ಮತ್ತು ಭದ್ರತಾ ಠೇವಣಿ ಮೊತ್ತವನ್ನು ಪಾವತಿಸಲು ಬೇಕಾದ ಮೊತ್ತವು ಅದರ ಚಾಲ್ತಿ ಖಾತೆಯಲ್ಲಿರಬೇಕು. ಆರ್ಥಿಕ ಸ್ಥಿತಿಯನ್ನು ದೃಢೀಕರಿಸಲು ಸಂಘದ ಬ್ಯಾಂಕ್ ಖಾತೆಯ ಪಾಸ್ ಪುಸ್ತಕದ ದೃಢೀಕೃತ ಪ್ರತಿ ಸಲ್ಲಿಸಬೇಕು.

7) ಸಂಘದ ನೋಂದಣಿ ಪತ್ರ, ಬೈಲಾ ಪ್ರತಿ, ಸಂಘದ ಆಡಳಿತ ಮಂಡಳಿ ಸದಸ್ಯರ ಪಟ್ಟಿ, ಈ ಹಿಂದೆ ಗುತ್ತಿಗೆಗೆ ಪಡೆದಿದ್ದ ಜಲಸಂಪನ್ಮೂಲದಲ್ಲಿ ಬಿತ್ತನೆ ಮಾಡಲಾದ ಮೀನುಮರಿಗಳು, ಹಿಡುವಳಿ ಮಾಡಲಾದ ಪ್ರಮಾಣ ಮತ್ತು ಗಳಿಸಿದ ಆದಾಯದ ವಿವರಗಳನ್ನು ಸಲ್ಲಿಸಬೇಕು. ಜಲಸಂಪನ್ಮೂಲದ ಗುತ್ತಿಗೆ ಮೊತ್ತವನ್ನು ಮತ್ತು ಠೇವಣಿ ಮೊತ್ತವನ್ನು ಮುಂಗಡವಾಗಿ ಡಿ.ಡಿ. ಮುಖಾಂತರ ಪಾವತಿಸಬೇಕು.

8) ಸಂಘದಿಂದ ಸರ್ಕಾರಕ್ಕೆ ಬರಬೇಕಾದ ಬಾಕಿ ವಿವರ ಸಲ್ಲಿಸಬೇಕು (ಸಾಲ ಮತ್ತು ಷೇರು ಬಂಡವಾಳ ಇತ್ಯಾದಿ) ಸುಸ್ತಿಯಲ್ಲಿರುವ ಸಹಕಾರ ಸಂಘ, ಗುತ್ತಿಗೆಯನ್ನು ಪಡೆಯಲು ಅನರ್ಹವಾಗುತ್ತದೆ.

9) ಸಂಘವು ಜಲಸಂಪನ್ಮೂಲದ ಗುತ್ತಿಗೆಯನ್ನು ಕೋರಿರುವ ಆಡಳಿತ ಮಂಡಳಿಯ ನಡವಳಿಯ (ಠರಾವು) ನೋಟರೀಕರಿಸಿದ ಪ್ರತಿಯನ್ನು ಸಲ್ಲಿಸಬೇಕು.

10) ಹೊಸದಾಗಿ ನೋಂದಾಯಿಸಲ್ಪಟ್ಟ ಮೀನುಗಾರರ ಸಹಕಾರ ಸಂಘ/ಸಂಸ್ಥೆಗಳು ನೋಂದಾಯಿಸಲ್ಪಟ್ಟ ದಿನಾಂಕದಿಂದ ಒಂದು ವರ್ಷದ ನಂತರವೇ ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕನ್ನು ಗುತ್ತಿಗೆಗೆ ಪಡೆಯಲು ಅರ್ಹತೆಯನ್ನು ಹೊಂದುತ್ತವೆ.

ಮೇಲ್ಕಾಣಿಸಿದ ಅರ್ಹತೆಗಳನ್ನು ಹೊಂದಿದಲ್ಲಿ ಮತ್ತು ದಾಖಲಾತಿಗಳನ್ನು ಒದಗಿಸಿದಲ್ಲಿ ಮಾತ್ರ ಮೀನುಗಾರರ ಸಹಕಾರ ಸಂಘವು ಕೆರೆಯ ಮೀನು ಪಾಶುವಾರು ಹಕ್ಕನ್ನು ಪಡೆಯಲು ಅರ್ಹತೆ ಹೊಂದುತ್ತದೆ.

ಜಿ.ವಯ್ಯಣ್ಣ

ಸರ್ಕಾರದ ಅಧೀನ ಕಾರ್ಯದರ್ಶಿ

ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ (ಮೀ)

ಆದೇಶ ಸಂಖ್ಯೆ:ಪಸಂಮೀ 125 ಮೀಇಇ 2013, ಬೆಂಗಳೂರು ದಿನಾಂಕ:21-02-2014

ಅನುಬಂಧ-2

ಗುತ್ತಿಗೆ ಅಥವಾ ಟೆಂಡರ್-ಕಂ-ಹರಾಜು ಮೂಲಕ ವಿಲೇ ಮಾಡುವ ಜಲಾಶಯಗಳ ಪಟ್ಟಿ

ಜಿಲ್ಲೆ	ತಾಲ್ಲೂಕು	ಜಲಾಶಯದ ಹೆಸರು		ಗರಿಷ್ಠ ಜಲವಿಸ್ತೀರ್ಣ (ಹೆಕ್ಟೇರ್‌ಗಳಲ್ಲಿ)
ರಾಮನಗರ	ಚನ್ನಪಟ್ಟಣ	1	ಕಣ್ವಾ	447.00
ರಾಮನಗರ	ರಾಮನಗರ	2	ಬೈರಮಂಗಲ	411.98
ರಾಮನಗರ	ಮಾಗಡಿ	3	ಮಂಚನಬೆಲೆ	334.00
ರಾಮನಗರ	ಕನಕಪುರ	4	ಅರ್ಕಾವತಿ	665.00
ಬೀದರ್	ಬಸವಕಲ್ಯಾಣ	5	ಮುಲ್ಲಾಮಾರಿ	277.00
ಚಾಮರಾಜನಗರ	ಚಾಮರಾಜನಗರ	6	ಸುವರ್ಣಾವತಿ	485.00
ಚಾಮರಾಜನಗರ	ಚಾಮರಾಜನಗರ	7	ಚಿಕ್ಕಹೊಳೆ	120.00
ಚಾಮರಾಜನಗರ	ಕೊಳ್ಳೇಗಾಲ	8	ಗುಂಡಾಲ್	280.00
ಯಾದಗಿರಿ	ಯಾದಗಿರಿ	9	ಹತ್ತಿಕುಣಿ	121.00
ಯಾದಗಿರಿ	ಯಾದಗಿರಿ	10	ಸೌದಾಗಾರ್	124.00
ಗುಲ್ಬರ್ಗಾ	ಚಿಂಚೋಳಿ	11	ಚಂದ್ರಂಪಲ್ಲಿ	356.00
ಕೊಡಗು	ಸೋಮವಾರಪೇಟೆ	12	ಚಿಕ್ಲಿಹೊಳೆ	105.00
ಕೋಲಾರ	ಮಾಲೂರು	13	ಮಾರ್ಕಂಡೇಯ	155.00
ಕೊಪ್ಪಳ	ಗಂಗಾವತಿ	14	ಸಾಣಾಪುರ	40.00
ಕೊಪ್ಪಳ	ಗಂಗಾವತಿ	15	ಮಲ್ಲಾಪುರ	40.00
ಕೊಪ್ಪಳ	ಕೊಪ್ಪಳ	16	ಶಿವಪುರ	125.00
ಕೊಪ್ಪಳ	ಕುಷ್ಟಗಿ	17	ಕನಕನಾಳ	191.00
ಮಂಡ್ಯ	ಮಳವಳ್ಳಿ	18	ಶಿವನಸಮುದ್ರ	320.00
ಮಂಡ್ಯ	ಮಳವಳ್ಳಿ	19	ಭೀಮಾ	80.00
ರಾಯಚೂರು	ದೇವದುರ್ಗ	20	ಗಣೇಕಲ್	292.00
ರಾಯಚೂರು	ಮಾನ್ವಿ	21	ರಾಜೋಲಿಬಂಡ	200.00
ರಾಯಚೂರು	ಲಿಂಗಸುಗೂರು	22	ಮಸ್ಕಿ	173.00
ತುಮಕೂರು	ಕೊರಟಗೆರೆ	23	ತೀತಾ	150.00
ತುಮಕೂರು	ಕುಣಿಗಲ್	24	ಮಂಗಳಾ	246.00
ಹಾವೇರಿ	ಹಾನಗಲ್	25	ಚಿಗಳ್ಳಿ	183.00
ಬೀದರ್	ಬಸವಕಲ್ಯಾಣ	26	ಚುಳಕಿನಾಲಾ	737.00
ಗುಲ್ಬರ್ಗಾ	ಆಳಂದ	27	ಅಮರ್ಜಾ	640.00
ಗುಲ್ಬರ್ಗಾ	ಚಿಂಚೋಳಿ	28	ಲೋಯರ್ ಮುಲ್ಲಾಮಾರಿ	845.00
ದಾವಣಗೆರೆ	ಹರಿಹರ	29	ದೇವರಬೆಳಕೆರೆ	647.00
ಬಳ್ಳಾರಿ	ಹಗರಿಬೊಮ್ಮನಹಳ್ಳಿ	30	ಹಗರಿಬೊಮ್ಮನಹಳ್ಳಿ	1209.00
ಬಳ್ಳಾರಿ	ಸಂಡೂರು	31	ದರೋಜಿ	840.00
ಮೈಸೂರು	ಹೆಚ್.ಡಿ.ಕೋಟೆ	32	ನುಗು	1413.00
ಮೈಸೂರು	ತಾರಕ	33	ತಾರಕ	1080.00

ಜಿ.ಜಯಣ್ಣ

ಸರ್ಕಾರದ ಅಧೀನ ಕಾರ್ಯದರ್ಶಿ

ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ (ಮೀ)

ಆದೇಶ ಸಂಖ್ಯೆ:ಪಸಂಮೀ 125 ಮೀಇಇ 2013, ಬೆಂಗಳೂರು ದಿನಾಂಕ:21-02-2014

ಅನುಬಂಧ-3

ಪರವಾನಗಿ ಮೂಲಕ ಮೀನು ಪಾಶುವಾರು ಹಕ್ಕನ್ನು ವಿಲೇ ಮಾಡುವ ಜಲಾಶಯಗಳ ಪಟ್ಟಿ

ಜಿಲ್ಲೆ	ತಾಲ್ಲೂಕು	ಜಲಾಶಯದ ಹೆಸರು		ಗರಿಷ್ಠ ಜಲವಿಸ್ತೀರ್ಣ
ಬೆಳಗಾಂ	ಬೆಳಗಾಂ	1	ರಾಕಸಕೊಪ್ಪ	360.00
ಬೆಳಗಾಂ	ಬೈಲಹೊಂಗಲ	2	ತಿಗಡಿಹಾರಿನಾಳ	296.00
ಬೆಳಗಾಂ	ಹುಕ್ಕೇರಿ	3	ಘಟಪ್ರಭಾ	7800.00
ಬೆಳಗಾಂ	ಬೆಳಗಾಂ	4	ಮಾರ್ಕಂಡೇಯ	890.00
ಬೆಳಗಾಂ	ಸೌಂದತ್ತಿ	5	ಮಲಪ್ರಭಾ	13565.00
ಬಳ್ಳಾರಿ	ಸಂಡೂರು	6	ನಾರಿಹಳ್ಳ	280.00
ಚಿಕ್ಕಮಗಳೂರು	ತರೀಕೆರೆ	7	ಜಂಬದಹಳ್ಳ	165.00
ಚಿಕ್ಕಮಗಳೂರು	ನರಸಿಂಹರಾಜಪುರ	8	ಭದ್ರಾ	11250.00
ಚಿತ್ರದುರ್ಗ	ಮೊಳಕಾಲ್ಮೂರು	9	ರಂಗಯ್ಯನ ದುರ್ಗ	320.00
ಚಿತ್ರದುರ್ಗ	ಹಿರಿಯೂರು	10	ವಾಣಿವಿಲಾಸ ಸಾಗರ	8640.00
ಚಿತ್ರದುರ್ಗ	ಹಿರಿಯೂರು	11	ಗಾಯತ್ರಿ	793.00
ಧಾರವಾಡ	ಕಲಘಟಗಿ	12	ನೀರಸಾಗರ	490.00
ಕೋಲಾರ	ಬಂಗಾರಪೇಟೆ	13	ಬೇತಮಂಗಲ	317.00
ಮಂಡ್ಯ	ಮಳವಳ್ಳಿ	14	ನೆಟ್ಕಲ್	95.00
ಮಂಡ್ಯ	ಶ್ರೀರಂಗಪಟ್ಟಣ	15	ಕೆ.ಆರ್.ಸಾಗರ	12924.00
ಶಿವಮೊಗ್ಗ	ಸಾಗರ	16	ಸಿರೂರ್	144.00
ಶಿವಮೊಗ್ಗ	ಹೊಸನಗರ	17	ಚಕ್ರಾ	1228.00
ಶಿವಮೊಗ್ಗ	ಶಿಕಾರಿಪುರ	18	ಅಂಜನಾಪುರ	1340.00
ಶಿವಮೊಗ್ಗ	ಶಿವಮೊಗ್ಗ	19	ತುಂಗಾ	1631.00
ಶಿವಮೊಗ್ಗ	ಹೊಸನಗರ	20	ಸಾವೆಹಕ್ಲು	940.00
ಶಿವಮೊಗ್ಗ	ಸಾಗರ	21	ತಲಕಳಲೆ	768.00
ಶಿವಮೊಗ್ಗ	ಶಿಕಾರಿಪುರ	22	ಅಂಬ್ಲಿಗೋಳ	685.00
ಶಿವಮೊಗ್ಗ	ತೀರ್ಥಹಳ್ಳಿ	23	ವಾರಾಹಿ	550.00
ಶಿವಮೊಗ್ಗ	ಸಾಗರ	24	ಲಿಂಗನಮಕ್ಕಿ	32256.00
ಉತ್ತರ ಕನ್ನಡ	ಮುಂಡಗೋಡು	25	ಧರ್ಮಾ	696.00
ಉತ್ತರ ಕನ್ನಡ	ಹೊನ್ನಾವರ	26	ಗೇರುಸೊಪ್ಪ	600.00
ಉತ್ತರ ಕನ್ನಡ	ಜೋಯಿಡಾ	27	ಅಪರ್ ಕನೇರಿ.	400.00
ಉತ್ತರ ಕನ್ನಡ	ಹಳಿಯಾಳ	28	ಬೊಮ್ಮನಹಳ್ಳಿ	1539.00
ಉತ್ತರ ಕನ್ನಡ	ಹಳಿಯಾಳ	29	ತಟ್ಟಿಹಳ್ಳ	2537.00
ಉತ್ತರ ಕನ್ನಡ	ಕಾರವಾರ	30	ಕೊಡಸಳ್ಳಿ	1735.00
ಉತ್ತರ ಕನ್ನಡ	ಕಾರವಾರ	31	ಕದ್ರಾ	3775.00
ಉತ್ತರ ಕನ್ನಡ	ಕಾರವಾರ	32	ಸೂಪಾ	12100.00
ಮೈಸೂರು	ಹೆಚ್.ಡಿ.ಕೋಟೆ	33	ಕಬಿನಿ	6092.00
ಬೀದರ್	ಬಾಲ್ಕಿ	34	ಕಾರಂಜ	5672.00
ಬಿಜಾಪುರ	ಮುದ್ದೇಬಿಹಾಳ	35	ಬಸವಸಾಗರ	13048.00
ಬಿಜಾಪುರ	ಬಸವನಬಾಗೇವಾಡಿ	36	ಆಲಮಟ್ಟಿ	48787.00

ಜಿಲ್ಲೆ	ತಾಲ್ಲೂಕು		ಜಲಾಶಯದ ಹೆಸರು	ಗರಿಷ್ಠ ಜಲವಿಸ್ತೀರ್ಣ
ದಾವಣಗೆರೆ	ಚನ್ನಗಿರಿ	37	ಶಾಂತಿಸಾಗರ	2977.00
ಗುಲ್ಬರ್ಗಾ	ಗುಲ್ಬರ್ಗಾ	38	ಗಂಡೋರಿ ನಾಲಾ	664.00
ಗುಲ್ಬರ್ಗಾ	ಅಫ್ಜಲ್ ಪುರ	39	ಭೀಮಾ ಲಿಫ್ಟ್	1098.00
ಗುಲ್ಬರ್ಗಾ	ಚಿತ್ತಾಪುರ	40	ಬೆಣ್ಣೆತೊರಾ	2201.00
ಕೊಡಗು	ಸೋಮವಾರಪೇಟೆ	41	ಹಾರಂಗಿ	1886.00
ಕೊಪ್ಪಳ	ಕೊಪ್ಪಳ	42	ಹಿರೇಹಳ್ಳ	1247.00
ಹಾಸನ	ಬೇಲೂರು	43	ವಾಟೆಹೊಳೆ	600.00
ಹಾಸನ	ಬೇಲೂರು	44	ಯಗಚಿ	1961.00
ಹಾಸನ	ಹಾಸನ	45	ಹೇಮಾವತಿ	9162.00
ಬೆಂಗಳೂರು(ಗ್ರಾ)	ಬೆಂಗಳೂರು(ಗ್ರಾ)	46	ಹೆಸರಘಟ್ಟ	1160.00
ಬೆಂಗಳೂರು(ಗ್ರಾ)	ಬೆಂಗಳೂರು(ಗ್ರಾ)	47	ತಿಪ್ಪಗೊಂಡನಹಳ್ಳಿ	1162.00
ತುಮಕೂರು	ಚಿಕ್ಕನಾಯಕನಹಳ್ಳಿ	48	ಬೋರನಕಣಿವೆ	1346.00
ತುಮಕೂರು	ಕುಣಿಗಲ್	49	ಮಾರ್ಕೋನಹಳ್ಳಿ	1336.00

ಜಿ.ಪಿ.ಯಣ್ಣ
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ (ಮೀ)

ಆದೇಶ ಸಂಖ್ಯೆ:ಪಸಂಮೀ 125 ಮೀಇಇ 2013, ಬೆಂಗಳೂರು ದಿನಾಂಕ:21-02-2014ರ

ಅನುಬಂಧ-4

ಒಳನಾಡು ಜಲಸಂಪನ್ಮೂಲಗಳಲ್ಲಿನ ಮೀನು ಪಾಶುವಾರು ಹಕ್ಕನ್ನು ಮೀನುಗಾರಿಕೆ ಇಲಾಖೆಯಿಂದ ಗುತ್ತಿಗೆ ಮುಖಾಂತರ ವಿಲೇವಾರಿ ಮಾಡುವ ಸಂಬಂಧ ಮೀನುಗಾರಿಕೆ ಅಧಿಕಾರಿಗಳು ಕಡ್ಡಾಯವಾಗಿ ಪಾಲಿಸಬೇಕಾದ ವಿಧಿ ವಿಧಾನಗಳು ಮತ್ತು ಮಾರ್ಗಸೂಚಿಗಳು

1. ತಾಲ್ಲೂಕು ಮೀನುಗಾರಿಕೆ ಅಧಿಕಾರಿಗಳು ಪ್ರತಿ ಮೀನುಗಾರಿಕೆ ಫಸಲಿ ವರ್ಷದ ಮೇ ತಿಂಗಳ ಮೊದಲನೇ ವಾರದಲ್ಲಿ ತಮ್ಮ ವ್ಯಾಪ್ತಿಗೆ ಬರುವ ಜಲಸಂಪನ್ಮೂಲಗಳ ಪೈಕಿ ಮೀನು ಪಾಶುವಾರು ಹಕ್ಕನ್ನು ಗುತ್ತಿಗೆಗೆ ನೀಡಲು ಲಭ್ಯವಿರುವ ಎಲ್ಲಾ ಜಲಸಂಪನ್ಮೂಲಗಳ ಪಟ್ಟಿಯನ್ನು (ನವೀಕರಿಸಿಕೊಳ್ಳದ ಕೆರೆಗಳೂ ಸೇರಿದಂತೆ) ತಯಾರು ಮಾಡಿ ಗುತ್ತಿಗೆಗೆ ಮೀನುಗಾರರ ಸಹಕಾರ ಸಂಘಗಳಿಂದ ಅರ್ಜಿಗಳನ್ನು ಆಹ್ವಾನಿಸಲು ಈ ಆದೇಶದ ಅನುಬಂಧ-8ರಲ್ಲಿರುವ ನಿಗದಿತ ನಮೂನೆಯಲ್ಲಿ ಪ್ರಕಟಣೆಯನ್ನು ಹೊರಡಿಸತಕ್ಕದ್ದು. ಮತ್ತು ಈ ಬಗ್ಗೆ ಸಂಕ್ಷಿಪ್ತವಾಗಿ ಸ್ಥಳೀಯ ದಿನಪತ್ರಿಕೆಯಲ್ಲಿ ಪ್ರಕಟಿಸುವುದು ಹಾಗೂ ಪ್ರಕಟಣೆಯ ಪ್ರತಿಗಳನ್ನು ಕೆರೆಯ ವ್ಯಾಪ್ತಿಯ ಸಂಬಂಧಪಟ್ಟ ಎಲ್ಲಾ ಗ್ರಾಮ ಪಂಚಾಯತ್‌ಗಳ, ತಾಲ್ಲೂಕು ಪಂಚಾಯತ್‌ಗಳ, ತಾಲ್ಲೂಕಿನ ತಹಶೀಲ್ದಾರರ ಕಛೇರಿಯ ಮತ್ತು ತಾಲ್ಲೂಕು ಮಟ್ಟದ ಮೀನುಗಾರಿಕೆ ಅಧಿಕಾರಿ ಕಛೇರಿಯ ಜಾಹೀರಾತು ಫಲಕಗಳಲ್ಲಿ ಪ್ರದರ್ಶಿಸುವ ವ್ಯವಸ್ಥೆಯನ್ನು ಕಡ್ಡಾಯವಾಗಿ ಮಾಡತಕ್ಕದ್ದು. ಪ್ರಕಟಣೆಯ ಪ್ರತಿಯನ್ನು ತಾಲ್ಲೂಕಿನಲ್ಲಿ ನೋಂದಾಯಿಸಿಕೊಂಡಿರುವ ಎಲ್ಲಾ ಮೀನುಗಾರರ ಸಹಕಾರ ಸಂಘಗಳಿಗೆ "ಸರ್ಟಿಫಿಕೇಟ್ ಆಫ್ ಪೋಸ್ಟಿಂಗ್" ಮುಖಾಂತರ ಕಡ್ಡಾಯವಾಗಿ ರವಾನಿಸುವುದು ಅಥವಾ ಮುದ್ದಾಂ ಮೂಲಕ ನೀಡಿ ಸ್ವೀಕೃತಿಯನ್ನು ಪಡೆಯತಕ್ಕದ್ದು. ಇಂತಹ ಪ್ರಕಟಣೆಯ ಪ್ರತಿಯೊಂದನ್ನು ಪ್ರಕಟಿಸಿದ ಕೂಡಲೇ ಜಿಲ್ಲಾ ಮಟ್ಟದ ಮೀನುಗಾರಿಕೆ ಅಧಿಕಾರಿಗಳಿಗೆ ಸಲ್ಲಿಸತಕ್ಕದ್ದು. ಈ ಆದೇಶದ ಅನುಬಂಧ-9ರಲ್ಲಿನ ನಿಗದಿತ ನಮೂನೆಯಲ್ಲಿ ಗುತ್ತಿಗೆಯನ್ನು ಕೋರಿ ಬರುವ ಅರ್ಜಿಗಳನ್ನು ಸ್ವೀಕರಿಸಲು ಮೇ 3ನೇ ವಾರ ಅಂತಿಮ ಗಡುವು ನೀಡತಕ್ಕದ್ದು (ಕನಿಷ್ಠ 20 ದಿನಗಳು)

2. ಮೀನು ಪಾಶುವಾರು ಹಕ್ಕಿನ ಗುತ್ತಿಗೆಯನ್ನು ಪಡೆಯಲು ಅರ್ಜಿ ಸಲ್ಲಿಸುವ ಮೀನುಗಾರರ ಸಹಕಾರ ಸಂಘಗಳು ತಮ್ಮ ಕಾರ್ಯವ್ಯಾಪ್ತಿಯಲ್ಲಿರುವ ಗರಿಷ್ಠ ಎರಡು ಕೆರೆ ಅಥವಾ ಒಂದು ಜಲಾಶಯದ (ಈ ಆದೇಶದ ಅನುಬಂಧ-2ರಂತೆ)(300 ಹೆಕ್ಟೇರ್ ಜಲವಿಸ್ತೀರ್ಣದ ಮಿತಿಗೊಳ ಪಟ್ಟಂತೆ) ಅಥವಾ ಎರಡು ನದಿ ಭಾಗದ ಮೀನು ಪಾಶುವಾರು ಹಕ್ಕನ್ನು ಮಾತ್ರ ಪಡೆಯಲು ಅರ್ಹತೆಯನ್ನು ಹೊಂದಿರುತ್ತವೆ. ಹಾಗೂ ಸದರಿ ಸಂಘವು ಈ ಆದೇಶದ ಅನುಬಂಧ-1ರಲ್ಲಿ ನಮೂದಿಸಿರುವ ಅರ್ಹತೆಗಳನ್ನು ಹೊಂದಿರುವ ಬಗ್ಗೆ ದೃಢೀಕರಿಸಿಕೊಳ್ಳುವುದು.

3. ಕೆರೆಗಳ ಮೀನು ಪಾಶುವಾರು ಹಕ್ಕನ್ನು ಗುತ್ತಿಗೆಗೆ ಕೋರಿರುವ ಮೀನುಗಾರರ ಸಹಕಾರ ಸಂಘ ಈ ಆದೇಶದ ಅನುಬಂಧ-1ರಲ್ಲಿ ನಮೂದಿಸಿರುವಂತೆ ಅರ್ಹತೆಗಳಿದ್ದಲ್ಲಿ ಹಾಗೂ ದಾಖಲಾತಿಗಳನ್ನು ಸಲ್ಲಿಸಿದ್ದಲ್ಲಿ ಅರ್ಜಿಗಳನ್ನು ತುಲನಾತ್ಮಕವಾಗಿ ಪರಿಶೀಲಿಸಿ, ಅರ್ಜಿಗಳು, ಗುತ್ತಿಗೆ ಮೊತ್ತ, ಭದ್ರತಾ ಠೇವಣಿ ಮೊತ್ತದ ಹುಂಡಿಗಳು ಮತ್ತು ಎಲ್ಲಾ ದಾಸ್ತಾವೇಜುಗಳೊಡನೆ ತಾಲ್ಲೂಕು ಮೀನುಗಾರಿಕೆ ಅಧಿಕಾರಿಯು ಸ್ಪಷ್ಟವಾದ ವರದಿಯನ್ನು ತಯಾರು ಮಾಡಿ ಪೂರ್ಣ ಮಾಹಿತಿಗಳೊಂದಿಗೆ ಸೂಕ್ತ ಪ್ರಸ್ತಾವನೆಯನ್ನು (ಈ ಆದೇಶದ ಅನುಬಂಧ-18ರಲ್ಲಿನ ಚೆಕ್‌ಲಿಸ್ಟ್‌ನೊಂದಿಗೆ) ಆ ವರ್ಷದ ಮೇ ತಿಂಗಳಿನ 31ನೇ ತಾರೀಖಿನೊಳಗಾಗಿ ಮೇಲಾಧಿಕಾರಿಗೆ ಸಲ್ಲಿಸತಕ್ಕದ್ದು. ಮೊದಲನೇ ವರ್ಷದ ಗುತ್ತಿಗೆ ಹಣ ಮತ್ತು ಭದ್ರತಾ ಠೇವಣಿಯನ್ನು ಅರ್ಜಿ ಸಲ್ಲಿಸಿದ ಎಲ್ಲಾ ಸಂಘಗಳಿಂದ / ಸಂಸ್ಥೆಗಳಿಂದ

ಮುಂಗಡವಾಗಿ ನಗದು ಹುಂಡಿ (ಡಿ.ಡಿ) ಮುಖಾಂತರ ಸ್ವೀಕರಿಸಿ ಕೈ ರಸೀದಿಯನ್ನು ನೀಡತಕ್ಕದ್ದು. ಕೈ ರಸೀದಿಯ ಮೇಲೆ "ಗುತ್ತಿಗೆಯು ಮೇಲಾಧಿಕಾರಿಗಳ ದೃಢೀಕರಣಕ್ಕೆ ಒಳಪಟ್ಟಿದೆ" ಎಂದು ನಮೂದಿಸತಕ್ಕದ್ದು. ಗುತ್ತಿಗೆ ಆದೇಶ ಬಂದನಂತರ, ಯಶಸ್ವಿಯಾಗದ ಸಂಘಗಳ ನಗದು ಹುಂಡಿಯನ್ನು ನಿಯಮಾನುಸಾರ ಅವರಿಂದ ಸ್ವೀಕೃತಿ ಪಡೆದು ಹಿಂದಿರುಗಿಸತಕ್ಕದ್ದು.

4. ಅರ್ಜಿ ಸಲ್ಲಿಸಲು ನಿಗಧಿಪಡಿಸಿದ ಅಂತಿಮ ದಿನದೊಳಗೆ ಈ ಕೆಳಗೆ ಪಟ್ಟಿ ಮಾಡಿರುವ ದಾಖಲಾತಿಗಳನ್ನು ಸಲ್ಲಿಸದ ಸಹಕಾರ ಸಂಘದ ಅರ್ಜಿಯನ್ನು ತಾಲ್ಲೂಕು ಮೀನುಗಾರಿಕಾ ಅಧಿಕಾರಿಯು ತಿರಸ್ಕರಿಸುವುದು. ತಿರಸ್ಕರಿಸಿದ ~~ಬಗ್ಗೆ~~ ಕಾರಣಗಳನ್ನು ಪಟ್ಟಿ ~~ಮಾಡಿ~~ ~~ಅರ್ಜಿ~~ದಾರ ಸಹಕಾರ ಸಂಘಕ್ಕೆ ಲಿಖಿತ ಹಿಂಬರಹ ನೀಡುವುದು.

ಅ) ಕರ್ನಾಟಕ ಸಹಕಾರಿ ಕಾಯ್ದೆಯನ್ವಯ ನಿಯಮಾನುಸಾರ ಆಡಳಿತ ಮಂಡಳಿಯ ಸಭೆಗಳನ್ನು ಮತ್ತು ಚುನಾವಣೆಯನ್ನು ನಡೆಸಿರಬೇಕು ಹಾಗೂ ಆಡಳಿತ ಮಂಡಳಿ ರಚನೆಯಾಗಿರುವ ಬಗ್ಗೆ ದಾಖಲಾತಿಗಳು.

ಆ) ಸಂಘದ ಕಳೆದ 5 ವರ್ಷಗಳ ಅವಧಿಯಲ್ಲಿ ಯಾವುದಾದರೂ 3 ವರ್ಷಗಳ ಲೆಕ್ಕ ಪರಿಶೋಧನಾ ವರದಿ (ಸಹಕಾರಿ ಇಲಾಖೆ ನಡೆಸಿದ) ಮತ್ತು ಅವುಗಳ ಅನುಪಾಲನಾ ವರದಿ.

ಇ) ಸಂಘದ ಆರ್ಥಿಕ ಸ್ಥಿತಿಯನ್ನು ದೃಢೀಕರಿಸಲು ಸಂಘದ ಬ್ಯಾಂಕ್ ಖಾತೆಯ ಪಾಸ್ ಪುಸ್ತಕದ ದೃಢೀಕೃತ ಪ್ರತಿ.

ಈ) ಗುತ್ತಿಗೆ ಮೊತ್ತ + ಠೇವಣಿ ಮೊತ್ತದ ನಗದು ಹುಂಡಿ.

ಉ) ಮೀನುಗಾರರ ಸಹಕಾರ ಸಂಘದ ನೋಂದಣಿ ಪತ್ರ, ಬೈಲಾ ಪ್ರತಿ ಮತ್ತು ಗುತ್ತಿಗೆಯನ್ನು ಕೋರಿರುವ ಆಡಳಿತ ಮಂಡಳಿಯ ನೋಟರೀಕರಿಸಿದ ಠರಾವು ಪ್ರತಿ.

5. ಗುತ್ತಿಗೆ ಕೋರಿ ಬಂದ ಪ್ರಸ್ತಾವನೆಗಳನ್ನು ಅವರ ಕಛೇರಿಯಲ್ಲಿ ಸ್ವೀಕರಿಸಿದ ಒಂದು ವಾರದೊಳಗಾಗಿ ಜಿಲ್ಲಾ ಮೀನುಗಾರಿಕಾ ಅಧಿಕಾರಿಗಳು ಮತ್ತು ವಲಯ ಮಟ್ಟದ ಮೀನುಗಾರಿಕಾ ಅಧಿಕಾರಿಗಳು ಅವರ ಅಧಿಕಾರ ವ್ಯಾಪ್ತಿಯಲ್ಲಿ ಗುತ್ತಿಗೆ ಆದೇಶವನ್ನು ಹೊರಡಿಸುವುದು. ಅವರ ಅಧಿಕಾರ ವ್ಯಾಪ್ತಿ ಮೀರಿದ ಪ್ರಸ್ತಾವನೆಗಳನ್ನು ಅವರ ಕಛೇರಿಗೆ ತಲುಪಿದ ಒಂದು ವಾರದೊಳಗಾಗಿ ಅವರ ಮೇಲಾಧಿಕಾರಿಗಳಿಗೆ ರವಾನಿಸತಕ್ಕದ್ದು. ಪ್ರಾರಂಭದಲ್ಲೇ ಅಪೂರ್ಣ ಅರ್ಜಿಗಳನ್ನು ತಿರಸ್ಕರಿಸಬೇಕು. ಅಪೂರ್ಣ ಅರ್ಜಿಗಳೊಡನೆ ಪ್ರಸ್ತಾವನೆ ಸಲ್ಲಿಸಿದ ತಾಲ್ಲೂಕು ಮೀನುಗಾರಿಕಾ ಅಧಿಕಾರಿಯ ಮೇಲೆ ಕರ್ತವ್ಯ ನಿರ್ಲಕ್ಷತೆಯ ಬಗ್ಗೆ ಶಿಸ್ತು ಕ್ರಮ ಜರುಗಿಸುವುದು.

6. ಮೀನು ಪಾಶುವಾರು ಹಕ್ಕಿನ ಗುತ್ತಿಗೆಯನ್ನು ನೀಡಿದ 5 ವರ್ಷಗಳ ಗುತ್ತಿಗೆ ಅವಧಿಯಲ್ಲಿ ಎರಡನೇ ವರ್ಷದಿಂದ ಪ್ರತೀ ವರ್ಷ ಗುತ್ತಿಗೆಯನ್ನು ನವೀಕರಿಸುವ ಅಧಿಕಾರವನ್ನು ಜಿಲ್ಲಾ ಮೀನುಗಾರಿಕೆ ಅಧಿಕಾರಿಗೆ ನೀಡಲಾಗಿದೆ. ನವೀಕರಿಸುವ ಮುನ್ನಾ ಗುತ್ತಿಗೆದಾರರು ಗುತ್ತಿಗೆಯ ಎಲ್ಲಾ ಷರತ್ತು ಮತ್ತು ನಿಬಂಧನೆಗಳನ್ನು ಪಾಲಿಸಿರುವ ಬಗ್ಗೆ ದಾಖಲಾತಿಗಳೊಡನೆ ದೃಢೀಕರಿಸಿಕೊಳ್ಳಬೇಕು. ಗುತ್ತಿಗೆದಾರರು ಗುತ್ತಿಗೆ ಅವಧಿಯಲ್ಲಿ ಪ್ರತೀ ವರ್ಷ ಪೂರ್ಣ ಗುತ್ತಿಗೆ ಮೊತ್ತವನ್ನು ಮೀನುಗಾರಿಕೆ ಫಸಲಿ ವರ್ಷ ಅಂತ್ಯವಾಗುವ ಮೊದಲೇ ಅಂದರೆ ಏಪ್ರಿಲ್ 30ರೊಳಗಾಗಿ ಪಾವತಿ ಮಾಡಿ ಗುತ್ತಿಗೆಯನ್ನು ನವೀಕರಿಸಿಕೊಳ್ಳತಕ್ಕದ್ದು. ಏಪ್ರಿಲ್ ತಿಂಗಳ ಮೊದಲನೇ ವಾರದಲ್ಲಿ ಗುತ್ತಿಗೆದಾರರಿಗೆ ಗುತ್ತಿಗೆ ಮೊತ್ತದ ಬೇಡಿಕೆ ನೋಟೀಸ್‌ನ್ನು "ನೋಂದಣಿ ಅಂಚೆ ಸ್ವೀಕೃತಿ ಬಾಕಿ" ಮುಖಾಂತರ ತಾಲ್ಲೂಕು ಮೀನುಗಾರಿಕಾ ಅಧಿಕಾರಿಯು ರವಾನಿಸುವುದು. ಈ ನೋಟೀಸ್ ನೀಡಿದ ನಂತರವೂ ಸಹ ಗುತ್ತಿಗೆದಾರರು ಗುತ್ತಿಗೆ ಮೊತ್ತವನ್ನು ನಿಗದಿತ ವೇಳೆಯೊಳಗಾಗಿ ಪಾವತಿಸದಿದ್ದಲ್ಲಿ ಹಾಗೂ ಇಲಾಖಾ ಷರತ್ತು ಮತ್ತು ನಿಬಂಧನೆಗಳನ್ನು ಉಲ್ಲಂಘಿಸಿದಲ್ಲಿ ಗುತ್ತಿಗೆ ಆದೇಶವನ್ನು ರದ್ದುಪಡಿಸುವ ಅಧಿಕಾರವನ್ನು ಗುತ್ತಿಗೆ ಆದೇಶ ನೀಡಿದ ಸಕ್ಷಮ ಪ್ರಾಧಿಕಾರ ಹೊಂದಿರುತ್ತದೆ. ಗುತ್ತಿಗೆ ರದ್ದುಪಡಿಸಿದ ನಂತರ ಮರುವಿಲೇಗೊಳಿಸುವ ಅಧಿಕಾರವನ್ನು ಜಿಲ್ಲಾ ಮೀನುಗಾರಿಕೆ ಅಧಿಕಾರಿಗಳಿಗೆ ಪ್ರತ್ಯಾಯೋಜಿಸಿದೆ.

7. ಜಲಸಂಪನ್ಮೂಲದ ಒಟ್ಟು ಜಲವಿಸ್ತೀರ್ಣದ ಶೇಕಡ 50ರಷ್ಟು ಜಲವಿಸ್ತೀರ್ಣವನ್ನು ಉಪಯುಕ್ತತಾ ಜಲವಿಸ್ತೀರ್ಣ ಪ್ರದೇಶವೆಂದು ಗಣನೆಗೆ ತೆಗೆದುಕೊಂಡು, ಈ ರೀತಿ ಗಣನೆಗೆ ತೆಗೆದುಕೊಂಡ ಜಲವಿಸ್ತೀರ್ಣಕ್ಕೆ ಪ್ರತಿ ಹೆಕ್ಟೇರಿಗೆ ರೂ.500-00ರಂತೆ ಬರುವ ಮೊತ್ತ ಅಥವಾ ಹಿಂದಿನ ಮೂರು ವರ್ಷಗಳ ಸರಾಸರಿ ಆದಾಯ ಇವೆರಡರಲ್ಲಿ ಯಾವುದು ಹೆಚ್ಚೋ ಅದನ್ನು ಪ್ರಥಮ ವರ್ಷದ ಗುತ್ತಿಗೆ ಮೊತ್ತವೆಂದು ನಿಗಧಿಪಡಿಸುವುದು. ಈ ರೀತಿ ನಿಗದಿಪಡಿಸಿದ ಗುತ್ತಿಗೆ ಮೊತ್ತಕ್ಕೆ ಉಳಿದ ನಾಲ್ಕು ವರ್ಷಗಳ ಗುತ್ತಿಗೆ ಅವಧಿಯಲ್ಲಿ ಪ್ರತಿ ವರ್ಷ ಹಿಂದಿನ ವರ್ಷದ ಗುತ್ತಿಗೆ ಮೊತ್ತಕ್ಕೆ ಶೇಕಡ 5ರಂತೆ ಹೆಚ್ಚಿಸಿ ಗುತ್ತಿಗೆ ಮೊತ್ತವನ್ನು ನಿಗಧಿಪಡಿಸುವುದು.

8. ಗುತ್ತಿಗೆದಾರರು ಜಲಸಂಪನ್ಮೂಲದ ಗುತ್ತಿಗೆ ಮೊತ್ತದ ಶೇಕಡ 25ರಷ್ಟು ಹಣವನ್ನು ಭದ್ರತಾ ಠೇವಣಿಯಾಗಿ ಮೊದಲನೆಯ ವರ್ಷದ ಗುತ್ತಿಗೆ ಮೊತ್ತದೊಂದಿಗೆ ಡಿ.ಡಿ. ಮುಖಾಂತರ ಪಾವತಿಸತಕ್ಕದ್ದು. ಯಾವುದೇ ಷರತ್ತಿನ ಅಥವಾ ನಿಬಂಧನೆಯ ಉಲ್ಲಂಘನೆಯಾದಲ್ಲಿ ಸದರಿ ಭದ್ರತಾ ಠೇವಣಿ ಹಣವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದು. ಇಲ್ಲದಿದ್ದಲ್ಲಿ ಈ ಠೇವಣಿ ಹಣವನ್ನು ಬಡ್ಡಿರಹಿತವಾಗಿ ಗುತ್ತಿಗೆ ಅವಧಿಯು ಮುಗಿದ ನಂತರ ಗುತ್ತಿಗೆದಾರರಿಗೆ ಹಿಂದಿರುಗಿಸುವುದು.

9. ಗುತ್ತಿಗೆಗೆ ಪಡೆದ ಮೀನು ಪಾಶುವಾರು ಹಕ್ಕನ್ನು ಯಾವುದೇ ಕಾರಣಕ್ಕಾಗಿ ವರ್ಗಾಯಿಸತಕ್ಕದ್ದಲ್ಲ. ಹಾಗೂ ಉಪ ಗುತ್ತಿಗೆಗೆ ನೀಡತಕ್ಕದ್ದಲ್ಲ. ಒಂದು ಪಕ್ಷ ವರ್ಗಾಯಿಸಿದ್ದಲ್ಲಿ ಅಥವಾ ಉಪ ಗುತ್ತಿಗೆಗೆ ನೀಡಿರುವುದು ದಾಖಲೆಗಳಿಂದ ದೃಢಪಟ್ಟಲ್ಲಿ ಗುತ್ತಿಗೆ ಆದೇಶವನ್ನು ನೀಡಿದ ಸಕ್ಷಮ ಪ್ರಾಧಿಕಾರ ರದ್ದುಗೊಳಿಸುವ ಅಧಿಕಾರವನ್ನು ಹೊಂದಿರುತ್ತದೆ.

10. ಗುತ್ತಿಗೆದಾರರು ಗುತ್ತಿಗೆ ಪಡೆದ ಜಲಸಂಪನ್ಮೂಲದಲ್ಲಿ ಮೀನುಗಾರಿಕೆ ಚಟುವಟಿಕೆಯನ್ನು ಕೈಗೊಳ್ಳುವಾಗ ಸದರಿ ಜಲಸಂಪನ್ಮೂಲದ ಕಟ್ಟೆ, ಏರಿ, ತೂಬು ಮುಂತಾದವುಗಳಿಗೆ ಯಾವುದೇ ರೀತಿಯ ಹಾನಿಯುಂಟಾದಲ್ಲಿ ತಾಲ್ಲೂಕು ಮಟ್ಟದ ಅಧಿಕಾರಿಯು ಗುತ್ತಿಗೆ ಪಡೆದ ಗುತ್ತಿಗೆದಾರರ ಮೇಲೆ ಕ್ರಮವಹಿಸತಕ್ಕದ್ದು.

11. ಗುತ್ತಿಗೆಗೆ ಪಡೆದ ಜಲಸಂಪನ್ಮೂಲಗಳಲ್ಲಿ ಗುತ್ತಿಗೆದಾರರು ಡೈನಾಮೈಟ್, ಸಿಡಿಮದ್ದು, ರಾಸಾಯನಿಕ ವಸ್ತು ಅಥವಾ ವಿಷದ ಪ್ರಯೋಗವನ್ನಾಗಲೀ ಮಾಡಿ ಮೀನು ಹಿಡಿಯತಕ್ಕದ್ದಲ್ಲ. ಈ ನಿಬಂಧನೆಯನ್ನು ಉಲ್ಲಂಘಿಸಿದ ಗುತ್ತಿಗೆದಾರರ ಗುತ್ತಿಗೆಯನ್ನು

ತಕ್ಷಣದಿಂದ ರದ್ದುಪಡಿಸಿ ಅವರ ವಿರುದ್ಧ ಕಾನೂನಿನ ಕ್ರಮ ಕೈಗೊಳ್ಳತಕ್ಕದ್ದು. ಮತ್ತು ಈ ರೀತಿ ಅಕ್ರಮವಾಗಿ ಹಿಡಿದ ಮೀನನ್ನು ಮಾರಾಟ ಮಾಡಿ ಸರ್ಕಾರಕ್ಕೆ ಜಮಾ ಮಾಡಲು ಸಂಬಂಧಪಟ್ಟ ತಾಲ್ಲೂಕು ಮಟ್ಟದ ಅಧಿಕಾರಿಗಳು ಕ್ರಮ ಕೈಗೊಳ್ಳತಕ್ಕದ್ದು.

12. ಮೀನುಗಾರಿಕೆ ಇಲಾಖೆಯ ವ್ಯಾಪ್ತಿಯಲ್ಲಿನ ಒಳನಾಡು ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕಿನ ವಿಲೇವಾರಿಗೆ ಸಂಬಂಧಪಟ್ಟಂತೆ ರೂಪಿಸಲಾಗಿರುವ ಯಾವುದೇ ನಿಯಮಗಳನ್ನು ಉಲ್ಲಂಘಿಸಿದ ಗುತ್ತಿಗೆದಾರರ ಗುತ್ತಿಗೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಪಡಿಸಲು ಕ್ರಮವಹಿಸುವುದು. ಹಾಗೂ ಸರ್ಕಾರವು / ಮೀನುಗಾರಿಕೆ ಇಲಾಖೆಯು ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಕಾಲಕಾಲಕ್ಕೆ ವಿಧಿಸಬಹುದಾದ ಹೆಚ್ಚುವರಿ ಷರತ್ತು ಮತ್ತು ನಿಬಂಧನೆಗಳಿಗೆ ಗುತ್ತಿಗೆದಾರರು ಬದ್ಧರಾಗಿರತಕ್ಕದ್ದು. ಈ ದಿಸೆಯಲ್ಲಿ ಈ ಆದೇಶದ ಅನುಬಂಧ-10ರಲ್ಲಿರುವ ನಿಗದಿತ ನಮೂನೆಯಲ್ಲಿರುವಂತೆ ಮುಚ್ಚಳಿಕೆ ಪತ್ರವನ್ನು ರೂ.200-00ರ ಮೌಲ್ಯದ ಛಾಪಾಕಾಗದದಲ್ಲಿ ಗುತ್ತಿಗೆದಾರರಿಂದ ಸಂಬಂಧಪಟ್ಟ ತಾಲ್ಲೂಕು ಮೀನುಗಾರಿಕೆ ಅಧಿಕಾರಿಗಳು ಪಡೆದುಕೊಳ್ಳತಕ್ಕದ್ದು.

13. ಮೀನುಗಾರಿಕೆ ಇಲಾಖೆಯ ವ್ಯಾಪ್ತಿಯಲ್ಲಿನ ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕನ್ನು ಗುತ್ತಿಗೆಗೆ ಪಡೆದ ಮೀನುಗಾರರ ಸಹಕಾರ ಸಂಘಗಳ ಲೆಕ್ಕಪತ್ರಗಳನ್ನು ಮೀನುಗಾರಿಕೆ ಅಧಿಕಾರಿಗಳು ಪರಿಶೋಧನೆ ಮಾಡುವ ಅಧಿಕಾರವನ್ನು ಹೊಂದಿರುತ್ತಾರೆ.

14. ಗುತ್ತಿಗೆದಾರರು ಮೀನು ಪಾಶುವಾರು ಹಕ್ಕಿನ ಗುತ್ತಿಗೆ ಪಡೆದ ಜಲಸಂಪನ್ಮೂಲಗಳಲ್ಲಿ ಪ್ರತಿ ಹೆಕ್ಟೇರು ಉಪಯುಕ್ತಾ ಜಲವಿಸ್ತೀರ್ಣಕ್ಕೆ ಕನಿಷ್ಠ 2000 ಬಲಿತ ಬಿತ್ತನೆ ಮೀನುಮರಿಗಳನ್ನು (70-80 ಎಂ.ಎಂ.) ಮೀನುಗಾರಿಕೆ ಇಲಾಖೆಯು ಅನುಮೋದಿಸಿದ ತಳಿಯ ಮೀನುಮರಿಗಳನ್ನು ಮಾತ್ರ ಮೀನುಗಾರಿಕೆ ಇಲಾಖೆಯ ಅಥವಾ ಮೀನುಗಾರಿಕೆ ಇಲಾಖೆಯಿಂದ ಅನುಮೋದಿಸಲ್ಪಟ್ಟ ಮೀನುಮರಿ ಉತ್ಪಾದನಾ / ಪಾಲನಾ ಕೇಂದ್ರಗಳಿಂದ ಖರೀದಿಸಿ ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ-2) ಅಧಿಕಾರಿಯ ಸಮ್ಮುಖದಲ್ಲಿ ಬಿತ್ತನೆ ಮಾಡತಕ್ಕದ್ದು. ಮೀನುಮರಿಗಳನ್ನು ಬಿತ್ತನೆ ಮಾಡಿರುವ ಬಗ್ಗೆ ಪ್ರತಿವರ್ಷ ಫೋಟೋ ದೃಢೀಕರಣವನ್ನು ತಾಲ್ಲೂಕು ಮಟ್ಟದ ಮೀನುಗಾರಿಕಾ ಅಧಿಕಾರಿಗಳಿಗೆ ನೀಡಬೇಕು.

15. ಜಲಸಂಪನ್ಮೂಲದ ಮೀನು ಪಾಶುವಾರು ಹಕ್ಕನ್ನು ಗುತ್ತಿಗೆಗೆ ಪಡೆದ ಯಾವುದೇ ಗುತ್ತಿಗೆದಾರರು ನಿಷೇಧಿತ ಮೀನು ತಳಿಗಳಾದ ಪ್ರಮುಖವಾಗಿ ಆಫ್ರಿಕನ್ ಕ್ಯಾಟ್ ಫಿಶ್ (ಆಣೆ ಮೀನು), ಚೈನೀಸ್ ಬಿಗ್ ಹೆಡ್, ಮತ್ತು ಇತರೆ ನಿಷೇಧಿತ ಮೀನುಮರಿಗಳ ಬಿತ್ತನೆ ಮಾಡುವುದು ಅಥವಾ ಅಭಿವೃದ್ಧಿಪಡಿಸುವುದು ಅಥವಾ ಮಾರಾಟ ಮಾಡುವುದು ಕಂಡುಬಂದಲ್ಲಿ ಅವರಿಗೆ ನೀಡಲಾದ ಗುತ್ತಿಗೆಯನ್ನು ಕೂಡಲೇ ರದ್ದುಪಡಿಸಿ ಆ ಸಾಲಿನ ಗುತ್ತಿಗೆ ಮೊತ್ತವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದಲ್ಲದೇ ಸಂಬಂಧಪಟ್ಟ ಗುತ್ತಿಗೆದಾರರನ್ನು ಕಪ್ಪುಪಟ್ಟಿಗೆ ಸೇರ್ಪಡಿಸಿ ಅವರಿಗೆ ಮೀನುಗಾರಿಕೆ ಇಲಾಖೆಯಿಂದ ಯಾವುದೇ ಜಲಸಂಪನ್ಮೂಲದ ಮೀನು ಪಾಶುವಾರು ಹಕ್ಕನ್ನು ಮುಂದಕ್ಕೆ ನೀಡಲಾಗುವುದಿಲ್ಲ.

ಜಿ.ಜಯಣ್ಣ

ಸರ್ಕಾರದ ಅಧೀನ ಕಾರ್ಯದರ್ಶಿ

ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ (ಮೀ)

ಆದೇಶ ಸಂಖ್ಯೆ:ಪಸಂಮೀ 125 ಮೀಇಇ 2013, ಬೆಂಗಳೂರು ದಿನಾಂಕ:21-02-2014ರ

ಅನುಬಂಧ-5

ಒಳನಾಡು ಜಲಸಂಪನ್ಮೂಲಗಳಲ್ಲಿನ ಮೀನು ಪಾಶುವಾರು ಹಕ್ಕನ್ನು ಮೀನುಗಾರಿಕೆ ಇಲಾಖೆಯಿಂದ ಟೆಂಡರ್-ಕಂ-ಹರಾಜು ಮುಖಾಂತರ ವಿಲೇವಾರಿ ಮಾಡುವಾಗ ಮೀನುಗಾರಿಕೆ ಅಧಿಕಾರಿಗಳು ಕಡ್ಡಾಯವಾಗಿ ಪಾಲಿಸಬೇಕಾದ ವಿಧಿ ವಿಧಾನಗಳು ಮತ್ತು ಮಾರ್ಗಸೂಚಿಗಳು

1. ಎಲ್ಲೆಲ್ಲಿ ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕನ್ನು ಗುತ್ತಿಗೆಗೆ ಪಡೆಯಲು ಆದ್ಯತೆಯಲ್ಲಿನ ಮೀನುಗಾರರ ಸಹಕಾರ ಸಂಘಗಳು ಮುಂದೆ ಬರುವುದಿಲ್ಲವೋ ಆ ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕನ್ನು ಟೆಂಡರ್-ಕಂ-ಹರಾಜು ಮೂಲಕ ವಿಲೇವಾರಿ ಮಾಡಲು ಟೆಂಡರ್ ಮತ್ತು ಹರಾಜು ಪ್ರಕಟಣೆಯನ್ನು ಸಂಬಂಧಪಟ್ಟ ತಾಲ್ಲೂಕು ಮೀನುಗಾರಿಕೆ ಅಧಿಕಾರಿಯು ಹೊರಡಿಸತಕ್ಕದ್ದು. ಮೀನು ಪಾಶುವಾರು ಹಕ್ಕನ್ನು ವಿಲೇವಾರಿ ಮಾಡಲು ಉದ್ದೇಶಿಸಲಾದ ಒಳನಾಡು ಜಲಸಂಪನ್ಮೂಲಗಳ ಟೆಂಡರ್ / ಹರಾಜು ಪ್ರಕಟಣೆಗಳನ್ನು ಈ ಆದೇಶದ ಅನುಬಂಧ-12ರಲ್ಲಿನಂತೆ ಸ್ಥಳೀಯ ದಿನಪತ್ರಿಕೆಗಳಲ್ಲಿ ಪ್ರಕಟಿಸಿ ಪ್ರಕಟಣೆಯ ಕರಪತ್ರಗಳನ್ನು ಕೆರೆಯ ವ್ಯಾಪ್ತಿಯ ಗ್ರಾಮ ಪಂಚಾಯತ್‌ಗಳ, ತಾಲ್ಲೂಕು ಪಂಚಾಯತ್, ತಾಲ್ಲೂಕಿನ ತಹಶೀಲ್ದಾರವರ ಕಛೇರಿಯ ಮತ್ತು ತಾಲ್ಲೂಕು ಮಟ್ಟದ ಮೀನುಗಾರಿಕೆ ಅಧಿಕಾರಿ ಕಛೇರಿಯ ಜಾಹೀರಾತು ಫಲಕಗಳಲ್ಲಿ ಪ್ರದರ್ಶಿಸುವ ವ್ಯವಸ್ಥೆಯನ್ನು ಕಡ್ಡಾಯವಾಗಿ ಮಾಡತಕ್ಕದ್ದು. ಟೆಂಡರ್ ಪ್ರಕಟಣೆಯನ್ನು ಕೆರೆಯ ವ್ಯಾಪ್ತಿಯ ಗ್ರಾಮ/ಗ್ರಾಮಗಳಲ್ಲಿ ಸಾರ್ವಜನಿಕರಿಗೆ ವ್ಯಾಪಕವಾಗಿ ಹರಾಜು ಇಸ್ತಿಹಾರ್ ಪಂಚಿಸುವ ಹಾಗೂ ಟಾಮ್ ಟಾಮ್ ಮಾಡಿಸುವ ವ್ಯವಸ್ಥೆಯನ್ನು ಕಡ್ಡಾಯವಾಗಿ ಮಾಡಬೇಕು.

2. ಸಂಬಂಧಪಟ್ಟ ತಾಲ್ಲೂಕು ಮೀನುಗಾರಿಕೆ ಅಧಿಕಾರಿಯು ಟೆಂಡರ್-ಕಂ-ಹರಾಜು ಪ್ರಕಟಣೆಯನ್ನು ಪ್ರಕಟಿಸಿದ ದಿನಾಂಕದಿಂದ 15 ದಿನಗಳ ಕಾಲಾವಕಾಶ ನೀಡಿ ಟೆಂಡರ್-ಕಂ-ಹರಾಜನ್ನು ನಡೆಸತಕ್ಕದ್ದು. ನೀರು ತುಂಬಿದ ಒಳನಾಡು ಜಲಸಂಪನ್ಮೂಲಗಳ ಸರ್ವೇಕ್ಷಣೆ ನಡೆಸಿ ಅವುಗಳ ಮೀನು ಪಾಶುವಾರು ಹಕ್ಕಿನ ವಿಲೇವಾರಿಯನ್ನು ಮೂರು ಸುತ್ತಿನಲ್ಲಿ ನಡೆಸತಕ್ಕದ್ದು. ಪೂರ್ಣವಾಗಿ ಅಥವಾ ಅರ್ಧಕ್ಕಿಂತ ಹೆಚ್ಚು ತುಂಬಿದ ಕೆರೆಗಳನ್ನು ಮೊದಲನೇ ಸುತ್ತಿನಲ್ಲಿ ಅಂದರೆ ಮೀನುಗಾರಿಕೆ ಫಸಲಿ ವರ್ಷದ ಮೇ-ಜೂನ್ ತಿಂಗಳಿನಲ್ಲಿ, ಎರಡನೇ ಸುತ್ತನ್ನು ಜುಲೈ-ಆಗಸ್ಟ್ ತಿಂಗಳಿನಲ್ಲಿ ಮತ್ತು ಮೂರನೇ ಹಾಗೂ ಅಂತಿಮ ಸುತ್ತನ್ನು ಸೆಪ್ಟೆಂಬರ್-ಅಕ್ಟೋಬರ್ ತಿಂಗಳಿನಲ್ಲಿ ನಡೆಸತಕ್ಕದ್ದು. 3ನೇ ಸುತ್ತಿನ ನಂತರ ವಿಲೇವಾರಿಯಾಗದ ಕೆರೆಗಳ ಪಟ್ಟಿಯನ್ನು ತಯಾರು ಮಾಡಿ ವಿಲೇವಾರಿಯಿಂದ ವಿನಾಯಿತಿ ಆದೇಶವನ್ನು ಮೀನುಗಾರಿಕೆ ನಿರ್ದೇಶಕರಿಂದ ಪಡೆಯಲು ಸೂಕ್ತ ಸಮರ್ಥನೆಯೊಂದಿಗೆ ಪ್ರಸ್ತಾವನೆಯನ್ನು ಈ ಆದೇಶದ ಅನುಬಂಧ 7ರ ನಮೂನೆಯಲ್ಲಿ ಸಲ್ಲಿಸತಕ್ಕದ್ದು. ಎಲ್ಲಾ ಜಲಸಂಪನ್ಮೂಲಗಳ ವಿಲೇವಾರಿ ಪ್ರಕ್ರಿಯೆಯನ್ನು ಮೀನುಗಾರಿಕೆ ಫಸಲಿ ವರ್ಷ ಪ್ರಾರಂಭವಾದ 4 ತಿಂಗಳೊಳಗಾಗಿ ಅಂದರೆ ಮೀನುಗಾರಿಕೆ ಫಸಲಿ ವರ್ಷದ ಅಕ್ಟೋಬರ್ ಮಾಹೆಯ ಅಂತ್ಯದೊಳಗಾಗಿ ಕಡ್ಡಾಯವಾಗಿ ಪೂರ್ಣಗೊಳಿಸತಕ್ಕದ್ದು.

3. ಟೆಂಡರ್-ಕಂ-ಹರಾಜಿನ ಮೂಲಕ ಮೀನು ಪಾಶುವಾರು ಹಕ್ಕಿನ ಗುತ್ತಿಗೆಯನ್ನು ಪಡೆಯಲು ಇಚ್ಛಿಸುವವರು ಈ ಆದೇಶದ ಅನುಬಂಧ-13ರಲ್ಲಿನಂತೆ ಅಧಿಕೃತ ಟೆಂಡರ್ ಅರ್ಜಿ ನಮೂನೆಯನ್ನು ಸಂಬಂಧಪಟ್ಟ ತಾಲ್ಲೂಕಿನ ಮೀನುಗಾರಿಕೆ ಅಧಿಕಾರಿಯವರಿಂದ ಕಛೇರಿ ವೇಳೆಯಲ್ಲಿ ಅರ್ಜಿಯ ಶುಲ್ಕ ರೂ.100-00ನ್ನು (ರೂಪಾಯಿ ಒಂದು ನೂರು ಮಾತ್ರ) ಪಾವತಿಸಿ ಪಡೆದುಕೊಳ್ಳತಕ್ಕದ್ದು.

4. ಟೆಂಡರ್ ಹಾಗೂ ಹರಾಜಿನಲ್ಲಿ ಭಾಗವಹಿಸುವವರು ಮೀನುಗಾರಿಕೆ ಇಲಾಖೆಯು ನಿಗದಿಪಡಿಸಿದ ಭದ್ರತಾ ಠೇವಣಿಯನ್ನು ನಗದು ಹುಂಡಿ (ಡಿ.ಡಿ.) ಮೂಲಕ ಮಾತ್ರ ಪಾವತಿಸಿ ಟೆಂಡರ್ ಹಾಗೂ ಹರಾಜಿನಲ್ಲಿ ಭಾಗವಹಿಸಬಹುದು. ಟೆಂಡರ್‌ನಲ್ಲಿ ಭಾಗವಹಿಸಿರುವವರೂ ಸಹ ಭದ್ರತಾ ಠೇವಣಿ ಮೊತ್ತವನ್ನು ಮತ್ತೆ ಪಾವತಿಸದೆ ಹರಾಜಿನಲ್ಲಿ ಭಾಗವಹಿಸಬಹುದು. ಆದರೆ, ಟೆಂಡರ್‌ನಲ್ಲಿ ಭಾಗವಹಿಸದೆ ಬರೀ ಹರಾಜಿನಲ್ಲಿ ಭಾಗವಹಿಸುವವರು, ಹರಾಜು ಪ್ರಕ್ರಿಯೆ ಪ್ರಾರಂಭದ ಮುನ್ನ ಭದ್ರತಾ ಠೇವಣಿ ಮೊತ್ತವನ್ನು ನಗದುಹುಂಡಿ ಮೂಲಕ ಮಾತ್ರ ಪಾವತಿಸಿ ಭಾಗವಹಿಸಬಹುದು. ಈ ಭದ್ರತಾ ಠೇವಣಿ ಮೊತ್ತವನ್ನು ಆಯಾ ಜಲಸಂಪನ್ಮೂಲದ ಉಪಯುಕ್ತತಾ ಜಲವಿಸ್ತೀರ್ಣದ ಶೇ.15ರಷ್ಟು ವಿಸ್ತೀರ್ಣವನ್ನು ಗಣನೆಗೆ ತೆಗೆದುಕೊಂಡು ಪ್ರತಿ ಹೆಕ್ಟೇರಿಗೆ ರೂ.500.00ರಂತೆ (ರೂಪಾಯಿ ಐನೂರು ಮಾತ್ರ) ನಿಗದಿಪಡಿಸತಕ್ಕದ್ದು. ಯಶಸ್ವಿ ಬಿಡ್‌ದಾರರ ಭದ್ರತಾ ಠೇವಣಿ ಮೊತ್ತವನ್ನು ಬಡ್ಡಿರಹಿತವಾಗಿ ಗುತ್ತಿಗೆಯ ಅವಧಿಯು ಮುಗಿದನಂತರ ಅವರಿಗೆ ರೀಫಂಡ್ ಬಿಲ್ ಮುಖಾಂತರ ಮರುಪಾವತಿಸತಕ್ಕದ್ದು. ಒಂದು ವೇಳೆ ಆಯ್ಕೆಯಾದ ಬಿಡ್‌ದಾರರು ಗುತ್ತಿಗೆ ಮೊತ್ತ ಪಾವತಿಸದಿದ್ದಲ್ಲಿ ಅಥವಾ ಗುತ್ತಿಗೆ ಅವಧಿಯಲ್ಲಿ ಇಲಾಖಾ ಷರತ್ತು ಮತ್ತು ನಿಬಂಧನೆಗಳನ್ನು ಉಲ್ಲಂಘಿಸಿದಲ್ಲಿ ಅವರ ಭದ್ರತಾ ಠೇವಣಿ ಮೊತ್ತವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳತಕ್ಕದ್ದು. ಯಶಸ್ವಿಯಾಗದ ಟೆಂಡರ್‌ದಾರರ/ಬಿಡ್‌ದಾರರ ಠೇವಣಿ ಮೊತ್ತದ ನಗದು ಹುಂಡಿಗಳನ್ನು ಅವರಿಗೆ ಅಂದೇ ಹಿಂದಿರುಗಿಸಿ ಸ್ವೀಕೃತಿ ಪಡೆದುಕೊಳ್ಳುವುದು.

5. ಮೀನು ಪಾಶುವಾರು ಹಕ್ಕನ್ನು ಪಡೆಯಲು ಟೆಂಡರ್ ಅರ್ಜಿ ಸಲ್ಲಿಸುವವರು ಈ ಆದೇಶದ ಅನುಬಂಧ-13ರಲ್ಲಿರುವ ನಿಗದಿತ ನಮೂನೆಯ ಟೆಂಡರ್ ಅರ್ಜಿಯನ್ನು ಹಾಗೂ ಭದ್ರತಾ ಠೇವಣಿಯ ನಗದು ಹುಂಡಿಯನ್ನು ಮೊಹರು ಮಾಡಿದ ಪ್ರತ್ಯೇಕ ಲಕೋಟೆಗಳಲ್ಲಿ ಸಂಬಂಧಪಟ್ಟ ತಾಲ್ಲೂಕು ಮೀನುಗಾರಿಕೆ ಅಧಿಕಾರಿಗೆ ನಿಗದಿತ ದಿನಾಂಕದೊಳಗಾಗಿ ಕಛೇರಿ ವೇಳೆಯಲ್ಲಿ ಸಲ್ಲಿಸತಕ್ಕದ್ದು. ಮೊಹರಾದ ಲಕೋಟೆಯ ಮೇಲೆ ಕೆರೆಯ ಹೆಸರಿನೊಂದಿಗೆ ಮೀನು ಪಾಶುವಾರು ಹಕ್ಕನ್ನು ಪಡೆಯಲು ಟೆಂಡರ್ ಅರ್ಜಿಯೆಂದು ದಪ್ಪ ಅಕ್ಷರಗಳಲ್ಲಿ ನಮೂದಿಸಿರತಕ್ಕದ್ದು.

6. ಟೆಂಡರ್-ಕಂ-ಹರಾಜನ್ನು ನಡೆಸುವ ವಿಧಾನ:

ಮೊದಲು ಕೆರೆವಾರು ಹರಾಜನ್ನು ನಡೆಸುವುದು, ನಂತರ ಕೆರೆವಾರು ಟೆಂಡರ್ ಅರ್ಜಿಗಳನ್ನು ತೆರೆಯುವುದು. ಆ ಕೆರೆಗೆ ಟೆಂಡರ್ ಅರ್ಜಿಗಳಲ್ಲಿ ನಮೂದಿಸಿರುವ ಅತಿ ಹೆಚ್ಚಿನ ಮೊತ್ತ ಅಥವಾ ಹರಾಜಿನಲ್ಲಿ ಸೂಚಿಸಿರುವ ಅತಿ ಹೆಚ್ಚಿನ ಬಿಡ್ ಮೊತ್ತ ಈ ಎರಡರಲ್ಲಿ ಯಾವುದು ಹೆಚ್ಚೋ ಆ ಮೊತ್ತವನ್ನು ವಾರ್ಷಿಕ ಗುತ್ತಿಗೆ ಮೊತ್ತವೆಂದು ಪರಿಗಣಿಸತಕ್ಕದ್ದು.

7. ಸರ್ಕಾರಿ ಸವಾಲು:

ಸಂಬಂಧಿಸಿದ ಜಲಸಂಪನ್ಮೂಲದ ಹಿಂದಿನ ವರ್ಷದ ಆದಾಯದ ಶೇ.50ರಷ್ಟು ಮೊತ್ತವನ್ನು ಸರ್ಕಾರಿ ಸವಾಲು ಅಥವಾ ಕನಿಷ್ಠ ಬಿಡ್ ಮೊತ್ತವೆಂದು ಪರಿಗಣಿಸುವುದು. ಆಯ್ಕೆಯಾದ ಬಿಡ್ / ಟೆಂಡರ್ ಮೊತ್ತವು ಸರ್ಕಾರಿ ಸವಾಲಿಗಿಂತ ಕಡಿಮೆ ಇದ್ದಲ್ಲಿ ಅಂತಹ ಟೆಂಡರ್-ಕಂ-ಹರಾಜು ಪ್ರಕ್ರಿಯೆಯನ್ನು ತಾಲ್ಲೂಕು ಮೀನುಗಾರಿಕೆ ಅಧಿಕಾರಿಯೇ ರದ್ದುಗೊಳಿಸಿ ಮರುವಿಲೇವಾರಿಗೆ ಕ್ರಮ ಕೈಗೊಳ್ಳತಕ್ಕದ್ದು. 2ನೇ ಬಾರಿಯೂ ಸಹ ಆಯ್ಕೆಯಾದ ಬಿಡ್ ಮೊತ್ತ ಸರ್ಕಾರಿ ಸವಾಲಿಗಿಂತ ಕಡಿಮೆ ಇದ್ದಲ್ಲಿ ಟೆಂಡರ್/ಹರಾಜನ್ನು ರದ್ದುಗೊಳಿಸಿ 3ನೇ ಬಾರಿಗೆ ಮರುವಿಲೇಗೊಳಿಸುವುದು. 3ನೇ ಬಾರಿಗೆ ಆಯ್ಕೆಯಾದ ಬಿಡ್ /ಟೆಂಡರ್ ಮೊತ್ತವನ್ನು ಒಪ್ಪಿಕೊಳ್ಳುವುದು.

8. ಮೀನು ಪಾಶುವಾರು ಹಕ್ಕಿನ ಟೆಂಡರ್/ಹರಾಜು ಮುಗಿದ ಕೂಡಲೇ ಅತೀ ಹೆಚ್ಚಿನ ಮೊತ್ತವನ್ನು ಸೂಚಿಸಿದ ಯಶಸ್ವಿ ಟೆಂಡರುದಾರರು/ಬಿಡ್ಡುದಾರರು ಪೂರ್ಣ ಬಿಡ್ ಮೊತ್ತವನ್ನು ಹರಾಜು ನಡೆದ ಸ್ಥಳದಲ್ಲಿಯೇ ಪಾವತಿ ಮಾಡಿ ಸಂಬಂಧಪಟ್ಟ ತಾಲ್ಲೂಕು ಮೀನುಗಾರಿಕೆ ಅಧಿಕಾರಿಯಿಂದ ಅಧಿಕೃತ ರಸೀದಿಯನ್ನು ಪಡೆದುಕೊಳ್ಳತಕ್ಕದ್ದು. ತಪ್ಪಿದಲ್ಲಿ ಸದರಿ ಟೆಂಡರ್-ಕಂ-ಹರಾಜಿನ ಬಗ್ಗೆ ಅವರು ನೀಡಲಾಗಿದ್ದ ಭದ್ರತಾ ಠೇವಣಿಯ ಮೊಬಲಗನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳತಕ್ಕದ್ದು. ಆದರೆ, ಆಯ್ಕೆಯಾದ ಗರಿಷ್ಠ ಬಿಡ್ ಮೊತ್ತವನ್ನು 2ನೇ ಅತೀ ಹೆಚ್ಚಿನ ಮೊತ್ತವನ್ನು ಸೂಚಿಸಿದ ಟೆಂಡರ್‌ದಾರರು / ಬಿಡ್‌ದಾರರು ಪಾವತಿಸಲು ಒಪ್ಪಿದಲ್ಲಿ ಹಾಗೂ ಅವರು ಸದರಿ ಮೊತ್ತವನ್ನು ಸ್ಥಳದಲ್ಲೇ ಪಾವತಿಸಿದಲ್ಲಿ ಅವರ ಹೆಸರಿಗೆ ಸದರಿ ಜಲಸಂಪನ್ಮೂಲದ ಮೀನು ಪಾಶುವಾರು ಹಕ್ಕನ್ನು ವಿಲೇಗೊಳಿಸಲು ಸಂಬಂಧಪಟ್ಟ ತಾಲ್ಲೂಕು ಮೀನುಗಾರಿಕೆ ಅಧಿಕಾರಿ ಕ್ರಮ ಕೈಗೊಳ್ಳತಕ್ಕದ್ದು. ಒಂದು ವೇಳೆ 2ನೇ ಅತೀ ಹೆಚ್ಚಿನ ಟೆಂಡರುದಾರರು/ಬಿಡ್‌ದಾರರು ಇದಕ್ಕೆ ಒಪ್ಪದಿದ್ದಲ್ಲಿ ಜಿಲ್ಲಾ ಮೀನುಗಾರಿಕಾ ಅಧಿಕಾರಿಯ ಅನುಮೋದನೆ ಪಡೆದು ಮರು ಟೆಂಡರ್-ಕಂ-ಹರಾಜು ಮೂಲಕ ಮರುವಿಲೇವಾರಿ ಗೊಳಿಸಲು ಸಂಬಂಧಪಟ್ಟ ತಾಲ್ಲೂಕು ಮೀನುಗಾರಿಕೆ ಅಧಿಕಾರಿ ಕ್ರಮಕೈಗೊಳ್ಳತಕ್ಕದ್ದು.

9. ಟೆಂಡರ್-ಕಂ-ಹರಾಜಿನ ಮುಖಾಂತರ ವಿಲೇಗೊಳಿಸಲಾದ ಮೀನು ಪಾಶುವಾರು ಹಕ್ಕಿನ ದೃಢೀಕರಣವು ಮೇಲಾಧಿಕಾರಿಗಳ ಅನುಮೋದನೆಗೆ ಒಳಪಟ್ಟಿರುತ್ತದೆ.

10. ಟೆಂಡರ್/ಹರಾಜು ಪ್ರಕ್ರಿಯೆ ಮುಗಿದ ಒಂದು ವಾರದೊಳಗಾಗಿ ತಾಲ್ಲೂಕು ಮೀನುಗಾರಿಕೆ ಅಧಿಕಾರಿಯು ಹರಾಜು ದೃಢೀಕರಣ ಆದೇಶ ಪಡೆಯಲು ಎಲ್ಲಾ ದಾಖಲಾತಿಗಳೊಂದಿಗೆ ಸೂಕ್ತ ಪ್ರಸ್ತಾವನೆಯನ್ನು (ಈ ಆದೇಶದ ಅನುಬಂಧ-18ರಲ್ಲಿನ ಚೆಕ್‌ಲಿಸ್ಟ್‌ನೊಂದಿಗೆ) ಮೇಲಾಧಿಕಾರಿಗೆ ಸಲ್ಲಿಸತಕ್ಕದ್ದು. ಟೆಂಡರ್/ಹರಾಜು ದೃಢೀಕರಣ ಆದೇಶ ಕೋರಿ ಬಂದ ಪ್ರಸ್ತಾವನೆಗಳನ್ನು ಒಂದು ವಾರದೊಳಗಾಗಿ ಜಿಲ್ಲಾ ಮೀನುಗಾರಿಕೆ ಅಧಿಕಾರಿಗಳು ಮತ್ತು ವಲಯ ಮಟ್ಟದ ಮೀನುಗಾರಿಕೆ ಅಧಿಕಾರಿಗಳು ಅವರ ಅಧಿಕಾರ ವ್ಯಾಪ್ತಿಯಲ್ಲಿ ಗುತ್ತಿಗೆ ಆದೇಶವನ್ನು ಹೊರಡಿಸುವುದು. ಅಧಿಕಾರ ವ್ಯಾಪ್ತಿ ಮೀರಿದ ಪ್ರಸ್ತಾವನೆಗಳನ್ನು ಅವರ ಕಛೇರಿಗೆ ತಲುಪಿದ ಒಂದು ವಾರದೊಳಗಾಗಿ ಅವರ ಮೇಲಾಧಿಕಾರಿಗೆ ಸಲ್ಲಿಸುವುದು. ಪ್ರಾರಂಭದಲ್ಲೇ ತಾಲ್ಲೂಕು ಮೀನುಗಾರಿಕೆ ಅಧಿಕಾರಿಗಳು ಪ್ರಸ್ತಾವನೆಯೊಡನೆ ಸಲ್ಲಿಸಬೇಕಾದ ಎಲ್ಲಾ ದಾಖಲಾತಿಗಳು ಚೆಕ್‌ಲಿಸ್ಟ್‌ಗಳನ್ನು ಪರಿಶೀಲಿಸಿಕೊಂಡು ಪೂರ್ಣ ಪ್ರಸ್ತಾವನೆಯನ್ನು ಸಲ್ಲಿಸತಕ್ಕದ್ದು. ಅಪೂರ್ಣ ಪ್ರಸ್ತಾವನೆ ಸಲ್ಲಿಸುವ ತಾಲ್ಲೂಕು ಮೀನುಗಾರಿಕೆ ಅಧಿಕಾರಿಯ ಮೇಲೆ ಕರ್ತವ್ಯ ನಿರ್ಲಕ್ಷತೆಯ ಆರೋಪ ಹೊರಿಸಿ ಶಿಸ್ತು ಕ್ರಮ ಜರುಗಿಸುವುದು.

11. ಟೆಂಡರ್-ಕಂ-ಹರಾಜು ಮುಖಾಂತರ ಪಡೆದ ಮೀನು ಪಾಶುವಾರು ಹಕ್ಕಿನ ಗುತ್ತಿಗೆ ಅವಧಿಯಲ್ಲಿ 2ನೇ ವರ್ಷದಿಂದ ಪ್ರತಿವರ್ಷ ಗುತ್ತಿಗೆಯನ್ನು ನವೀಕರಿಸುವ ಅಧಿಕಾರವನ್ನು ಜಿಲ್ಲಾ ಮೀನುಗಾರಿಕೆ ಅಧಿಕಾರಿಗೆ ಪ್ರತ್ಯಾಯೋಜಿಸಲಾಗಿದೆ. ಎರಡನೇ ವರ್ಷ ಮತ್ತು ತದನಂತರದ ವಾರ್ಷಿಕ

ಟೆಂಡರ್/ಬಿಡ್ ಮೊತ್ತವನ್ನು ಬಿಡ್‌ದಾರರು ಮೀನುಗಾರಿಕೆ ಫಸಲಿ ವರ್ಷದ ಪ್ರಾರಂಭದ ಮುನ್ನ ಅಂದರೆ ಏಪ್ರಿಲ್ 30ರೊಳಗಾಗಿ ಪಾವತಿ ಮಾಡಿ ಗುತ್ತಿಗೆಯನ್ನು ನವೀಕರಿಸಿಕೊಳ್ಳತಕ್ಕದ್ದು. ಏಪ್ರಿಲ್ ತಿಂಗಳ ಮೊದಲನೇ ವಾರದಲ್ಲಿ ಬಿಡ್‌ದಾರರಿಗೆ ಬಿಡ್ ಮೊತ್ತದ ಬೇಡಿಕೆ ನೋಟೀಸನ್ನು "ನೋಂದಣಿ ಅಂಚೆ ಸ್ವೀಕೃತಿ ಬಾಕಿ" ಮುಖಾಂತರ ರವಾನಿಸುವುದು. ಈ ನೋಟೀಸ್ ನೀಡಿದ ನಂತರವೂ ಬಿಡ್‌ದಾರರು ನಿಗದಿತ ಅವಧಿಯೊಳಗಾಗಿ ಗುತ್ತಿಗೆ ಮೊತ್ತವನ್ನು ಪಾವತಿಸಿ ನವೀಕರಿಸಿಕೊಳ್ಳದಿದ್ದಲ್ಲಿ ಹಾಗೂ ಇಲಾಖಾ ಷರತ್ತು ಮತ್ತು ನಿಬಂಧನೆಗಳನ್ನು ಉಲ್ಲಂಘಿಸಿದ ಪಕ್ಷದಲ್ಲಿ ಅವರ ಹರಾಜು ದೃಢೀಕರಣ ಆದೇಶವನ್ನು ರದ್ದುಪಡಿಸುವ ಅಧಿಕಾರವನ್ನು ಗುತ್ತಿಗೆ ದೃಢೀಕರಿ~~ಸಿದ ಸಕ್ಷಮ~~ ಪ್ರಾಧಿಕಾರ / ~~ಮೀನುಗಾರಿಕೆ~~ ನಿರ್ದೇಶಕರು ಹೊಂದಿರುತ್ತಾರೆ. ಸದರಿ ಜಲಸಂಪನ್ಮೂಲದ ಮೀನು ಪಾಶುವಾರು ಹಕ್ಕನ್ನು ಮರುವಿಲೇವಾರಿಗೊಳಿಸುವ ಅಧಿಕಾರವನ್ನು ಜಿಲ್ಲಾ ಮೀನುಗಾರಿಕೆ ಅಧಿಕಾರಿಗಳಿಗೆ ಪ್ರತ್ಯಾಯೋಜಿಸಿದೆ. <u>ಹಿಂದಿನ ಗುತ್ತಿಗೆ ಆದೇಶವನ್ನು ರದ್ದುಪಡಿಸಿದ ನಂತರವೇ ಹೊಸ ಗುತ್ತಿಗೆ ಆದೇಶವನ್ನು ಸಕ್ಷಮ ಪ್ರಾಧಿಕಾರ ನೀಡುವುದು.</u>

12. ಟೆಂಡರ್–ಕಂ–ಹರಾಜು ಮುಖಾಂತರ ಗುತ್ತಿಗೆಗೆ ಪಡೆದ ಮೀನು ಪಾಶುವಾರು ಹಕ್ಕನ್ನು <u>ಯಾವುದೇ ಕಾರಣಕ್ಕಾಗಿ ವರ್ಗಾಯಿಸತಕ್ಕದ್ದಲ್ಲ. ಹಾಗೂ ಉಪ ಗುತ್ತಿಗೆಗೆ ನೀಡತಕ್ಕದ್ದಲ್ಲ.</u> ಒಂದು ಪಕ್ಷ ವರ್ಗಾಯಿಸಿದ್ದಲ್ಲಿ ಅಥವಾ ಉಪ ಗುತ್ತಿಗೆಗೆ ನೀಡಿರುವುದು ದಾಖಲೆಗಳಿಂದ ದೃಢಪಟ್ಟಲ್ಲಿ ಗುತ್ತಿಗೆ ಆದೇಶವನ್ನು ಸಕ್ಷಮ ಪ್ರಾಧಿಕಾರ ರದ್ದುಗೊಳಿಸುವುದು.

13. ಟೆಂಡರ್‌ದಾರರು/ಬಿಡ್‌ದಾರರು ಮೀನು ಪಾಶುವಾರು ಹಕ್ಕಿನ ಗುತ್ತಿಗೆಯನ್ನು ಪಡೆದ ಜಲಸಂಪನ್ಮೂಲಗಳಲ್ಲಿ ಪ್ರತಿ ಹೆಕ್ಟೇರು ಉಪಯುಕ್ತತಾ ಜಲವಿಸ್ತೀರ್ಣಕ್ಕೆ ಕನಿಷ್ಟ 2000 ಬಲಿತ ಮೀನುಮರಿಗಳನ್ನು (70–80 ಎಂ.ಎಂ.)(ಮೀನುಗಾರಿಕೆ ಇಲಾಖೆಯಿಂದ ಅನುಮೋದಿತ ತಳಿಯ) ಮಾತ್ರ ಮೀನುಗಾರಿಕೆ ಇಲಾಖೆಯ ಅಥವಾ ಮೀನುಗಾರಿಕೆ ಇಲಾಖೆಯಿಂದ ಅನುಮೋದಿಸಲ್ಪಟ್ಟ ಮೀನುಮರಿ ಉತ್ಪಾದನಾ / ಪಾಲನಾ ಕೇಂದ್ರಗಳಿಂದ ಖರೀದಿಸಿ ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ–2) ಅಧಿಕಾರಿಯ ಸಮ್ಮುಖದಲ್ಲಿ ಬಿತ್ತನೆ ಮಾಡತಕ್ಕದ್ದು. ಬಿತ್ತನೆ ಮಾಡಿರುವ ಬಗ್ಗೆ ಪ್ರತಿವರ್ಷ ಫೋಟೋ ದೃಢೀಕರಣವನ್ನು ತಾಲ್ಲೂಕು ಮಟ್ಟದ ಮೀನುಗಾರಿಕೆ ಅಧಿಕಾರಿಗಳಿಗೆ ನೀಡತಕ್ಕದ್ದು.

14. ಯಾವುದೇ ಅಥವಾ ಎಲ್ಲಾ ಟೆಂಡರ್–ಕಂ–ಹರಾಜು ಪ್ರಸ್ತಾವನೆಗಳನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವು ಸಂಬಂಧಪಟ್ಟ ಇಲಾಖಾ ಅಧಿಕಾರಿಗಳಿಗೆ / ಸರ್ಕಾರಕ್ಕೆ ಇರುತ್ತದೆ. ಯಾವುದೇ ಕಾರಣ ನೀಡದೆ ಟೆಂಡರ್ / ಹರಾಜನ್ನು ತಿರಸ್ಕರಿಸಿ ಮರು ಟೆಂಡರ್. / ಹರಾಜು ಮಾಡುವ ಹಕ್ಕು ಮೀನುಗಾರಿಕೆ ಇಲಾಖೆಗೆ ಸೇರಿರುತ್ತದೆ.

15. ಟೆಂಡರ್/ ಹರಾಜು ಮುಖಾಂತರ ಗುತ್ತಿಗೆಗೆ ಪಡೆದ ಜಲಸಂಪನ್ಮೂಲಗಳಲ್ಲಿ ಗುತ್ತಿಗೆದಾರರು ಡೈನಮೈಟ್, ಸಿಡಿಮದ್ದು, ವಿಷ ಅಥವಾ ರಾಸಾಯನಿಕ ವಸ್ತುಗಳನ್ನು ಪ್ರಯೋಗಿಸಿ ಮೀನು ಹಿಡಿಯತಕ್ಕದ್ದಲ್ಲ. ಈ ನಿಬಂಧನೆಯನ್ನು ಉಲ್ಲಂಘಿಸಿದ ಟೆಂಡರುದಾರರ / ಬಿಡ್ಡುದಾರರ ಗುತ್ತಿಗೆಯನ್ನು ತತ್‌ಕ್ಷಣದಿಂದ ರದ್ದುಪಡಿಸಿ ಭದ್ರತಾ ಠೇವಣಿ ಮೊತ್ತ ಹಣವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳತಕ್ಕದ್ದು.

16. ಒಳನಾಡು ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕನ್ನು ಟೆಂಡರ್ / ಹರಾಜು ಮುಖಾಂತರ ಗುತ್ತಿಗೆಗೆ ಪಡೆದ ಯಾವುದೇ ಟೆಂಡರುದಾರರು / ಬಿಡ್‌ದಾರರು ನಿಷೇಧಿತ ಮೀನುಗಳಾದ ಪ್ರಮುಖವಾಗಿ ಆಫ್ರಿಕನ್ ಕ್ಯಾಟ್‌ಫಿಶ್ (ಆಣೆ ಮೀನು), ಚೈನೀಸ್ ಬಿಗ್ ಹೆಡ್, ಇತ್ಯಾದಿಗಳನ್ನು ಬಿತ್ತನೆ ಮಾಡುವುದು ಅಥವಾ ಅಭಿವೃದ್ಧಿಪಡಿಸುವುದು ಅಥವಾ ಮಾರಾಟ ಮಾಡುವುದು ಕಂಡುಬಂದಲ್ಲಿ ಅವರಿಗೆ ನೀಡಲಾಗಿದ್ದ ಗುತ್ತಿಗೆಯನ್ನು ಕೂಡಲೇ ರದ್ದುಪಡಿಸುವ ಮತ್ತು ಆ ಸಾಲಿನ ಗುತ್ತಿಗೆ ಮೊತ್ತ ಮತ್ತು ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳುವ ಅಧಿಕಾರವನ್ನು ಮೀನುಗಾರಿಕೆ ಇಲಾಖೆ ಹೊಂದಿರುತ್ತದೆ. ಟೆಂಡರುದಾರರಿಂದ / ಬಿಡ್‌ದಾರರಿಂದ ಈ ನಿಷೇಧಿತ ಮೀನುಮರಿಗಳ ಅಭಿವೃದ್ಧಿ, ಪಾಲನೆ ಮತ್ತು ಮಾರಾಟ ಮಾಡುವುದು ಕಂಡುಬಂದಲ್ಲಿ ಸಂಬಂಧಪಟ್ಟ ಗುತ್ತಿಗೆದಾರರನ್ನು ಕಪ್ಪುಪಟ್ಟಿಗೆ ಸೇರ್ಪಡಿಸಿ ಅವರಿಗೆ ಮೀನುಗಾರಿಕೆ ಇಲಾಖೆಯಿಂದ ಯಾವುದೇ ಜಲಸಂಪನ್ಮೂಲದ ಮೀನು ಪಾಶುವಾರು ಹಕ್ಕನ್ನು ಮುಂದಕ್ಕೆ ನೀಡಲಾಗುವುದಿಲ್ಲ.

17. ಟೆಂಡರುದಾರರು / ಗುತ್ತಿಗೆದಾರರು ಗುತ್ತಿಗೆ ಪಡೆದ ಜಲಸಂಪನ್ಮೂಲಗಳಲ್ಲಿ ಮೀನುಗಾರಿಕೆ ಚಟುವಟಿಕೆಯನ್ನು ಕೈಗೊಳ್ಳುವಾಗ ಸದರಿ ಜಲಸಂಪನ್ಮೂಲದ ಕಟ್ಟೆ, ಏರಿ, ತೂಬು, ಮುಂತಾದವುಗಳಿಗೆ ಯಾವುದೇ ರೀತಿಯ ಹಾನಿ ಉಂಟಾಗದಂತೆ ನೋಡಿಕೊಳ್ಳತಕ್ಕದ್ದು. ಹಾನಿಯುಂಟಾದಲ್ಲಿ ಟೆಂಡರ್/ಬಿಡ್‌ದಾರರ ಮೇಲೆ ಕ್ರಮವಹಿಸತಕ್ಕದ್ದು.

18. ಮೀನುಗಾರಿಕೆ ಇಲಾಖೆಯ ವ್ಯಾಪ್ತಿಯಲ್ಲಿನ ಒಳನಾಡು ಜಲಸಂಪನ್ಮೂಲಗಳಲ್ಲಿನ ಮೀನು ಪಾಶುವಾರು ಹಕ್ಕಿನ ವಿಲೇವಾರಿಗೆ ಸಂಬಂಧಪಟ್ಟಂತೆ ರೂಪಿಸಲಾಗಿರುವ ಯಾವುದೇ ನಿಯಮವನ್ನು ಉಲ್ಲಂಘಿಸಿದ ಟೆಂಡರುದಾರರ / ಗುತ್ತಿದಾರರ ಗುತ್ತಿಗೆಯನ್ನು ತತ್‌ಕ್ಷಣದಿಂದ ಜಾರಿಗೆ ಬರುವಂತೆ ಸಕ್ಷಮ ಪ್ರಾಧಿಕಾರವು ರದ್ದುಪಡಿಸತಕ್ಕದ್ದು. ಹಾಗೂ ಸರ್ಕಾರವು / ಮೀನುಗಾರಿಕೆ ನಿರ್ದೇಶಕರು ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಕಾಲಕಾಲಕ್ಕೆ ವಿಧಿಸಬಹುದಾದ ಹೆಚ್ಚುವರಿ ಷರತ್ತು ಮತ್ತು ನಿಬಂಧನೆಗಳಿಗೆ ಗುತ್ತಿಗೆದಾರರು / ಟೆಂಡರುದಾರರು ಬದ್ಧರಾಗಿರತಕ್ಕದ್ದು. ಈ ದಿಶೆಯಲ್ಲಿ ಈ ಆದೇಶದ <u>ಅನುಬಂಧ–15ರಲ್ಲಿನ</u> ನಮೂನೆಯಲ್ಲಿರುವಂತೆ ಮುಚ್ಚಳಿಕೆ ಪತ್ರವನ್ನು ರೂ.200–00ರ ಮೌಲ್ಯದ ಛಾಪಾ ಕಾಗದದಲ್ಲಿ ಟೆಂಡರುದಾರರಿಂದ / ಗುತ್ತಿಗೆದಾರರಿಂದ ಸಂಬಂಧಪಟ್ಟ ತಾಲ್ಲೂಕು ಮೀನುಗಾರಿಕೆ ಅಧಿಕಾರಿಗಳು ಪಡೆದುಕೊಳ್ಳತಕ್ಕದ್ದು.

ಜಿ.ಜಯಣ್ಣ

ಸರ್ಕಾರದ ಅಧೀನ ಕಾರ್ಯದರ್ಶಿ

ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ (ಮೀ)

ಆದೇಶ ಸಂಖ್ಯೆ:ಪಸಂಮೀ 125 ಮೀಇಇ 2013, ಬೆಂಗಳೂರು ದಿನಾಂಕ:21–02–2014ರ ಅನುಬಂಧ–6

ನದಿಗಳಲ್ಲಿ / ಜಲಾಶಯಗಳಲ್ಲಿ ಮತ್ತು ಅಳಿವೆಗಳಲ್ಲಿ ಮೀನು ಹಿಡಿಯಲು ಪರವಾನಗಿಗಳನ್ನು ವಿತರಿಸುವಾಗ ಮೀನುಗಾರಿಕೆ ಅಧಿಕಾರಿಗಳು ಕಡ್ಡಾಯವಾಗಿ ಪಾಲಿಸಬೇಕಾದ ವಿಧಿವಿಧಾನಗಳು ಮತ್ತು ಮಾರ್ಗಸೂಚಿಗಳು.

1. ರಾಜ್ಯದ ಆಯ್ದ ನದಿ ಭಾಗಗಳು (ಗುತ್ತಿಗೆಗೆ ಕೋರದ) ಮತ್ತು ಈ ಆದೇಶದ <u>ಅನುಬಂಧ–3</u>ರಲ್ಲಿ ತಿಳಿಸಿರುವ ಜಲಾಶಯಗಳಲ್ಲಿ ಮೀನುಗಾರಿಕೆಯನ್ನು ಪರವಾನಗಿ ಮೂಲಕ ನಡೆಸುವುದು.

2. ಪರವಾನಗಿಗಳನ್ನು ಕೋರುವ ಅರ್ಜಿದಾರರು ಈ ಆದೇಶದ <u>ಅನುಬಂಧ–16</u>ರಲ್ಲಿ ತಿಳಿಸಿರುವ ನಿಗದಿತ ಅರ್ಜಿಯೊಡನೆ ಸಂಬಂಧಪಟ್ಟ ಮೀನುಗಾರಿಕೆ ಸಹಾಯಕ ನಿರ್ದೇಶಕರುಗಳಿಗೆ ಅರ್ಜಿ ಸಲ್ಲಿಸಿ ಪರವಾನಗಿ ಪಡೆಯುವುದು.

3. ಪರವಾನಗಿಗಳನ್ನು ವಿತರಿಸುವ ಕಾರ್ಯಕ್ರಮ "ಸಕಾಲ" ಯೋಜನೆಯಡಿ ಬರುವುದರಿಂದ ನಿಗಧಿತ ಅವಧಿಯೊಳಗೆ ಪರವಾನಗಿಗಳನ್ನು ನಿಗಧಿತ ನಮೂನೆ ಈ ಆದೇಶದ ಅನುಬಂಧ-17ರಂತೆ ವಿತರಿಸುವುದು.

4. ಪರವಾನಗಿ ಅವಧಿಯು "ಮೀನುಗಾರಿಕೆ ವರ್ಷಕ್ಕೆ" ಮಾತ್ರ ಸೀಮಿತವಾಗಿರುತ್ತದೆ. ಮೀನುಗಾರಿಕೆ ವರ್ಷದ ಯಾವುದೇ ಸಮಯದಲ್ಲಿ ಪರವಾನಗಿ ನೀಡಿದರೂ ಸಹ ಮೀನುಗಾರಿಕೆ ವರ್ಷದ ಅಂತ್ಯಕ್ಕೆ ಅಂದರೆ ಜೂನ್ 30ಕ್ಕೆ ಪರವಾನಗಿ ಕೊನೆಗೊಳ್ಳುತ್ತದೆ.

5. ಪರವಾನಗಿಗಳನ್ನು ಒಬ್ಬರಿಂದ ಒಬ್ಬರಿಗೆ ವರ್ಗಾಯಿಸುವಂತಿಲ್ಲ.

6. ಪರವಾನಗಿದಾರರು ಮೀನುಗಾರಿಕೆ ನಿಷೇಧದ ಅವಧಿಯಲ್ಲಿ ಮೀನು ಹಿಡಿಯುವುದನ್ನು ಪೂರ್ಣವಾಗಿ ನಿಷೇಧಿಸಲಾಗಿದೆ. ಮತ್ತು ಈ ಅವಧಿಯಲ್ಲಿ ಕ್ರೀಡಾ ಮೀನುಗಾರರಿಗೆ ಪರವಾನಗಿಗಳನ್ನು ವಿತರಿಸಕೂಡದು.

7. ನದಿ ಮತ್ತು ಜಲಾಶಯಗಳಲ್ಲಿ ಮೀನು ಹಿಡಿಯುವ ಎಲ್ಲಾ ಸಮಯದಲ್ಲಿ ಪರವಾನಗಿದಾರರು ಪರವಾನಗಿಯ ಪ್ರತಿ ಮತ್ತು ಗುರುತಿನ ಚೀಟಿಯನ್ನು ಕಡ್ಡಾಯವಾಗಿ ಹೊಂದಿರಬೇಕು.

8. ಪರವಾನಗಿ ಪಡೆದ ಮೀನುಗಾರರು ಪರವಾನಗಿಯಲ್ಲಿ ತಿಳಿಸಿರುವ ವಿಧಾನದಲ್ಲಿ ಮಾತ್ರ ಮೀನು ಶಿಕಾರಿ ಮಾಡುವುದು. ಡೈನಾಮೈಟ್, ವಿಷಕಾರಕ ಅಥವಾ ರಾಸಾಯನಿಕ ವಸ್ತುಗಳನ್ನು ಉಪಯೋಗಿಸಿ ಮೀನುಗಾರಿಕೆ ಮಾಡಿದ್ದಲ್ಲಿ ಪರವಾನಗಿಯನ್ನು ತಕ್ಷಣದಿಂದ ರದ್ದು ಮಾಡುವುದು.

9. ಪರವಾನಗಿ ಹೊಂದಿದ ಮೀನುಗಾರರು ಪರವಾನಗಿಯಲ್ಲಿ ನಿಗಧಿಪಡಿಸಿದ ಪ್ರದೇಶದಲ್ಲಿ ಮಾತ್ರ ಮೀನುಗಾರಿಕೆಯನ್ನು ಮಾಡಲು ಹಕ್ಕುಳ್ಳವರಾಗಿರುತ್ತಾರೆ.

10. ಪರವಾನಗಿಯಲ್ಲಿ ನಿಗಧಿಪಡಿಸಿರುವ ನಿಗಧಿತ ಕಣ್ಣಿನ ಅಳತೆಯ ಬಲೆಗಳನ್ನು ಮಾತ್ರ ಉಪಯೋಗಿಸಿ ಮೀನು ಹಿಡಿಯುವುದು.

11. ನದಿ ಮತ್ತು ಜಲಾಶಯದಲ್ಲಿ ಎಳೆ ಬಲೆಗಳು, ಮಾರಿ ಬಲೆಗಳು ಮತ್ತು ಇನ್ನಿತರೆ ಪ್ರಕಾರದ ಎಳೆ ಬಲೆಗಳನ್ನು ಉಪಯೋಗಿಸಿ ಮೀನು ಹಿಡಿಯುವುದನ್ನು ನಿಷೇಧಿಸಲಾಗಿದೆ.

12. ಪರವಾನಗಿದಾರರು ಮೀನು ಹಿಡಿಯುವ ಸಮಯದಲ್ಲಿ ಜೀವ ರಕ್ಷಕ ಸಾಧನವಾದ ಲೈಫ್ ಜಾಕೆಟ್‌ನ್ನು ಧರಿಸುವುದು ಕಡ್ಡಾಯ ಮತ್ತು ಜೀವ ರಕ್ಷಣೆಗೆ ಎಲ್ಲಾ ಮುಂಜಾಗರೂಕತೆ ಕ್ರಮಗಳನ್ನು ಕೈಗೊಳ್ಳುವುದು.

13. ಜಲಾಶಯದ ಮತ್ತು ನದಿಗಳಿಗೆ ಪರವಾನಗಿ ನೀಡುವಾಗ ಸ್ಥಳೀಯ ಮೀನುಗಾರರಿಗೆ ಆದ್ಯತೆ ನೀಡುವುದು. ಸ್ಥಳೀಯ ಮೀನುಗಾರರು ಎಂದರೆ ಕನಿಷ್ಠ 5 ವರ್ಷ ಸ್ಥಳೀಯ ವಾಸದ ದೃಢೀಕರಣ ಪತ್ರ ಹೊಂದಿರುವಂತವರು ಹಾಗೂ ಜಲಸಂಪನ್ಮೂಲದ ದಡದಿಂದ ಗರಿಷ್ಠ 5 ಕಿ.ಮೀ. ಆಸುಪಾಸಿನಲ್ಲಿ ವಾಸಿಸುತ್ತಿರುವವರು.

14. ಜಲಾಶಯದಲ್ಲಿ ಹಿಡಿದ ಮೀನನ್ನು ಪರವಾನಗಿದಾರರು ಇಲಾಖೆಯು ನಿಗಧಿಪಡಿಸಿದ ನಿರ್ದಿಷ್ಟ ಪ್ರದೇಶದಲ್ಲಿ ಒಟ್ಟು ಮಾಡಿ ಸ್ಥಳೀಯ ಗ್ರಾಹಕರಿಗೆ ಮಾರಾಟ ಮಾಡಿ, ಉಳಿದ ಮೀನನ್ನು ಬೇರೆಡೆಗೆ ಮಾರಾಟಕ್ಕೆ ಸಾಗಿಸಬಹುದು.

15. ನದಿ ಮತ್ತು ಜಲಾಶಯದಲ್ಲಿ ವಿತರಿಸಬೇಕಾದ ಗರಿಷ್ಠ ಪ್ರಮಾಣದ ಪರವಾನಗಿಗಳ ಸಂಖ್ಯೆಯನ್ನು ಮಿನುಗಾರಿಕೆ ನಿರ್ದೇಶಕರು ಪ್ರತ್ಯೇಕವಾಗಿ ಪ್ರಕಟಣೆ ಹೊರಡಿಸುವುದು.

16. ಪರವಾನಗಿದಾರರು ಮೀನು ಹಿಡಿಯುವಾಗ ಜಲಾಶಯದ ಮತ್ತು ನದಿಯ ಭದ್ರತೆ ಮತ್ತು ನೀರಿನ ಸ್ವಚ್ಛತೆ (ಮಾಲಿನ್ಯಕರಣಗೊಳ್ಳದಂತೆ) ನೋಡಿಕೊಳ್ಳತಕ್ಕದ್ದು. ಪರವಾನಗಿಗೆ ಸಂಬಂಧಪಟ್ಟಂತೆ ಜಲಾಶಯದ ಪ್ರಾಧಿಕಾರ ಅಥವಾ ಇಲಾಖೆಯು ವಿಧಿಸುವ ಹೆಚ್ಚುವರಿ ಷರತ್ತು ಮತ್ತು ನಿಬಂಧನೆಗಳನ್ನು ಉಲ್ಲಂಘಿಸಬಾರದು.

17. ಪರವಾನಗಿದಾರರು ನದಿ ಮತ್ತು ಜಲಾಶಯದಲ್ಲಿ ಹಿಡಿದ ಮೀನಿನ ಅಂಕಿ ಅಂಶಗಳನ್ನು ಪ್ರತಿ ತಿಂಗಳು ಸಂಬಂಧಪಟ್ಟ ತಾಲ್ಲೂಕು ಮೀನುಗಾರಿಕೆ ಅಧಿಕಾರಿಗೆ ಒದಗಿಸತಕ್ಕದ್ದು.

18. ಪ್ರಕೃತಿ ವಿಕೋಪದಿಂದ ಪರವಾನಗಿದಾರರಿಗೆ ನಷ್ಟ ಅಥವಾ ಸಲಕರಣೆಗಳಿಗೆ ಹಾನಿ ಉಂಟಾದಲ್ಲಿ ಅಥವಾ ನಷ್ಟ ಉಂಟಾದಲ್ಲಿ ಅಂತಹ ನಷ್ಟಗಳಿಗೆ ಇಲಾಖೆಯು ಜವಾಬ್ದಾರರಾಗುವುದಿಲ್ಲ.

19. ಸಂಶೋಧನೆಗಾಗಿ ಮೀನುಗಳಿಗೆ ಟ್ಯಾಗ್ ಮಾಡಿದ ಮೀನುಗಳು ಬಲೆಯಲ್ಲಿ ಸಿಕ್ಕಿದ್ದಲ್ಲಿ ಅಂತಹ ಮೀನುಗಳನ್ನು ಮತ್ತೆ ನೀರಿಗೆ ವಾಪಸ್ಸು ಬಿಡುವುದು ಅಥವಾ ಅಂತಹ ಮೀನುಗಳನ್ನು ತಾಲ್ಲೂಕು ಮೀನುಗಾರಿಕೆ ಅಧಿಕಾರಿಗೆ ಒಪ್ಪಿಸತಕ್ಕದ್ದು.

20. ಮೀನುಗಳ ಸಂರಕ್ಷಣೆಗಾಗಿ "ಮತ್ಸ್ಯಧಾಮ" ಗಳೆಂದು ಗುರುತಿಸಿದ ಸ್ಥಳಗಳಲ್ಲಿ ಕಡ್ಡಾಯವಾಗಿ ಮೀನುಗಾರಿಕೆಯನ್ನು ಪೂರ್ಣವಾಗಿ ನಿಷೇಧಿಸಿದೆ. ಮತ್ಸ್ಯಧಾಮಗಳಲ್ಲಿ ಪರವಾನಗಿದಾರರು ಮೀನುಗಾರಿಕೆ ಮಾಡಿದ್ದಲ್ಲಿ ಅಂತಹ ಪರವಾನಗಿಯನ್ನು ತಕ್ಷಣದಿಂದ ರದ್ದುಗೊಳಿಸುವುದು ಹಾಗೂ ಅವರ ಹೆಸರನ್ನು ಕಪ್ಪುಪಟ್ಟಿಗೆ ಸೇರಿಸಿ ಮುಂದಿನ ಸಾಲುಗಳಿಗೆ ಪರವಾನಗಿಯನ್ನು ನಿರಾಕರಿಸುವುದು.

21. ಪರವಾನಗಿಯನ್ನು ವಿತರಿಸಿದ ಅಧಿಕಾರಿಯು ಪರವಾನಗಿಯನ್ನು ರದ್ದುಗೊಳಿಸುವ ಅಧಿಕಾರ ಹೊಂದಿರುತ್ತಾರೆ.

ಮೇಲಿನ ಯಾವುದೇ ನಿಯಮಗಳನ್ನು ಉಲ್ಲಂಘಿಸಿದಲ್ಲಿ ಪರವಾನಗಿಯನ್ನು ರದ್ದುಪಡಿಸುವ ಅಥವಾ ಮಾರ್ಪಾಡು ಮಾಡುವ ಅಧಿಕಾರ ಮೀನುಗಾರಿಕೆ ಇಲಾಖೆಗೆ ಇರುತ್ತದೆ.

ಜಿ.ಪಯಣ್ಣ

ಸರ್ಕಾರದ ಅಧೀನ ಕಾರ್ಯದರ್ಶಿ

ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ (ಮೀ)

ಆದೇಶ ಸಂಖ್ಯೆ:ಪಸಂಮೀ 125 ಮೀಇಇ 2013, ಬೆಂಗಳೂರು ದಿನಾಂಕ:21-02-2014ರ

ಅನುಬಂಧ-7

ವಿಲೇವಾರಿಯಾಗದ ಒಳನಾಡು ಜಲಸಂಪನ್ಮೂಲದ ಮೀನು ಪಾಶುವಾರು ಹಕ್ಕಿನ ವಿಲೇವಾರಿ ವಿನಾಯಿತಿ ಪಡೆಯಲು ಸಲ್ಲಿಸಬೇಕಾದ ಚೆಕ್‌ಲಿಸ್ಟ್ (ಪ್ರತಿ ಕೆರೆಗೆ ಪ್ರತ್ಯೇಕವಾದ ಚೆಕ್‌ಲಿಸ್ಟ್ ಸಲ್ಲಿಸುವುದು)

1	ಜಲಸಂಪನ್ಮೂಲದ ಹೆಸರು ಮತ್ತು ಪೂರ್ಣ ವಿಳಾಸ					
2	ಅ) ಅಚ್ಚುಕಟ್ಟು ಪ್ರದೇಶ (ಹೆ)					
	ಆ) ಜಲ ವಿಸ್ತೀರ್ಣ(ಹೆ)					
3	ಕಳೆದ 3 ವರ್ಷಗಳ ವಿಲೇವಾರಿ ವಿಧಾನ ಮತ್ತು ವರ್ಷವಾರು ಆದಾಯದ ವಿವರಗಳು	ವರ್ಷ	ವಿಧಾನ (ಗುತ್ತಿಗೆ /ಹರಾಜು) ವಿನಾಯಿತಿ	ಗುತ್ತಿಗೆದಾರರ ಹೆಸರು/ ವಿಳಾಸ	ಗುತ್ತಿಗೆ/ ಹರಾಜು ಮೊತ್ತ (ರೂ.ಗಳಲ್ಲಿ)	ಷರಾ
4	ಮೇಲಿನ ಅವಧಿಯಲ್ಲಿ ವಿಲೇ ವಿನಾಯಿತಿ ಪಡೆದಿದ್ದಲ್ಲಿ ಪ್ರತಿ ಲಗತ್ತಿಸಲಾಗಿದೆಯೇ?					
5	ಕೆರೆಯ ಸ್ಥಳ ಪರಿಶೀಲನಾ ವರದಿ (ಮಹಜರ್) ಲಗತ್ತಿಸಲಾಗಿದೆಯೇ?					
6	ಕೆರೆಯ ಛಾಯಾಚಿತ್ರ ಲಗತ್ತಿಸಲಾಗಿದೆಯೇ?					
7	ಗುತ್ತಿಗೆ/ಟೆಂಡರ್-ಕಂ-ಹರಾಜು/ಇಸ್ತಿಹಾರ್ ಪ್ರಕಟಣೆಯ ಪ್ರತಿ ಲಗತ್ತಿಸಲಾಗಿದೆಯೇ?					
8	ಹರಾಜು ಪಟ್ಟಿ (ಯಾರು ಹರಾಜಿನಲ್ಲಿ ಭಾಗವಹಿಸದಿರುವ ಬಗ್ಗೆ ದೃಢೀಕರಣದೊಂದಿಗೆ) ಲಗತ್ತಿಸಲಾಗಿದೆಯೇ?					
9	ತಾಲ್ಲೂಕು ಮಟ್ಟದ ಅಧಿಕಾರಿಯ ಶಿಫಾರಸ್ಸು					

ಮೀನುಗಾರಿಕೆ ಸಹಾಯಕ ನಿರ್ದೇಶಕರು(ಶ್ರೇಣಿ-2)

ತಾಲ್ಲೂಕು---------------------------

ಆದೇಶ ಸಂಖ್ಯೆ:ಪಸಂಮೀ 125 ಮೀಇಇ 2013, ಬೆಂಗಳೂರು ದಿನಾಂಕ:21-02-2014ರ

ಅನುಬಂಧ-8

ಕರ್ನಾಟಕ ಸರ್ಕಾರ

(ಮೀನುಗಾರಿಕೆ ಇಲಾಖೆ)

ಸಂ.

ಮೀನುಗಾರಿಕೆ ಸಹಾಯಕ ನಿರ್ದೇಶಕರು

(ಶ್ರೇಣಿ-2)ರವರ ಕಛೇರಿ,

ತಾಲ್ಲೂಕು, ಜಿಲ್ಲೆ,

ದಿನಾಂಕ

ಸರ್ಕಾರಿ ಸ್ವಾಮ್ಯದ ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕನ್ನು ಗುತ್ತಿಗೆ ಮುಖಾಂತರ ವಿಲೇವಾರಿ ಮಾಡುವ ಬಗ್ಗೆ ಪ್ರಕಟಣೆ

ಜಿಲ್ಲೆಯ ತಾಲ್ಲೂಕಿನ ಈ ಕೆಳಕಂಡ ಜಲ ಸಂಪನ್ಮೂಲಗಳ ಮೀನು ಪಾಶುವಾರು ಹಕ್ಕನ್ನು ನೇ ಮೀನುಗಾರಿಕೆ ಫಸಲಿ ವರ್ಷದಿಂದ ನೇ ಮೀನುಗಾರಿಕೆ ಫಸಲಿ ವರ್ಷದವರೆಗೆ (ಅಂದರೆ ದಿನಾಂಕ 01/07/ ರಿಂದ 30/06/ ರವರೆಗೆ) ಗರಿಷ್ಠ ಐದು (05) ವರ್ಷಗಳ ಅವಧಿಗೆ ಸರ್ಕಾರದ ನಿಯಮಗಳ ಮೇರೆಗೆ ಆಯಾ ಮೀನುಗಾರರ ಸಹಕಾರ ಸಂಘಕ್ಕೆ ಗುತ್ತಿಗೆ ನೀಡಲಾಗುವುದು.

ವಿಲೇವಾರಿ ಮಾಡಲು ಪ್ರಸ್ತಾಪಿಸಿರುವ ಸರ್ಕಾರಿ ಜಲಸಂಪನ್ಮೂಲಗಳ (ಕೆರೆ, ಜಲಾಶಯದ) ವಿವರಗಳು

ಕ್ರ.ಸಂ.	ಜಲಸಂಪನ್ಮೂಲದ ಹೆಸರು	ಗ್ರಾಮ / ಹೋಬಳಿ	ಜಲವಿಸ್ತೀರ್ಣ/ಅಚ್ಚುಕಟ್ಟು ಪ್ರದೇಶ (ಹೆಕ್ಟೇರುಗಳಲ್ಲಿ)	ಗುತ್ತಿಗೆ ಮೊತ್ತ (ರೂ.ಗಳಲ್ಲಿ)	ಭದ್ರತಾ ಠೇವಣಿ ಮೊತ್ತ (ರೂ.ಗಳಲ್ಲಿ)
1	2	3	4	5	6

ಮೇಲ್ಕಂಡ ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕನ್ನು (ಅನುಬಂಧ-10) ಪಡೆಯಲಿಚ್ಛಿಸುವ ಅರ್ಹ ಮೀನುಗಾರರ ಸಹಕಾರ ಸಂಘ ಮಾತ್ರ ನಿಗದಿತ ನಮೂನೆಯಲ್ಲಿ ಅರ್ಜಿಯನ್ನು ದಿನಾಂಕ 20/05/——ರೊಳಗಾಗಿ ಕಛೇರಿ ವೇಳೆಯಲ್ಲಿ ಈ ಕಛೇರಿಗೆ ಸಲ್ಲಿಸತಕ್ಕದ್ದು. ನಿಗದಿತ ಅವಧಿಯ ನಂತರ ಸಲ್ಲಿಸುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

ಗುತ್ತಿಗೆ ಪಡೆಯಲು ಸಲ್ಲಿಸಬೇಕಾದ ಅರ್ಜಿ (ಅನುಬಂಧ-9) ಷರತ್ತು ಮತ್ತು ನಿಬಂಧನೆಗಳು (ಅನುಬಂಧ-11) ಮತ್ತು ಗುತ್ತಿಗೆದಾರರು ಬರೆದುಕೊಡಬೇಕಾದ ಗುತ್ತಿಗೆ ಕರಾರಿನ ಮುಚ್ಚಳಿಕೆ ಪತ್ರದ (ಅನುಬಂಧ-10)ರ ಪ್ರತಿಗಳನ್ನು ಕಛೇರಿಯ ವೇಳೆಯಲ್ಲಿ ಪಡೆಯಬಹುದು.

ಸಹಿ/-

ಮೀನುಗಾರಿಕೆ ಸಹಾಯಕ ನಿರ್ದೇಶಕರು(ಶ್ರೇಣಿ-2).

——————————ತಾಲ್ಲೂಕು

ಆದೇಶ ಸಂಖ್ಯೆ:ಪಸಂಮೀ 125 ಮೀಇಇ 2013, ಬೆಂಗಳೂರು ದಿನಾಂಕ:21-02-2014ರ

ಅನುಬಂಧ-9

(ಮೀನುಗಾರಿಕೆ ಇಲಾಖೆ)

ಮೀನುಗಾರಿಕೆ ಇಲಾಖೆಯ ಪ್ರಕಟಣೆ ಸಂಖ್ಯೆ .... ದಿನಾಂಕ .... ರಂತೆ ....

ಜಲಸಂಪನ್ಮೂಲದ ಮೀನು ಪಾಶುವಾರು ಹಕ್ಕನ್ನು ಗುತ್ತಿಗೆಗೆ ಪಡೆಯಲು ಅರ್ಜಿ

ಮೀನುಗಾರರ ಸಹಕಾರ ಸಂಘಗಳಿಂದ ನೀಡಬೇಕಾದ ಮಾಹಿತಿ

1	ಮೀನುಗಾರರ ಸಂಘದ ಹೆಸರು ಮತ್ತು ಪೂರ್ಣ ವಿಳಾಸ	
2	ಮೀನುಗಾರರ ಸಹಕಾರ ಸಂಘದ ನೋಂದಣಿ ಸಂಖ್ಯೆ ಮತ್ತು ದಿನಾಂಕ (ನೋಂದಣಿ ಪ್ರಮಾಣ ಪತ್ರದ ಜೆರಾಕ್ಸ್ ಪ್ರತಿಯನ್ನು ಲಗತ್ತಿಸುವುದು)	
3	ಮೀನುಗಾರರ ಸಹಕಾರ ಸಂಘದ ಅಧಿಕೃತ ಬೈಲಾ ಪ್ರತಿ (ಲಗತ್ತಿಸುವುದು)	
4	ಸಂಘದ ಕಾರ್ಯಕ್ಷೇತ್ರ	
5	ಸಂಘದ ಆಡಳಿತ ಮಂಡಳಿಯ ಸದಸ್ಯರ ಪಟ್ಟಿ ಲಗತ್ತಿಸಲಾಗಿದೆಯೇ? (ಅರ್ಜಿ ಸಲ್ಲಿಸುವ ದಿನಾಂಕ ದಂದಿನಂತೆ ಆಡಳಿತ ಮಂಡಳಿಯ ಸದಸ್ಯರ ಹೆಸರು, ಪೂರ್ಣ ವಿಳಾಸ, ವಯಸ್ಸು, ವೃತ್ತಿ, ಇತ್ಯಾದಿ ವಿವರಗಳನ್ನೊಳಗೊಂಡ ಪಟ್ಟಿಯನ್ನು ಲಗತ್ತಿಸುವುದು)	
6	ಸಂಘ ಈ ಹಿಂದೆ ಗುತ್ತಿಗೆಗೆ ಪಡೆದಿದ್ದ ಜಲ ಸಂಪನ್ಮೂಲಗಳ ವಿವರ ನೀಡುವುದು (ಅವುಗಳ ಪೈಕಿ ಪ್ರಸಕ್ತ ವರ್ಷದಲ್ಲಿ ಚಾಲ್ತಿಯಲ್ಲಿರುವ ಜಲಸಂಪನ್ಮೂಲಗಳ ಜಲವಿಸ್ತೀರ್ಣ, ಅಚ್ಚುಕಟ್ಟು ಪ್ರದೇಶ. ನೀಡತಕ್ಕದ್ದು).	
7	ಸಂಘದ ಕಳೆದ 5 ವರ್ಷಗಳ ಅವಧಿಯ ಯಾವುದಾದರೂ 3 ವರ್ಷಗಳ ಸಹಕಾರ ಇಲಾಖೆಯ ಲೆಕ್ಕ ಪರಿಶೋಧನಾ ವರದಿಯನ್ನು ಲಗತ್ತಿಸುವುದು.	
8	ಸಂಘದಿಂದ ಸರ್ಕಾರಕ್ಕೆ ಬರಬೇಕಾದ ಬಾಕಿ ವಿವರ ನೀಡುವುದು (ಸಾಲ ಮತ್ತು ಷೇರು ಬಂಡವಾಳದ ವಿವರಗಳು)	
9	ಸಂಘವು ಜಲಸಂಪನ್ಮೂಲದ ಗುತ್ತಿಗೆಗೆ ಕೋರಿರುವ ಆಡಳಿತ ಮಂಡಳಿಯ ನಡವಳಿಗಳ (ಠರಾವು) ದೃಢೀಕೃತ ಪ್ರತಿಯನ್ನು ಲಗತ್ತಿಸುವುದು	
10	ಜಲಸಂಪನ್ಮೂಲದ ಗುತ್ತಿಗೆ ಮೊತ್ತವನ್ನು ಮತ್ತು ಭದ್ರತಾ ಠೇವಣಿ ಮೊತ್ತವನ್ನು ಮುಂಗಡವಾಗಿ ಡಿ.ಡಿ. ಮುಖಾಂತರ ಪಾವತಿಸುವುದು. (ಡಿ.ಡಿ. ಸಂಖ್ಯೆ, ದಿನಾಂಕದ ವಿವರ ನೀಡುವುದು.	
11	ಸಂಘವು ಕೆರೆಗಳನ್ನು ಹಿಂದೆ ಗುತ್ತಿಗೆ ಪಡೆದಿದ್ದಲ್ಲಿ ಹಿಂದಿನ ಮೂರು ವರ್ಷಗಳ ಲಾಭ ಹಾಗೂ ನಷ್ಟದ ತ:ಖ್ತೆ ಲಗತ್ತಿಸುವುದು.	
12	ಸಂಘದ ಬ್ಯಾಂಕ್ ಖಾತೆಯ ಪಾಸ್‌ಬುಕ್‌ನ ದೃಢೀಕೃತ ಪ್ರತಿ ಲಗತ್ತಿಸುವುದು. (ಅರ್ಜಿ ಸಲ್ಲಿಸುವ ಕೊನೆಯ ದಿನಾಂಕದವರೆಗಿನ ಬ್ಯಾಂಕ್ ವಹಿವಾಟಿನ ವಿವರ ಸೇರಿದಂತೆ)	

ಮೇಲ್ಕಾಣಿಸಿದ ಜಲಸಂಪನ್ಮೂಲವನ್ನು ಗುತ್ತಿಗೆಗೆ ಪಡೆದಲ್ಲಿ ಸರ್ಕಾರದ / ಮೀನುಗಾರಿಕೆ ಇಲಾಖೆಯ ಎಲ್ಲಾ ಷರತ್ತು ಮತ್ತು ನಿಬಂಧನೆಗಳಿಗೆ ಬದ್ಧರಾಗಿರುತ್ತೇವೆಂದು / ನೆಂದು ಹಾಗೂ ಕಾಲಕಾಲಕ್ಕೆ ವಿಧಿಸಬಹುದಾದ ಹೆಚ್ಚುವರಿ ಷರತ್ತು ಮತ್ತು ನಿಬಂಧನೆಗಳಿಗೂ ಬದ್ಧರಾಗಿರುತ್ತೇವೆಂದು/ನೆಂದು ಮತ್ತು ನಿಗದಿತ ಮೌಲ್ಯದ ಛಾಪಾ ಕಾಗದದಲ್ಲಿ ಈ ಬಗ್ಗೆ ಮುಚ್ಚಳಿಕೆ ಪತ್ರವನ್ನು ಬರೆದುಕೊಡುತ್ತೇವೆಂದು/ನೆಂದು ತಿಳಿಸಬಯಸುತ್ತೇವೆ/ತ್ತೇನೆ.

ಸ್ಥಳ :

ದಿನಾಂಕ :

____

ಮೀನುಗಾರರ ಸಹಕಾರ ಸಂಘದ ~~ಅಧ್ಯಕ್ಷರು/~~

ಕಾರ್ಯದರ್ಶಿಯ ಸಹಿ

____

ಹೆಸರು

ಮೊಹರು:- ವಿಳಾಸ

____

____

ಆದೇಶ ಸಂಖ್ಯೆ:ಪಸಂಮೀ 125 ಮೀಇಇ 2013, ಬೆಂಗಳೂರು ದಿನಾಂಕ:21-02-2014ರ

ಅನುಬಂಧ-10

(ಮೀನುಗಾರಿಕೆ ಇಲಾಖೆ)

ಸರ್ಕಾರಿ ಜಲಸಂಪನ್ಮೂಲದ ಮೀನು ಪಾಶುವಾರು ಹಕ್ಕನ್ನು ಗುತ್ತಿಗೆಗೆ ಪಡೆದ ಗುತ್ತಿಗೆದಾರರು ಛಾಪಾ ಕಾಗದದಲ್ಲಿ (ರೂ.200.00) ಬರೆದು ಕೊಡಬೇಕಾದ ಮುಚ್ಚಳಿಕೆಯ ಪತ್ರ (ನೋಟರೀಕರಿಸುವುದು)

ಸನ್ ಎರಡು ಸಾವಿರದ ....ನೇ ಇಸವಿ .... ಮಾಹೆಯ .... ದಿನಾಂಕದಂದು .... ಗ್ರಾಮಕ್ಕೆ ಸೇರಿದ .... ಜಲಸಂಪನ್ಮೂಲದ ಮೀನು ಪಾಶುವಾರು ಹಕ್ಕಿನ ಗುತ್ತಿಗೆಯನ್ನು ಪಡೆದು ಈ ದಿನ ಅಂದರೆ, ದಿನಾಂಕ .... ರಂದು ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ-2), ... ತಾಲ್ಲೂಕುರವರಿಗೆ.. ಎಂಬ ನಾನು / ....ಮೀನುಗಾರರ ಸಹಕಾರ ಸಂಘ .... ಎಂಬುವರು ಖುದ್ದಾಗಿ ಬರೆದುಕೊಟ್ಟ ಮುಚ್ಚಳಿಕೆ ಪತ್ರ.

ಈ ಮೇಲ್ಕಂಡ .... ಗ್ರಾಮದ .... ಜಲಸಂಪನ್ಮೂಲದಲ್ಲಿ ಮೀನು ಹಿಡಿಯುವ ಪಾಶುವಾರು ಹಕ್ಕನ್ನು ದಿನಾಂಕ .... ರಿಂದ .... ದಿನಾಂಕದವರೆಗೆ ನಾನು / ನಾವು ಗುತ್ತಿಗೆ ಮೂಲಕ ತೆಗೆದುಕೊಂಡಿದ್ದೇನೆ / ದ್ದೇವೆ. ಸದರಿ ಗುತ್ತಿಗೆಯ ಪ್ರಥಮ ವರ್ಷದ ಗುತ್ತಿಗೆ ಹಣದ ಬಾಬ್ತು ರೂ. /- ಗಳನ್ನು ಮತ್ತು ಇದಕ್ಕೆ ಸಂಬಂಧಪಟ್ಟ ಭದ್ರತಾ ಠೇವಣಿ ಮೊತ್ತ ರೂ......................ಗಳನ್ನು ಅಂದರೆ ಈ ರೀತಿಯಾಗಿ ಒಟ್ಟು ರೂ..............................ಗಳನ್ನು ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ-2), ... ರವರ ಕಛೇರಿಯಲ್ಲಿ .... ಬ್ಯಾಂಕಿನ ನಗದುಹುಂಡಿ (ಡಿ.ಡಿ.) ಸಂ. .... ದಿನಾಂಕ ....ರ ಮುಖಾಂತರ ಪಾವತಿ ಮಾಡಿ ರಸೀದಿಯನ್ನು ಪಡೆದಿರುತ್ತೇವೆ.

ಗುತ್ತಿಗೆಗೆ ಪಡೆಯಲಾದ .... ಜಲಸಂಪನ್ಮೂಲದಲ್ಲಿ ಮೀನು ಕೃಷಿ ಕೈಗೊಳ್ಳುವ ಪೂರ್ಣ ಗುತ್ತಿಗೆ ಅವಧಿಯಲ್ಲಿ ಈ ಸಂಬಂಧಿತವಾಗಿ ಸರ್ಕಾರದಿಂದ/ಮೀನುಗಾರಿಕೆ ಇಲಾಖೆಯಿಂದ ಈಗಾಗಲೇ ಸರ್ಕಾರದ ಆದೇಶ ಸಂಖ್ಯೆ ---------------- ದಿನಾಂಕ--------------ರ <u>ಅನುಬಂಧ-11ರಲ್ಲಿ(ಲಗತ್ತಿಸಿದೆ)</u> ವಿಧಿಸಿರುವ ಷರತ್ತು ಮತ್ತು ನಿಬಂಧನೆಗಳು / ಇನ್ನು ಮುಂದೆ ವಿಧಿಸಬಹುದಾದ ಎಲ್ಲಾ ಷರತ್ತು ಮತ್ತು ನಿಬಂಧನೆಗಳನ್ನು ಕಡ್ಡಾಯವಾಗಿ ಪಾಲಿಸಲು ನಾನು/ನಮ್ಮ ಸಂಘವು ಬದ್ಧವಾಗಿರುತ್ತೇವೆ. ಸದರಿ ಷರತ್ತು ಮತ್ತು ನಿಬಂಧನೆಗಳನ್ನು ಉಲ್ಲಂಘಿಸಿದಲ್ಲಿ ನಮ್ಮ ಸಂಘಕ್ಕೆ ನೀಡಿದ ಮೀನು ಪಾಶುವಾರು ಹಕ್ಕಿನ ಗುತ್ತಿಗೆ ಆದೇಶವನ್ನು ತಕ್ಷಣ ರದ್ದುಪಡಿಸಲು ನಮ್ಮ ಅಭ್ಯಂತರವಿರುವುದಿಲ್ಲ.

ಈ ಗುತ್ತಿಗೆ ಅವಧಿಯ ನಂತರ ಸದರಿ ಜಲಸಂಪನ್ಮೂಲದ ಮೀನು ಪಾಶುವಾರು ಹಕ್ಕು ನಮ್ಮ ಸಂಘಕ್ಕೆ ಇರುವುದಿಲ್ಲವೆಂದು ನಮಗೆ ಮನವರಿಕೆಯಾಗಿದೆ.

____

ಗುತ್ತಿಗೆದಾರರ ಸಹಿ

____

ಹೆಸರು ಮತ್ತು ಪದನಾಮ

____

ವಿಳಾಸ

ಸ್ಥಳ:-

ದಿನಾಂಕ :- ಮೊಹರು.

ಸಾಕ್ಷಿಗಳು:-

1) ಹೆಸರು, ಸಹಿ ಮತ್ತು ವಿಳಾಸ

2) ಹೆಸರು, ಸಹಿ ಮತ್ತು ವಿಳಾಸ

ಆದೇಶ ಸಂಖ್ಯೆ:ಪಸಂಮೀ 125 ಮೀಇಅ 2013, ಬೆಂಗಳೂರು ದಿನಾಂಕ:21-02-2014ರ

ಅನುಬಂಧ-11

ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕನ್ನು ಗುತ್ತಿಗೆಗೆ ಪಡೆದ ಗುತ್ತಿಗೆದಾರರು ಕಡ್ಡಾಯವಾಗಿ ಪಾಲಿಸಬೇಕಾದ ಷರತ್ತು ಮತ್ತು ನಿಬಂಧನೆಗಳು

1) ಸರ್ಕಾರಿ ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕಿನ ಗುತ್ತಿಗೆಯನ್ನು ಪಡೆಯಲು ಬಯಸುವ ಅರ್ಹ ಮೀನುಗಾರಿಕೆ ಸಹಕಾರಿ ಸಂಘಗಳು ಈ ಆದೇಶದ ಅನುಬಂಧ-1ರಲ್ಲಿನ ಅರ್ಹತೆಗಳನ್ನು ಹೊಂದಿರಬೇಕು. ಗುತ್ತಿಗೆಯನ್ನು ಪಡೆಯಲು ಬಯಸುವ ಮೀನುಗಾರಿಕೆ ಸಹಕಾರ ಸಂಘಗಳು ಆಡಳಿತ ಮಂಡಳಿಯ ನೋಟರೀಕರಿಸಿದ ಠರಾವು, ಕಳೆದ ಐದು ವರ್ಷಗಳ ಅವಧಿಯಲ್ಲಿ ಯಾವುದಾದರೂ ಮೂರು ವರ್ಷಗಳ ಸಹಕಾರ ಇಲಾಖೆ ನಡೆಸಿದ ಲೆಕ್ಕ ಪರಿಶೋಧನಾ ವರದಿ, ಬೈಲಾ ಪ್ರತಿ, ಈಗಾಗಲೇ ಮೀನುಗಾರಿಕೆ ಚಟುವಟಿಕೆಯನ್ನು ಕೈಗೊಂಡಿದ್ದಲ್ಲಿ ಕಳೆದ ಮೂರು ವರ್ಷಗಳ ಕೆರೆವಾರು ಮೀನುಮರಿಗಳ ಬಿತ್ತನೆ ವಿವರಗಳು, ಹಿಡುವಳಿ ವಿವರಗಳು ಮತ್ತು ಅದರಿಂದ ಬಂದ ಆದಾಯ ಇತ್ಯಾದಿ ವಿವರಗಳನ್ನೊಳಗೊಂಡ ಮಾಹಿತಿಯನ್ನು ಸಂಬಂಧಪಟ್ಟ ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ-2)ರವರಿಗೆ ಈ ಆದೇಶದ ಅನುಬಂಧ-9ರಲ್ಲಿ ನಿಗದಿಪಡಿಸಿದ ಅರ್ಜಿಯೊಂದಿಗೆ ಅಂತಿಮ ದಿನಾಂಕ ದೊಳಗೆ ತಪ್ಪದೇ ನೀಡತಕ್ಕದ್ದು. ಅಪೂರ್ಣ ಮಾಹಿತಿಯುಳ್ಳ ಅರ್ಜಿ ಮತ್ತು ಅವಶ್ಯಕವಿರುವ ಈ ಕೆಳಕಂಡ ದಾಖಲಾತಿಗಳನ್ನು ಸಲ್ಲಿಸದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

   ಅ) ಕರ್ನಾಟಕ ಸಹಕಾರಿ ಕಾಯ್ದೆಯನ್ವಯ ನಿಯಮಾನುಸಾರ ಆಡಳಿತ ಮಂಡಳಿಯ ಸಭೆಗಳನ್ನು ಮತ್ತು ಚುನಾವಣೆಯನ್ನು ನಡೆಸಿರಬೇಕು ಹಾಗೂ ಆಡಳಿತ ಮಂಡಳಿ ರಚನೆಯಾಗಿರುವ ಬಗ್ಗೆ ದಾಖಲಾತಿಗಳು.

   ಆ) ಸಂಘವು ಕಳೆದ 5 ವರ್ಷಗಳ ಅವಧಿಯಲ್ಲಿ ಯಾವುದಾದರೂ 3 ವರ್ಷಗಳ ಲೆಕ್ಕ ಪರಿಶೋಧನಾ ವರದಿ (ಸಹಕಾರ ಇಲಾಖೆ ನಡೆಸಿದ) ಮತ್ತು ಅವುಗಳ ಅನುಪಾಲನಾ ವರದಿ.

   ಇ) ಸಂಘದ ಆರ್ಥಿಕ ಸ್ಥಿತಿಯನ್ನು ದೃಢೀಕರಿಸಲು ಸಂಘದ ಬ್ಯಾಂಕ್ ಖಾತೆಯ ಪಾಸ್ ಪುಸ್ತಕದ ದೃಢೀಕೃತ ಪ್ರತಿ.

   ಈ) ಗುತ್ತಿಗೆ ಮೊತ್ತ + ಠೇವಣಿ ಮೊತ್ತದ ನಗದು ಹುಂಡಿ.

   ಉ) ಮೀನುಗಾರರ ಸಹಕಾರ ಸಂಘದ ನೋಂದಣಿ ಪತ್ರ, ಬೈಲಾ ಪ್ರತಿ ಮತ್ತು ಗುತ್ತಿಗೆಯನ್ನು ಕೋರಿರುವ ಆಡಳಿತ ಮಂಡಳಿಯ ನೋಟರೀಕರಿಸಿದ ಠರಾವು ಪ್ರತಿ.

2) ಮೀನು ಪಾಶುವಾರು ಹಕ್ಕಿನ ಗುತ್ತಿಗೆಯನ್ನು ಪಡೆಯಲು ಅರ್ಹತೆಯಿರುವ ನೋಂದಾಯಿತ ಮೀನುಗಾರಿಕೆ ಸಹಕಾರ ಸಂಘಗಳು ತಮ್ಮ ಕಾರ್ಯವ್ಯಾಪ್ತಿಯಲ್ಲಿರುವ ಗರಿಷ್ಠ 2 ಕೆರೆ ಅಥವಾ ಅನುಬಂಧ-2ರಲ್ಲಿ ಪಟ್ಟಿ ಮಾಡಿರುವ ಒಂದು ಜಲಾಶಯ (ಗರಿಷ್ಠ 300 ಹೆ. ಜಲವಿಸ್ತೀರ್ಣಕ್ಕೆ ಮೀರದಂತೆ) ಅಥವಾ 2 ನದಿ ಭಾಗಗಳ ಮೀನು ಪಾಶುವಾರು ಹಕ್ಕನ್ನು ಪಡೆಯಲು ಮಾತ್ರ ಅರ್ಹತೆಯನ್ನು ಹೊಂದಿರುತ್ತವೆ.

3) ಹೊಸದಾಗಿ ನೋಂದಾಯಿಸಲ್ಪಟ್ಟ ಮೀನುಗಾರಿಕೆ ಸಹಕಾರ ಸಂಘಗಳು ನೋಂದಾಯಿಸಲ್ಪಟ್ಟ ದಿನಾಂಕದಿಂದ ಒಂದು ವರ್ಷದ ನಂತರವೇ ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕನ್ನು ಪಡೆಯಲು ಅರ್ಹತೆಯನ್ನು ಹೊಂದಿರುತ್ತವೆ.

4) ಜಲಸಂಪನ್ಮೂಲದ ಒಟ್ಟು ಜಲವಿಸ್ತೀರ್ಣದ ಶೇಕಡ 50ರಷ್ಟು ಜಲವಿಸ್ತೀರ್ಣವನ್ನು ಉಪಯುಕ್ತತಾ ಜಲವಿಸ್ತೀರ್ಣ ಪ್ರದೇಶವೆಂದು ಗಣನೆಗೆ ತೆಗೆದುಕೊಂಡು, ಈ ರೀತಿ ಗಣನೆಗೆ ತೆಗೆದುಕೊಂಡ ಜಲವಿಸ್ತೀರ್ಣಕ್ಕೆ ಪ್ರತಿ ಹೆಕ್ಟೇರಿಗೆ ರೂ.500-00ರಂತೆ ಬರುವ ಮೊತ್ತ ಅಥವಾ ಹಿಂದಿನ ಮೂರು ವರ್ಷಗಳ ಸರಾಸರಿ ಆದಾಯ ಇವೆರಡರಲ್ಲಿ ಯಾವುದು ಹೆಚ್ಚೋ ಅದನ್ನು ಪ್ರಥಮ ವರ್ಷದ ಗುತ್ತಿಗೆ ಮೊತ್ತವೆಂದು ನಿಗಧಿಪಡಿಸಲಾಗುವುದು. ಈ ರೀತಿ ನಿಗದಿಪಡಿಸಿದ ಗುತ್ತಿಗೆ ಮೊತ್ತಕ್ಕೆ ಉಳಿದ ನಾಲ್ಕು ವರ್ಷಗಳ ಗುತ್ತಿಗೆ ಅವಧಿಯಲ್ಲಿ ಪ್ರತಿವರ್ಷ ಹಿಂದಿನ ವರ್ಷದ ಗುತ್ತಿಗೆ ಮೊತ್ತಕ್ಕೆ ಶೇಕಡ 5ರಂತೆ ಹೆಚ್ಚಿಸಿ ಗುತ್ತಿಗೆ ಮೊತ್ತವನ್ನು ನಿಗದಿಪಡಿಸಲಾಗುವುದು.

5) ಗುತ್ತಿಗೆದಾರರು ಜಲಸಂಪನ್ಮೂಲದ ಗುತ್ತಿಗೆ ಮೊತ್ತದ ಶೇಕಡ 25ರಷ್ಟು ಹಣವನ್ನು ಭದ್ರತಾ ಠೇವಣಿಯಾಗಿ ಮೊದಲನೆಯ ವರ್ಷದ ಗುತ್ತಿಗೆ ಮೊತ್ತದೊಂದಿಗೆ ಡಿ.ಡಿ. ಮುಖಾಂತರ ಪಾವತಿಸತಕ್ಕದ್ದು. ಯಾವುದೇ ಷರತ್ತಿನ ಅಥವಾ ನಿಬಂಧನೆಯ ಉಲ್ಲಂಘನೆಯಾದಲ್ಲಿ ಸದರಿ ಭದ್ರತಾ ಠೇವಣಿ ಹಣವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ಇಲ್ಲದಿದ್ದಲ್ಲಿ ಈ ಠೇವಣಿ ಹಣವನ್ನು ಬಡ್ಡಿರಹಿತವಾಗಿ ಗುತ್ತಿಗೆ ಅವಧಿಯು ಮುಗಿದ ನಂತರ ಗುತ್ತಿಗೆದಾರರಿಗೆ ಹಿಂದಿರುಗಿಸಲಾಗುವುದು.

6) ಗುತ್ತಿಗೆ ಪಡೆಯಲು ಬಯಸಿದ ಮೀನುಗಾರರ ಸಹಕಾರ ಸಂಘದವರು ಜಲಸಂಪನ್ಮೂಲದ ಮೀನು ಪಾಶುವಾರು ಹಕ್ಕಿನ ಮೊದಲನೇ ವರ್ಷದ ಗುತ್ತಿಗೆ ಹಣ ಮತ್ತು ಭದ್ರತಾ ಠೇವಣಿಯನ್ನು ಅರ್ಜಿಯೊಂದಿಗೆ ಮುಂಗಡವಾಗಿ ನಗದು ಹುಂಡಿ ಮುಖಾಂತರ ಸಂಬಂಧಪಟ್ಟ ತಾಲ್ಲೂಕು ಮೀನುಗಾರಿಕೆ ಅಧಿಕಾರಿಗೆ ನೀಡಿ, ತಾತ್ಕಾಲಿಕ ರಸೀದಿಯನ್ನು ಪಡೆಯತಕ್ಕದ್ದು. ಜಲಸಂಪನ್ಮೂಲಗಳ ಗುತ್ತಿಗೆಯು ಸಕ್ಷಮ ಪ್ರಾಧಿಕಾರದ ಮಂಜೂರಾತಿಗೆ ಒಳಪಟ್ಟಿರುವುದರಿಂದ, ಮುಂಗಡವಾಗಿ ಪಾವತಿಸಿದ ಬಾಬ್ತು ಯಾವುದೇ ಕಾರಣಕ್ಕೂ ಮೊದಲನೇ ವರ್ಷದ ಗುತ್ತಿಗೆ ಹಣವೆಂದು ಭಾವಿಸಿ ಮೀನು ಪಾಶುವಾರು ಹಕ್ಕನ್ನು ಹೊಂದಲು ಬರುವುದಿಲ್ಲ.

7) ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕಿನ ಗುತ್ತಿಗೆ ಆದೇಶವನ್ನು ಹೊರಡಿಸಿದ ದಿನಾಂಕವನ್ನು ಗಣನೆಗೆ ತೆಗೆದುಕೊಳ್ಳದೆ ಮೀನು ಪಾಶುವಾರು ಹಕ್ಕಿನ ಅವಧಿಯು ಪ್ರತಿವರ್ಷ ಜುಲೈ 1 ರಿಂದ ಮುಂದಿನ ವರ್ಷದ ಜೂನ್ 30ರವರೆಗೆ ಮಾತ್ರ ಇರುತ್ತದೆ.

8) ಗುತ್ತಿಗೆದಾರರು ಗುತ್ತಿಗೆ ಅವಧಿಯ ಪ್ರತಿ ಮೀನುಗಾರಿಕೆ ಫಸಲಿ ವರ್ಷದ ಪ್ರಾರಂಭದಲ್ಲಿ ಅಂದರೆ ಏಪ್ರಿಲ್ 30ರೊಳಗಾಗಿ ಪೂರ್ಣ ಗುತ್ತಿಗೆ ಮೊತ್ತವನ್ನು ಪಾವತಿ ಮಾಡಿ ಮೀನು ಪಾಶುವಾರು ಹಕ್ಕಿನ ಗುತ್ತಿಗೆಯನ್ನು ನವೀಕರಿಸಿಕೊಳ್ಳತಕ್ಕದ್ದು. ತಪ್ಪಿದ್ದಲ್ಲಿ ಗುತ್ತಿಗೆ ಆದೇಶವನ್ನು ರದ್ದುಗೊಳಿಸಲಾಗುವುದು.

9) ಗುತ್ತಿಗೆ ಪಡೆದ ಜಲಸಂಪನ್ಮೂಲದ ಮೀನು ಪಾಶುವಾರು ಹಕ್ಕನ್ನು ಗುತ್ತಿಗೆದಾರರು ಯಾವುದೇ ಕಾರಣಕ್ಕೂ ವರ್ಗಾಯಿಸತಕ್ಕದ್ದಲ್ಲ ಅಥವಾ ಉಪಗುತ್ತಿಗೆ ನೀಡತಕ್ಕದ್ದಲ್ಲ. ಒಂದು ಪಕ್ಷ ವರ್ಗಾಯಿಸಿದ್ದಲ್ಲಿ ಅಥವಾ ಉಪಗುತ್ತಿಗೆ ನೀಡಿರುವುದು ದಾಖಲೆಗಳಿಂದ ದೃಢಪಟ್ಟಲ್ಲಿ, ಗುತ್ತಿಗೆ ಆದೇಶವನ್ನು ನೀಡಿದ ಸಕ್ಷಮ ಪ್ರಾಧಿಕಾರ ರದ್ದುಗೊಳಿಸುವ ಅಧಿಕಾರವನ್ನು ಹೊಂದಿರುತ್ತಾರೆ.

10) ಗುತ್ತಿಗೆದಾರರು ಪಡೆದ ಜಲಸಂಪನ್ಮೂಲಗಳಲ್ಲಿ ಪ್ರತಿ ಹೆಕ್ಟೇರ್ ಉಪಯುಕ್ತತಾ ಜಲವಿಸ್ತೀರ್ಣಕ್ಕೆ ಕನಿಷ್ಠ 2000 ಬಲಿತ ಬಿತ್ತನೆ ಮೀನುಮರಿಗಳನ್ನು ಬಿತ್ತನೆ ಮಾಡತಕ್ಕದ್ದು. ಮೀನುಗಾರಿಕೆ ಇಲಾಖೆಯು ಅನುಮೋದಿಸಿರುವ ತಳಿಯ ಮೀನುಮರಿಗಳನ್ನು ಮಾತ್ರ ಮೀನುಗಾರಿಕೆ ಇಲಾಖೆಯಿಂದಾಗಲಿ ಅಥವಾ ಮೀನುಗಾರಿಕೆ ಇಲಾಖೆಯಿಂದ ಅನುಮೋದಿಸಲ್ಪಟ್ಟ ಮೀನುಮರಿ ಉತ್ಪಾದನಾ / ಪಾಲನಾ ಕೇಂದ್ರಗಳಿಂದಾಗಲಿ ಖರೀದಿಸಿದ ನಂತರ ಇಲಾಖಾ ಅಧಿಕಾರಿಗಳ ಸಮ್ಮುಖದಲ್ಲಿಯೇ ಬಿತ್ತನೆ ಮಾಡತಕ್ಕದ್ದು. ರಾಜ್ಯದಲ್ಲಿ ಬಿತ್ತನೆ ಮೀನುಮರಿಗಳು ಲಭ್ಯವಿಲ್ಲದಿದ್ದಲ್ಲಿ ಹೊರರಾಜ್ಯಗಳಿಂದ ಮೀನುಮರಿ ಪಡೆಯಲು ಸಂಬಂಧಪಟ್ಟ ತಾಲ್ಲೂಕಿನ ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ-2)ರವರ ಅನುಮತಿ ಪಡೆದು ಆಮದು ಮಾಡಿಕೊಂಡು ಅವರ ಸಮ್ಮುಖದಲ್ಲಿಯೇ ಬಿತ್ತನೆ ಮಾಡತಕ್ಕದ್ದು. ಮೀನುಮರಿಗಳನ್ನು ಬಿತ್ತನೆ ಮಾಡಿರುವ ಬಗ್ಗೆ ಪ್ರತಿವರ್ಷ ಫೋಟೋ ದೃಢೀಕರಣವನ್ನು ಗುತ್ತಿಗೆದಾರರು ತಾಲ್ಲೂಕು ಮಟ್ಟದ ಮೀನುಗಾರಿಕಾ ಅಧಿಕಾರಿಗೆ ನೀಡಬೇಕು.

11) ಜಲಸಂಪನ್ಮೂಲದ ಮೀನು ಪಾಶುವಾರು ಹಕ್ಕನ್ನು ಗುತ್ತಿಗೆಗೆ ಪಡೆದ ಯಾವುದೇ ಗುತ್ತಿಗೆದಾರರು ನಿಷೇಧಿತ ಮೀನು ತಳಿಗಳಾದ ಪ್ರಮುಖವಾಗಿ ಆಫ್ರಿಕನ್ ಕ್ಯಾಟ್ ಫಿಶ್ (ಆಣೆ ಮೀನು), ಚೈನೀಸ್ ಬಿಗ್ ಹೆಡ್ ಮತ್ತು ಇತರೆ ನಿಷೇಧಿತ ಮೀನುಮರಿಗಳ ಬಿತ್ತನೆ ಮಾಡುವುದು ಅಥವಾ ಅಭಿವೃದ್ಧಿಪಡಿಸುವುದು ಅಥವಾ ಮಾರಾಟ ಮಾಡುವುದು ಕಂಡುಬಂದಲ್ಲಿ ಅವರಿಗೆ ನೀಡಲಾದ ಗುತ್ತಿಗೆಯನ್ನು ಕೂಡಲೇ ರದ್ದುಪಡಿಸಿ ಆ ಸಾಲಿನ ಗುತ್ತಿಗೆ ಮೊತ್ತವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದಲ್ಲದೇ ಸಂಬಂಧಪಟ್ಟ ಗುತ್ತಿಗೆದಾರರನ್ನು ಕಪ್ಪುಪಟ್ಟಿಗೆ ಸೇರ್ಪಡಿಸಿ ಅವರಿಗೆ ಮೀನುಗಾರಿಕೆ ಇಲಾಖೆಯಿಂದ ಯಾವುದೇ ಜಲಸಂಪನ್ಮೂಲದ ಮೀನು ಪಾಶುವಾರು ಹಕ್ಕನ್ನು ಮುಂದಕ್ಕೆ ನೀಡಲಾಗುವುದಿಲ್ಲ.

12) ಗುತ್ತಿಗೆದಾರರು ಗುತ್ತಿಗೆ ಪಡೆದ ಜಲಸಂಪನ್ಮೂಲದಲ್ಲಿ ಮೀನನ್ನು ಹಿಡಿಯುವಾಗ ಸದರಿ ಜಲಸಂಪನ್ಮೂಲದ ಕಟ್ಟೆ, ಏರಿ, ತೂಬು ಮುಂತಾದವುಗಳಿಗೆ ಯಾವುದೇ ರೀತಿಯ ಹಾನಿ ಉಂಟಾಗದಂತೆ ನೋಡಿಕೊಳ್ಳತಕ್ಕದ್ದು. ಹಾನಿ ಉಂಟಾದಲ್ಲಿ ಅಂತಹ ನಷ್ಟಕ್ಕೆ ಅವರನ್ನೇ ಜವಾಬ್ದಾರರನ್ನಾಗಿ ಮಾಡಲಾಗುವುದು.

13) ಗುತ್ತಿಗೆ ಪಡೆದ ಜಲಸಂಪನ್ಮೂಲಗಳಲ್ಲಿ ಗುತ್ತಿಗೆದಾರರು ಸಿಡಿಮದ್ದಿನ ರಾಸಾಯನಿಕ ವಸ್ತುಗಳ ಅಥವಾ ವಿಷದ ಪ್ರಯೋಗವನ್ನಾಗಲಿ ಮಾಡಿ ಮೀನು ಹಿಡಿಯತಕ್ಕದ್ದಲ್ಲ. ಈ ನಿಬಂಧನೆಯನ್ನು ಉಲ್ಲಂಘಿಸಿದ ಗುತ್ತಿಗೆದಾರರ ಗುತ್ತಿಗೆಯನ್ನು ತಕ್ಷಣದಿಂದ ರದ್ದುಪಡಿಸಲಾಗುವುದು.

14) ಮೀನುಗಾರಿಕೆ ಇಲಾಖೆಯ ವ್ಯಾಪ್ತಿಯಲ್ಲಿನ ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕನ್ನು ಗುತ್ತಿಗೆಗೆ ಪಡೆದ ಮೀನುಗಾರರ ಸಹಕಾರ ಸಂಘಗಳ ಲೆಕ್ಕಪತ್ರಗಳನ್ನು ಮೀನುಗಾರಿಕೆ ಅಧಿಕಾರಿಗಳು ಪರಿಶೋಧನೆ ಮಾಡುವ ಅಧಿಕಾರವನ್ನು ಹೊಂದಿರುತ್ತಾರೆ.

15) ಗುತ್ತಿಗೆದಾರರ ಜಲಸಂಪನ್ಮೂಲಗಳಲ್ಲಿ ಪಂಜರಗಳಲ್ಲಿ ಮೀನುಮರಿಗಳನ್ನು ಸಾಕುವ ಹಕ್ಕು ಮೀನುಗಾರಿಕೆ ಇಲಾಖೆಗೆ ಇರುತ್ತದೆ. ಅಲ್ಲದೇ ಸದರಿ ಜಲಸಂಪನ್ಮೂಲಗಳಲ್ಲಿ ಮೀನುಗಾರಿಕೆ ಸಂಶೋಧನೆ ಮತ್ತು ವಿಸ್ತರಣೆ ಸಂಬಂಧಪಟ್ಟ ಚಟುವಟಿಕೆಗಳನ್ನು ಕೈಗೊಳ್ಳುವ ಹಕ್ಕು ಮೀನುಗಾರಿಕೆ ಇಲಾಖೆಗೆ ಇರುತ್ತದೆ.

16) ಗುತ್ತಿಗೆದಾರರು ಗುತ್ತಿಗೆ ಪಡೆದ ಜಲಸಂಪನ್ಮೂಲದಲ್ಲಿ ಮೀನು ಹಿಡಿಯುವ ಮೀನುಗಾರರಿಗೆ ಜೀವ ರಕ್ಷಣಾ ಹೊದಿಕೆ (ಲೈಫ್ ಜಾಕೆಟ್) ಮತ್ತು ಜೀವ ವಿಮಾ ಸೌಲಭ್ಯಗಳನ್ನು ಕಡ್ಡಾಯವಾಗಿ ಒದಗಿಸಬೇಕು.

17) ಗುತ್ತಿಗೆದಾರರು ಮೇಲಿನ ಯಾವುದೇ ಷರತ್ತು ಅಥವಾ ನಿಬಂಧನೆಯನ್ನು ಉಲ್ಲಂಘಿಸಿದಲ್ಲಿ ಗುತ್ತಿಗೆಗೆ ಪಡೆಯಲಾದ ಜಲಸಂಪನ್ಮೂಲದ ಮೀನು ಪಾಶುವಾರು ಹಕ್ಕಿನ ಗುತ್ತಿಗೆ ಆದೇಶವನ್ನು ರದ್ದುಪಡಿಸಲಾಗುವುದು.

18) ಸಾರ್ವಜನಿಕ ಹಿತದೃಷ್ಟಿಯಿಂದ ಮೀನುಗಾರರ ಸಹಕಾರ ಸಂಘಗಳಿಗೆ ನೀಡಿದ ಜಲಸಂಪನ್ಮೂಲಗಳ ಗುತ್ತಿಗೆ ಅವಧಿಯನ್ನು ಮೊಟಕುಗೊಳಿಸುವ ಅಥವಾ ರದ್ದುಗೊಳಿಸುವ ಅಧಿಕಾರ ಸರ್ಕಾರಕ್ಕಿರುತ್ತದೆ.

19) ಸರ್ಕಾರದಿಂದ/ಮೀನುಗಾರಿಕೆ ಇಲಾಖೆಯಿಂದ ಕಾಲಕಾಲಕ್ಕೆ ವಿಧಿಸಲ್ಪಡುವ ಅಥವಾ ಮಾರ್ಪಡಿಸಲಾಗುವ ಹೆಚ್ಚುವರಿ ಷರತ್ತು ಮತ್ತು ನಿಬಂಧನೆಗಳಿಗೆ ಗುತ್ತಿಗೆದಾರರು ಬದ್ಧರಾಗಿರತಕ್ಕದ್ದು.

ಗುತ್ತಿಗೆದಾರರ ಸಹಿ

ಸ್ಥಳ:-

ದಿನಾಂಕ

ಗುತ್ತಿಗೆದಾರರ ಹೆಸರು ಮತ್ತು ಪದನಾಮ

ವಿಳಾಸ

ಮೊಹರು

ಸಾಕ್ಷಿಗಳು

(1) ಸಹಿ, ಹೆಸರು, ಮತ್ತು ವಿಳಾಸ

(2) ಸಹಿ, ಹೆಸರು, ಮತ್ತು ವಿಳಾಸ

(ವಿ.ಸೂ. ರೂ.200-00 ಮೌಲ್ಯದ ಛಾಪಾ ಕಾಗದದಲ್ಲಿ ಗುತ್ತಿಗೆದಾರರು ಬರೆದುಕೊಡಬೇಕಾದ ಮುಚ್ಚಳಿಕೆ ಪತ್ರ)

ಆದೇಶ ಸಂಖ್ಯೆ:ಪಸಂಮೀ 125 ಮೀಇಇ 2013, ಬೆಂಗಳೂರು ದಿನಾಂಕ:21-02-2014ರ

ಅನುಬಂಧ-12

ಮೀನುಗಾರಿಕೆ ಇಲಾಖೆ

ಸಂ. ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ-2)ರವರ

ಕಛೇರಿ, ... ತಾಲ್ಲೂಕು, ...ಜಿಲ್ಲೆ,

ದಿನಾಂಕ

ಟೆಂಡರ್ ಮತ್ತು ಹರಾಜು ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ .... ಜಿಲ್ಲೆಯ .... ತಾಲ್ಲೂಕಿನ ಕೆಳಕಂಡ ಸರ್ಕಾರಿ ಜಲಸಂಪನ್ಮೂಲಗಳ (ಕೆರೆಗಳ, ಇತ್ಯಾದಿ) ಮೀನು ಪಾಶುವಾರು ಹಕ್ಕನ್ನು ....ನೇ ಮೀನುಗಾರಿಕೆ ಫಸಲಿ ವರ್ಷದಿಂದ ....ನೇ ಮೀನುಗಾರಿಕೆ ಫಸಲಿ ವರ್ಷದವರೆಗೆ (ಅಂದರೆ ದಿನಂಕ 01/07/ ರಿಂದ 30/06 ರವರೆಗೆ) ಒಟ್ಟು 5 (ಐದು) ವರ್ಷಗಳ ಅವಧಿಗೆ ಟೆಂಡರು ಮತ್ತು ಹರಾಜು ಮೂಲಕ ಈ ಕೆಳಗೆ ನಮೂದಿಸಿರುವ ದಿನಾಂಕದಂದು ಮತ್ತು ವೇಳೆಯಲ್ಲಿ ಸರ್ಕಾರದ ಮೀನುಗಾರಿಕೆ ಇಲಾಖೆಯ ಷರತ್ತು ಮತ್ತು ನಿಬಂಧನೆಗಳಿಗೊಳಪಟ್ಟಂತೆ ಈ ಕಛೇರಿಯಲ್ಲಿ ವಿಲೇವಾರಿ ಮಾಡಲಾಗುವುದು. ಸದರಿ ಟೆಂಡರು ಮತ್ತು ಹರಾಜಿನಲ್ಲಿ ಭಾಗವಹಿಸಲು ಆಸಕ್ತಿವುಳ್ಳವರು ನಿಗದಿತ ನಮೂನೆಯಲ್ಲಿ ಅರ್ಜಿಯನ್ನು ನಿಗದಿತ ದಿನಾಂಕ ಮತ್ತು ವೇಳೆಯೊಳಗಾಗಿ ಈ ಕಛೇರಿಗೆ ಸಲ್ಲಿಸತಕ್ಕದ್ದು. ಟೆಂಡರ್/ಹರಾಜಿನ ಅರ್ಜಿಗೆ ಲಗತ್ತಿಸಿರುವ ಷರತ್ತು ಮತ್ತು ನಿಬಂಧನೆಗಳನ್ನು ಕಡ್ಡಾಯವಾಗಿ ಪಾಲಿಸುವುದಾಗಿ ಯಶಸ್ವಿ ಟೆಂಡರ್‌ದಾರರು/ಬಿಡ್‌ದಾರರು ನಿಗದಿತ ನಮೂನೆಯಲ್ಲಿ ಮುಚ್ಚಳಿಕೆ ಪತ್ರವನ್ನು ಬರೆದು ಕೊಡತಕ್ಕದ್ದು.

ಮೀನು ಪಾಶುವಾರು ಹಕ್ಕನ್ನು ವಿಲೇವಾರಿ ಮಾಡಲು ಪ್ರಸ್ತಾಪಿಸಿರುವ ಜಲಸಂಪನ್ಮೂಲಗಳ ವಿವರಗಳು

ಕ್ರ. ಸಂ.	ಜಲಸಂಪನ್ಮೂಲದ ಹೆಸರು	ಗ್ರಾಮದ ಹೆಸರು	ಜಲ ವಿಸ್ತೀರ್ಣ/ ಅಚ್ಚುಕಟ್ಟು ಪ್ರದೇಶ (ಹೆಕ್ಟೇರುಗಳಲ್ಲಿ)	ಭದ್ರತಾ ಠೇವಣಿ ಮೊತ್ತ (ರೂ.)	ಸರ್ಕಾರಿ ಸವಾಲು ಮೊತ್ತ (ರೂ.)

ಟೆಂಡರ್ ಅರ್ಜಿಗಳನ್ನು ವಿತರಿಸುವ ದಿನಾಂಕ : (ದಿನಾಂಕ ಮತ್ತು ವೇಳೆ ನಮೂದಿಸುವುದು)

ಟೆಂಡರನ್ನು ಸಲ್ಲಿಸುವ ಕೊನೆಯ ದಿನಾಂಕ : (ದಿನಾಂಕ ಮತ್ತು ವೇಳೆ ನಮೂದಿಸುವುದು)

ಟೆಂಡರ್ ಅರ್ಜಿಗಳನ್ನು ತೆರೆಯುವ ಮತ್ತು
ಹರಾಜು ನಡೆಸುವ ದಿನಾಂಕ ಮತ್ತು ವೇಳೆ : (ದಿನಾಂಕ ಮತ್ತು ವೇಳೆ ನಮೂದಿಸುವುದು)

ಮೀನುಗಾರಿಕೆ ಸಹಾಯಕ ನಿರ್ದೇಶಕರು(ಶ್ರೇಣಿ-2)

.... ತಾಲ್ಲೂಕು

ಆದೇಶ ಸಂಖ್ಯೆ:ಪಸಂಮೀ 125 ಮೀಇಇ 2013, ಬೆಂಗಳೂರು ದಿನಾಂಕ:21-02-2014ರ

ಅನುಬಂಧ-13

ಮೀನುಗಾರಿಕೆ ಇಲಾಖೆ

ಟೆಂಡರ್ ಕ್ರ. ಸಂ. ಮೀನುಗಾರಿಕೆ ನಿರ್ದೇಶಕರು (ಶ್ರೇಣಿ-2) ಕಛೇರಿ,

ತಾಲ್ಲೂಕು,

ದಿನಾಂಕ:

"ಗೌಪ್ಯ"

ಸರ್ಕಾರಿ ಜಲಸಂಪನ್ಮೂಲದ ಮೀನು ಪಾಶುವಾರು ಹಕ್ಕನ್ನು ಪಡೆಯಲು ಟೆಂಡರ್ ಅರ್ಜಿ

.... ಜಿಲ್ಲೆಯ .... ತಾಲ್ಲೂಕಿನ .... ಜಲಸಂಪನ್ಮೂಲದ (ಕೆರೆ, ಇತ್ಯಾದಿ). ಮೀನು ಪಾಶುವಾರು ಹಕ್ಕನ್ನು ಗರಿಷ್ಠ 5 (ಐದು) ವರ್ಷಗಳ ಅವಧಿಗೆ (ದಿನಾಂಕ 01/07/ ರಿಂದ 30/06/ ರವರೆಗೆ) ಗುತ್ತಿಗೆಗೆ ಪಡೆಯಲು ಟೆಂಡರ್ ಅರ್ಜಿ.

ತಮ್ಮ ಕಛೇರಿಯ ಟೆಂಡರ್/ಹರಾಜು ಪ್ರಕಟಣೆ ಸಂ. .... ದಿನಾಂಕ ....ರ ಮೇರೆಗೆ ಈ ಕೆಳಗೆ ಸಹಿ ಮಾಡಿರುವ ನಾವು...................................... ಸದರಿ ಜಲಸಂಪನ್ಮೂಲದ ಮೀನು ಪಾಶುವಾರು ಹಕ್ಕನ್ನು ಪಡೆದುಕೊಳ್ಳಲು ಪ್ರಥಮ ವಾರ್ಷಿಕ ಗುತ್ತಿಗೆ ಮೊತ್ತ ರೂ. .... (ರೂಪಾಯಿ ....) ಮಾತ್ರಗಳನ್ನು ಪಾವತಿಸಲು ನಮಗೆ ಒಪ್ಪಿಗೆ ಇರುತ್ತದೆ. ಅದರಂತೆಯೇ ಇದರೊಂದಿಗೆ ಟೆಂಡರ್ ಠೇವಣಿ ರೂ. ....ಗಳ ನಗದು ಹುಂಡಿಯನ್ನು (..................... ಬ್ಯಾಂಕಿನ ಹುಂಡಿ ಸಂ. .... ದಿನಾಂಕ ....) ಲಗತ್ತಿಸಿರುತ್ತೇನೆ.

ಈ ಅರ್ಜಿಯೊಂದಿಗೆ ಲಗತ್ತಿಸಿರುವ ಎಲ್ಲಾ ಷರತ್ತು ಮತ್ತು ನಿಬಂಧನೆಗಳಿಗೆ ಹಾಗೂ ಸರ್ಕಾರವು / ಮೀನುಗಾರಿಕೆ ಇಲಾಖೆಯು ಕಾಲಕಾಲಕ್ಕೆ ವಿಧಿಸಬಹುದಾದ ಹೆಚ್ಚುವರಿ ಷರತ್ತು ಮತ್ತು ನಿಬಂಧನೆಗಳಿಗೆ ಬದ್ಧನಾಗಿರುತ್ತೇನೆಂದು/ವೆಂದು ಮತ್ತು ಟೆಂಡರ್ / ಹರಾಜಿನಲ್ಲಿ ಯಶಸ್ವಿಗೊಂಡಲ್ಲಿ ನಿಗದಿತ ಮೌಲ್ಯದ ಛಾಪಾಕಾಗದದಲ್ಲಿ ಮುಚ್ಚಳಿಕೆ ಪತ್ರವನ್ನು ಬರೆದು ಕೊಡಲು ಒಪ್ಪಿಗೆ ಇರುತ್ತವೆಂದು ತಿಳಿಸಬಯಸುತ್ತೇನೆ/ತ್ತೇವೆ.

ದಿನಾಂಕ (ಟೆಂಡರ್‌ದಾರರ ಸಹಿ)

ಸ್ಥಳ

ಹೆಸರು

ವಿಳಾಸ

ದೂರವಾಣಿ ಸಂಖ್ಯೆ------

(ವಿ.ಸೂ: ಅರ್ಜಿ ಶುಲ್ಕ ರೂ.100-00)

ಆದೇಶ ಸಂಖ್ಯೆ:ಪಸಂಮೀ 125 ಮೀಇಇ 2013, ಬೆಂಗಳೂರು ದಿನಾಂಕ:21-02-2014ರ

ಅನುಬಂಧ-14

ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕನ್ನು ಟೆಂಡರ್-ಕಂ-ಹರಾಜು ಮೂಲಕ ಗುತ್ತಿಗೆಗೆ ಪಡೆದ ಟೆಂಡರುದಾರರು/ಬಿಡ್‌ದಾರರು ಕಡ್ಡಾಯವಾಗಿ ತಿಳಿಯಬೇಕಾದ / ಪಾಲಿಸಬೇಕಾದ ಷರತ್ತು ಮತ್ತು ನಿಬಂಧನೆಗಳು

(1) ನಿಗದಿತ ಟೆಂಡರ್ ಅರ್ಜಿಯನ್ನು ಕಛೇರಿ ವೇಳೆಯಲ್ಲಿ ಟೆಂಡರ್ ಅರ್ಜಿ ಶುಲ್ಕ ರೂ.100-00ನ್ನು ಪಾವತಿಸಿ ಪಡೆಯತಕ್ಕದ್ದು. ಪ್ರತಿ ಜಲಸಂಪನ್ಮೂಲಕ್ಕೆ ಪ್ರತ್ಯೇಕ ಟೆಂಡರ್ ಅರ್ಜಿಯನ್ನು ಸಲ್ಲಿಸತಕ್ಕದ್ದು.

(2) ಟೆಂಡರ್ ಮತ್ತು ಹರಾಜಿನಲ್ಲಿ ಭಾಗವಹಿಸುವವರು ಆಯಾ ಜಲಸಂಪನ್ಮೂಲಗಳ ಮುಂದೆ ಸೂಚಿಸಿರುವ ಭದ್ರತಾ ಠೇವಣಿ ಹಣವನ್ನು ಪ್ರತ್ಯೇಕ ನಗದು ಹುಂಡಿಯ (ಡಿ.ಡಿ.) ಮೂಲಕ ಪಾವತಿಸತಕ್ಕದ್ದು. ಟೆಂಡರ್‌ನಲ್ಲಿ ಭಾಗವಹಿಸಿರುವವರು ಸಹ ಮತ್ತೆ ಭದ್ರತಾ ಠೇವಣಿ ಮೊತ್ತ ಪಾವತಿಸದೆ ಹರಾಜಿನಲ್ಲಿ ಭಾಗವಹಿಸಬಹುದು. ಆದರೆ, ಟೆಂಡರ್‌ನಲ್ಲಿ ಭಾಗವಹಿಸದೆ ಬರೀ ಹರಾಜಿನಲ್ಲಿ ಭಾಗವಹಿಸುವವರು ಹರಾಜು ಪ್ರಕ್ರಿಯೆ ಪ್ರಾರಂಭದ ಮುನ್ನ ಭದ್ರತಾ ಠೇವಣಿ ಮೊತ್ತವನ್ನು ನಗದು ಹುಂಡಿ (ಡಿ.ಡಿ.) ಮೂಲಕ ಮಾತ್ರ ಪಾವತಿಸಿ ಭಾಗವಹಿಸಬಹುದು.

(3) ಯಶಸ್ವಿ ಟೆಂಡರ್‌ದಾರರು/ಬಿಡ್‌ದಾರರು ಗುತ್ತಿಗೆಗೆ ಪಡೆದ ಜಲಸಂಪನ್ಮೂಲದ ಉಪಯುಕ್ತತಾ ಜಲವಿಸ್ತೀರ್ಣದ ಶೇ.15ರ ಭಾಗಕ್ಕೆ ಪ್ರತಿ ಹೆಕ್ಟೇರಿಗೆ ರೂ.500-00ರಂತೆ ಬಡ್ಡಿರಹಿತ ಭದ್ರತಾ ಠೇವಣಿ ಮೊತ್ತವನ್ನು ಸಂಬಂಧಪಟ್ಟ ತಾಲ್ಲೂಕು ಮೀನುಗಾರಿಕೆ ಅಧಿಕಾರಿಗೆ ಡಿ.ಡಿ. ಮುಖಾಂತರ ನೀಡತಕ್ಕದ್ದು. ಯಾವುದೇ ಷರತ್ತಿನ ಅಥವಾ ನಿಬಂಧನೆಯ ಉಲ್ಲಂಘನೆಯಾದಲ್ಲಿ ಸದರಿ ಭದ್ರತಾ ಠೇವಣಿ ಮೊತ್ತವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ಈ ಭದ್ರತಾ ಠೇವಣಿ ಮೊತ್ತವನ್ನು ಗುತ್ತಿಗೆ ಅವಧಿಯು ಮುಗಿದ ನಂತರ ಟೆಂಡರ್‌ದಾರರು/ಬಿಡ್‌ದಾರರಿಗೆ ಮರುಪಾವತಿಸಲಾಗುವುದು.

(4) ಭರ್ತಿ ಮಾಡಿದ ಟೆಂಡರ್ ಅರ್ಜಿಯನ್ನು ಮೊಹರು ಮಾಡಿದ ಲಕೋಟೆಯಲ್ಲಿಟ್ಟು ಭದ್ರತಾ ಠೇವಣಿ ಮೊಬಲಗಿನ ನಗದು ಹುಂಡಿಯನ್ನು (ಡಿ.ಡಿ.) ಪ್ರತ್ಯೇಕವಾಗಿ ಸಂಬಂಧಪಟ್ಟ ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ-2)ರವರಿಗೆ ನಿಗದಿತ ದಿನಾಂಕ/ವೇಳೆಯೊಳಗಾಗಿ (ಕಛೇರಿಯ ವೇಳೆಯಲ್ಲಿ) ಸಲ್ಲಿಸತಕ್ಕದ್ದು. ಟೆಂಡರನ್ನೊಳಗೊಂಡ ಮೊಹರಾದ ಲಕೋಟೆಯ ಮೇಲೆ "........................ ಕೆರೆಯ ಮೀನು ಪಾಶುವಾರು ಹಕ್ಕು ಪಡೆಯಲು ಟೆಂಡರು" ಎಂದು ಸ್ಪಷ್ಟವಾಗಿ ನಮೂದಿಸಿರತಕ್ಕದ್ದು.

(5) ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕನ್ನು ಟೆಂಡರ್ ಮತ್ತು ಹರಾಜು ಮೂಲಕ ಗರಿಷ್ಠ ಐದು (05) ವರ್ಷಗಳ ಅವಧಿಗೆ ವಿಲೇವಾರಿ ಮಾಡಲಾಗುವುದು.

(6) ಟೆಂಡರ್ ಮತ್ತು ಹರಾಜನ್ನು ನಡೆಸುವ ವಿಧಾನ:- ಮೊದಲು ಹರಾಜು ನಡೆಸಲಾಗುವುದು. ನಂತರ ಟೆಂಡರ್ ಅರ್ಜಿಗಳನ್ನು ತೆರೆಯಲಾಗುವುದು. ಟೆಂಡರ್‌ನಲ್ಲಿ ನಮೂದಿಸಿರುವ ಅತೀ ಹೆಚ್ಚಿನ ಮೊತ್ತ ಅಥವಾ ಹರಾಜಿನಲ್ಲಿ ಸೂಚಿಸಲಾಗುವ ಅತೀ ಹೆಚ್ಚಿನ ಬಿಡ್ ಮೊತ್ತ ಈ ಎರಡರಲ್ಲಿ ಯಾವುದು ಹೆಚ್ಚಿಗೆ ಇರುವುದೋ ಅದನ್ನು ಪ್ರಥಮ ವಾರ್ಷಿಕ ಗುತ್ತಿಗೆ ಮೊತ್ತವೆಂದು ಪರಿಗಣಿಸಲಾಗುವುದು. ಉಳಿದ ನಾಲ್ಕು ವರ್ಷಗಳಲ್ಲಿ ಪ್ರತಿವರ್ಷ ಹಿಂದಿನ ವರ್ಷದ ಗುತ್ತಿಗೆ ಮೊತ್ತಕ್ಕೆ ಶೇ.5ರಂತೆ ಹೆಚ್ಚಿಸಿ ನಿಗದಿಪಡಿಸಲಾಗುವುದು.

(7) ಟೆಂಡರ್/ಬಿಡ್ ಮೊತ್ತವು ಸರ್ಕಾರಿ ಸವಾಲಿಗಿಂತ ಕಡಿಮೆ ಇದ್ದಲ್ಲಿ, ಟೆಂಡರ್/ಹರಾಜನ್ನು ತಿರಸ್ಕರಿಸಿ ಮರು ಟೆಂಡರ್/ಹರಾಜಿನ ಮೂಲಕ ವಿಲೇವಾರಿ ಮಾಡಲು ಕ್ರಮ ತೆಗೆದುಕೊಳ್ಳಲಾಗುವುದು. 2ನೇ ಭಾರಿಯೂ ಸಹ ಅತ್ಯೈರಾದ ಬಿಡ್ ಮೊತ್ತ ಸರ್ಕಾರಿ ಸವಾಲಿಗಿಂತ ಕಡಿಮೆ ಇದ್ದಲ್ಲಿ ಟೆಂಡರು/ಹರಾಜನ್ನು ಮತ್ತೆ ರದ್ದುಗೊಳಿಸಿ 3ನೇ ಬಾರಿಗೆ ಮರು ವಿಲೇಗೊಳಿಸಲಾಗುವುದು. 3ನೇ ಬಾರಿಗೆ ಅತ್ಯೈರಾದ ಟೆಂಡರ್ / ಬಿಡ್ ಮೊತ್ತವನ್ನು ಒಪ್ಪಿಕೊಳ್ಳಲಾಗುವುದು.

(8) ಟೆಂಡರ್/ಹರಾಜು ಮುಗಿದ ಕೂಡಲೇ ಅತ್ಯೈರಾದ ಅತಿ ಹೆಚ್ಚಿನ ಟೆಂಡರ್/ಬಿಡ್ ಮೊತ್ತವನ್ನು ಯಶಸ್ವಿ ಟೆಂಡರುದಾರರು/ಬಿಡ್‌ದಾರರು ಹರಾಜು ಮಾಡಿದ ಸ್ಥಳದಲ್ಲೇ ಪಾವತಿ ಮಾಡಿ ಸಂಬಂಧಪಟ್ಟ ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ-2)ರವರಿಂದ ಅಧಿಕೃತ ರಸೀದಿಯನ್ನು ಪಡೆಯತಕ್ಕದ್ದು. ತಪ್ಪಿದಲ್ಲಿ ಸದರಿಯವರು ಟೆಂಡರ್-ಕಂ-ಹರಾಜಿನ ಬಗ್ಗೆ ನೀಡಿದ ಭದ್ರತಾ ಠೇವಣಿ ಮೊಬಲಗನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಎರಡನೇ ಅತಿ ಹೆಚ್ಚಿನ ಟೆಂಡರ್‌ದಾರರು/ಬಿಡ್‌ದಾರರು, ಮೊದಲನೇ ಟೆಂಡರುದಾರರು/ಬಿಡ್‌ದಾರರು ಸೂಚಿಸಿದ ಗರಿಷ್ಠ ಟೆಂಡರ್ ಅಥವಾ ಬಿಡ್ ಮೊತ್ತವನ್ನು ಸ್ಥಳದಲ್ಲಿಯೇ ಪಾವತಿಸಲು ಒಪ್ಪಿದಲ್ಲಿ ಮಾತ್ರ ಅವರ ಹೆಸರಿಗೆ ಸದರಿ ಜಲಸಂಪನ್ಮೂಲದ ಮೀನು ಪಾಶುವಾರು ಹಕ್ಕನ್ನು ನೀಡಲು ಪರಿಗಣಿಸಲಾಗುವುದು. ಒಂದು ವೇಳೆ ಎರಡನೇ ಅತೀ ಹೆಚ್ಚು ಮೊತ್ತವನ್ನು ಸೂಚಿಸಿದ ಟೆಂಡರ್‌ದಾರರು/ಬಿಡ್‌ದಾರರು ಕೂಡ ಇದಕ್ಕೆ ಒಪ್ಪದಿದ್ದ ಪಕ್ಷದಲ್ಲಿ ಸದರಿ ಜಲಸಂಪನ್ಮೂಲದ ಮೀನು ಪಾಶುವಾರು ಹಕ್ಕನ್ನು ಮರು ಟೆಂಡರ್ ಮತ್ತು ಹರಾಜು ಮೂಲಕ ವಿಲೇವಾರಿ ಮಾಡಲು ಕ್ರಮ ಕೈಗೊಳ್ಳಲಾಗುವುದು.

(9) ಟೆಂಡರ್/ಹರಾಜಿನಲ್ಲಿ ಯಶಸ್ವಿಯಾದ ಟೆಂಡರುದಾರರು/ಬಿಡ್ಡುದಾರರು ಚಾಲ್ತಿಯಲ್ಲಿರುವ ಇಲಾಖಾ ಷರತ್ತು ಮತ್ತು ನಿಬಂಧನೆಗಳಿಗೆ ಹಾಗೂ ಈ ದಿಸೆಯಲ್ಲಿ ಸರ್ಕಾರವು/ಮೀನುಗಾರಿಕೆ ಇಲಾಖೆಯು ಕಾಲಕಾಲಕ್ಕೆ ವಿಧಿಸಬಹುದಾದ ಹೆಚ್ಚುವರಿ ಷರತ್ತು ಮತ್ತು ನಿಬಂಧನೆಗಳಿಗೆ ಬದ್ಧರಾಗಿರುವುದಾಗಿ ರೂ.200.00 ಮೌಲ್ಯದ ಛಾಪಾಕಾಗದದಲ್ಲಿ ನಿಗದಿತ ಮುಚ್ಚಳಿಕೆ ಪತ್ರವನ್ನು <u>(ಅನುಬಂಧ-15)</u> ಬರೆದುಕೊಟ್ಟು ಸಂಬಂಧಪಟ್ಟ ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ-2)ರವರಿಂದ ವಿಲೇವಾರಿ ದೃಢೀಕರಣ ಪತ್ರ ಪಡೆಯತಕ್ಕದ್ದು.

(10) ಟೆಂಡರ್/ಹರಾಜನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವು ಇಲಾಖಾ ಮೇಲಾಧಿಕಾರಿ ಗಳಿಗೆ/ಸರ್ಕಾರಕ್ಕೆ ಇರುತ್ತದೆ. ಅಲ್ಲದೆ ಸರ್ಕಾರದ ಹಿತದೃಷ್ಟಿಯಿಂದ ಟೆಂಡರ್ / ಹರಾಜನ್ನು ತಿರಸ್ಕರಿಸಿ ಮರುವಿಲೇವಾರಿ ಮಾಡುವ ಹಕ್ಕು ಮೀನುಗಾರಿಕೆ ಇಲಾಖೆಗೆ ಸೇರಿರುತ್ತದೆ.

(11) <u>ಮೀನುಗಾರಿಕೆ ಫಸಲಿ ವರ್ಷವು ಪ್ರತಿ ವರ್ಷದ ಜುಲೈ 1 ರಿಂದ ಮರು ವರ್ಷದ ಜೂನ್ 30ರವರೆಗೆ</u> ಇರುತ್ತದೆ. ಮೀನು ಪಾಶುವಾರು ಹಕ್ಕನ್ನು ಟೆಂಡರ್/ಹರಾಜು ಮಾಡಿದ ದಿನಾಂಕವನ್ನು ಮತ್ತು ದೃಢೀಕರಣ ಮಾಡಿದ ದಿನಾಂಕವನ್ನು ಗಣನೆಗೆ ತೆಗೆದುಕೊಳ್ಳದೆ ಮೀನು ಪಾಶುವಾರು ಹಕ್ಕಿನ ಅವಧಿಯು ಪ್ರತಿ ವರ್ಷ ಜುಲೈ 1 ರಿಂದ ಮುಂದಿನ ವರ್ಷದ ಜೂನ್ 30ರವರೆಗೆ ಮಾತ್ರ ಇರುತ್ತದೆ.

(12) ಟೆಂಡರ್‌ದಾರರು/ಬಿಡ್‌ದಾರರು ಗುತ್ತಿಗೆ ಅವಧಿಯ ಎರಡನೇ ವರ್ಷದ ಮತ್ತು ತದನಂತರದ ವಾರ್ಷಿಕ ಟೆಂಡರ್ / ಬಿಡ್ ಮೊತ್ತವನ್ನು ಪ್ರತಿ ವರ್ಷ ಏಪ್ರಿಲ್ 30ರೊಳಗಾಗಿ ಸಂಬಂಧಪಟ್ಟ ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ-2)ರವರ ಕಛೇರಿಯಲ್ಲಿ ಪಾವತಿಸಿ ಅಧಿಕೃತ ರಸೀದಿಯನ್ನು ಪಡೆದು ಕೊಳ್ಳತಕ್ಕದ್ದು. ಗುತ್ತಿಗೆಯನ್ನು ನವೀಕರಿಸಿಕೊಳ್ಳದಿದ್ದ ಪ್ರಕರಣದಲ್ಲಿ ಟೆಂಡರ್‌ದಾರರಿಗೆ / ಬಿಡ್‌ದಾರರಿಗೆ ಮೀನು ಪಾಶುವಾರು ಹಕ್ಕು ಇರುವುದಿಲ್ಲ. ಗುತ್ತಿಗೆಗೆ ಪಡೆಯಲಾದ ಮೀನು ಪಾಶುವಾರು ಹಕ್ಕನ್ನು ರದ್ದುಗೊಳಿಸಿ ಮರುವಿಲೇವಾರಿ ಮಾಡಲು ಕ್ರಮ ಕೈಗೊಳ್ಳಲಾಗುವುದು.

(13) ಟೆಂಡರ್‌ದಾರರು/ಬಿಡ್‌ದಾರರು ಗುತ್ತಿಗೆಗೆ ಪಡೆದ ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕನ್ನು ಯಾವುದೇ ಕಾರಣಕ್ಕೂ ಇತರರಿಗೆ ವರ್ಗಾಯಿಸತಕ್ಕದ್ದಲ್ಲ ಹಾಗೂ ಉಪ ಗುತ್ತಿಗೆಗೆ ನೀಡತಕ್ಕದ್ದಲ್ಲ. ಒಂದು ಪಕ್ಷ ವರ್ಗಾಯಿಸಿದ್ದಲ್ಲಿ ಅಥವಾ ಉಪಗುತ್ತಿಗೆಗೆ ನೀಡಿರುವುದು ದಾಖಲೆಗಳಿಂದ ದೃಢಪಟ್ಟಲ್ಲಿ ಗುತ್ತಿಗೆ ಆದೇಶವನ್ನು ಸಕ್ಷಮ ಪ್ರಾಧಿಕಾರ ರದ್ದುಗೊಳಿಸುವುದು.

(14) ಟೆಂಡರುದಾರರು/ಬಿಡ್ಡುದಾರರು ಗುತ್ತಿಗೆ ಪಡೆದ <u>ಜಲಸಂಪನ್ಮೂಲಗಳಲ್ಲಿ ಪ್ರತಿ ಹೆಕ್ಟೇರ್ ಉಪಯುಕ್ತತಾ ಜಲವಿಸ್ತೀರ್ಣಕ್ಕೆ ಕನಿಷ್ಠ 2000 ಬಲಿತ ಬಿತ್ತನೆ ಮೀನುಮರಿಗಳನ್ನು (70-80 ಎಂ.ಎಂ.) ಬಿತ್ತನೆ ಮಾಡತಕ್ಕದ್ದು.</u> ಮೀನುಗಾರಿಕೆ ಇಲಾಖೆಯಿಂದ ಅನುಮೋದಿತ ತಳಿಯ ಮೀನುಮರಿಗಳನ್ನು ಮಾತ್ರ ಮೀನುಗಾರಿಕೆ ಇಲಾಖೆಯಿಂದಾಗಲೀ ಅಥವಾ ಮೀನುಗಾರಿಕೆ ಇಲಾಖೆಯಿಂದ ಅನುಮೋದಿಸಲ್ಪಟ್ಟ ಮೀನುಮರಿ ಉತ್ಪಾದನಾ/ಪಾಲನಾ ಕೇಂದ್ರಗಳಿಂದಾಗಲೀ ಖರೀದಿಸಿ ಬಿತ್ತನೆ ಮಾಡಿರುವ ಬಗ್ಗೆ ಪ್ರತಿ ವರ್ಷ ಫೋಟೋ ದೃಢೀಕರಣವನ್ನು ತಾಲ್ಲೂಕು ಮಟ್ಟದ ಮೀನುಗಾರಿಕಾ ಅಧಿಕಾರಿಗಳಿಗೆ ನೀಡಬೇಕು. ರಾಜ್ಯದಲ್ಲಿ ಬಿತ್ತನೆ ಮೀನುಮರಿಗಳು ಲಭ್ಯವಿಲ್ಲದಿದ್ದಲ್ಲಿ ಮಾತ್ರ ಹೊರರಾಜ್ಯಗಳಿಂದ ಮೀನುಮರಿ ಪಡೆಯಲು ಸಂಬಂಧಪಟ್ಟ ತಾಲ್ಲೂಕಿನ ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ-2)ರವರ ಅನುಮತಿ ಪಡೆದು ಆಮದು ಮಾಡಿಕೊಂಡು ಅವರ ಸಮ್ಮುಖದಲ್ಲಿಯೇ ಬಿತ್ತನೆ ಮಾಡತಕ್ಕದ್ದು.

(15) ನಿಷೇಧಿತ ಮೀನು ತಳಿಗಳಾದ ಪ್ರಮುಖವಾಗಿ ಆಫ್ರಿಕನ್ ಕ್ಯಾಟ್ ಫಿಶ್ (ಆಣೆ ಮೀನು), ಚೈನೀಸ್ ಬಿಗ್ ಹೆಡ್, ತಿಲಾಪಿಯಾ (ಜಿಲೇಬಿ) ಮತ್ತು ಇತರೆ ನಿಷೇಧಿತ ಮೀನು ತಳಿಗಳ ಬಿತ್ತನೆ ಮಾಡುವುದು ಅಥವಾ ಅಭಿವೃದ್ಧಿಪಡಿಸುವುದು ಅಥವಾ ಮಾರಾಟ ಮಾಡುವುದು ಕಂಡುಬಂದಲ್ಲಿ ಅಂತಹ ಜಲಸಂಪನ್ಮೂಲದ ಮೀನು ಪಾಶುವಾರು ಹಕ್ಕಿನ ಗುತ್ತಿಗೆಯನ್ನು ರದ್ದುಪಡಿಸಿ ಗುತ್ತಿಗೆದಾರರು ಪಾವತಿಸಿದ ಠೇವಣಿ ಮೊತ್ತವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದಲ್ಲದೆ, ಸಂಬಂಧಪಟ್ಟ ಗುತ್ತಿಗೆದಾರರನ್ನು ಕಪ್ಪುಪಟ್ಟಿಗೆ ಸೇರ್ಪಡಿಸಿ ಅವರಿಗೆ ಮೀನುಗಾರಿಕೆ ಇಲಾಖೆಯಿಂದ ಯಾವುದೇ ಜಲಸಂಪನ್ಮೂಲದ ಮೀನು ಪಾಶುವಾರು ಹಕ್ಕನ್ನು ಮುಂದಕ್ಕೆ ನೀಡಲಾಗುವುದಿಲ್ಲ.

(16) ಗುತ್ತಿಗೆಗೆ ಪಡೆಯಲಾದ ಜಲಸಂಪನ್ಮೂಲಗಳಲ್ಲಿ ಸಿಡಿಮದ್ದುಗಳ, ರಾಸಾಯನಿಕ ವಸ್ತುಗಳ ಮತ್ತು ವಿಷದ ಪ್ರಯೋಗದಿಂದ ಮೀನು ಹಿಡಿಯುವುದನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ.

(17) ಯಶಸ್ವಿ ಟೆಂಡರ್‌ದಾರರು/ಬಿಡ್‌ದಾರರು ಜಲಸಂಪನ್ಮೂಲಗಳಲ್ಲಿ ಹಿಡಿದ ಮೀನಿನ ಅಂಕಿ ಅಂಶಗಳನ್ನು ಪ್ರತಿವರ್ಷ ಮೀನುಗಾರಿಕೆ ಇಲಾಖೆಯ ಸಂಬಂಧಪಟ್ಟ ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ-2) ರವರಿಗೆ ಒದಗಿಸತಕ್ಕದ್ದು.

(18) ಟೆಂಡರ್-ಕಂ-ಹರಾಜಿನ ಮುಖಾಂತರ ವಿಲೇಗೊಳಿಸಲಾದ ಮೀನು ಪಾಶುವಾರು ಹಕ್ಕಿನ ದೃಢೀಕರಣವು ಮೇಲಾಧಿಕಾರಿಗಳ ಅನುಮೋದನೆಗೆ ಒಳಪಟ್ಟಿರುತ್ತದೆ.

(19) ಯಶಸ್ವಿ ಟೆಂಡರ್‌ದಾರರು/ಬಿಡ್‌ದಾರರು ಜಲಸಂಪನ್ಮೂಲಗಳಲ್ಲಿ ಮೀನು ಅಭಿವೃದ್ಧಿಪಡಿಸುವಾಗ ಹಿಡಿದುಕೊಳ್ಳುವಾಗ ಜಲಸಂಪನ್ಮೂಲದ ಕಟ್ಟೆಯು ಏರಿ, ತೂಬು ಮುಂತಾದವುಗಳಿಗೆ ಯಾವುದೇ ರೀತಿಯ ಹಾನಿಯಾಗದಂತೆ ನೋಡಿಕೊಳ್ಳತಕ್ಕದ್ದು. ಹೀಗೆ ಸಂಭವಿಸುವ ನಷ್ಟಗಳಿಗೆಲ್ಲಕ್ಕೂ ಗುತ್ತಿಗೆದಾರರನ್ನೇ ಹೊಣೆಗಾರರನ್ನಾಗಿ ಮಾಡಲಾಗುವುದು.

(20) ಟೆಂಡರ್/ಹರಾಜಿನ ಮೂಲಕ ಜಲಸಂಪನ್ಮೂಲಗಳ ವಿಲೇವಾರಿಯು ಪ್ರಸ್ತುತ ಚಾಲ್ತಿಯಲ್ಲಿರುವ ನಿಯಮಗಳಿಗೆ, ಷರತ್ತುಗಳಿಗೆ ಹಾಗೂ ನಿಬಂಧನೆಗಳಿಗೆ ಒಳಪಟ್ಟಿರುವುದಲ್ಲದೆ ಸರ್ಕಾರವು/ಮೀನುಗಾರಿಕೆ ಇಲಾಖೆಯು ಕಾಲಕಾಲಕ್ಕೆ ವಿಧಿಸಬಹುದಾದ ಮತ್ತು ಮಾರ್ಪಡಿಸಬಹುದಾದ ಹೆಚ್ಚುವರಿ ನಿಯಮಗಳಿಗೆ, ಷರತ್ತುಗಳಿಗೆ ಮತ್ತು ನಿಬಂಧನೆಗಳಿಗೆ ಒಳಪಟ್ಟಿರುತ್ತದೆ.

(21) ಯಾವುದೇ ನಿಯಮದ ಉಲ್ಲಂಘನೆಯಾದಲ್ಲಿ, ಗುತ್ತಿಗೆಗೆ ಪಡೆಯಲಾದ ಜಲಸಂಪನ್ಮೂಲದ ಮೀನು ಪಾಶುವಾರು ಹಕ್ಕನ್ನು ರದ್ದುಪಡಿಸುವ ಮತ್ತು ಮರುವಿಲೇವಾರಿ ಮಾಡುವ ಅಧಿಕಾರವು ಮೀನುಗಾರಿಕೆ ಇಲಾಖೆಗೆ ಇರುತ್ತದೆ.

(22) ಗುತ್ತಿಗೆದಾರರು ಗುತ್ತಿಗೆ ಪಡೆದ ಜಲಸಂಪನ್ಮೂಲಗಳಲ್ಲಿ ಮೀನು ಹಿಡಿಯುವ ಮೀನುಗಾರರಿಗೆ ಜೀವ ರಕ್ಷಣಾ ಕವಚ (ಲೈಫ್ ಜಾಕೆಟ್) ಹಾಗೂ ವಿಮಾ ಸೌಲಭ್ಯವನ್ನು ಕಡ್ಡಾಯವಾಗಿ ಒದಗಿಸುವುದು.

(23) ಗುತ್ತಿಗೆಗೆ ಪಡೆಯಲಾದ ಜಲಸಂಪನ್ಮೂಲದಲ್ಲಿ ಸಂಶೋಧನೆ, ವಿಸ್ತರಣೆ ಮತ್ತು ಇತರೆ ಉತ್ತೇಜನ ಪೂರ್ವಕ ಚಟುವಟಿಕೆಗಳನ್ನು ಕೈಗೊಳ್ಳುವ ಹಕ್ಕು ಮೀನುಗಾರಿಕೆ ಇಲಾಖೆಗೆ ಇರುತ್ತದೆ.

ಮೇಲಿನ ಎಲ್ಲಾ ಷರತ್ತು ಮತ್ತು ನಿಬಂಧನೆಗಳಿಗೆ ಬದ್ಧರಾಗಿರುತ್ತೇನೆಂದು ದೃಢೀಕರಿಸುತ್ತೇವೆ.

ಸ್ಥಳ:–

ದಿನಾಂಕ:–

ಯಶಸ್ವಿ ಟೆಂಡರ್‌ದಾರರ/ಬಿಡ್‌ದಾರರ

ಸಹಿ ಮತ್ತು ಹೆಸರು

ಪೂರ್ಣ ವಿಳಾಸ

ದೂರವಾಣಿ ಸಂಖ್ಯೆ

ಸಾಕ್ಷಿಗಳು

(1)

(2)

(3)

(ವಿ.ಸೂ:– ರೂ.200–00ರ ಮೌಲ್ಯದ ಛಾಪ ಕಾಗದದಲ್ಲಿ ಟೆಂಡರ್‌ದಾರರು/ಬಿಡ್‌ದಾರರು ಅನುಬಂಧ–15ರ ಮುಚ್ಚಳಿಕೆ ಪತ್ರವೊಡನೆ ಬರೆದುಕೊಡಬೇಕು)

ಆದೇಶ ಸಂಖ್ಯೆ:ಪಸಂಮೀ 125 ಮೀಇಇ 2013, ಬೆಂಗಳೂರು ದಿನಾಂಕ:21–02–2014ರ

ಅನುಬಂಧ–15

(ಮೀನುಗಾರಿಕೆ ಇಲಾಖೆ)

ಸರ್ಕಾರಿ ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕನ್ನು ಟೆಂಡರ್–ಕಂ–ಹರಾಜು ಮುಖಾಂತರ ಗುತ್ತಿಗೆಗೆ ಪಡೆದ ಯಶಸ್ವಿ ಟೆಂಡರ್‌ದಾರರು/ಬಿಡ್‌ದಾರರು ನಿಗದಿತ ಛಾಪಾ ಕಾಗದದಲ್ಲಿ ಬರೆದುಕೊಡುವ ಮುಚ್ಚಳಿಕೆ ಪತ್ರ

.... ಜಿಲ್ಲೆಯ .... ತಾಲ್ಲೂಕಿನ .... ಗ್ರಾಮಕ್ಕೆ ಸೇರಿದ .... ಜಲಸಂಪನ್ಮೂಲದ ಮೀನು ಪಾಶುವಾರು ಹಕ್ಕನ್ನು ಸನ್ ಎರಡು ಸಾವಿರದ .... ನೇ ಇಸವಿ .... ಮಾಹೆಯ ....ನೇ ದಿನಾಂಕದಲ್ಲಿ ನಡೆದ ಬಹಿರಂಗ ಟೆಂಡರ್ / ಹರಾಜು ಮೂಲಕ ಅತೀ ಹೆಚ್ಚಿನ ಸವಾಲು ಮಾಡಿ ಗುತ್ತಿಗೆಗೆ ಪಡೆದು ಈ ದಿನ ಅಂದರೆ ದಿನಾಂಕ .... ರಂದು ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ–2), ... ತಾಲ್ಲೂಕು ಇವರಿಗೆ ನಾನು/ನಾವು ಖುದ್ದು ಬರೆದು ಕೊಟ್ಟು ಮುಚ್ಚಳಿಕೆ ಪತ್ರ.

ಸದರಿ ಜಲಸಂಪನ್ಮೂಲದ ಮೀನು ಪಾಶುವಾರು ಹಕ್ಕನ್ನು ದಿನಾಂಕ .... ರಿಂದ .... ದಿನಾಂಕದವರೆಗೆ ಗುತ್ತಿಗೆ ಮೂಲಕ ಪಡೆದಿರುತ್ತೇನೆ/ವೆ. ಇದರ ಬಿಡ್/ಟೆಂಡರ್ ಮೊತ್ತ ಅಂದರೆ ರೂ. ....ಗಳನ್ನು ಮತ್ತು ಇದಕ್ಕೆ ಸಂಬಂಧಿಸಿದ ಭದ್ರತಾ ಠೇವಣಿ ಮೊತ್ತ ರೂ...................ಗಳನ್ನು ಅಂದರೆ ಈ ರೀತಿಯಾಗಿ ಒಟ್ಟು ರೂ. .... ಗಳನ್ನು ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ–2), ... ರವರಿಗೆ ಬ್ಯಾಂಕ್ ನಗದು ಹುಂಡಿ (......................... ಬ್ಯಾಂಕಿನ ಡಿ.ಡಿ. ಸಂ. .... ದಿನಾಂಕ ....ರ) ಮುಖಾಂತರ ಪಾವತಿ ಮಾಡಿ ರಶೀದಿ ಪಡೆದಿರುತ್ತೇನೆ/ವೆ.

ಈ ಜಲಸಂಪನ್ಮೂಲದಲ್ಲಿ ಮೀನು ಕೃಷಿ ಕೈಗೊಳ್ಳುವಾಗ ಗುತ್ತಿಗೆಗೆ ಪಡೆದಿರುವ ಪೂರ್ಣ ಅವಧಿಯಲ್ಲಿ ಈ ಮುಚ್ಚಳಿಕೆ ಪತ್ರಕ್ಕೆ ಲಗತ್ತಿಸಿದ ಎಲ್ಲಾ ಷರತ್ತು ಮತ್ತು ನಿಬಂಧನೆಗಳನ್ನು (ಈ ಆದೇಶದ <u>ಅನುಬಂಧ–14</u> ರಲ್ಲಿ ಲಗತ್ತಿಸಿದೆ) ಹಾಗೂ ಸರ್ಕಾರವು / ಮೀನುಗಾರಿಕೆ ಇಲಾಖೆಯು ಕಾಲಕಾಲಕ್ಕೆ ವಿಧಿಸಬಹುದಾದ ಹೆಚ್ಚುವರಿ ಷರತ್ತು ಮತ್ತು ನಿಬಂಧನೆಗಳನ್ನು ಕಡ್ಡಾಯವಾಗಿ ಪಾಲಿಸಲು ಬದ್ಧರಾಗಿರುತ್ತೇನೆ/ಬದ್ಧರಾಗಿರುತ್ತೇವೆ. ಒಂದು ವೇಳೆ ಸದರಿ ಷರತ್ತು ಮತ್ತು ನಿಬಂಧನೆಗಳನ್ನು ಉಲ್ಲಂಘಿಸಿದಲ್ಲಿ ನನಗೆ/ನಮಗೆ ನೀಡಿದ ಜಲಸಂಪನ್ಮೂಲದ ಮೀನು ಪಾಶುವಾರು ಹಕ್ಕಿನ ಗುತ್ತಿಗೆ ಆದೇಶವನ್ನು ರದ್ದುಗೊಳಿಸುವ ಹಾಗೂ ಠೇವಣಿ ಮೊತ್ತವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವ ಕ್ರಮವು ನನಗೆ/ನಮಗೆ ಒಪ್ಪಿಗೆಯಾಗಿರುತ್ತದೆ.

ಈ ಗುತ್ತಿಗೆ ಅವಧಿಯ ನಂತರ ಸದರಿ ಜಲಸಂಪನ್ಮೂಲದ ಮೀನು ಪಾಶುವಾರು ಹಕ್ಕು ನನಗೆ/ನಮಗೆ ಇರುವುದಿಲ್ಲವೆಂಬುದು ಕೂಡ ನನಗೆ/ನಮಗೆ ಮನವರಿಕೆಯಾಗಿರುತ್ತದೆ.

ಸ್ಥಳ:–

ದಿನಾಂಕ:

ಯಶಸ್ವಿ ಟೆಂಡರ್‌ದಾರರು/ಬಿಡ್‌ದಾರರ

ಸಹಿ ಮತ್ತು ಹೆಸರು

ಪೂರ್ಣವಿಳಾಸ

ದೂರವಾಣಿ ಸಂಖ್ಯೆ

ಸಾಕ್ಷಿಗಳು

(1)

(2)

(3)

(ವಿ.ಸೂ:– ರೂ.200–00ರ ಮೌಲ್ಯದ ಛಾಪ ಕಾಗದದಲ್ಲಿ ಟೆಂಡರ್‌ದಾರರು / ಬಿಡ್‌ದಾರರು ಬರೆದು ಕೊಡಬೇಕಾದ ಮುಚ್ಚಳಿಕೆ ಪತ್ರ)

ಆದೇಶ ಸಂಖ್ಯೆ:ಪಸಂಮೀ 125 ಮೀಇಇ 2013, ಬೆಂಗಳೂರು ದಿನಾಂಕ:21-02-2014ರ

ಅನುಬಂಧ-16

ನದಿಗಳು/ಜಲಾಶಯಗಳಲ್ಲಿ/ಆಳಿವೆಗಳಲ್ಲಿ ಮೀನು ಹಿಡಿಯಲು ಪರವಾನಗಿ ಕೋರಿ ಅರ್ಜಿ

ಪಾಸ್ ಪೋರ್ಟ್
ಅಳತೆಯ ಇತ್ತೀಚಿನ
ಭಾವಚಿತ್ರ

1	ಅರ್ಜಿದಾರರ ಹೆಸರು	
2	ವಿಳಾಸ ಮತ್ತು ದೂರವಾಣಿ ಸಂಖ್ಯೆ	
3	ವಾಸ ಸ್ಥಳ ದೃಢೀಕರಣ ಪತ್ರ (ಪಡಿತರ ಚೀಟಿ/ಆಧಾರ್ ಕಾರ್ಡ್ /ಚುನಾವಣಾ ಗುರುತಿನ ಚೀಟಿ/ ಸರ್ಕಾರದ ಇತರೆ ದಾಖಲಾತಿ ಗಳನ್ನು ಲಗತ್ತಿಸುವುದು)	
4	ಪರವಾನಗಿ ಕೋರಲಾದ ಜಲಪ್ರದೇಶ	
5	ಈ ಹಿಂದೆ ಈ ಜಲಾಶಯ/ ನದಿಯಲ್ಲಿ ಮೀನು ಹಿಡಿಯಲು ಪರವಾನಗಿ ಪಡೆದಿದ್ದಲ್ಲಿ ಅದರ ಪ್ರತಿ	
6	ಪರವಾನಗಿ ಕೋರಿರುವ ಮೀನು ಹಿಡಿಯುವ ವಿಧಾನ	
7	ಪರವಾನಗಿಯ ನಿಗದಿತ ಶುಲ್ಕದ ಡಿ.ಡಿ (ಬ್ಯಾಂಕ್ ನಗದು ಹುಂಡಿ)/ ನಗದು ರಶೀದಿ ಸಂಖ್ಯೆ	

ಸ್ಥಳ:-

ದಿನಾಂಕ:- ಅರ್ಜಿದಾರನ ಸಹಿ

ಆದೇಶ ಸಂಖ್ಯೆ:ಪಸಂಮೀ 125 ಮೀಇಇ 2013, ಬೆಂಗಳೂರು ದಿನಾಂಕ:21-02-2014ರ

ಅನುಬಂಧ-17

ಮೀನುಗಾರಿಕೆ ಇಲಾಖೆ

ಮೀನು ಹಿಡಿಯುವುದಕ್ಕೆ ಪರವಾನಗಿ

ಪಾಸ್ ಪೋರ್ಟ್
ಅಳತೆಯ ಇತ್ತೀಚಿನ ಭಾವಚಿತ್ರ

1	ಪರವಾನಗಿದಾರನ ಹೆಸರು	
2	ಪರವಾನಗಿದಾರನ ವಿಳಾಸ	
3	ಮೀನು ಹಿಡಿಯಲು ಅವಕಾಶ ಕೊಟ್ಟಿರುವ ಪ್ರದೇಶ	
4	ಯಾವ ವಿಧಾನದಲ್ಲಿ ಮೀನು ಹಿಡಿಯಲು ಪರವಾನಗಿ	
5	ಪರವಾನಗಿ ಶುಲ್ಕ ಮತ್ತು ರಸೀದಿ ಸಂಖ್ಯೆ	
6	ಪರವಾನಗಿ ಪ್ರಾರಂಭದ ದಿನಾಂಕ	
7	ಪರವಾನಗಿ ಮುಕ್ತಾಯದ ದಿನಾಂಕ	

ದಿನಾಂಕ ------------------ ಪರವಾನಗಿ ನೀಡುವ ಅಧಿಕಾರಿಯ ಸಹಿ

ಸ್ಥಳ:- ಹೆಸರು ಮತ್ತು ಪದನಾಮ

ಮೊಹರು

(ಷರತ್ತು ಮತ್ತು ನಿಬಂಧನೆಗಳು ಹಿಂಬದಿಯಲ್ಲಿ)

ಷರತ್ತು ಮತ್ತು ನಿಬಂಧನೆಗಳು

1. ಪರವಾನಗಿ ಅವಧಿಯು "ಮೀನುಗಾರಿಕೆ ವರ್ಷಕ್ಕೆ" ಮಾತ್ರ ಸೀಮಿತವಾಗಿರುತ್ತದೆ. ಮೀನುಗಾರಿಕೆ ವರ್ಷದ ಯಾವುದೇ ಸಮಯದಲ್ಲಿ ಪರವಾನಗಿ ನೀಡಿದರೂ ಸಹ ಮೀನುಗಾರಿಕೆ ವರ್ಷದ ಅಂತ್ಯಕ್ಕೆ ಅಂದರೆ ಜೂನ್ 30ಕ್ಕೆ ಪರವಾನಗಿ ಕೊನೆಗೊಳ್ಳುತ್ತದೆ.
2. ಪರವಾನಗಿಗಳನ್ನು ಒಬ್ಬರಿಂದ ಒಬ್ಬರಿಗೆ ವರ್ಗಾಯಿಸುವಂತಿಲ್ಲ.
3. ಪರವಾನಗಿದಾರರು ಮೀನುಗಾರಿಕೆ ನಿಷೇಧದ ಅವಧಿಯಲ್ಲಿ (ಜೂನ್ 1 ರಿಂದ ಜುಲೈ 30ರವರೆಗೆ) ಮೀನು ಹಿಡಿಯುವುದನ್ನು ಪೂರ್ಣವಾಗಿ ನಿಷೇಧಿಸಲಾಗಿದೆ. ಮತ್ತು ಈ ಅವಧಿಯಲ್ಲಿ ಕ್ರೀಡಾ ಮೀನುಗಾರರಿಗೆ ಪರವಾನಗಿಗಳನ್ನು ವಿತರಿಸಲಾಗುವುದಿಲ್ಲ.
4. ನದಿ, ಆಳಿವೆ ಮತ್ತು ಜಲಾಶಯಗಳಲ್ಲಿ ಮೀನು ಹಿಡಿಯುವ ಎಲ್ಲಾ ಸಮಯದಲ್ಲಿ ಪರವಾನಗಿದಾರರು ಪರವಾನಗಿ ಪ್ರತಿ ಮತ್ತು ಗುರುತಿನ ಚೀಟಿಯನ್ನು ಕಡ್ಡಾಯವಾಗಿ ಹೊಂದಿರಬೇಕು.

5. ಪರವಾನಗಿ ಪಡೆದ ಮೀನುಗಾರರು ಪರವಾನಗಿಯಲ್ಲಿ ತಿಳಿಸಿರುವ ವಿಧಾನದಲ್ಲಿ ಮಾತ್ರ ಮೀನು ಶಿಕಾರಿ ಮಾಡುವುದು. ಡೈನಾಮೆಟ್, ವಿಷಕಾರಕ ಅಥವಾ ರಾಸಾಯನಿಕ ವಸ್ತುಗಳನ್ನು ಉಪಯೋಗಿಸಿ ಮೀನುಗಾರಿಕೆ ಮಾಡಿದ್ದಲ್ಲಿ ಪರವಾನಗಿಯನ್ನು ತಕ್ಷಣದಿಂದ ರದ್ದು ಮಾಡಲಾಗುವುದು.

6. ಪರವಾನಗಿ ಹೊಂದಿದ ಮೀನುಗಾರರು ಪರವಾನಗಿಯಲ್ಲಿ ನಿಗಧಿಪಡಿಸಿದ ಪ್ರದೇಶದಲ್ಲಿ ಮಾತ್ರ ಮೀನುಗಾರಿಕೆಯನ್ನು ಮಾಡಲು ಹಕ್ಕುಳ್ಳವರಾಗಿರುತ್ತಾರೆ.

7. ಪರವಾನಗಿಯಲ್ಲಿ ನಿಗಧಿಪಡಿಸಿರುವ ನಿಗಧಿತ ಕಣ್ಣಿನ ಅಳತೆಯ ಬಲೆಗಳನ್ನು ಮಾತ್ರ ಉಪಯೋಗಿಸಿ ಮೀನು ಹಿಡಿಯುವುದು.

8. ನದಿ, ಅಳಿವೆ ಮತ್ತು ಜಲಾಶಯದಲ್ಲಿ ಎಳೆ ಬಲೆಗಳು, ಮಾರಿ ಬಲೆಗಳು ಮತ್ತು ಇನ್ನಿತರೆ ಪ್ರಕಾರದ ಎಳೆ ಬಲೆಗಳನ್ನು ಉಪಯೋಗಿಸಿ ಮೀನು ಹಿಡಿಯುವುದನ್ನು ನಿಷೇಧಿಸಲಾಗಿದೆ.

9. ಪರವಾನಗಿದಾರರು ಮೀನು ಹಿಡಿಯವ ಸಮಯದಲ್ಲಿ ಜೀವ ರಕ್ಷಕ ಸಾಧನವಾದ ಲೈಫ್ ಜಾಕೆಟ್‌ನ್ನು ಧರಿಸುವುದು ಕಡ್ಡಾಯ ಮತ್ತು ಜೀವ ರಕ್ಷಣೆಗೆ ಎಲ್ಲಾ ಮುಂಜಾಗರೂಕತೆ ಕ್ರಮಗಳನ್ನು ಕೈಗೊಳ್ಳುವುದು.

10. ಮೀನುಗಳ ಸಂರಕ್ಷಣೆಗಾಗಿ "ಮತ್ಸ್ಯಧಾಮ" ಗಳೆಂದು ಗುರುತಿಸಿದ ಸ್ಥಳಗಳಲ್ಲಿ ಕಡ್ಡಾಯವಾಗಿ ಮೀನುಗಾರಿಕೆಯನ್ನು ಪೂರ್ಣವಾಗಿ ನಿಷೇಧಿಸಿದೆ. ಮತ್ಸ್ಯಧಾಮಗಳಲ್ಲಿ ಪರವಾನಗಿದಾರರು ಮೀನುಗಾರಿಕೆ ಮಾಡಿದ್ದಲ್ಲಿ ಅಂತಹ ಪರವಾನಗಿಯನ್ನು ತಕ್ಷಣದಿಂದ ರದ್ದುಗೊಳಿಸುವುದು ಹಾಗೂ ಅವರ ಹೆಸರನ್ನು ಕಪ್ಪುಪಟ್ಟಿಗೆ ಸೇರಿಸಿ ಮುಂದಿನ ಸಾಲುಗಳಿಗೆ ಪರವಾನಗಿಯನ್ನು ನಿರಾಕರಿಸಲಾಗುವುದು.

11. ಪರವಾನಗಿದಾರರು ಮೀನು ಹಿಡಿಯವಾಗ ಜಲಾಶಯದ ಅಳಿವೆಗಳ ಮತ್ತು ನದಿಯ ಭದ್ರತೆ ಮತ್ತು ನೀರಿನ ಸ್ವಚ್ಛತೆ (ಮಾಲಿನ್ಯಕರಣಗೊಳ್ಳದಂತೆ) ನೋಡಿಕೊಳ್ಳತಕ್ಕದ್ದು. ಪರವಾನಗಿಗೆ ಸಂಬಂಧಪಟ್ಟಂತೆ ಭದ್ರತೆ ಪ್ರಾಧಿಕಾರ ಅಥವಾ ಇಲಾಖೆಯು ವಿಧಿಸುವ ಹೆಚ್ಚುವರಿ ಷರತ್ತು ಮತ್ತು ನಿಬಂಧನೆಗಳನ್ನು ಉಲ್ಲಂಘಿಸಬಾರದು.

12. ಪರವಾನಗಿದಾರರು ನದಿ, ಅಳಿವೆ ಮತ್ತು ಜಲಾಶಯದಲ್ಲಿ ಹಿಡಿದ ಮೀನಿನ ಅಂಕಿ ಅಂಶಗಳನ್ನು ಪ್ರತಿ ತಿಂಗಳು ಸಂಬಂಧಪಟ್ಟ ತಾಲ್ಲೂಕು ಮೀನುಗಾರಿಕೆ ಅಧಿಕಾರಿಗೆ ಒದಗಿಸತಕ್ಕದ್ದು.

13. ಪ್ರಕೃತಿ ವಿಕೋಪದಿಂದ ಪರವಾನಗಿದಾರರಿಗೆ ನಷ್ಟ ಅಥವಾ ಸಲಕರಣೆಗಳಿಗೆ ಹಾನಿ ಉಂಟಾದಲ್ಲಿ ಅಥವಾ ನಷ್ಟ ಉಂಟಾದಲ್ಲಿ ಅಂತಹ ನಷ್ಟಗಳಿಗೆ ಇಲಾಖೆಯು ಜವಾಬ್ದಾರರಾಗುವುದಿಲ್ಲ.

14. ಸಂಶೋಧನೆಗಾಗಿ ಮೀನುಗಳಿಗೆ " ಟ್ಯಾಗ್ " ಮಾಡಿದ ಮೀನುಗಳು ಬಲೆಯಲ್ಲಿ ಸಿಕ್ಕಿದ್ದಲ್ಲಿ ಅಂತಹ ಮೀನುಗಳನ್ನು ಮತ್ತೆ ನೀರಿಗೆ ವಾಪಸ್ಸು ಬಿಡುವುದು ಅಥವಾ ಅಂತಹ ಮೀನುಗಳನ್ನು ತಾಲ್ಲೂಕು ಮೀನುಗಾರಿಕೆ ಅಧಿಕಾರಿಗೆ ಒಪ್ಪಿಸತಕ್ಕದ್ದು.

ಆದೇಶ ಸಂಖ್ಯೆ:ಪಸಂಮೀ 125 ಮೀಇಇ 2013, ಬೆಂಗಳೂರು ದಿನಾಂಕ:21-02-2014ರ

ಅನುಬಂಧ-18

ಕಡತ ಸಂಖ್ಯೆ:

ಜಲಸಂಪನ್ಮೂಲದ ಮೀನು ಪಾಶುವಾರು ಹಕ್ಕನ್ನು ವಿಲೇ ಮಾಡುವ ಬಗ್ಗೆ ಚೆಕ್‌ಲಿಸ್ಟ್

(ತಾಲ್ಲೂಕು ಮಟ್ಟದ ಮೀನುಗಾರಿಕೆ ಅಧಿಕಾರಿಯು ನೀಡತಕ್ಕದ್ದು)

1	ಜಲಸಂಪನ್ಮೂಲದ ಹೆಸರು ಮತ್ತು ಪೂರ್ಣ ವಿಳಾಸ					
2	ಜಲಸಂಪನ್ಮೂಲದ ವಿಸ್ತೀರ್ಣ	1) ಅಚ್ಚುಕಟ್ಟು--------- ಹೆ.				
		2) ಜಲವಿಸ್ತೀರ್ಣ------- ಹೆ.				
3	ಕಳೆದ 5 ವರ್ಷಗಳ ಅವಧಿಯ ವಿಲೇವಾರಿ ವಿವರ (ಗುತ್ತಿಗೆಗೆ ಪಡೆದಿದ್ದ ಗುತ್ತಿಗೆದಾರರ / ಟೆಂಡರುದಾರರ / ಬಿಡ್‌ದಾರರ ಹೆಸರು ಮತ್ತು ಪೂರ್ಣ ವಿಳಾಸ ಹಾಗೂ ವಿಲೇವಾರಿ ವಿಧಾನ (ಗುತ್ತಿಗೆಯ ಮುಖಾಂತರವೇ ಅಥವಾ ಟೆಂಡರ್-ಕಂ-ಹರಾಜು ಮುಖಾಂತರವೇ)	ವರ್ಷ	ವಿಲೇವಾರಿ ವಿಧಾನ	ಗುತ್ತಿಗೆ ದಾರರ ಹೆಸರು /ವಿಳಾಸ	ಗುತ್ತಿಗೆ ಮೊತ್ತ	ಸರ್ಕಾರಕ್ಕೆ ಪಾವತಿಸಿದ ವಿವರ
4	ಈ ಹಿಂದೆ ಗುತ್ತಿಗೆ ನೀಡಿದ ಪ್ರಾಧಿಕಾರ, ಆದೇಶ ಸಂ., ದಿನಾಂಕ, ಮತ್ತು ಅವಧಿ (ಈ ಹಿಂದೆ ಗುತ್ತಿಗೆ ನೀಡಿದ ಆದೇಶದ ಪ್ರತಿ ಲಗತ್ತಿಸುವುದು)					
5	ಪ್ರಸಕ್ತ ಸಾಲಿಗೆ ಹೊಸದಾಗಿ ಗುತ್ತಿಗೆ ಕೋರುತ್ತಿರುವ ಗುತ್ತಿಗೆದಾರ ಸಂಘಗಳ ಹೆಸರು ಮತ್ತು ಪೂರ್ಣ ವಿಳಾಸ. (ಪ್ರತ್ಯೇಕವಾಗಿ ನೀಡಬಹುದು)					

R.N.I. No. KARBIL/2001/47147 POSTAL REGN. No. RNP/KA/BGS/2202/2014-16
Licensed to post without prepayment WPP No. 297

6	ಈಗಾಗಲೇ ಅವರು ಗುತ್ತಿಗೆಗೆ ಪಡೆದಿರುವ ಗುತ್ತಿಗೆಗೆ ನೀಡಲು ಪ್ರಸ್ತಾಪಿಸಿರುವ ಜಲಸಂಪನ್ಮೂಲಗಳ ವಿವರಗಳು	ಕೆರೆಯ ಹೆಸರು	ಗ್ರಾಮ/ತಾಲ್ಲೂಕು	ಜಲವಿಸ್ತೀರ್ಣ (ಹೆಕ್ಟೇರ್)
7	ಪ್ರಸ್ತುತ ನಿಗದಿಪಡಿಸಲಾದ ಗುತ್ತಿಗೆ ಮೊತ್ತ + ಠೇವಣಿ ಮೊತ್ತ. (ಪಾವತಿಸಿರುವ ಬಗ್ಗೆ ದಾಖಲಾತಿಗಳನ್ನು ಲಗತ್ತಿಸುವುದು)			
8	ಗುತ್ತಿಗೆಗೆ ಕೋರಲಾಗಿರುವ ಅವಧಿ (ಎಷ್ಟು ವರ್ಷಗಳಿಗೆ)			
9	ಗುತ್ತಿಗೆಗೆ ಕೋರಲಾದ ಪ್ರಕಟಣೆ ಲಗತ್ತಿಸುವುದು			
10	ಟೆಂಡರ್ / ಹರಾಜು ಪ್ರಕಟಣೆ ಲಗತ್ತಿಸುವುದು.			
11	ಟೆಂಡರ್/ಹರಾಜು ಪತ್ರಿಕಾ ಪ್ರಕಟಣೆ ಲಗತ್ತಿಸುವುದು.			
12	ಟೆಂಡರ್/ಹರಾಜು ನಡೆಸಿದ ದಿನಾಂಕ			
13	ಟೆಂಡರ್/ಹರಾಜಿನಲ್ಲಿ ಭಾಗವಹಿಸಿದ ವ್ಯಕ್ತಿಗಳು /ಸಂಘ ಸಂಸ್ಥೆಗಳ ವಿವರ (ಪ್ರತ್ಯೇಕವಾಗಿ ನೀಡುವುದು)			
14	ಮೂಲ ಹರಾಜು ಪಟ್ಟಿ ಲಗತ್ತಿಸುವುದು			
15	ಮೂಲ ಹರಾಜು ಇಸ್ತಿಹಾರ್ ಲಗತ್ತಿಸುವುದು.			
16	ಮೂಲ ಟೆಂಡರ್ ಅರ್ಜಿಗಳನ್ನು ಲಗತ್ತಿಸುವುದು.			
17	ಗುತ್ತಿಗೆ/ಟೆಂಡರ್/ಹರಾಜು ಇಲಾಖೆ ನೀತಿ ನಿಯಮಗಳಿಗೆ ಅನುಗುಣವಾಗಿದೆಯೇ?			
18	ತಾಲ್ಲೂಕು ಮಟ್ಟದ ಮೀನುಗಾರಿಕೆ ಅಧಿಕಾರಿಯ ಅಭಿಪ್ರಾಯ ಮತ್ತು ಶಿಫಾರಸ್ಸು			

ದಿನಾಂಕ :- ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ-2).

ಸ್ಥಳ:- .... ತಾಲ್ಲೂಕು

ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರು/ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ-1)
(ಜಿಲ್ಲಾಮಟ್ಟದ ಮೀನುಗಾರಿಕೆ ಅಧಿಕಾರಿಗಳ ಶಿಫಾರಸ್ಸು)

ದಿನಾಂಕ:- ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರು/

ಸ್ಥಳ:- ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ-1)

.........................ಜಿಲ್ಲೆ

PR.201
SC.1000

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು-59

Page [illegible]

ಅನುಬಂಧ - 01

ಶ್ರೀ ಹೊರಕೇರಮ್ಮ ಮೀನುಗಾರರ ಸಹಕಾರ ಸಂಘ ನಿಯಮಿತ,

ಸಿ ಎಸ್ ಪುರ, ಗುಬ್ಬಿ ತಾಲ್ಲೂಕು ತುಮಕೂರು ಜಿಲ್ಲೆ

ಸದಸ್ಯರ ಹೆಸರು ಮತ್ತು ವಿಳಾಸ ಪಟ್ಟಿ ದಿ 31.3.2014ಕ್ಕೆ ಅಂತ್ಯಕ್ಕೆ

ಕ್ರ ಸಂ	ಸದಸ್ಯರ ಹೆಸರು	[illegible]	[illegible]	[illegible]
1	ಕೃಷ್ಣೇಗೌಡ ಸಿ ಜಿ		[illegible]	
2	ರಮೇಶ್		[illegible]	
3	ದೊಡ್ಡೇಗೌಡ		200.00	
4	ಮುದ್ದಯ್ಯ		200.00	
5	ನಾರಾಯಣ ಸ್ವಾಮಿ ಸಿ ಎಸ್		200.00	
6	ಕಮಲಮ್ಮ		200.00	
7	ದುರ್ಗಯ್ಯ [illegible]		200.00	
8	ಮಂಜೇಶ್		200.00	
9	ಕಲ್ಯಾಣಮ್ಮ		200.00	
10	ಪ್ರಕಾಶ್ ಕುಮಾರ್		200.00	
11	[illegible]		200.00	
12	[illegible] ಸಿ ಎಸ್		200.00	
13	[illegible] ಗೀತಾ ಲಕ್ಷ್ಮೀ		200.00	
14	[illegible]		200.00	
15	[illegible]		200.00	
16	[illegible]		200.00	
17	[illegible]		200.00	
18	[illegible] ಸಿಸಿ		200.00	
19	[illegible]		200.00	
20	[illegible]		200.00	
21	[illegible]		200.00	
22	[illegible] ಸಿ		200.00	
23	[illegible]		200.00	
24	[illegible]		200.00	
25	[illegible]		200.00	
26	[illegible]		200.00	
27	[illegible]		200,00	
28	[illegible]		200.00	
29	[illegible]		200.00	
30	[illegible]		200.00	
31	[illegible]		200.00	
32	[illegible]		200.00	
33	[illegible]		200.00	

ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀ ಮಸಾಲ ಜಯರಾಮ್ (ತುರುವೇಕೆರೆ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1220 ರ

ಅನುಬಂಧ-3


ಕ್ರ ಸಂ	ಮೀನುಗಾರರ ಸಹಕಾರ ಸಂಘದ ಹೆಸರು	ನೊಂದಣಿ ಸಂಖ್ಯೆ	ಗುತ್ತಿಗೆ ಮೂಲಕ ಪಡೆದಿರುವ ಕೆರೆಯ ಹೆಸರು	ಗುತ್ತಿಗೆ ಮೊತ್ತ ಪಾವತಿ ವಿವರ
1	ತುರುವೇಕೆರೆ ತಾಲ್ಲೂಕು ಮೀನುಗಾರರ ಮತ್ತು ಮೀನು ವಿತರಕರ ಹಾಗೂ ಮೀನು ಕೃಷಿಕರ ಸಹಕಾರ ಸಂಘ., ತುರುವೇಕೆರೆ ತಾಲ್ಲೂಕು	ಡಿಆರ್‌ಟಿ/ನೊಂದಣಿ/8515/ 2001-12. ದಿ:12.04.2001	ಮಾಯಸಂದ್ರಕೆರೆ	2016-17 – ರೂ 57881/- 2017-18" 2018-19 – ರೂ 60775
			ವೀರಸಾಗರ ಕೆರೆ	2016-17 – ರೂ 12080/- 2017-18" 2018-19 – ರೂ 12684/-
2.	ಡಾ:ಬಿ.ಆರ್.ಅಂಬೇಡ್ಕರ್, ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ ಮೀನುಗಾರರ ಸಹಕಾರ ಸಂಘ., ದಂಡಿನಶಿವರ, ತುರುವೇಕೆರೆ ತಾಲ್ಲೂಕು	34/ನೊಂದಣಿ/ಆರ್‌ಸಿಎಸ್/ 34605/2005-06 ದಿ:01.09.2005	ಸಾರಿಗೆಹಳ್ಳಕೆರೆ	2016-17 – ರೂ 66150/- 2017-18" 2018-19 – ರೂ 69458/-
3	ತುರುವೇಕೆರೆ ಮೀನು ಉತ್ಪಾದನಾ ಮಾರಾಟ ಅಭಿವೃದ್ಧಿ ಸಹಕಾರ ಸಂಘ(ನಿ), ಬಸವೇಶ್ವರ ನಗರ ತುರುವೇಕೆರೆ ತಾಲ್ಲೂಕು	ಸಂಸನಿ/34/ಆರ್‌ಜಿಎಸ್/42 603/2012-13 ದಿ:26.07.2012	ತುರುವೇಕೆರೆಕೆರೆ	2016-17 – ರೂ 75521/- 2017-18 2018-19 – ರೂ 79297/-
4	ಮೀನುಗಾರರ ಸಹಕಾರ ಸಂಘ ನಿ., ಮಲ್ಲಾಘಟ್ಟ, ತುರುವೇಕೆರೆ ತಾಲ್ಲೂಕು	ಎಆರ್‌ಟಿ/ಆರ್‌ಎಸ್‌ಆರ್/ ಆರ್‌ಇಆರ್‌ಎಸ್/ಎಫ್‌ಸಿಎಸ್ /4395/1980-81 ದಿ:26.07.1980	ಮಲ್ಲಾಘಟ್ಟಕೆರೆ	2016-17 – ರೂ 173644/- 2017-18" – 2018-19 – ರೂ 1082326/-
5	ಪರಿಶಿಷ್ಟ ಜಾತಿ / ಪ.ಪಂಗಡದ ಮೀನುಗಾರರ ಸಹಕಾರ ಸಂಘ., ಬಾಣಸಂದ್ರ, ತುರುವೇಕೆರೆ ತಾಲ್ಲೂಕು	ಸಂಸನಿ/34/ಆರ್‌ಜಿಎಸ್/16 01/2012-13 ದಿ:29.06.2012	ಯಾವುದೇ ಕೆರೆ ಪಡೆದಿರುವುದಿಲ್ಲ	

6	ತುಮಕೂರು ಜಿಲ್ಲಾ ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆಯ ಫಲಾನುಭವಿಗಳ ಸಹಕಾರ ಸಂಘ ನಿ., ದುಂಡ, ತುರುವೇಕೆರೆ ತಾಲ್ಲೂಕು.	ಜಿಆರ್‌ಜಿ/ನೊಂದಣಿ/69/15/ 26105/1999-2000	ತುರುವೇಕೆರೆ, ವಿಧಾನಸಭಾ ಕ್ಷೇತ್ರದಲ್ಲಿ ಯಾವುದೇ ಕೆರೆಯನ್ನು ಪಡೆದಿರುವುದಿಲ್ಲ. ಆದರೆ, ಸದರಿ ಸಂಘವು ಜಿಲ್ಲಾ ವ್ಯಾಪ್ತಿಯ ಸಹಕಾರ ಸಂಘವಾದುದರಿಂದ 2015-16 ನೆ ಸಾಲಿನಿಂದ ಕುಣಿಗಲ್ ತಾಲ್ಲೂಕಿನ, ಕುಣಿಗಲ್ ದೊಡ್ಡಕೆರೆಯ ಮೀನು ಪಾಶುವಾರು ಹಕ್ಕನ್ನು ಪಡೆದಿರುತ್ತದೆ.	
7	ಶ್ರೀ ಹೊರಕೇರಮ್ಮ ಮೀನುಗಾರರ ಸಹಕಾರ ಸಂಘ ನಿ., ಸಿ.ಎಸ್.ಪುರ, ಗುಬ್ಬಿ ತಾಲ್ಲೂಕು	-	ಸಿ.ಎಸ್.ಪುರ ಕೆರೆ	2017-18 – 97531/- 2018-19 – 102408/- (ಸದರಿ ಸಂಘವು ಸದರಿ ಕೆರೆಯ ಮೀನು ಪಾಶುವಾರು ಹಕ್ಕನ್ನು 2017-18 ನೇ ಸಾಲಿನಿಂದ ಪಡೆದಿರುತ್ತದೆ.)
8	ಶ್ರೀ ಗದ್ದೇಹಳ್ಳಿ ಮಹಿಳಾ ಮೀನುಗಾರರ ಸಹಕಾರ ಸಂಘ ನಿ., ಗದ್ದೆಹಳ್ಳಿ, ಗುಬ್ಬಿ ತಾಲ್ಲೂಕು.	-	ಯಾವುದೇ ಕೆರೆಯನ್ನು ಪಡೆದಿರುವುದಿಲ್ಲ	

**ಬರಗಾಲದ ಹಿನ್ನೆಲೆಯಲ್ಲಿ ಸರ್ಕಾರದ ಆದೇಶ ಸಂ.ಪಸಂಮೀ:87:ಮೀಇಇ:2016,ಬೆಂಗಳೂರು ದಿ:19.05.2017 ರಂತೆ ಹಿಂದಿನ ಸಾಲಿನ ಗುತ್ತಿಗೆ ಮೊತ್ತವನ್ನು ಹೊಂದಾಣಿಕೆ ಮಾಡಿಕೊಂಡು ಗುತ್ತಿಗೆ ಅವಧಿ ವಿಸ್ತರಿಸಿದೆ.

ಮೀನುಗಾರಿಕೆ ನಿರ್ದೇಶಕರು
ಬೆಂಗಳೂರು
12-2-2019

— X —



ಕರ್ನಾಟಕ ಸರ್ಕಾರ

ಸಂಖ್ಯೆ:ಪಸಂಮೀ 26 ಸಲೆವಿ 2019

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸ ಸೌಧ
ಬೆಂಗಳೂರು, ದಿನಾಂಕ:14.02.2019

ಇವರಿಂದ:

ಸರ್ಕಾರದ ಕಾರ್ಯದರ್ಶಿ,
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ,
ಬೆಂಗಳೂರು.

ಇವರಿಗೆ:

ಕಾರ್ಯದರ್ಶಿ,
ಕರ್ನಾಟಕ ವಿಧಾನಸಭೆ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು.

ಮಾನ್ಯರೇ,

ವಿಷಯ: ವಿಧಾನಸಭೆ ಮಾನ್ಯ ಸದಸ್ಯರಾದ ಶ್ರೀ ಉಮೇಶ್ ವಿಶ್ವನಾಥ್ ಕತ್ತಿ (ಹುಕ್ಕೇರಿ) ವಿಧಾನ ಸಭಾ ಕ್ಷೇತ್ರ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1222 ಕ್ಕೆ ಉತ್ತರ ಕಳುಹಿಸುವ ಬಗ್ಗೆ.

***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ವಿಧಾನಸಭೆ ಮಾನ್ಯ ಸದಸ್ಯರಾದ ಶ್ರೀ ಉಮೇಶ್ ವಿಶ್ವನಾಥ್ ಕತ್ತಿ (ಹುಕ್ಕೇರಿ) ವಿಧಾನ ಸಭಾ ಕ್ಷೇತ್ರ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1222 ಕ್ಕೆ ಕನ್ನಡ ಭಾಷೆಯಲ್ಲಿ ಉತ್ತರದ 150 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ

14/02/2019

(ಟಿ.ಹನುಮಂತೇಗೌಡ)
ಸರ್ಕಾರದ ಅಧೀನ ಕಾರ್ಯದರ್ಶಿ,
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ,
(ಪಶುಸಂಗೋಪನೆ)

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1222
ಸದಸ್ಯರ ಹೆಸರು : ಶ್ರೀ. ಉಮೇಶ್ ವಿಶ್ವನಾಥ್ ಕತ್ತಿ (ಹುಕ್ಕೇರಿ)
ಉತ್ತರಿಸುವ ದಿನಾಂಕ : 15.02.2019
ಉತ್ತರಿಸುವ ಸಚಿವರು : ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವರು

ಕ್ರ. ಸಂ.	ಪ್ರಶ್ನೆಗಳು	ಉತ್ತರಗಳು
(ಅ)	ಪ್ರಸ್ತುತ ಬರಪರಿಸ್ಥಿತಿಯಲ್ಲಿ ಜಾನುವಾರುಗಳ ಮೇವಿನ ಕೊರತೆ ನೀಗಿಸಲು ಸರ್ಕಾರವು ರೈತರಿಗೆ ಮೇವು ಬೆಳೆಯಲು ಬೀಜಗಳನ್ನು ವಿತರಣೆ ಮಾಡುತ್ತಿದೆಯೇ;	ಹೌದು.
ಎಫ್.ಎ.ಕ್ಯೂ ಗುಣಮಟ್ಟ ಉತ್ಪನ್ನಗಳು	ಪ್ರಭೇದ	ಕನಿಷ್ಠ ಬೆಂಬಲ ಬೆಲೆ (ರೂ. ಪ್ರತಿ ಕ್ವಿಂಟಾಲ್‌ಗೆ)	ಕೇಂದ್ರ ಸರ್ಕಾರದ ಬೋನಸ್ (ರೂ. ಪ್ರತಿ ಕ್ವಿಂಟಾಲ್‌ಗೆ)	ರಾಜ್ಯ ಸರ್ಕಾರದ ಪ್ರೋತ್ಸಾಹ ಧನ (ರೂ. ಪ್ರತಿ ಕ್ವಿಂಟಾಲ್‌ಗೆ)	ಒಟ್ಟು ಕನಿಷ್ಠ ಬೆಂಬಲ ಬೆಲೆ + ಕೇಂದ್ರ ಸರ್ಕಾರದ ಬೋನಸ್ (ರೂ. ಪ್ರತಿ ಕ್ವಿಂಟಾಲ್‌ಗೆ)
ಭತ್ತ	ಸಾಮಾನ್ಯ	1750	–	–	1750
	ಗ್ರೇಡ್ 'ಎ'	1770	–	–	1770
ಜೋಳ	ಹೈಬ್ರೀಡ್	2430	–	–	2430
	ಮಾಲ್ದಂಡಿ	2450			2450
ಮೆಕ್ಕೆಜೋಳ		1700	–	–	1700
ಸಜ್ಜೆ		1950	–	–	1950
ರಾಗಿ		2897	–	–	2897
ತೊಗರಿ		5675	–	425	6100
ಹೆಸರು		6975	–	–	6975
ಉದ್ದು		5600	–	–	5600
ಶೇಂಗಾ (ಸಿಪ್ಪೆ ಸಹಿತ)		4890	–	–	4890
ಸೋಯಾಬೀನ್		3399	–	–	3399
ಸೂರ್ಯಕಾಂತಿ ಬೀಜ		5388	–	–	5388
ಎಳ್ಳು		6249	–	–	6249
ಹುಚ್ಚೆಳ್ಳು		5877	–	–	5877
ಹತ್ತಿ	ಮೀಡಿಯಂ ಸ್ಟೇಪಲ್ (ಲೆನ್ತ್ 24.5–25.5 ಮಿ.ಮೀ. ಮತ್ತು ಮೈಕ್ರೋನೇರ್ ವ್ಯಾಲ್ಯೂ 4.3–5.1 ಮಿ.ಮೀ)	5150	–	–	5150
	ಲಾಂಗ್ ಸ್ಟೇಪಲ್ (ಲೆನ್ತ್ 29.5–30.5 ಮಿ.ಮೀ. ಮತ್ತು ಮೈಕ್ರೋನೇರ್ ವ್ಯಾಲ್ಯೂ 3.5–4.3 ಮಿ.ಮೀ)	5450	–	–	5450
ಸುಲಿದ ತೆಂಗಿನಕಾಯಿ		2030	–	–	2030
ಕೊಬ್ಬರಿ	ಮಿಲ್ಲಿಂಗ್	9521	–	–	9521
	ಉಂಡೆ	9920	–	–	9920
ಗೋಧಿ		1840	–	–	1840
ಜವೆಗೋಧಿ		1440	–	–	1440
ಕಡಲೆಕಾಳು		4620	–	–	4620
ಚನ್ನಂಗಿ ಬೇಳೆ		4475	–	–	4475
ಸಾಸುವೆ		4200	–	–	4200
ಕುಸುಬೆ		4945	–	–	4945



ಅನುಬಂಧ- 3

2018–19ನೇ ಸಾಲಿನಲ್ಲಿ ಖರೀದಿಸಲಾದ ವಿವಿಧ ಉತ್ಪನ್ನಗಳ ವಿವರಗಳು:

ಕ್ರ ಸಂ.	ಖರೀದಿಸಲಾದ ಉತ್ಪನ್ನದ ಹೆಸರು	ಬೆಂಬಲ ಬೆಲೆ/ಮಾರುಕಟ್ಟೆ ಮಧ್ಯಪ್ರವೇಶ ದರ ಹಾಗೂ ರಾಜ್ಯ ಸರ್ಕಾರದ ಪ್ರೋತ್ಸಾಹ ಧನ (ಪ್ರತಿ ಕ್ವಿಂಟಾಲ್‌ಗೆ)	ಖರೀದಿ ಸಂಸ್ಥೆಯ ಹೆಸರು	ಖರೀದಿ ಪ್ರಮಾಣ (ಕ್ವಿಂಟಾಲ್ ಗಳಲ್ಲಿ)	ಮೌಲ್ಯ (ಕೋಟಿ ಗಳಲ್ಲಿ)	ರೈತ ಫಲಾನುಭವಿಗಳ ಸಂಖ್ಯೆ
1.	ಹೆಸರು ಕಾಳು	ರೂ.6,975/-	ಮಾರ್ಕ್‌ಫೆಡ್, ಬೆಂಗಳೂರು	2,97,063.86	207.20	75,069
2.	ಉದ್ದಿನಕಾಳು	ರೂ.5,600/-	ಮಾರ್ಕ್‌ಫೆಡ್, ಬೆಂಗಳೂರು	1,703	0.95	278
3.	ಸೋಯಾಬೀನ್	ರೂ.3,399/-	ಮಾರ್ಕ್‌ಫೆಡ್, ಬೆಂಗಳೂರು	60	0.020	8
4	ತೊಗರಿ	ರೂ.5675+425=6100	ಮಾರ್ಕ್‌ಫೆಡ್, ಬೆಂಗಳೂರು, ತೊಗರಿ ಅಭಿವೃದ್ಧಿ ಮಂಡಳಿ, ಕಲಬುರ್ಗಿ	ಖರೀದಿ ಪ್ರಕ್ರಿಯೆ ಜಾರಿಯಲ್ಲಿರುತ್ತದೆ		
5	ಭತ್ತ	ರೂ.1750/-	ಕೆಎಫ್‌ಸಿಎಸ್‌ಸಿ/ಕೆಸ್‌ಡಬ್ಲ್ಯೂಸಿ ಮಾರ್ಕ್‌ಫೆಡ್	ಖರೀದಿ ಪ್ರಕ್ರಿಯೆ ಜಾರಿಯಲ್ಲಿರುತ್ತದೆ.		
6	ರಾಗಿ	ರೂ.2897/-	ಕೆಎಫ್‌ಸಿಎಸ್‌ಸಿ/ಕೆಸ್‌ಡಬ್ಲ್ಯೂಸಿ ಮಾರ್ಕ್‌ಫೆಡ್	ಖರೀದಿ ಪ್ರಕ್ರಿಯೆ ಜಾರಿಯಲ್ಲಿರುತ್ತದೆ		
7	ಬಿಳಿಜೋಳ	ರೂ.2450/-	ಕೆಎಫ್‌ಸಿಎಸ್‌ಸಿ/ಕೆಸ್‌ಡಬ್ಲ್ಯೂಸಿ ಮಾರ್ಕ್‌ಫೆಡ್	ಖರೀದಿ ಪ್ರಕ್ರಿಯೆ ಜಾರಿಯಲ್ಲಿರುತ್ತದೆ		



ಕರ್ನಾಟಕ ಸರ್ಕಾರ

ಸಂ:ಬಿಸಿಡಬ್ಲ್ಯೂ 157 ಬಿಎಂಎಸ್ 2019

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ:14.02.2019

ಇವರಿಂದ:
ಸರ್ಕಾರದ ಕಾರ್ಯದರ್ಶಿಗಳು,
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ,
ವಿಕಾಸಸೌಧ,
ಬೆಂಗಳೂರು.

ಇವರಿಗೆ:
ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ/ಪರಿಷತ್ತು,
ವಿಧಾನಸೌಧ,
ಬೆಂಗಳೂರು.

ಮಾನ್ಯರೇ,

ವಿಷಯ: ಮಾನ್ಯ ವಿಧಾನ ಸಭೆ/ಪರಿಷತ್ತಿನ ಸದಸ್ಯರಾದ ಶ್ರೀ ಅನಿಲ್ ಬೆನಕೆ (ಬೆಳಗಾವಿ) ಇವರ ಚುಕ್ಕೆ ಗುರುತಿನ/ಗುರುತಿಲ್ಲದ ಪ್ರ.ಸಂ. 381 ಕ್ಕೆ ಉತ್ತರಿಸುವ ಕುರಿತು.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಮಾನ್ಯ ವಿಧಾನ ಸಭೆ/ಪರಿಷತ್ತಿನ ಸದಸ್ಯರಾದ ಶ್ರೀ ಅನಿಲ್ ಬೆನಕೆ (ಬೆಳಗಾವಿ) ಇವರ ಚುಕ್ಕೆ ಗುರುತಿನ/ಗುರುತಿಲ್ಲದ ಪ್ರ.ಸಂ. 381 ಕ್ಕೆ ಸಂಬಂಧಿಸಿದಂತೆ ಉತ್ತರದ ೩೫೦ ಪ್ರತಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ ಮುಂದಿನ ಅಗತ್ಯ ಕ್ರಮಕ್ಕಾಗಿ ಕಳುಹಿಸಿಕೊಡಲಾಗಿದೆ.

ತಮ್ಮ ನಂಬುಗೆಯ,

14/2

ಶಾಖಾಧಿಕಾರಿ,
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	381
ಮಾನ್ಯ ಸದಸ್ಯರ ಹೆಸರು	ಶ್ರೀ ಹರೀಶ್ ಪೂಂಜ (ಬೆಳ್ತಂಗಡಿ)
ಉತ್ತರಿಸಬೇಕಾದ ದಿನಾಂಕ	15.02.2019
ಉತ್ತರಿಸುವ ಸಚಿವರು	ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
ಅ)	ಕಳೆದ ಮೂರು ವರ್ಷಗಳಲ್ಲಿ ಬೆಳ್ತಂಗಡಿ ವಿಧಾನಸಭಾ ಕ್ಷೇತ್ರಕ್ಕೆ ಇಲಾಖೆಯಿಂದ ನೀಡಿರುವ ಅನುದಾನ ಎಷ್ಟು;	ಕಳೆದ ಮೂರು ವರ್ಷಗಳಲ್ಲಿ ಬೆಳ್ತಂಗಡಿ ವಿಧಾನಸಭಾ ಕ್ಷೇತ್ರಕ್ಕೆ ಇಲಾಖೆಯಿಂದ ನೀಡಿರುವ ಅನುದಾನದ ಮಾಹಿತಿಯನ್ನು ಅನುಬಂಧದಲ್ಲಿ ಒದಗಿಸಿದೆ.
ಆ)	ಪ್ರಸಕ್ತ ಸಾಲಿನಲ್ಲಿ ಯಾವ ಯಾವ ಯೋಜನೆಗಳಿಗೆ ಅನುದಾನ ನೀಡಲು ಪ್ರಸ್ತಾವನೆ ಬಂದಿದೆ?	ಪ್ರಸಕ್ತ ಸಾಲಿನಲ್ಲಿ ಬೆಳ್ತಂಗಡಿ ತಾಲ್ಲೂಕಿಗೆ ಸಂಬಂಧಿಸಿದಂತೆ ಯಾವುದೇ ಯೋಜನೆಗಳಿಗೆ ಅನುದಾನ ನೀಡುವಂತೆ ಪ್ರಸ್ತಾವನೆ ಬಂದಿರುವುದಿಲ್ಲ.

ಸಂ: ಹಿಂವಕ 157 ಬಿಎಂಎಸ್ 2019

(ಸಿ.ಪುಟ್ಟರಂಗಶೆಟ್ಟಿ)
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.

ಅನುಬಂಧ

2015-16, 2016-17 ಮತ್ತು 2017-18ನೇ ಸಾಲಿನಲ್ಲಿ ಬೆಳ್ತಂಗಡಿ ವಿಧಾನಸಭಾ ಕ್ಷೇತ್ರಕ್ಕೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಹಂಚಿಕೆ ಮಾಡಿರುವ ಅನುದಾನದ ವಿವರ

ಜಿಲ್ಲೆಯ ಹೆಸರು: ದಕ್ಷಿಣ ಕನ್ನಡ				(ರೂ. ಲಕ್ಷಗಳಲ್ಲಿ)
ಕ್ರ.ಸಂ	ಕಾರ್ಯಕ್ರಮದ ಹೆಸರು ಮತ್ತು ಲೆಕ್ಕಶೀರ್ಷಿಕೆ	2015-16	2016-17	2017-18
	ರಾಜ್ಯವಲಯ ಯೋಜನೆ			
1	ಕೌಶಲ್ಯ ತರಬೇತಿ ಕಾರ್ಯಕ್ರಮ 2225-03-277-2-37	7.47	10.44	1.58
2	ಕೇಂದ್ರ ಪುರಸ್ಕೃತ ಮೆ.ನಂ ವಿದ್ಯಾರ್ಥಿ ವೇತನ 2225-03-277-2-51	157.01	295.55	0.00
3	ಕೇಂದ್ರ ಪುರಸ್ಕೃತ ಮೆ.ಪೂ ವಿದ್ಯಾರ್ಥಿ ವೇತನ 2225-03-277-2-52	38.80	52.50	58.42
4	ಹೊಸ ವಿದ್ಯಾರ್ಥಿ ನಿಲಯಗಳು 2225-03-277-2-53	42.00	73.51	45.46
5	ಹಿಂ. ವರ್ಗಗಳ ಸಮೂದಾಯಭವನಕ್ಕೆ ಸಹಾಯಧನ 2225-03-001-0-05	1.00	0.00	0.00
6	ಅಲೆಮಾರಿ/ಅರೆ ಅಲೆಮಾರಿ ಜನಾಂಗದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ 2225-03-102-0-12	0.60	1.07	0.67
7	ತಾ.ಹಿಂ.ವರ್ಗಗಳ ವಿಸ್ತರಣಾಧಿಕಾರಿ ಕಚೇರಿ ಡಾಟಾ ಎಂಟ್ರಿ ಆಪರೇಟರ್ ಗೌರವಧನ 2225-03-277-3-11	2.27	1.70	0.72
8	ಆಹಾರ ಮತ್ತು ವಸತಿ ಸಹಾಯ ಯೋಜನೆ 2225-03-283-0-03	51.07	84.01	15.64
9	ಕಟ್ಟಡಗಳ ನಿರ್ಮಾಣ 2225-03-277-2-06	0.00	0.00	0.00
	ಒಟ್ಟು	300.22	518.78	122.49
	ಜಿಲ್ಲಾವಲಯ ಯೋಜನೆ			
1	ವಿದ್ಯಾರ್ಥಿ ನಿಲಯಗಳ ನಿರ್ವಹಣೆ 2225-00-103-0-26	290.43	288.10	367.19

ಕ್ರ.ಸಂ	ಕಾರ್ಯಕ್ರಮದ ಹೆಸರು ಮತ್ತು ಲೆಕ್ಕಶೀರ್ಷಿಕೆ	2015-16	2016-17	2017-18
2	ಕಟ್ಟಡಗಳ ವೆಚ್ಚ ಮತ್ತು ನಿರ್ವಹಣೆ 2225-00-103-0-40	7.50	9.00	8.00
3	ಹೊಲಿಗೆ ತರಬೇತಿ ಕೇಂದ್ರಗಳ ನಿರ್ವಹಣೆ 2225-00-103-0-53	0.00	0.00	0.00
4	ವಕೀಲರಿಗೆ ಶಿಷ್ಯವೇತನ 2225-00-103-0-58	0.19	0.48	1.22
5	ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ-2225-00-103-0-66	19.01	26.20	30.17
6	ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳ ಸುಧಾರಣೆ 2225-00-103-0-72	6.96	7.33	7.67
7	ಹಿಂದುಳಿದ ವರ್ಗಗಳ ತಾಲೂಕು ವಿಸ್ತರಣಾ ಕಚೇರಿಗಳು 2225-00-103-0-74	5.07	3.25	7.21
8	ಹೆಚ್ಚುವರಿ ಊಟ ಮತ್ತು ವಸತಿ ವೆಚ್ಚಗಳ ಹಣ ಸಂದಾಯ 2225-00-103-0-76	11.00	0.00	0.00
9	ಇತರೆ ಹಿಂದುಳಿದ ವರ್ಗಗಳಿಗೆ ಶುಲ್ಕ ರಿಯಾಯಿತಿ-2225-00-103-0-28	131.54	169.20	211.50
10	ದೇವರಾಜ ಅರಸು ಜನ್ಮ ದಿನಾಚರಣೆ 2225-00-103-0-56	0.15	0.15	0.15
11	ಹೊಲಿಗೆ ತರಬೇತಿ ಕೇಂದ್ರಗಳ ನಿರ್ವಹಣೆ 2225-00-103-0-78	13.90	10.00	8.58
12	ವಿದ್ಯಾರ್ಥಿ ನಿಲಯಗಳಲ್ಲಿರುವವರಿಗೆ ಪ್ರೋತ್ಸಾಹಕ (ಇ.ಬಿ.ಎಲ್) 2225-00-103-0-79	0.66	0.66	0.75
	ಒಟ್ಟು	486.41	514.37	642.44
	ರಾಜ್ಯವಲಯ ಮತ್ತು ಜಿಲ್ಲಾವಲಯ ಸೇರಿ ಒಟ್ಟು	786.63	1033.14	764.93



ಕರ್ನಾಟಕ ಸರ್ಕಾರ

ಸಂ:ಬಿಸಿಡಬ್ಲ್ಯು 154 ಬಿಎಂಎಸ್ 2019

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ:14.02.2019

ಇವರಿಂದ:

ಸರ್ಕಾರದ ಕಾರ್ಯದರ್ಶಿಗಳು,
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ,
ವಿಕಾಸಸೌಧ,
ಬೆಂಗಳೂರು.

ಇವರಿಗೆ:

ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ/ಪರಿಷತ್ತು,
ವಿಧಾನಸೌಧ,
ಬೆಂಗಳೂರು.

ಮಾನ್ಯರೇ,

ವಿಷಯ: ಮಾನ್ಯ ವಿಧಾನ ಸಭೆ/ಪರಿಷತ್ತಿನ ಸದಸ್ಯರಾದ ಶ್ರೀ/ಶ್ರೀಮತಿ ---------- ----------ಇವರ ಚುಕ್ಕೆ ಗುರುತಿನ/ಗುರುತಿಲ್ಲದ ಪ್ರ.ಸಂ.--286 ----ಕ್ಕೆ ಉತ್ತರಿಸುವ ಕುರಿತು.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಮಾನ್ಯ ವಿಧಾನ ಸಭೆ/ಪರಿಷತ್ತಿನ ಸದಸ್ಯರಾದ ಶ್ರೀ/ಶ್ರೀಮತಿ ---------------------- ಇವರ ಚುಕ್ಕೆ ಗುರುತಿನ/ಗುರುತಿಲ್ಲದ ಪ್ರ.ಸಂ.---286 ---ಕ್ಕೆ ಸಂಬಂಧಿಸಿದಂತೆ ಉತ್ತರದ ---250--- ಪ್ರತಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ ಮುಂದಿನ ಅಗತ್ಯ ಕ್ರಮಕ್ಕಾಗಿ ಕಳುಹಿಸಿಕೊಡಲಾಗಿದೆ.

ತಮ್ಮ ನಂಬುಗೆಯ,

ಶಾಖಾಧಿಕಾರಿ
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	286
ಮಾನ್ಯ ಸದಸ್ಯರ ಹೆಸರು	ಶ್ರೀ ರವಿ ಸಿ.ಟಿ. (ಚಿಕ್ಕಮಗಳೂರು)
ಉತ್ತರಿಸಬೇಕಾದ ದಿನಾಂಕ	15.02.2019
ಉತ್ತರಿಸುವ ಸಚಿವರು	ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ	ರಾಜ್ಯದಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಹಾಸ್ಟೆಲ್‌ಗಳಲ್ಲಿ ವಿದ್ಯಾರ್ಥಿಗಳಿಗೆ ಯಾವ ಯಾವ ಸೌಲಭ್ಯ ನೀಡಲಾಗುತ್ತಿದೆ;	ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಿದ್ಯಾರ್ಥಿ ನಿಲಯಗಳಲ್ಲಿರುವ ವಿದ್ಯಾರ್ಥಿಗಳಿಗೆ ಊಟ-ವಸತಿಯನ್ನು ಒದಗಿಸುವುದರ ಜೊತೆಗೆ ಮೆಟ್ರಿಕ್-ಪೂರ್ವ ವಿದ್ಯಾರ್ಥಿಗಳಿಗೆ ಲೇಖನ ಸಾಮಗ್ರಿ, ಪಠ್ಯಪುಸ್ತಕ, ಸಮವಸ್ತ್ರ, ಜಮಖಾನ-ಹೊದಿಕೆ ಅರೆಕಾಲಿಕ ಬೋಧಕ ವ್ಯವಸ್ಥೆ, ಶುಚಿ ಸಂಭ್ರಮ ಕಿಟ್, ವಾರ್ತಾ ಪತ್ರಿಕೆ, ಕ್ರೀಡಾ ಸಾಮಗ್ರಿ ಇತ್ಯಾದಿ ಹಾಗೂ ಮೆಟ್ರಿಕ್-ನಂತರದ ವಿದ್ಯಾರ್ಥಿಗಳಿಗೆ ಆಂಗ್ಲ ಮತ್ತು ಕನ್ನಡ ದಿನಪತ್ರಿಕೆ, ಶುಚಿ ಸಂಭ್ರಮ ಕಿಟ್, ಜಮಖಾನ-ಹೊದಿಕೆ, ಗ್ರಂಥಾಲಯ ಪುಸ್ತಕಗಳು ಇತ್ಯಾದಿ ಸೌಲಭ್ಯಗಳನ್ನು ನೀಡಲಾಗುತ್ತಿದೆ.
ಆ	ಚಿಕ್ಕಮಗಳೂರು ಜಿಲ್ಲೆಯಲ್ಲಿ ಹಾಸ್ಟೆಲ್‌ಗಳ ವಿದ್ಯಾರ್ಥಿಗಳಿಗೆ ಆಹಾರ ಸಾಮಗ್ರಿಗಳು ಹಾಗೂ ಇತರೆ ದಿನಬಳಕೆ ವಸ್ತುಗಳನ್ನು ಪೂರೈಸಲು ಪ್ರತಿ ವರ್ಷ ಎಷ್ಟು ವೆಚ್ಚ ಮಾಡಲಾಗುತ್ತಿದೆ;	ಚಿಕ್ಕಮಗಳೂರು ಜಿಲ್ಲೆಯಲ್ಲಿನ ಹಾಸ್ಟೆಲ್‌ಗಳ ವಿದ್ಯಾರ್ಥಿಗಳಿಗೆ ಆಹಾರ ಸಾಮಗ್ರಿಗಳು ಹಾಗೂ ಇತರೆ ದಿನಬಳಕೆ ವಸ್ತುಗಳನ್ನು ಪೂರೈಸಲು 2018-19ನೇ ಸಾಲಿನ ಜನವರಿ ಅಂತ್ಯಕ್ಕೆ ರೂ.1056.78 ಲಕ್ಷ ವೆಚ್ಚ ಮಾಡಲಾಗಿರುತ್ತದೆ.
ಇ	ಕಳೆದ ಮೂರು ವರ್ಷಗಳಲ್ಲಿ ಚಿಕ್ಕಮಗಳೂರು ಜಿಲ್ಲೆಯ ಹಾಸ್ಟೆಲ್‌ಗಳಿಗೆ ಆಹಾರ ಸಾಮಗ್ರಿಗಳನ್ನು ಹಾಗೂ ಇನ್ನಿತರೆ ದಿನಬಳಕೆ ಸಾಮಗ್ರಿಗಳನ್ನು ಯಾರು ಮೂಲಕ ಪೂರೈಕೆ ಮಾಡಲಾಗುತ್ತಿದೆ;	2015-16ನೇ ಸಾಲಿನಿಂದ 2017-18ನೇ ಸಾಲಿನವರೆಗೆ ಚಿಕ್ಕಮಗಳೂರು ಜಿಲ್ಲೆಯ ಹಾಸ್ಟೆಲ್‌ಗಳಿಗೆ ಆಹಾರ ಸಾಮಗ್ರಿಗಳನ್ನು ಹಾಗೂ ಇನ್ನಿತರೆ ದಿನಬಳಕೆ ಸಾಮಗ್ರಿಗಳನ್ನು ಸರಬರಾಜು ಮಾಡಿರುವವರ ವಿವರಗಳು ಈ ಕೆಳಕಂಡಂತಿವೆ.

ತಾಲ್ಲೂಕು	2015-16	2016-17	2017-18
ಚಿಕ್ಕಮಗಳೂರು	ಕೆ.ಎಸ್.ಸಿ.ಸಿ.ಎಫ್, ಬೆಂಗಳೂರು (ಕರ್ನಾಟಕ ಸ್ಟೇಟ್ ಕನ್ಸೂಮರ್ ಕೋ-ಅಪರೇಟಿವ್ ಫೆಡರೇಷನ್)		ಎಲ್.ವಿ. ಟ್ರೇಡರ್ಸ್, ಸಾಗರ
ತರೀಕೆರೆ			
ಕಡೂರು			ಚಾಣಕ್ಯ ಎಂಟರ್ ಪ್ರೈಸಸ್, ದಾವಣಗೆರೆ
ಮೂಡಿಗೆರೆ			ಕೆ.ಎಸ್.ಸಿ.ಸಿ.ಎಫ್ (ಕರ್ನಾಟಕ ಸ್ಟೇಟ್ ಕನ್ಸೂಮರ್ ಕೋ-ಅಪರೇಟಿವ್ ಫೆಡರೇಷನ್
ಶೃಂಗೇರಿ			
ಎನ್.ಆರ್.ಪುರ			
ಕೊಪ್ಪ			

ಕ್ರ.ಸಂ	ಪ್ರಶ್ನೆ	ಉತ್ತರ
ಈ	ಸರಬರಾಜುದಾರರನ್ನು ಯಾವ ಮಾನದಂಡವನ್ನಿಟ್ಟುಕೊಂಡು ಗುರುತಿಸಿ ಸಾಮಗ್ರಿಗಳನ್ನು ಸರಬರಾಜು ಮಾಡಲು ಅನುಮತಿ ನೀಡಲಾಗಿದೆ (ವಿವರ ಒದಗಿಸುವುದು)?	ಕೆ.ಟಿ.ಪಿ.ಪಿ ನಿಯಮಗಳನ್ವಯ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಪ್ರಕ್ರಿಯೆ ನಡೆಸಿ, ಟೆಂಡರ್‌ನಲ್ಲಿ ವಿಧಿಸಲಾಗಿರುವ ಎಲ್ಲಾ ಷರತ್ತುಗಳನ್ನು ಪೂರೈಸಿದ್ದ ಎಲ್-1 ಟೆಂಡರ್‌ದಾರರಿಗೆ ಜಿಲ್ಲಾಧಿಕಾರಿಯ ಅಧ್ಯಕ್ಷತೆಯಲ್ಲಿ ರಚಿಸಲಾಗಿರುವ ಜಿಲ್ಲಾ ಸಮಿತಿಯ ಅನುಮೋದನೆಯನ್ನು ಪಡೆದು, ಸರಬರಾಜು ಆದೇಶ ನೀಡಲಾಗುತ್ತದೆ.

ಸಂ: ಹಿಂವಕ 154 ಬಿಎಂಎಸ್ 2019

(ಸಿ.ಪುಟ್ಟರಂಗಶೆಟ್ಟಿ)
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.



ಕರ್ನಾಟಕ ಸರ್ಕಾರ

ಸಂ:ಬಿಸಿಡಬ್ಲ್ಯೂ 158 ಬಿಎಂಎಸ್ 2019

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ: 02.2019

ಇವರಿಂದ:
ಸರ್ಕಾರದ ಕಾರ್ಯದರ್ಶಿಗಳು,
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ,
ವಿಕಾಸಸೌಧ,
ಬೆಂಗಳೂರು.

ಇವರಿಗೆ:
ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ/ಪರಿಷತ್ತು,
ವಿಧಾನಸೌಧ,
ಬೆಂಗಳೂರು.

ಮಾನ್ಯರೇ,

ವಿಷಯ: ಮಾನ್ಯ ವಿಧಾನ ಸಭೆ/ಪರಿಷತ್ತಿನ ಸದಸ್ಯರಾದ ಶ್ರೀ/ಶ್ರೀಮತಿ ಲಾಲಾಜಿ ಆರ್ ಮೆಂಡನ್ (ಕಾಪು) ಇವರ ಚುಕ್ಕೆ ಗುರುತಿನ/ಗುರುತಿಲ್ಲದ ಪ್ರ.ಸಂ. 191 -----ಕ್ಕೆ ಉತ್ತರಿಸುವ ಕುರಿತು.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಮಾನ್ಯ ವಿಧಾನ ಸಭೆ/ಪರಿಷತ್ತಿನ ಸದಸ್ಯರಾದ ಶ್ರೀ/ಶ್ರೀಮತಿ ಲಾಲಾಜಿ ಆರ್ ಮೆಂಡನ್ ಇವರ ಚುಕ್ಕೆ ಗುರುತಿನ/ಗುರುತಿಲ್ಲದ ಪ್ರ.ಸಂ.------ಕ್ಕೆ ಸಂಬಂಧಿಸಿದಂತೆ ಉತ್ತರದ -------- ಪ್ರತಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ ಮುಂದಿನ ಅಗತ್ಯ ಕ್ರಮಕ್ಕಾಗಿ ಕಳುಹಿಸಿಕೊಡಲಾಗಿದೆ.

ತಮ್ಮ ನಂಬುಗೆಯ,

[signature] 14/2

ಶಾಖಾಧಿಕಾರಿ
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	191
ಮಾನ್ಯ ಸದಸ್ಯರ ಹೆಸರು	ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ)
ಉತ್ತರಿಸಬೇಕಾದ ದಿನಾಂಕ	15.02.2019
ಉತ್ತರಿಸುವ ಸಚಿವರು	ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ವಿವಿಧ ಅಭಿವೃದ್ಧಿ ನಿಗಮಗಳಲ್ಲಿ ಗಂಗಾ ಕಲ್ಯಾಣ ಯೋಜನೆಯಡಿ ವೈಯಕ್ತಿಕ ಕೊಳವೆ ಬಾವಿ ಫಲಾನುಭವಿಗಳಿಗೆ ಬಾವಿ ನಿರ್ಮಿಸುವಾಗ No Water No Money ನಿಯಮ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
ಆ)	ಹಾಗಿದ್ದಲ್ಲಿ, ಗಂಗಾ ಕಲ್ಯಾಣ ಯೋಜನೆಯಡಿ ಆಯ್ಕೆ ಆದ ಫಲಾನುಭವಿಗಳು ಹಾಗೂ ಕೊಳವೆ ಬಾವಿ ತೋಡುವ ಏಜೆನ್ಸಿಗಳು ತೋಡುವ ಬಾವಿಯಲ್ಲಿ ನೀರು ಬಾರದೇ ಇದ್ದರೆ ಫಲಾನುಭವಿಗಳು ಅಥವಾ ಏಜೆನ್ಸಿಗಳು ನಷ್ಟ ಭರಿಸುವುದು ಸರಿಯೇ?	ಗಂಗಾ ಕಲ್ಯಾಣ ಯೋಜನೆ ಪ್ರಾರಂಭದಿಂದ ಇಲ್ಲಿಯವರೆಗೆ ಗಂಗಾ ಕಲ್ಯಾಣ ಯೋಜನೆಯಡಿ ಕೊಳವೆ ಬಾವಿಗಳನ್ನು ನೀರಿಲ್ಲದಿದ್ದರೆ ಹಣವಿಲ್ಲ (No Water No Money) ತತ್ವದ ಮೇಲೆ ಕೊಳವೆ ಬಾವಿ ಕೊರೆಯಿಸಲಾಗುತ್ತಿದೆ. ಯೋಜನೆಗೆ ನಿಗಧಿ ಪಡಿಸಿರುವ ನಿಬಂಧನೆಯಂತೆ ಡ್ರಿಲ್ಲಿಂಗ್ ಏಜೆನ್ಸಿ ನೇಮಕ ಮಾಡಿಕೊಂಡಿರುವ ಭೂ ವಿಜ್ಞಾನಿ ಮೂಲಕ ಫಲಾನುಭವಿ ಜಮೀನಿನಲ್ಲಿ ಸೂಕ್ತ ಜಲಬಿಂದು ಗುರುತಿಸಿ ನೀರು ದೊರೆಯುವುದು ದೃಢಪಟ್ಟ ನಂತರ ಕೊಳವೆ ಬಾವಿ ಕೊರೆಯಬೇಕಾಗಿರುತ್ತದೆ. ಪ್ರತಿ ಗಂಟೆಗೆ 1000 ಗ್ಯಾಲನ್‌ಗಿಂತ ಕಡಿಮೆ ನೀರು ದೊರೆತ ಕೊಳವೆ ಬಾವಿಯನ್ನು ವಿಫಲವೆಂದು ಪರಿಗಣಿಸಿ ಬಿಲ್ಲಿನ ಮೊತ್ತವನ್ನು ಡ್ರಿಲ್ಲಿಂಗ್ ಏಜೆನ್ಸಿಗೆ ಪಾವತಿಸುವುದಿಲ್ಲ. ಇದರಿಂದಾಗಿ ಫಲಾನುಭವಿಗೆ ಯಾವುದೆ ಆರ್ಥಿಕ ನಷ್ಟ ಉಂಟಾಗುವುದಿಲ್ಲ. ಈ ನಿಬಂಧನೆಗೆ ಒಪ್ಪಿ ಏಜೆನ್ಸಿಗಳು ಟೆಂಡರ್‌ನಲ್ಲಿ ಭಾಗವಹಿಸಿ ಕೊಳವೆ ಬಾವಿ ಕೊರೆಯುವ ಕೆಲಸ ಪಡೆಯುವುದರಿಂದ ಏಜೆನ್ಸಿಗಳು ನಷ್ಟವನ್ನು ಭರಿಸಬೇಕಾಗಿರುತ್ತದೆ.

ಸಂ: ಹಿಂವಕ 152 ಬಿಎಂಎಸ್ 2019

(ಸಿ.ಪುಟ್ಟರಂಗಶೆಟ್ಟಿ)
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.

ಕರ್ನಾಟಕ ಸರ್ಕಾರ

ಸಂಖ್ಯೆ: ಹಿಂವಕ 39 ಬಿಸಿಎ 2019

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ:13.02.2019.

169

Unstard
15/02/19

ಇವರಿಂದ:-

ಸರ್ಕಾರದ ಕಾರ್ಯದರ್ಶಿ,
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ,
ಬೆಂಗಳೂರು.

ಇವರಿಗೆ:-

ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ,
ವಿಧಾನಸೌಧ,
ಬೆಂಗಳೂರು.

ಮಾನ್ಯರೆ,

ವಿಷಯ:- ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ಸಂಜೀವ ಮಠಂದೂರ್ (ಪುತ್ತೂರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1101ಕ್ಕೆ ಉತ್ತರಿಸುವ ಕುರಿತು.

ಉಲ್ಲೇಖ:- ಪತ್ರ ಸಂಖ್ಯೆ:ಪ್ರಶಾವಿಸ/15ನೇವಿಸ/3ಅ/ಪ್ರ.ಸಂ-1101/2019, ದಿ:07.02.2019.

*****

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಸಂಜೀವ ಮಠಂದೂರ್ (ಪುತ್ತೂರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1101ಕ್ಕೆ ಉತ್ತರದ 200 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಲಾಗಿದೆ.

ತಮ್ಮ ನಂಬುಗೆಯ,

Kalava

(ಎಸ್.ಎನ್. ಕಲಾವತಿ)
ಸರ್ಕಾರದ ಅಧೀನ ಕಾರ್ಯದರ್ಶಿ-1
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ.

-4

ಕರ್ನಾಟಕ ವಿಧಾನ ಸಭಾ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ :	1101
ಮಾನ್ಯ ಸದಸ್ಯರ ಹೆಸರು :	ಶ್ರೀ ಸಂಜೀವ ಮಠಂದೂರ್ (ಪುತ್ತೂರು)
ಉತ್ತರಿಸಬೇಕಾದ ದಿನಾಂಕ :	15.02.2019
ಉತ್ತರಿಸುವ ಸಚಿವರು :	ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಾಸವಾಗಿರುವ ಅತೀ ಸಣ್ಣ (Micro Community) ಸಮುದಾಯ ಮುಖಾರಿ ಯಾನೆ ಮುವಾರಿ ಸಮುದಾಯವನ್ನು ಹಿಂದುಳಿದ ವರ್ಗಗಳ (OBC) ಸಮುದಾಯಕ್ಕೆ ಸೇರಿಸಲಾಗಿದೆಯೇ;	ಸೇರಿರುವುದಿಲ್ಲ.
ಆ)	ಹಿಂದುಳಿದ ಸಮುದಾಯದಲ್ಲಿ ಪರಿಗಣಿಸದಿದ್ದರೆ, ಈ ಸಮುದಾಯ ಯಾವ ವರ್ಗಕ್ಕೆ ಸೇರುತ್ತದೆ?	ಸರ್ಕಾರದ ಆದೇಶ ಸಂಖ್ಯೆ: ಸಕಇ 225 ಬಿಸಿಎ 2000, ದಿನಾಂಕ:30.03.2002ರ ಹಿಂದುಳಿದ ವರ್ಗಗಳ ಜಾತಿ ಮೀಸಲಾತಿ ಪಟ್ಟಿಯಲ್ಲಿ ಈ ಸಮುದಾಯವು ಯಾವುದೇ ಪ್ರವರ್ಗದಡಿ ಸೇರಿರುವುದಿಲ್ಲ.

ಸಂಖ್ಯೆ: ಹಿಂವಕ 39 ಬಿಸಿಎ 2019

ಸಿ. ಪುಟ್ಟರಂಗಶೆಟ್ಟಿ
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.



ಕರ್ನಾಟಕ ಸರ್ಕಾರ

ಸಂ:ಬಿಸಿಡಬ್ಲ್ಯೂ 153 ಬಿಎಂಎಸ್ 2019

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ:14.02.2019

ಇವರಿಂದ:

ಸರ್ಕಾರದ ಕಾರ್ಯದರ್ಶಿಗಳು,
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ,
ವಿಕಾಸಸೌಧ,
ಬೆಂಗಳೂರು.

ಇವರಿಗೆ:

ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ/ಪರಿಷತ್ತು,
ವಿಧಾನಸೌಧ,
ಬೆಂಗಳೂರು.

ಮಾನ್ಯರೇ,

ವಿಷಯ: ಮಾನ್ಯ ವಿಧಾನ ಸಭೆ/ಪರಿಷತ್ತಿನ ಸದಸ್ಯರಾದ ಶ್ರೀ/ಶ್ರೀಮತಿ ರವಿ ಸಿ.ಟಿ. (ಚಿಕ್ಕಮಗಳೂರು) ಇವರ ಚುಕ್ಕೆ ಗುರುತಿನ/ಗುರುತಿಲ್ಲದ ಪ್ರ.ಸಂ. 284 ಕ್ಕೆ ಉತ್ತರಿಸುವ ಕುರಿತು.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಮಾನ್ಯ ವಿಧಾನ ಸಭೆ/ಪರಿಷತ್ತಿನ ಸದಸ್ಯರಾದ ಶ್ರೀ/ಶ್ರೀಮತಿ ರವಿ ಸಿ.ಟಿ. ಚಿಕ್ಕಮಗಳೂರು ಇವರ ಚುಕ್ಕೆ ಗುರುತಿನ/ಗುರುತಿಲ್ಲದ ಪ್ರ.ಸಂ. 284 ಕ್ಕೆ ಸಂಬಂಧಿಸಿದಂತೆ ಉತ್ತರದ 250 ಪ್ರತಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ ಮುಂದಿನ ಅಗತ್ಯ ಕ್ರಮಕ್ಕಾಗಿ ಕಳುಹಿಸಿಕೊಡಲಾಗಿದೆ.

ತಮ್ಮ ನಂಬುಗೆಯ,

14/2

ಶಾಖಾಧಿಕಾರಿ
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	284
ಮಾನ್ಯ ಸದಸ್ಯರ ಹೆಸರು	ಶ್ರೀ ರವಿ.ಸಿ.ಟಿ (ಚಿಕ್ಕಮಗಳೂರು)
ಉತ್ತರಿಸಬೇಕಾದ ದಿನಾಂಕ	15.02.2019
ಉತ್ತರಿಸುವ ಸಚಿವರು	ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ	ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಕಳೆದ ಮೂರು ವರ್ಷಗಳಲ್ಲಿ ಚಿಕ್ಕಮಗಳೂರು ಜಿಲ್ಲೆಗೆ ಬಿಡುಗಡೆ ಮಾಡಿರುವ ಅನುದಾನವೆಷ್ಟು (ತಾಲ್ಲೂಕುವಾರು ವಿವರ ಒದಗಿಸುವುದು);	ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಕಳೆದ ಮೂರು ವರ್ಷಗಳಲ್ಲಿ ಚಿಕ್ಕಮಗಳೂರು ಜಿಲ್ಲೆಗೆ ಬಿಡುಗಡೆ ಮಾಡಿರುವ ಮತ್ತು ಖರ್ಚು ಮಾಡಿರುವ ಅನುದಾನದ ತಾಲ್ಲೂಕುವಾರು ವಿವರವನ್ನು ಅನುಬಂಧ-1ರಲ್ಲಿ ನೀಡಲಾಗಿದೆ.
ಆ	ಈ ಅನುದಾನವನ್ನು ಯಾವ ಯಾವ ಉದ್ದೇಶಗಳಿಗಾಗಿ ವೆಚ್ಚ ಮಾಡಲಾಗಿದೆ;	
ಇ	ಈ ಅನುದಾನದಲ್ಲಿ ಅಲೆಮಾರಿ ಹಾಗೂ ಅರೆಅಲೆಮಾರಿ ಜನಾಂಗದವರು ವಾಸಿಸುವ ಗ್ರಾಮಗಳಲ್ಲಿ ಮೂಲಸೌಕರ್ಯ ಒದಗಿಸಲು ಎಷ್ಟು ವೆಚ್ಚ ಮಾಡಲಾಗಿದೆ? (ವರ್ಷವಾರು ತಾಲ್ಲೂಕುವಾರು ಕಾಮಗಾರಿಗಳ ವಿವರ ಒದಗಿಸುವುದು)	ಅಲೆಮಾರಿ ಹಾಗೂ ಅರೆಅಲೆಮಾರಿ ಜನಾಂಗದವರು ವಾಸಿಸುವ ಗ್ರಾಮಗಳಲ್ಲಿ ಮೂಲಸೌಕರ್ಯ ಕಾಮಗಾರಿಗಳಿಗೆ ಬಿಡುಗಡೆ ಮತ್ತು ವೆಚ್ಚ ಮಾಡಲಾದ ವರ್ಷವಾರು, ತಾಲ್ಲೂಕುವಾರು ವಿವರವನ್ನು ಅನುಬಂಧ-2ರಲ್ಲಿ ನೀಡಲಾಗಿದೆ.

ಸಂ: ಹಿಂವಕ 153 ಬಿಎಂಎಸ್ 2019

(ಸಿ.ಪುಟ್ಟರಂಗಶೆಟ್ಟಿ)
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.

ಅನುಬಂಧ-1

[illegible] 2011-[illegible]

[illegible] ಚಿಕ್ಕಮಗಳೂರು

	[illegible]	ಜಿಲ್ಲಾ ಕಛೇರಿ, ಚಿಕ್ಕಮಗಳೂರು		ತಾಲ್ಲೂಕಿನ ಹೆಸರು: ಚಿಕ್ಕಮಗಳೂರು		ತಾಲ್ಲೂಕಿನ ಹೆಸರು: ಕಡೂರು		ತಾಲ್ಲೂಕಿನ ಹೆಸರು: ಕೊಪ್ಪ		ತಾಲ್ಲೂಕಿನ ಹೆಸರು: ಮೂಡಿಗೆರೆ		ತಾಲ್ಲೂಕಿನ ಹೆಸರು: ನರಾಪುರ		ತಾಲ್ಲೂಕಿನ ಹೆಸರು: ಶೃಂಗೇರಿ		ತಾಲ್ಲೂಕಿನ ಹೆಸರು: ತರೀಕೆರೆ	
		ಬಿಡುಗಡೆ ಯಾಗಿರುವ ಮೊತ್ತ	ಖರ್ಚಾ ಗಿರುವ ಮೊತ್ತ	ಬಿಡುಗಡೆ ಯಾಗಿರುವ ಮೊತ್ತ	ಖರ್ಚಾ ಗಿರುವ ಮೊತ್ತ	ಬಿಡುಗಡೆ ಯಾಗಿರುವ ಮೊತ್ತ	ಖರ್ಚಾ ಗಿರುವ ಮೊತ್ತ	ಬಿಡುಗಡೆ ಯಾಗಿರುವ ಮೊತ್ತ	ಖರ್ಚಾ ಗಿರುವ ಮೊತ್ತ	ಬಿಡುಗಡೆ ಯಾಗಿರುವ ಮೊತ್ತ	ಖರ್ಚಾ ಗಿರುವ ಮೊತ್ತ	ಬಿಡುಗಡೆ ಯಾಗಿರುವ ಮೊತ್ತ	ಖರ್ಚಾ ಗಿರುವ ಮೊತ್ತ	ಬಿಡುಗಡೆ ಯಾಗಿರುವ ಮೊತ್ತ	ಖರ್ಚಾ ಗಿರುವ ಮೊತ್ತ	ಬಿಡುಗಡೆ ಯಾಗಿರುವ ಮೊತ್ತ	ಖರ್ಚಾ ಗಿರುವ ಮೊತ್ತ
	ರಾಜ್ಯ ವಲಯ ಯೋಜನೇತರ																
1	[illegible] ವರ್ಗಗಳ ಅಭಿವೃದ್ಧಿ ನಿಗಮ ಲಿಮಿಟೆಡ್ 2225-03-102-0-12	-	-	-	-					-	-						
2	[illegible] ಸಮುದಾಯಗಳ ಅಭಿವೃದ್ಧಿ 2225-03-001-0-05	413.75	413.75	-	-	-	-			-	-						
3	ಆರ್ಥಿಕ, ಅರಿವು ಮತ್ತು ಪ್ರೋತ್ಸಾಹ [illegible] ವರ್ಗಗಳ ವಿದ್ಯಾರ್ಥಿಗಳಿಗಾಗಿ ಕಾರ್ಯಕ್ರಮ 2225-03-277-2-37	15.07	12.83	1.13	1.13	-	-	-	-	-	-			0.43	0.43	5.62	5.62
4	[illegible] ವಿದ್ಯಾರ್ಥಿಗಳಿಗೆ [illegible] ([illegible]) 2225-03-277-2-51			32.78	32.78	0.26	0.26	2.72	2.72	2.80	2.80			0.08	0.08	0.57	0.57
5	[illegible] ವಿದ್ಯಾರ್ಥಿಗಳಿಗೆ [illegible] ([illegible]) 2225-03-277-2-52			0.03	0.03	38.42	38.42	9.73	9.73	12.09	12.09	7.55	5.47	0.02	0.02	17.85	17.85
6	2225-03-277-2-53 ಮೆಟ್ರಿಕ್ [illegible]	-		161.25	161.25	67.24	67.24			12.00	11.87					16.33	16.33
	[illegible] OBJECT CODE:059			-	-							6.87	4.55	19.01	19.01		
	OBJECT CODE: 034		-	25.62	25.62	-	-	-	-	2.42	2.42	5.03	4.81	3.58	3.58	3.10	3.06
	OBJECT CODE: 423		-	4.12	4.12	4.25	4.25	-	-	0.90	0.90	1.17	0.40	0.51	0.51	0.51	0.51
	OBJECT CODE: 422		-	20.60	20.60	1.55	1.55			0.59	0.59	2.73	0.09	1.50	1.50	1.53	1.51
7	ಆಹಾರ ಮತ್ತು ವಸತಿ ಸಹಾಯ - [illegible]2225-03-800-0-31	93.53	93.50	-	-					-	-						
8	2225-03-277-3-11 ತಾಲ್ಲೂಕು ಕಛೇರಿಗಳಿಗೆ ಡಾಟಾ ಎಂಟ್ರಿ ಆಪರೇಟರ್ ಗ್ರೇಡ್-2 ಸಿಬ್ಬಂದಿಗಳ ಗೌರವಧನ [illegible](034)		-	1.92	1.92	0.66	0.66	3.20	2.14	2.06	2.06	2.00	1.34	1.71	1.71	1.04	0.97
	ವಾಹನ ಬಾಡಿಗೆ(059)		-	1.00	1.00	1.08	1.08		-	-	-	1.27	0.99	0.87	0.52	1.48	1.47
	ಗ್ರೂಪ್ ಡಿ ನೌಕರರ ವೇತನ(051)		-	0.42	0.42	0.42	0.42		-	1.36	1.36	1.09	0.84				
	ಒಟ್ಟು	522.35	520.08	248.87	248.87	113.88	113.88	15.65	14.59	34.22	34.09	27.71	19.39	27.71	27.36	48.03	47.89
	ಜಿಲ್ಲಾ ವಲಯ ಯೋಜನೇತರ																
	[illegible]			4.00	4.00	4.50	4.50	2.00	1.98	2.50	2.50	3.00	2.84	2.00	2.00	2.50	2.50
[illegible]	[illegible] ಕಛೇರಿ [illegible]-00-103-0-39	53.00	52.96	-	-					-	-						

ಕ್ರ ಸಂ	ಕಾರ್ಯಕ್ರಮದ ಹೆಸರು ಮತ್ತು ಲೆಕ್ಕಶೀರ್ಷಿಕೆ	ಜಿಲ್ಲಾ ಕಛೇರಿ, ಚಿಕ್ಕಮಗಳೂರು		ತಾಲ್ಲೂಕಿನ ಹೆಸರು ಚಿಕ್ಕಮಗಳೂರು		ತಾಲ್ಲೂಕಿನ ಹೆಸರು ಕಡೂರು		ತಾಲ್ಲೂಕಿನ ಹೆಸರು ಕೊಪ್ಪ		ತಾಲ್ಲೂಕಿನ ಹೆಸರು ಮೂಡಿಗೆರೆ		ತಾಲ್ಲೂಕಿನ ಹೆಸರು [illegible]		ತಾಲ್ಲೂಕಿನ ಹೆಸರು ಶೃಂಗೇರಿ		[illegible]	
		ಬಿಡುಗಡೆಯಾಗಿರುವ ಮೊತ್ತ	ಖರ್ಚಾಗಿರುವ ಮೊತ್ತ	ಬಿಡುಗಡೆಯಾಗಿರುವ ಮೊತ್ತ	ಖರ್ಚಾಗಿರುವ ಮೊತ್ತ	ಬಿಡುಗಡೆಯಾಗಿರುವ ಮೊತ್ತ	ಖರ್ಚಾಗಿರುವ ಮೊತ್ತ	ಬಿಡುಗಡೆಯಾಗಿರುವ ಮೊತ್ತ	ಖರ್ಚಾಗಿರುವ ಮೊತ್ತ	ಬಿಡುಗಡೆಯಾಗಿರುವ ಮೊತ್ತ	ಖರ್ಚಾಗಿರುವ ಮೊತ್ತ	ಬಿಡುಗಡೆಯಾಗಿರುವ ಮೊತ್ತ	ಖರ್ಚಾಗಿರುವ ಮೊತ್ತ	ಬಿಡುಗಡೆಯಾಗಿರುವ ಮೊತ್ತ	ಖರ್ಚಾಗಿರುವ ಮೊತ್ತ	ಬಿಡುಗಡೆಯಾಗಿರುವ ಮೊತ್ತ	[illegible]
3	ವಿದ್ಯಾರ್ಥಿ ನಿಲಯಗಳ ನಿರ್ವಹಣೆ 2225-00-103-0-26 (001)			490.02	490.02	162.55	162.55	26.30	24.87	113.00	111.63	29.00	27.45	15.30	12.16	63.10	[illegible]
	ವಿದ್ಯಾರ್ಥಿ ನಿಲಯಗಳ ನಿರ್ವಹಣೆ 2225-00-103-0-26 (090)			-	-	756.35	756.35	65.00	65.00			30.00	66.72	108.82	108.82	199.01	[illegible]
	ಹೊರಗುತ್ತಿಗೆ ವೇತನ 2225-00-103-0-26 (034)			80.95	80.875	73.20	73.20	24.30	24.30	15.12	15.12	26.00	25.12	26.20	26.20	41.77	[illegible]
4	ಹೊಲಿಗೆ ತರಬೇತಿ ಕೇಂದ್ರಗಳ ನಿರ್ವಹಣೆ 2225-00-103-0-53			-	-	-	-	5.00	5.00	-	-						
5	ಕಟ್ಟಡಗಳ ವೆಚ್ಚ ಮತ್ತು ನಿರ್ವಹಣೆ 2225-00-103-0-40	55.00	55.00	-	-	-	-	-	-	-							
6	ಹಿಂದುಳಿದ ವರ್ಗಗಳ ತಾಲ್ಲೂಕು ವಿಸ್ತರಣಾ ಕಛೇರಿಗಳು 2225-00-103-0-74	-		1.75	1.75	7.00	3.92	1.50	1.50	8.24	5.06	5.75	3.28	7.66	1.41	5.6[illegible]	[illegible]
7	ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ 2225-00-103-0-66		-	110.00	110.00	100.00	96.19	25.00	24.99	28.00	26.42	27.98	27.98	26.00	22.78	63.77	[illegible]
8	ವಕೀಲರಿಗೆ ಶಿಷ್ಯ ವೇತನ 2225-00-103-0-58	4.00	3.99	-	-	-	-	-	-	-	-						
9	ವಿದ್ಯಾರ್ಥಿ ನಿಲಯಗಳಲ್ಲಿರುವವರಿಗೆ ಪ್ರೋತ್ಸಾಹಕ 2225-00-103-0-79			8.50	8.50	10.28	4.73	1.18	0.55	1.71	0.62	1.00	1.00	2.41	1.00	2.51	[illegible]
10	ಆಶ್ರಮಶಾಲೆಗಳು 2225-00-103-0-41	17.49	ಹಿಂದಿರುಗಿ ಸಲಾಗಿದೆ.	-	-	-	-	-	-	-	-						
11	ಇತರೆ ಹಿಂ ವರ್ಗಗಳಿಗೆ ಶುಲ್ಕ ವಿನಾಯಿತಿ 2225-00-103-0-28	623.75	623.62	-	-			-	-	-	-						
12	ದೇವರಾಜ ಅರಸು ಜನ್ಮಶತಾಬ್ದಿಆಚರಣೆ 2225-00-103-0-56	-	-	1.00	1.00	-	-	-	-	-	-						
13	ಹೊಲಿಗೆ ತರಬೇತಿ ಕೇಂದ್ರಗಳ ನಿರ್ವಹಣೆ2225-00-103-0-78	-		-	-	4.00	4.00	-	-	-	-						
14	ಅನಾಥಾಲಯಗಳಿಗೆ ಸಹಾಯಧನ 2225-00-103-0-73	-	-	-	-	-	-	-	-	-					-		
	ಒಟ್ಟು	753.24	735.57	696.22	696.15	1117.88	1105.44	150.28	148.19	168.57	161.95	162.73	155.41	188.39	174.37	376.35	395.55

ಅನುಬಂಧ-2

ಮೂಲ ಸೌಕರ್ಯ ಕಾಮಗಾರಿಗಳ ವರ್ಷವಾರು, ತಾಲ್ಲೂಕುವಾರು ವಿವರ

ಕ್ರ.ಸಂ	ವರ್ಷ	ತಾಲ್ಲೂಕು	ಸ್ಥಳ	ಕಾಮಗಾರಿ ವಿವರ	ಕಾಮಗಾರಿ ಯನ್ನು ವಹಿಸಿರುವ ಏಜೆನ್ಸಿಯ ಹೆಸರು, ವಿಳಾಸ.	ಬಿಡುಗಡೆ ಮಾಡಲಾದ ಅನುದಾನ	ವಿನಿಯೋಗಿಸಿರುವ ಅನುದಾನ
1	2015-16	ಕಡೂರು	ಮಂಗೇನಹಳ್ಳಿ, ಗೊಲ್ಲರಹಟ್ಟಿ	ಸಿಸಿ ರಸ್ತೆ ಮತ್ತು ಬಾಕ್ಸ್ ಚರಂಡಿ ನಿರ್ಮಾಣ	ಪಂ.ರಾ.ಇಂ.. ವಿಭಾಗ. ಚಿಕ್ಕಮಗಳೂರು	10.00	8.345
			ನೋಂಬಿದಾಸರ ಕಾಲೋನಿ (1.ಜೋಡಿಹೋಚಿಹಳ್ಳಿ ಗ್ರಾ.ಪಂ. ದಾಸರಹಟ್ಟಿ 2.ಸಿಡಘಟ್ಟ ಗ್ರಾ.ಪಂ. ದಾಸರಹಟ್ಟಿ 3. ದೇವನೂರು ಗ್ರಾ.ಪಂ. ಜಡಕನಕಟ್ಟೆ ದಾಸರಹಟ್ಟಿ 4.ಹುಲ್ಲೇನಹಳ್ಳಿ ಗ್ರಾ.ಪಂ. ಬ್ಯಾಗಡೇಹಳ್ಳಿ ದಾಸರಹಟ್ಟಿ)			15.00	13.233
			ಚೀಲನಹಳ್ಳಿ ಕಾಲೋನಿ			15.00	14.78
			ಒಟ್ಟು			40.00	36.36
2	2016-17	ತರೀಕೆರೆ	ಕಾರೇಹಳ್ಳಿ ಗೊಲ್ಲರಹಟ್ಟಿ	ಸಿಸಿ ರಸ್ತೆ ಮತ್ತು ಚರಂಡಿ ನಿರ್ಮಾಣ	ಪಂ.ರಾ.ಇಂ.. ವಿಭಾಗ. ಚಿಕ್ಕಮಗಳೂರು	8.00	-
			ಅರಬಲ ಗೊಲ್ಲರಹಟ್ಟಿ			8.00	6.832
			ಬಾಳಯ್ಯನ ಹೊಸೂರು ಗೊಲ್ಲರಹಟ್ಟಿ			5.00	4.892
		ತರೀಕೆರೆ	ಶಿವನಿ ಹೋಬಳಿ ಜಾವೂರು ಗ್ರಾಮ			8.00	6.361
			ಅಜ್ಜಂಪುರ ಹೋಬಳಿಯ ಅಜ್ಜಂಪುರ ಗ್ರಾಮ			8.00	6.832

ಕ್ರ. ಸಂ	ವರ್ಷ	ತಾಲ್ಲೂಕು	ಸ್ಥಳ	ಕಾಮಗಾರಿ ವಿವರ	[illegible]	ಬಿಡುಗಡೆ ಮಾಡಲಾದ ಅನುದಾನ	[illegible] ಅನುದಾನ
		ತರೀಕೆರೆ	ಲಕ್ಕವಳ್ಳಿ ಹೋಬಳಿ ದಾಸರಹಟ್ಟಿ ಗ್ರಾಮ	ಸಿಸಿ ರಸ್ತೆ ಮತ್ತು ಚರಂಡಿ ನಿರ್ಮಾಣ	ಪಂ.ರಾ.ಇಂ. ವಿಭಾಗ, ಚಿಕ್ಕಮಗಳೂರು	8.00	6.298
			ಶಿವನಿ ಹೋಬಳಿ ಮಚ್ಚೇನಹಟ್ಟಿ ಗ್ರಾಮ			8.00	6.060
		ಕಡೂರು	ಎಮ್ಮೆದೊಡ್ಡಿ			10.00	7.79
			ಡಿ.ದೇವರಾಜು ಅರಸು ಹೆಳವರ ಹಟ್ಟಿ			10.00	9.971
			ಹೋಚಿಹಳ್ಳಿ			10.00	-
			ಟಿ.ಬಿ.ಕಾವಲು (ದೊಂಬಿದಾಸ)			8.00	7.727
			ನಿಡಘಟ್ಟ(ಬುಂಡೆಬೆಸ್ತ)			10.00	8.05
			ಡಿ.ಕಾರೇಹಳ್ಳಿ			10.00	7.751
	2016-17	ಚಿಕ್ಕಮಗ ಳೂರು	ಅಜ್ಜನಹಟ್ಟಿ	ಸಿಸಿ ರಸ್ತೆ ಮತ್ತು ಚರಂಡಿ ನಿರ್ಮಾಣ	[illegible] ಕೆ.ಆರ್.ಐ.ಡಿ.ಎಲ್. ಚಿಕ್ಕಮಗಳೂರು	10.00	[illegible]
			ಘೋಣಿ ಹೋಚಿಹಳ್ಳಿ ಗೊಲ್ಲರಹಟ್ಟಿ			10.00	10.00
			ಮುಂಗೇನಹಳ್ಳಿ ಗೊಲ್ಲರಹಟ್ಟಿ			10.00	10.00
			ಒಟ್ಟು			141.00	108.56
3	2017-18	ಕಡೂರು	ಕ್ಯಾಗಡಹಳ್ಳಿ	ಸಿಸಿ ರಸ್ತೆ ಮತ್ತು ಬಾಕ್ಸ್ ಚರಂಡಿ ನಿರ್ಮಾಣ	ಕೆ.ಆರ್.ಐ.ಡಿ.ಎಲ್. ಚಿಕ್ಕಮಗಳೂರು	10.00	10.00
			ಸಖರಾಯ ಪಟ್ಟಣ ಹೋಬಳಿ, ನಿಡಘಟ್ಟ ಗ್ರಾ. ಪಂ. ಟಿ.ಬಿ.ಕಾವಲು. ದಾಸರ ಹಟ್ಟಿ			10.00	10.00
			ಜರಕನಕಟ್ಟೆ			10.00	10.00
			ದಾಸರಹಟ್ಟಿ ಗ್ರಾಮ ಕರೇಕಲ್ಲಹಳ್ಳಿ			8.00	8.00
			ಸಖರಾಯಪಟ್ಟಣ ಹೋಬಳಿ, ಚೋಡಿಹೋಚಿಹಳ್ಳಿ ಗ್ರಾಮ ಪಂಚಾಯಿತಿ ಗೊಲ್ಲರಹಟ್ಟಿ ಗ್ರಾಮ	ಸಿಸಿ ರಸ್ತೆ ಮತ್ತು ಬಾಕ್ಸ್ ಚರಂಡಿ ನಿರ್ಮಾಣ	ಕೆ.ಆರ್.ಐ.ಡಿ.ಎಲ್. ಚಿಕ್ಕಮಗಳೂರು	10.00	[illegible]
			ಸಖರಾಯಪಟ್ಟಣ ಹೋಬಳಿ, ನಾಗರಾಳು ಗ್ರಾಮ ಪಂಚಾಯಿತಿ ಮಾದೇನಹಳ್ಳಿ [illegible]			10.00	[illegible]

ವರ್ಷ	ತಾಲ್ಲೂಕು	ಸ್ಥಳ	ಕಾಮಗಾರಿ ವಿವರ	ಕಾಮಗಾರಿ ಯನ್ನು ವಹಿಸಿರುವ ಏಜೆನ್ಸಿಯ ಹೆಸರು, ವಿಳಾಸ	ಬಿಡುಗಡೆ ಮಾಡಲಾದ ಅನುದಾನ	ವಿನಿಯೋಗಿಸಿರುವ ಅನುದಾನ
2017-18	ಕಡೂರು	ದೇವರಾಜು ಅರಸು ಹೆಳವರ ಹಟ್ಟಿ	ಸಿಸಿ ರಸ್ತೆ ಮತ್ತು ಬಾಕ್ಸ್ ಚರಂಡಿ ನಿರ್ಮಾಣ	ಕೆ.ಆರ್.ಐ. ಡಿ.ಎಲ್. ಚಿಕ್ಕಮಗಳೂರು	10.00	10.00
		ಹರಳಘಟ್ಟ			10.00	10.00
	ತರೀಕೆರೆ	ಕೆಸರುಕೊಪ್ಪ			10.00	10.00
		ದಾಸರಹಟ್ಟಿ ಗ್ರಾಮ			10.00	10.00
		ಶಿವನಿ ಶ್ರೀರಂಗಲಿಪುರ			10.00	10.00
	ಒಟ್ಟು				108.00	108.00
2017-18	ಕಡೂರು	[illegible] ಪಂಚಾಯ್ತಿ, ಕೆ.ಗೊಲ್ಲರಹಟ್ಟಿ ಗ್ರಾಮ	ಸಿಸಿ ರಸ್ತೆ ಮತ್ತು ಚರಂಡಿ ನಿರ್ಮಾಣ	ಪಂ.ರಾ.ಇಂ. ವಿಭಾಗ, ಚಿಕ್ಕಮಗಳೂರು	8.00	8.00
		ಅಂತರಘಟ್ಟೆ ಪಂಚಾಯ್ತಿ ಸಿ.ಡಿ. ಗೊಲ್ಲರಹಟ್ಟಿ ಗ್ರಾಮ			5.00	5.00
		ಜೋಡಿಹೋಚಿಹಳ್ಳಿ ಗ್ರಾ.ಪಂ. ಹೋಚಿಹಳ್ಳಿ ಗೊಲ್ಲರಹಟ್ಟಿ			5.00	5.00
		ಸುಬ್ರಾಯಪಟ್ಟಣ ಲಕ್ಯಾ ಹೋಬಳಿ, ನಾಗರಾಳು ಗ್ರಾ. ಪಂ. ಮಂಗೇನಹಳ್ಳಿ ಗೊಲ್ಲರಹಟ್ಟಿ, ಭಾಗ್ಯಮ್ಮನ ಮನೆಯಿಂದ ಕದಿರಮ್ಮನ ಮನೆಯವರೆಗೆ			4.00	4.00
	ತರೀಕೆರೆ	ಗೇರುಮರಡಿ		ಕೆ.ಆರ್.ಐ. ಡಿ.ಎಲ್. ಚಿಕ್ಕಮಗಳೂರು	5.00	-
		ಮಂತ್ರೇ			5.00	-
		ಮೇಂದಿಹಳ್ಳಿ			5.00	-
	ಚಿಕ್ಕಮಗಳೂರು	ಎಸ್.ಬಿದರೆ ಗೊಲ್ಲರಹಟ್ಟಿ	ಸಿಸಿ ರಸ್ತೆ ಮತ್ತು ಚರಂಡಿ ನಿರ್ಮಾಣ	ಪಂ.ರಾ.ಇಂ. ವಿಭಾಗ, ಚಿಕ್ಕಮಗಳೂರು	5.00	4.50
		ಅಜ್ಜನಗೊಲ್ಲರಹಟ್ಟಿ			4.00	-
	ಒಟ್ಟು				46.00	26.50

ಕ್ರ. ಸಂ	ವರ್ಷ	ತಾಲ್ಲೂಕು	ಸ್ಥಳ	ಕಾಮಗಾರಿ ವಿವರ	[illegible]	ಬಿಡುಗಡೆ ಮಾಡಲಾದ ಅನುದಾನ	[illegible]
	2017-18	ಕಡೂರು	ಬೀರೂರು ಹೋಬಳಿ ಹರಳಘಟ್ಟ ಹಿಂಚಗುಂಟಲು ಹೆಳವರ ಕಂಗಲಿ ಚಂದ್ರಪ್ಪ ಹೆಳವರ ಇವರ ಮನೆಯಿಂದ ಈಶ್ವರಪ್ಪನವರ ಮನೆಯವರೆಗೆ	ಸಿ.ಸಿ ರಸ್ತೆ / ಚರಂಡಿ ನಿರ್ಮಾಣ	ಕೆ.ಆರ್.ಐ.ಡಿ.ಎಲ್. ಚಿಕ್ಕಮಗಳೂರು	10.00	10.00
			ದೇವರಾಜ ಅರಸು ಹೆಳವರಹಟ್ಟಿ ದೂರೆ ಹೆಳವರ್ ಮನೆಯಿಂದ ಹೆಳವ ಜನಾಂಗದ ಸರ್ಕಾರಿ ಶಾಲೆಯವರೆಗೆ			10.00	10.00
		ಒಟ್ಟು				20.00	20.00



ಕರ್ನಾಟಕ ಸರ್ಕಾರ

ಸಂಖ್ಯೆ:ಪಸಂಮೀ 28 ಮೀಇಇ 2019

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸಸೌಧ
ಬೆಂಗಳೂರು, ದಿನಾಂಕ: 14-02-2019

ಇವರಿಂದ
ಸರ್ಕಾರದ ಕಾರ್ಯದರ್ಶಿ,
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ,
ವಿಕಾಸಸೌಧ,
ಬೆಂಗಳೂರು-1.

ಇವರಿಗೆ
ಕಾರ್ಯದರ್ಶಿಗಳು,
ಕರ್ನಾಟಕ ವಿಧಾನಸಭೆ ಸಚಿವಾಲಯ,
ವಿಧಾನಸೌಧ
ಬೆಂಗಳೂರು.

ಮಾನ್ಯರೆ,

ವಿಷಯ:- ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀ ಸೋಮಲಿಂಗಪ್ಪ ಎಂ.ಎಸ್. (ಸಿರಗುಪ್ಪ)ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1215ಕ್ಕೆ ಉತ್ತರ ಒದಗಿಸುವ ಬಗ್ಗೆ.

******

ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀ ಸೋಮಲಿಂಗಪ್ಪ ಎಂ.ಎಸ್. (ಸಿರಗುಪ್ಪ)ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1215ಕ್ಕೆ ಸಂಬಂಧಿಸಿದ ಉತ್ತರದ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಮುಂದಿನ ಸೂಕ್ತ ಕ್ರಮಕ್ಕಾಗಿ ತಮಗೆ ಕಳುಹಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ
14/2/19
(ರಶ್ಮಿ ಶ್ರೀಕಾಂತ ಗಜರೆ)
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ
(ಮೀನುಗಾರಿಕೆ)

14/02/19

ಕರ್ನಾಟಕ ವಿಧಾನಸಭೆ

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1215

2) ಸದಸ್ಯರ ಹೆಸರು : ಶ್ರೀ ಸೋಮಲಿಂಗಪ್ಪ ಎಂ.ಎಸ್. (ಸಿರಗುಪ್ಪ)

3) ಉತ್ತರಿಸುವ ದಿನಾಂಕ : 15-02-2019

4) ಉತ್ತರಿಸಬೇಕಾದ ಸಚಿವರು : ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವರು

	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಮನೆ ಕಟ್ಟುವ ಪ್ರತಿಯೊಂದು ಸಾಮಗ್ರಿಯ ಧಾರಣೆ ಹೆಚ್ಚಿರುವುದರಿಂದ ಸರಕಾರ ನೀಡುವ ರೂ.1.20 ರಲ್ಲಿ ಮನೆ ನಿರ್ಮಿಸಲು ಆಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	**ಹೌದು.**
ಆ)	ಹಾಗಿದ್ದಲ್ಲಿ, ಮೀನುಗಾರರ ಮನೆಗಳಿಗೆ ನೀಡುವ ಅನುದಾನವನ್ನು ಪ್ರಸಕ್ತ ವರ್ಷದಿಂದ ಹೆಚ್ಚಿಸಲಾಗುವುದೇ;	ಪ್ರಸ್ತುತ ನೀಡುತ್ತಿರುವ ಅನುದಾನವನ್ನು ಹೆಚ್ಚಿಸುವ ಪ್ರಸ್ತಾವನೆಯು ಸರ್ಕಾರದ ಮುಂದಿರುವುದಿಲ್ಲ.
ಇ)	ಎಷ್ಟು ಅನುದಾನ ಹೆಚ್ಚಿಸಲಾಗುವುದು;	ಅನುದಾನವನ್ನು ಹೆಚ್ಚಿಸುವ ಪ್ರಸ್ತಾವನೆಯು ಸರ್ಕಾರದ ಮುಂದಿರುವುದಿಲ್ಲ.
ಈ)	ಸಿರಗುಪ್ಪ ವಿಧಾನಸಭಾ ಕ್ಷೇತ್ರದಲ್ಲಿ ಕಳೆದ ಮೂರು ವರ್ಷಗಳಿಂದ ಮೀನುಗಾರರಿಗೆ ಎಷ್ಟು ಮನೆಗಳನ್ನು ಹಂಚಿಕೆ ಮಾಡಲಾಗಿದೆ? (ವಿವರ ಒದಗಿಸುವುದು)	ಸಿರಗುಪ್ಪ ವಿಧಾನಸಭಾ ಮತಕ್ಷೇತ್ರಕ್ಕೆ ಕಳೆದ ಮೂರು ವರ್ಷಗಳಿಂದ ಮೀನುಗಾರರಿಗೆ ಹಂಚಿಕೆ ಮಾಡಲಾದ ಮನೆಗಳ ವಿವರ ಈ ಕೆಳಗಿನಂತಿದೆ.

ಕ್ರ. ಸಂ.	ವರ್ಷ	ಹಂಚಿಕೆ ಮಾಡಲಾದ ಮನೆಗಳ ಸಂಖ್ಯೆ
1	2015-16	8
2	2016-17	10
3	2017-18	15

ಸಂಖ್ಯೆ: ಪಸಂಮೀ 28 ಮೀಇಇ 2019

(ವೆಂಕಟರಾವ್ ನಾಡಗೌಡ)
ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವರು



ಕರ್ನಾಟಕ ಸರ್ಕಾರ

ಸಂ:ಬಿಸಿಡಬ್ಲ್ಯೂ 148 ಬಿಎಂಎಸ್ 2019

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ:13.02.2019

220
U/S
15/2/2019

ಇವರಿಂದ:
ಸರ್ಕಾರದ ಕಾರ್ಯದರ್ಶಿಗಳು,
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ,
ವಿಕಾಸಸೌಧ,
ಬೆಂಗಳೂರು.

ಇವರಿಗೆ:
ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ/ಪರಿಷತ್ತು,
ವಿಧಾನಸೌಧ,
ಬೆಂಗಳೂರು.

ಮಾನ್ಯರೇ,

ವಿಷಯ: ಮಾನ್ಯ ವಿಧಾನ ಸಭೆ/ಪರಿಷತ್ತಿನ ಸದಸ್ಯರಾದ [illegible] ಇವರ ಚುಕ್ಕೆ ಗುರುತಿನ/ಗುರುತಿಲ್ಲದ ಪ್ರ.ಸಂ. 57 ಕ್ಕೆ ಉತ್ತರಿಸುವ ಕುರಿತು.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಮಾನ್ಯ ವಿಧಾನ ಸಭೆ/ಪರಿಷತ್ತಿನ ಸದಸ್ಯರಾದ [illegible] ಇವರ ಚುಕ್ಕೆ ಗುರುತಿನ/ಗುರುತಿಲ್ಲದ ಪ್ರ.ಸಂ. 57 ಕ್ಕೆ ಸಂಬಂಧಿಸಿದಂತೆ ಉತ್ತರದ 250 ಪ್ರತಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ ಮುಂದಿನ ಅಗತ್ಯ ಕ್ರಮಕ್ಕಾಗಿ ಕಳುಹಿಸಿಕೊಡಲಾಗಿದೆ.

ತಮ್ಮ ನಂಬುಗೆಯ,

13/2

ಶಾಖಾಧಿಕಾರಿ,
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	57
ಮಾನ್ಯ ಸದಸ್ಯರ ಹೆಸರು	ಶ್ರೀ ಯತೀಂದ್ರ ಸಿದ್ಧರಾಮಯ್ಯ ಡಾ॥ (ವರುಣ)
ಉತ್ತರಿಸಬೇಕಾದ ದಿನಾಂಕ	15.02.2019
ಉತ್ತರಿಸುವ ಸಚಿವರು	ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
ಅ)	2018-19 ನೇ ಸಾಲಿನಲ್ಲಿ ರಾಜ್ಯದಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಎಷ್ಟು ಸಮುದಾಯ ಭವನಗಳನ್ನು ಮಂಜೂರು ಮಾಡಲು ಉದ್ದೇಶಿಸಿದೆ; ಈವರೆಗೆ ಎಷ್ಟು ಸಮುದಾಯ ಭವನಗಳನ್ನು ಮಂಜೂರು ಮಾಡಲಾಗಿದೆ;	2018-19 ನೇ ಸಾಲಿನಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಇದುವರೆಗೂ 128 ಸಮುದಾಯ ಭವನ/ವಿದ್ಯಾರ್ಥಿ ನಿಲಯ ಕಟ್ಟಡಗಳಿಗೆ ಮಂಜೂರಾತಿ ನೀಡಿ ಆದೇಶಿಸಲಾಗಿದೆ.
ಆ)	ವರುಣ ವಿಧಾನಸಭಾ ಕ್ಷೇತ್ರದಲ್ಲಿ ಎಷ್ಟು ಸಮುದಾಯ ಭವನಗಳನ್ನು ಮಂಜೂರು ಮಾಡಲಾಗಿದೆ; ಎಷ್ಟು ಭವನಗಳ ಕಾಮಗಾರಿಗಳು ಪ್ರಾರಂಭವಾಗಿವೆ; ಅಪೂರ್ಣಗೊಂಡಿರುವ ಭವನಗಳನ್ನು ಪೂರ್ಣಗೊಳಿಸಲು ಸರ್ಕಾರವು ತೆಗೆದುಕೊಂಡ ಕ್ರಮವೇನು;	ವರುಣ ವಿಧಾನಸಭಾ ಕ್ಷೇತ್ರದಲ್ಲಿ ಈವರಗೆ ಮಂಜೂರು ಮಾಡಲಾಗಿರುವ ಸಮುದಾಯ ಭವನಗಳ, ಕಾಮಗಾರಿ ಪ್ರಾರಂಭವಾಗಿರುವ ಕಾಮಗಾರಿಗಳ ಮಾಹಿತಿಯ ವಿವರಗಳು www.backwardclasses.kar. nic.in ರಲ್ಲಿ ಲಭ್ಯವಿರುತ್ತದೆ. ಸಂಘ-ಸಂಸ್ಥೆಗಳು ಸಲ್ಲಿಸುವ ದಾಖಲಾತಿ ಹಾಗೂ ಪ್ರಗತಿಯನ್ನಾಧರಿಸಿ ಲಭ್ಯವಿರುವ ಅನುದಾನ ಹಾಗೂ ರಾಜ್ಯದ ಒಟ್ಟಾರೆ ಬೇಡಿಕೆಯನ್ನಾಧರಿಸಿ ಸದರಿ ಭವನಗಳನ್ನು ಪೂರ್ಣಗೊಳಿಸಲು ಅನುದಾನ ಬಿಡುಗಡೆ ಬಗ್ಗೆ ಕ್ರಮವಹಿಸಲಾಗುವುದು.
ಇ)	2018-19 ನೇ ಸಾಲಿನಲ್ಲಿ ವರುಣ ಕ್ಷೇತ್ರಕ್ಕೆ ಹೊಸದಾಗಿ ಎಷ್ಟು ಭವನಗಳನ್ನು ಮಂಜೂರು ಮಾಡಲಾಗಿದೆ? (ವಿವರ ನೀಡುವುದು.)	ವರುಣ ಕ್ಷೇತ್ರಕ್ಕೆ 2018-19 ನೇ ಸಾಲಿನಲ್ಲಿ ಹೊಸದಾಗಿ ಯಾವುದೇ ಸಮುದಾಯ ಭವನಗಳು ಮಂಜೂರಾಗಿರುವುದಿಲ್ಲ.

ಸಂ: ಹಿಂವಕ 148 ಬಿಎಂಎಸ್ 2019

(ಸಿ.ಪುಟ್ಟರಂಗಶೆಟ್ಟಿ)
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.



ಕರ್ನಾಟಕ ಸರ್ಕಾರ

ಸಂ:ಬಿಸಿಡಬ್ಲ್ಯೂ 174 ಬಿಎಂಎಸ್ 2019

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ:14 .02.2019

ಇವರಿಂದ:

ಸರ್ಕಾರದ ಕಾರ್ಯದರ್ಶಿಗಳು,
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ,
ವಿಕಾಸಸೌಧ,
ಬೆಂಗಳೂರು.

ಇವರಿಗೆ:

ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ/ಪರಿಷತ್ತು,
ವಿಧಾನಸೌಧ,
ಬೆಂಗಳೂರು.

ಮಾನ್ಯರೇ,

ವಿಷಯ: ಮಾನ್ಯ ವಿಧಾನ ಸಭೆ/ಪರಿಷತ್ತಿನ ಸದಸ್ಯರಾದ ಶ್ರೀ/ಶ್ರೀಮತಿ ಶ್ರೀನಿವಾಸ್ ಎಲ್.ಬಿ.ಜಿ. (ಚಿಕ್ಕನಾಯಕನಹಳ್ಳಿ) ಇವರ ಚುಕ್ಕೆ ಗುರುತಿನ/ಗುರುತಿಲ್ಲದ ಪ್ರ.ಸಂ.1238 ----ಕ್ಕೆ ಉತ್ತರಿಸುವ ಕುರಿತು.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಮಾನ್ಯ ವಿಧಾನ ಸಭೆ/ಪರಿಷತ್ತಿನ ಸದಸ್ಯರಾದ ಶ್ರೀ/ಶ್ರೀಮತಿ ಶ್ರೀನಿವಾಸ್ ಎಲ್.ಬಿ.ಜಿ. (ಚಿಕ್ಕನಾಯಕನಹಳ್ಳಿ) ಇವರ ಚುಕ್ಕೆ ಗುರುತಿನ/ಗುರುತಿಲ್ಲದ ಪ್ರ.ಸಂ.1238 ---ಕ್ಕೆ ಸಂಬಂಧಿಸಿದಂತೆ ಉತ್ತರದ 250 ಪ್ರತಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ ಮುಂದಿನ ಅಗತ್ಯ ಕ್ರಮಕ್ಕಾಗಿ ಕಳುಹಿಸಿಕೊಡಲಾಗಿದೆ.

ತಮ್ಮ ನಂಬುಗೆಯ,

ಶಾಖಾಧಿಕಾರಿ
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	1238
ಮಾನ್ಯ ಸದಸ್ಯರ ಹೆಸರು	ಶ್ರೀ. ಭೀಮನಾಯ್ಕ್ ಎಲ್.ಬಿ.ಪಿ (ಹಗರಿಬೊಮ್ಮನಹಳ್ಳಿ)
ಉತ್ತರಿಸಬೇಕಾದ ದಿನಾಂಕ	15.02.2019
ಉತ್ತರಿಸುವ ಸಚಿವರು	ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ	ಹಗರಿಬೊಮ್ಮನಹಳ್ಳಿ ಪಟ್ಟಣದಲ್ಲಿ ಕನಕ ಭವನ ಮತ್ತು ಭಗೀರಥ ಭವನಗಳ ಕಟ್ಟಡ ಕಾಮಗಾರಿಯು ಅಪೂರ್ಣಗೊಂಡಿದ್ದು, ಪೂರ್ಣಗೊಳಿಸಲು ಹೆಚ್ಚುವರಿಯಾಗಿ ಅನುದಾನ ಮಂಜೂರು ಮಾಡುವಂತೆ ಪ್ರಸ್ತಾವನೆ ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹಗರಿಬೊಮ್ಮನಹಳ್ಳಿ ಪಟ್ಟಣದಲ್ಲಿ ತಾಲ್ಲೂಕು ಕುರುಬರ ಸಂಘದ ಸಮುದಾಯ ಭವನಕ್ಕೆ ಒಟ್ಟು ರೂ. 50.00 ಲಕ್ಷಗಳು ಮಂಜೂರಾಗಿದ್ದು, ಈ ಸಮುದಾಯ ಭವನಕ್ಕೆ ಹೆಚ್ಚುವರಿಯಾಗಿ ರೂ.75.00 ಲಕ್ಷಗಳ ಅನುದಾನ ಮಂಜೂರಾತಿ ಕೋರಿ ಪ್ರಸ್ತಾವನೆಯನ್ನು ಸ್ವೀಕರಿಸಲಾಗಿದ್ದು, ಸದರಿ ಕಾರ್ಯಕ್ರಮದಡಿ ಅನುದಾನ ಲಭ್ಯತೆ ಹಾಗೂ ರಾಜ್ಯದ ಒಟ್ಟಾರೆ ಬೇಡಿಕೆಯನ್ನು ಆಧರಿಸಿ ಹೆಚ್ಚುವರಿ ಅನುದಾನ ಮಂಜೂರು ಮಾಡುವ ಸಂಬಂಧ ನಿಯಮಾನುಸಾರ ಪರಿಶೀಲಿಸಲಾಗುವುದು. ಮತ್ತು ಭಗೀರಥ ಸಮುದಾಯ ಭವನಕ್ಕೆ ರೂ.20.00 ಲಕ್ಷಗಳು ಮಂಜೂರಾಗಿದ್ದು, ಹೆಚ್ಚುವರಿ ಅನುದಾನ ಮಂಜೂರು ಮಾಡುವ ಕುರಿತಂತೆ ಯಾವುದೇ ಪ್ರಸ್ತಾವನೆ ಸ್ವೀಕೃತವಾಗಿರುವುದಿಲ್ಲ.
ಆ	ಹಾಗಿದ್ದಲ್ಲಿ, ಯಾವಾಗ ಅನುದಾನ ಮಂಜೂರು ಮಾಡಲಾಗುವುದು? (ಸಂಪೂರ್ಣ ವಿವರ ನೀಡುವುದು).	ಉದ್ಭವಿಸುವುದಿಲ್ಲ

ಸಂ: ಹಿಂವಕ 174 ಬಿಎಂಎಸ್ 2019

(ಸಿ.ಪುಟ್ಟರಂಗಶೆಟ್ಟಿ)
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.



ಕರ್ನಾಟಕ ಸರ್ಕಾರ

ಸಂ:ಬಿಸಿಡಬ್ಲ್ಯೂ 200 ಬಿಎಂಎಸ್ 2019

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ:14-02.2019

126

ಇವರಿಂದ:

ಸರ್ಕಾರದ ಕಾರ್ಯದರ್ಶಿಗಳು,
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ,
ವಿಕಾಸಸೌಧ,
ಬೆಂಗಳೂರು.

ಇವರಿಗೆ:

ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ/ಪರಿಷತ್ತು,
ವಿಧಾನಸೌಧ,
ಬೆಂಗಳೂರು.

ಮಾನ್ಯರೇ,

ವಿಷಯ: ಮಾನ್ಯ ವಿಧಾನ ಸಭೆ/ಪರಿಷತ್ತಿನ ಸದಸ್ಯರಾದ ಶ್ರೀ/ಶ್ರೀಮತಿ ಡಾ.ಉಮಾಲಿಂಗಪ್ಪ ಎಂ.ಎಲ್. (ಶಿರಗುಪ್ಪ) ಇವರ ಚುಕ್ಕೆ ಗುರುತಿನ/ಗುರುತಿಲ್ಲದ ಪ್ರ.ಸಂ. 1174 ----ಕ್ಕೆ ಉತ್ತರಿಸುವ ಕುರಿತು.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಮಾನ್ಯ ವಿಧಾನ ಸಭೆ/ಪರಿಷತ್ತಿನ ಸದಸ್ಯರಾದ ಶ್ರೀ/ಶ್ರೀಮತಿ ಡಾ.ಉಮಾಲಿಂಗಪ್ಪ ---------- ಇವರ ಚುಕ್ಕೆ ಗುರುತಿನ/ಗುರುತಿಲ್ಲದ ಪ್ರ.ಸಂ. 1174 ---ಕ್ಕೆ ಸಂಬಂಧಿಸಿದಂತೆ ಉತ್ತರದ 250 ಪ್ರತಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ ಮುಂದಿನ ಅಗತ್ಯ ಕ್ರಮಕ್ಕಾಗಿ ಕಳುಹಿಸಿಕೊಡಲಾಗಿದೆ.

ತಮ್ಮ ನಂಬುಗೆಯ,

ಶಾಖಾಧಿಕಾರಿ 14/2
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	1174
ಮಾನ್ಯ ಸದಸ್ಯರ ಹೆಸರು	ಶ್ರೀ ಸೋಮಲಿಂಗಪ್ಪ ಎಂ.ಎಸ್ (ಸಿರಗುಪ್ಪ)
ಉತ್ತರಿಸಬೇಕಾದ ದಿನಾಂಕ	15.02.2019
ಉತ್ತರಿಸುವ ಸಚಿವರು	ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

ಕ್ರ. ಸಂ	ಪ್ರಶ್ನೆಗಳು-	ಒದಗಿಸಿರುವ ಉತ್ತರ
1	ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳನ್ನು ವಿದೇಶಿ ವ್ಯಾಸಂಗ ವೇತನ ಯೋಜನೆಗೆ ಆಯ್ಕೆ ಮಾಡುವಾಗ ಅನುಸರಿಸಲಾಗುವ ಮಾನದಂಡಗಳೇನು;	ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳನ್ನು ವಿದೇಶಿ ವ್ಯಾಸಂಗ ವೇತನ ಯೋಜನೆಗೆ ಆಯ್ಕೆ ಮಾಡುವಾಗ ಅನುಸರಿಸಲಾಗುವ ಮಾನದಂಡಗಳ ಕುರಿತಂತೆ ವಿವರಗಳು www.backwardclasses.kar.nic ರಲ್ಲಿ ಲಭ್ಯವಿರುತ್ತದೆ.
2	ಕಳೆದ 3 ವರ್ಷಗಳಿಂದ ಇದುವರೆಗೂ ಮೀಸಲಿಟ್ಟ ಅನುದಾನ ಎಷ್ಟು; ಖರ್ಚು ಮಾಡಲಾದ ಅನುದಾನ ಎಷ್ಟು;	ಕಳೆದ 3 ವರ್ಷಗಳಿಂದ ಇದುವರೆಗೂ ಮೀಸಲಿಟ್ಟ ಅನುದಾನ ಹಾಗೂ ಖರ್ಚು ಮಾಡಲಾದ ಅನುದಾನದ ವಿವರ ಈ ಕೆಳಗಿನಂತಿದೆ. (ರೂ.ಕೋಟಿಗಳಲ್ಲಿ) ಕ್ರ.ಸಂ. / ವರ್ಷ / ಮೀಸಲಿಟ್ಟ ಅನುದಾನ / ಖರ್ಚು ಮಾಡಲಾದ ಅನುದಾನ 1 / 2015-16 / 10.00 / 8.94 2 / 2016-17 / 7.67 / 7.67 3 / 2017-18 / 9.31 / 9.31
3	ಕಳೆದ 3 ವರ್ಷಗಳಿಂದ ಇಲ್ಲಿಯವರೆಗೂ ಬಳ್ಳಾರಿ ಜಿಲ್ಲೆಯಲ್ಲಿ ಈ ಯೋಜನೆಯ ಉಪಯೋಗ ಪಡೆದುಕೊಂಡ ವಿದ್ಯಾರ್ಥಿಗಳ ಹೆಸರು, ವಿದ್ಯಾರ್ಹತೆ ಹಾಗೂ ವಿಳಾಸದೊಂದಿಗೆ ಪೂರ್ಣ ಮಾಹಿತಿಯನ್ನು ಒದಗಿಸುವುದು?	ಕಳೆದ 3 ವರ್ಷಗಳಿಂದ ಇಲ್ಲಿಯವರೆಗೂ ಬಳ್ಳಾರಿ ಜಿಲ್ಲೆಯಲ್ಲಿ ಈ ಯೋಜನೆಯ ಉಪಯೋಗ ಪಡೆದುಕೊಂಡ ವಿದ್ಯಾರ್ಥಿಗಳ ಹೆಸರು, ವಿದ್ಯಾರ್ಹತೆ ಹಾಗೂ ವಿಳಾಸದ ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ.

ಸಂ: ಹಿಂವಕ 200 ಬಿಎಂಎಸ್ 2019

(ಸಿ.ಪುಟ್ಟರಂಗಶೆಟ್ಟಿ)
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.

ಅನುಬಂಧ

ಕಳೆದ 3 ವರ್ಷಗಳಿಂದ ಇಲ್ಲಿಯವರೆಗೂ ಬಳ್ಳಾರಿ ಜಿಲ್ಲೆಯಲ್ಲಿ ಈ ಯೋಜನೆಯ ಉಪಯೋಗ ಪಡೆದುಕೊಂಡ ವಿದ್ಯಾರ್ಥಿಗಳ ಹೆಸರು, ವಿದ್ಯಾರ್ಹತೆ ಹಾಗೂ ವಿಳಾಸದ ಮಾಹಿತಿ

ಕ್ರ.ಸಂ	ವಿದ್ಯಾರ್ಥಿಯ ಹೆಸರು	ವ್ಯಾಸಂಗ ವೇತನಕ್ಕೆ ಆಯ್ಕೆಯಾದ ವರ್ಷ	ವಿದ್ಯಾರ್ಹತೆ	ವಿದ್ಯಾರ್ಥಿಯ ವಿಳಾಸ	ಉನ್ನಯ ವ್ಯಾಸಂಗಕ್ಕೆ ವಿದ್ಯಾರ್ಥಿ ತೆರಳಿರುವ ದೇಶ	ಬಿಡುಗಡೆ ಮಾಡಿರುವ ವ್ಯಾಸಂಗ ವೇತನ
1	Pramod patil k	2015-16	B.E	H.no.#333, ward no.8, ksrtc colony hadagali (post) dist. Bellary-583219	Netherland	20 Lakhs
2	Anand Kumar N	2015-16	B.E	Siriguppa taluk, Bellary	U.S.A	20 Lakhs
3	Shivaprasad	2017-18	B.E	Gaddige Mata Kotturu Kudligi Bellary	France	20 Lakhs
4	N.B Pruthviraj	2017-18	B.E	Eswara Temple Asundi Bellary	Germany	20 Lakhs



ಕರ್ನಾಟಕ ಸರ್ಕಾರ

ಸಂ:ಬಿಸಿಡಬ್ಲ್ಯೂ 149 ಬಿಎಂಎಸ್ 2019

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ: 14-02.2019

ಇವರಿಂದ:

ಸರ್ಕಾರದ ಕಾರ್ಯದರ್ಶಿಗಳು,
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ,
ವಿಕಾಸಸೌಧ,
ಬೆಂಗಳೂರು.

ಇವರಿಗೆ:

ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ/ಪರಿಷತ್ತು,
ವಿಧಾನಸೌಧ,
ಬೆಂಗಳೂರು.

ಮಾನ್ಯರೇ,

ವಿಷಯ: ಮಾನ್ಯ ವಿಧಾನ ಸಭೆ/ಪರಿಷತ್ತಿನ ಸದಸ್ಯರಾದ ಶ್ರೀ/ಶ್ರೀಮತಿ ರಾಜಕುಮಾರ್ ಪಾಟೀಲ್ (ಸೇಡಂ) ಇವರ ಚುಕ್ಕೆ ಗುರುತಿನ/ಗುರುತಿಲ್ಲದ ಪ್ರ.ಸಂ.59 ----ಕ್ಕೆ ಉತ್ತರಿಸುವ ಕುರಿತು.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಮಾನ್ಯ ವಿಧಾನ ಸಭೆ/ಪರಿಷತ್ತಿನ ಸದಸ್ಯರಾದ ಶ್ರೀ/ಶ್ರೀಮತಿ ರಾಜಕುಮಾರ್ ಪಾಟೀಲ್ (ಸೇಡಂ) ಇವರ ಚುಕ್ಕೆ ಗುರುತಿನ/ಗುರುತಿಲ್ಲದ ಪ್ರ.ಸಂ.59 ---ಕ್ಕೆ ಸಂಬಂಧಿಸಿದಂತೆ ಉತ್ತರದ 250 ಪ್ರತಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ ಮುಂದಿನ ಅಗತ್ಯ ಕ್ರಮಕ್ಕಾಗಿ ಕಳುಹಿಸಿಕೊಡಲಾಗಿದೆ.

ತಮ್ಮ ನಂಬುಗೆಯ,

(ಸಹಿ) 14/2

ಶಾಖಾಧಿಕಾರಿ
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	59
ಮಾನ್ಯ ಸದಸ್ಯರ ಹೆಸರು	ಶ್ರೀ ರಾಜ್‌ಕುಮಾರ್ ಪಾಟೀಲ್ (ಸೇಡಂ)
ಉತ್ತರಿಸಬೇಕಾದ ದಿನಾಂಕ	15.02.2019
ಉತ್ತರಿಸುವ ಸಚಿವರು	ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ	ಸೇಡಂ ಪಟ್ಟಣದಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಹಾಸ್ಟೆಲ್‌ಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿರುವುದಿಲ್ಲ.
ಆ	ಬಂದಿದ್ದಲ್ಲಿ, ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಹೆಚ್ಚುವರಿಯಾಗಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖಾವತಿಯಿಂದ ಹಾಸ್ಟೆಲ್ ತೆರೆಯಲು ಸರ್ಕಾರವು ಕೈಗೊಂಡ ಕ್ರಮವೇನು;	ಉದ್ಭವಿಸುವುದಿಲ್ಲ.
ಇ	ಯಾವ ಕಾಲಮಿತಿಯೊಳಗೆ ಹಾಸ್ಟೆಲ್ ತೆರೆಯುವ ಉದ್ದೇಶವಿದೆ? (ವಿವರ ಒದಗಿಸುವುದು)	ಉದ್ಭವಿಸುವುದಿಲ್ಲ.

ಸಂ: ಹಿಂವಕ 149 ಬಿಎಂಎಸ್ 2019

(ಸಿ.ಪುಟ್ಟರಂಗಶೆಟ್ಟಿ)
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.



ಕರ್ನಾಟಕ ಸರ್ಕಾರ

ಸಂಖ್ಯೆ: ಎಫ್‌ಡಿ 05 ಸಿಎಎಂ 2019

ಕರ್ನಾಟಕ ಸರ್ಕಾರದ ಸಚಿವಾಲಯ,
#401, 4ನೇ ಹಂತ, ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 13.02.2019

ಇಂದ,

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಆರ್ಥಿಕ ಇಲಾಖೆ,
ವಿಧಾನ ಸೌಧ,
ಬೆಂಗಳೂರು.

ಗೆ,

ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ,
ವಿಧಾನ ಸೌಧ,
ಬೆಂಗಳೂರು.

ಮಾನ್ಯರೆ,

ವಿಷಯ: ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ರವೀಂದ್ರನಾಥ್ ಎಸ್. ಎ (ದಾವಣಗೆರೆ ಉತ್ತರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 19ಕ್ಕೆ ಉತ್ತರಿಸುವ ಬಗ್ಗೆ.

ಉಲ್ಲೇಖ:1)ಕರ್ನಾಟಕ ವಿಧಾನ ಸಭೆಯ ಪ್ರಶ್ನೆ ಸಂಖ್ಯೆ: ಪ್ರಶಾವಿಸ/15ನೇವಿಸ/3ಅ/ಪ್ರಸಂ.19/2019, ದಿನಾಂಕ: 06.02.2019.
2)ಅನಧಿಕೃತ ಟಿಪ್ಪಣಿ ಸಂಖ್ಯೆ: ಸಿಒ 42 ಸಿಎಲ್‌ಎಸ್ 2019 ದಿ:11.02.2019.

*****

ಮೇಲ್ಕಂಡ ವಿಷಯ ಹಾಗೂ ಉಲ್ಲೇಖದ ಪತ್ರಗಳಿಗೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ರವೀಂದ್ರನಾಥ್ ಎಸ್. ಎ (ದಾವಣಗೆರೆ ಉತ್ತರ) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 19ಕ್ಕೆ ಕನ್ನಡ ಭಾಷೆಯಲ್ಲಿ 350 ಉತ್ತರಗಳನ್ನು ಲಗತ್ತಿಸಿ ಕಳುಹಿಸಿಕೊಡಲು ನಿರ್ದೇಶಿತನಾಗಿದ್ದೇನೆ.

Meera Srivastava

(ಮೀರಾ ಶ್ರೀವಾಸ್ತವ)
ಸರ್ಕಾರದ ಅಪರ ಕಾರ್ಯದರ್ಶಿ
ಆರ್ಥಿಕ ಇಲಾಖೆ (ವಿತ್ತೀಯ ಸುಧಾರಣೆ)

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	19
ವಿಧಾನ ಸಭೆ ಸದಸ್ಯರ ಹೆಸರು	ಶ್ರೀ/ ಶ್ರೀಮತಿ ರವೀಂದ್ರನಾಥ್ ಎಸ್.ಎ. (ದಾವಣಗೆರೆ ಉತ್ತರ)
ಉತ್ತರಿಸಬೇಕಾದ ಸಚಿವರು	ಮಾನ್ಯ ಮುಖ್ಯ ಮಂತ್ರಿಯವರು
ಉತ್ತರಿಸುವ ದಿನಾಂಕ	15.02.2019

ಕ್ರ ಸಂ	ಕೇಳಿದ ಮಾಹಿತಿ	ಉತ್ತರ (ವಾಣಿಜ್ಯ ಬ್ಯಾಂಕುಗಳಿಗೆ ಸಂಬಂಧಿಸಿದಂತೆ)
ಅ	ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಮಾಡಿರುವ ಸಾಲವನ್ನು ಮನ್ನಾ ಮಾಡುವುದಕ್ಕೆ ಸರ್ಕಾರವು ಕ್ರಮ ಜರುಗಿಸುವುದೇ;	ರಾಜ್ಯದಲ್ಲಿ ವಾಣಿಜ್ಯ ಬ್ಯಾಂಕುಗಳು ಮತ್ತು ಗ್ರಾಮೀಣ ಬ್ಯಾಂಕುಗಳ ಬೆಳೆ ಸಾಲ ಮನ್ನಾ ಮಾಡಲು ದಿನಾಂಕ: 05.07.2018ರಂದು ಮಂಡಿಸಿದ ಆಯವ್ಯಯದಲ್ಲಿ ಘೋಷಿಸಿದೆ. ಪ್ರಸ್ತುತ ಈ ಯೋಜನೆಯು ಅನುಷ್ಠಾನವು ಪ್ರಗತಿಯಲ್ಲಿದೆ. ಈ ಯೋಜನೆಯ ವಿವರಗಳನ್ನು ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 08 ಸಿಎಎಂ 2018 (ಭಾ) ದಿನಾಂಕ: 06.09.2018 ರಲ್ಲಿ ವಿವರಿಸಲಾಗಿದ್ದು, ಪ್ರತಿ ಲಗತ್ತಿಸಿದೆ. (ಅನುಬಂಧ– I)
ಆ	ಹಾಗಿದ್ದಲ್ಲಿ, ರೈತರಿಗೆ ಸಾಲ ನೀಡಲಾದ ಬ್ಯಾಂಕುಗಳ ವಿವರ ಹಾಗೂ ರೈತರ ಸಂಖ್ಯೆಗಳ ವಿವರವನ್ನು ಒದಗಿಸುವುದು;	ದಿನಾಂಕ: 30.09.2018ರಂದು ರೈತರಿಗೆ ಬೆಳೆ ಸಾಲ ನೀಡಿದ ಎಲ್ಲಾ ಬ್ಯಾಂಕುಗಳ ಹೆಸರುಗಳು ಮತ್ತು ರೈತರ ಸಾಲಗಳ ಸಂಖ್ಯೆಯ ಮಾಹಿತಿಯನ್ನು ರಾಜ್ಯ ಮಟ್ಟದ ಬ್ಯಾಂಕರುಗಳ ಸಮಿತಿಯ ಸಂಚಾಲಕರು ಒದಗಿಸಿದ್ದು ಅದನ್ನು ಅನುಬಂಧದಲ್ಲಿ ಲಗತ್ತಿಸಿದೆ. (ಅನುಬಂಧ– II)
ಇ	ಸಾಲ ಮನ್ನಾ ಮಾಡಲು ಸರ್ಕಾರದಲ್ಲಿ ಸಾಕಷ್ಟು ಹಣಕಾಸು ಇರುವುದಾಗಿ ಹೇಳಲಾಗುತ್ತಿದ್ದು, ಈವರೆಗೆ ಮನ್ನಾ ಮಾಡದಿರಲು ಕಾರಣವೇನು;	ಈ ಯೋಜನೆಯ ಅನುಷ್ಠಾನವು ಚಾಲ್ತಿಯಲ್ಲಿರುತ್ತದೆ. ದಿನಾಂಕ: 07.02.2019 ರವರೆಗೆ ರೂ. 2,850 ಕೋಟಿಗಳನ್ನು ಯೋಜನೆಯ ಅನುಷ್ಠಾನಕ್ಕಾಗಿ ಬಿಡುಗಡೆ ಮಾಡಲಾಗಿದೆ. ಆಧಾರ್ ಸಂಖ್ಯೆ, ಪಡಿತರ ಚೀಟಿ ಮತ್ತು ಜಮೀನಿನ ಸರ್ವೆ ನಂಬರ್‌ಗಳನ್ನು ಪರಿಶೀಲಿಸುವ ಮೂಲಕ ಪ್ರಯೋಜನದಾರರನ್ನು ಸರಿಯಾಗಿ ಗುರುತಿಸಿ ಸಾಲ ಮನ್ನಾ ಮೊತ್ತವನ್ನು ರೈತರ ಸಾಲದ ಖಾತೆಗಳಿಗೆ ನೇರವಾಗಿ ವರ್ಗಾಯಿಸಲಾಗುವುದು. ಈ ಯೋಜನೆಯ ಅವಶ್ಯಕತೆ ಅನುಸಾರವಾಗಿ ಸರ್ಕಾರವು ಹಣವನ್ನು ಬಿಡುಗಡೆ ಮಾಡಲಾಗುತ್ತಿದೆ.
ಈ	ರಾಷ್ಟ್ರೀಕೃತ ಬ್ಯಾಂಕಿನ ಸಾಲ ಮನ್ನಾ ಮಾಡುವ ಪ್ರಕ್ರಿಯೆಯನ್ನು ಯಾವ ಕಾಲಮಿತಿಯಲ್ಲಿ ಪೂರ್ಣಗೊಳಿಸಲಾಗುವುದು?	2019–20ರ ಆಯವ್ಯಯದಲ್ಲಿ ಘೋಷಿಸಿದಂತೆ, ವಾಣಿಜ್ಯ ಬ್ಯಾಂಕುಗಳ ಸಾಲಮನ್ನಾ ಯೋಜನೆಯು 2019–20ರ ಆರ್ಥಿಕ ಸಾಲಿನಲ್ಲಿ ಪೂರ್ಣಗೊಳಿಸಲು ನಿರೀಕ್ಷಿಸಲಾಗಿದೆ.

(ಹೆಚ್.ಡಿ. ಕುಮಾರಸ್ವಾಮಿ)
ಮುಖ್ಯ ಮಂತ್ರಿ

ಸಂಖ್ಯೆ:ಆಇ/05/ಸಿಎಎಂ/2019

ಅನುಬಂಧ - 1

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕರ್ನಾಟಕ ರಾಜ್ಯದಲ್ಲಿ ಸಂಕಷ್ಟದಲ್ಲಿರುವ ರೈತರು, ಷೆಡ್ಯೂಲ್ಡ್ ವಾಣಿಜ್ಯ ಬ್ಯಾಂಕುಗಳು ಮತ್ತು ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳಿಂದ ಪಡೆದಿರುವ ಬೆಳೆ ಸಾಲ ಮನ್ನಾ ಯೋಜನೆ – 2018ರ ಕುರಿತು.

ಉಲ್ಲೇಖ: ದಿನಾಂಕ: 24.08.2018 ರಂದು ನಡೆದ ಸಚಿವ ಸಂಪುಟದ ಕಾರ್ಯಸೂಚಿ ಸಂಖ್ಯೆ 20ರಲ್ಲಿ ಅನುಮೋದನೆ.

*****

ಕಳೆದ ಕೆಲವು ವರ್ಷಗಳಲ್ಲಿ, ರಾಜ್ಯದ ಹೆಚ್ಚಿನ ಭಾಗಗಳಲ್ಲಿ ಸತತ ಬರಗಾಲಗಳು ಕೃಷಿ ವಲಯದಲ್ಲಿ ಒತ್ತಡವನ್ನು ಹೆಚ್ಚಿಸಲು ಕಾರಣವಾಗಿವೆ. ರಾಜ್ಯದ ಕೃಷಿ ಕ್ಷೇತ್ರವು ನಿಶ್ಚಲತೆ, ಕಡಿಮೆ ಉತ್ಪಾದಕತೆ, ಆಗಾಗ್ಗೆ ಸಂಭವಿಸುವ ಬರಗಾಲಗಳು ಮತ್ತು ಕಡಿಮೆ ಮಟ್ಟದ ಸಾರ್ವಜನಿಕ ಮತ್ತು ಖಾಸಗಿ ಹೂಡಿಕೆಗಳಂತಹ ಗುಣಲಕ್ಷಣಗಳನ್ನು ಹೊಂದಿದೆ. ತೊಂದರೆಗೀಡಾದ ರೈತರನ್ನು ಅಭಿವೃದ್ಧಿಯ ಮುಖ್ಯವಾಹಿನಿಗೆ ತರುವುದು ಮತ್ತು ರೈತರನ್ನು ಸಾಲದ ಹೊರೆಯಿಂದ ಮುಕ್ತಗೊಳಿಸುವುದು ರಾಜ್ಯ ಸರ್ಕಾರದ ಪ್ರಮುಖ ಬದ್ಧತೆಯಾಗಿದೆ. ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರವು ಈ ರೈತರ ಆರ್ಥಿಕ ಪರಿಸ್ಥಿತಿಗಳನ್ನು ಉತ್ತಮಗೊಳಿಸುವ ಉದ್ದೇಶದಿಂದ 2018–19ರ ಆಯವ್ಯಯದಲ್ಲಿ "ಬೆಳೆ ಸಾಲ ಮನ್ನಾ ಯೋಜನೆ" ಯನ್ನು ಘೋಷಿಸಿದೆ. ಕೃಷಿಯಲ್ಲಿ ಹೆಚ್ಚಿನ ಬಂಡವಾಳವನ್ನು ಹೂಡಿಕೆ ಮಾಡಲು ಅನುಕೂಲವಾಗುವಂತೆ ರೈತರಿಗೆ ಬೆಂಬಲ ನೀಡುವುದು ಈ ಯೋಜನೆಯ ಮುಖ್ಯ ಗುರಿಯಾಗಿದೆ. ರೈತರ ನಿರಂತರ ಉನ್ನತಿ ಮತ್ತು ಸಬಲೀಕರಣ ಈ ಯೋಜನೆಯ ದೀರ್ಘಕಾಲದ ಗುರಿಯಾಗಿದೆ.

ದಿನಾಂಕ: 05.07.2018ರಂದು ಮಂಡಿಸಿದ ಆಯವ್ಯಯ ಘೋಷಣೆಯಲ್ಲಿ ದಿನಾಂಕ: 31.12.2017 ರಂತೆ ಬಾಕಿ ಇರುವ ಎಲ್ಲಾ ರೈತರ ಎಲ್ಲಾ ಸುಸ್ತಿಯಾದ ಬೆಳೆ ಸಾಲಗಳನ್ನು ಕುಟುಂಬವೊಂದಕ್ಕೆ ರೂ. 2.00 ಲಕ್ಷ ಮೀರದಂತೆ ಸಾಲ ಮನ್ನಾ ಮಾಡುವ ಹಾಗೂ ಬೆಳೆ ಸಾಲಗಳನ್ನು ಸಕಾಲದಲ್ಲಿ ಮರುಪಾವತಿ ಮಾಡಿರುವ ರೈತರ ಸಾಲಗಳಿಗೆ ಅವರು ಮರುಪಾವತಿ ಮಾಡಿರುವ ಸಾಲದ ಮೊತ್ತ ಅಥವಾ ರೂ.25,000/– ಗಳಲ್ಲಿ ಯಾವುದು ಕಡಿಮೆಯೋ ಅದನ್ನು ಪ್ರೋತ್ಸಾಹಧನವಾಗಿ ನೀಡಲು ನಿರ್ಧರಿಸಿದೆ.

ದಿನಾಂಕ: 24.08.2018ರಂದು ನಡೆದ ಸಚಿವ ಸಂಪುಟ ಸಭೆಯ ಕಾರ್ಯಸೂಚಿ ಕ್ರಮ ಸಂಖ್ಯೆ 20ರಲ್ಲಿ ಸದರಿ ಯೋಜನೆಗೆ ಅನುಮೋದನೆ ನೀಡಲಾಗಿರುತ್ತದೆ. ಆದ್ದರಿಂದ ಕೆಳಗಿನ ಈ ಆದೇಶ,

ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ 08 ಸಿಎಎಂ 2018 (ಭಾ), ಬೆಂಗಳೂರು, ದಿನಾಂಕ: 06.09.2018.

1. ಯೋಜನೆಯ ವ್ಯಾಪ್ತಿ.

ಅ) **ರೂ. 2.00 ಲಕ್ಷಗಳವರೆಗಿನ ಸುಸ್ತಿ ಸಾಲಗಳ ಮನ್ನಾ:**

ದಿನಾಂಕ: 01.04.2009ರ ನಂತರ ಮಂಜೂರಾದ ಹಾಗೂ ದಿನಾಂಕ: 31.12.2017ರಂದು ಬಾಕಿ ಇರುವ ಎನ್.ಪಿ.ಎ (ಭಾರತೀಯ ರಿಸರ್ವ್ ಬ್ಯಾಂಕ್ ಆದೇಶದಂತೆ ವರ್ಗೀಕೃತವಾದ) ಸಾಲಗಳು, ರಿಸ್ಟ್ರಕ್ಚರ್ಡ್ ಸಾಲಗಳು ಮತ್ತು ಸುಸ್ತಿಯಿರುವ ಬೆಳೆ ಸಾಲಗಳನ್ನು ಪ್ರತಿ ಕುಟುಂಬಗಳಿಗೂ ರೂ. 2.00 ಲಕ್ಷ ಮೀರದಂತೆ ಕರ್ನಾಟಕ ಸರ್ಕಾರದಿಂದ ಮನ್ನಾ ಮಾಡಲಾಗುವುದು. ಅಂತಹ ಸಾಲಗಳ ಮೂರು ವಿಶಾಲ ವರ್ಗಗಳು ಈ ಯೋಜನೆಯಡಿಯಲ್ಲಿ ಅರ್ಹತೆ ಪಡೆದುಕೊಳ್ಳುತ್ತವೆ.

i. **ಕಾರ್ಯ ನಿರ್ವಹಿಸದ ಸ್ವತ್ತುಗಳು (ಎನ್.ಪಿ.ಎ):** ಭಾರತೀಯ ರಿಸರ್ವ್ ಬ್ಯಾಂ‍ ಮಾರ್ಗದರ್ಶಿ ಸೂತ್ರಗಳಿಗೆ ಅನುಗುಣವಾಗಿ ಸಾಲ ನೀಡುವ ಸಂಸ್ಥೆಗಳಿಂದ ವರ್ಗೀಕರಣ ಮಾಡಿದ ಬೆಳೆ ಸಾಲಗಳು.

ii. **ರಿಸ್ಟ್ರಕ್ಚರ್ಡ್ ಬೆಳೆ ಸಾಲಗಳು:** ಭಾರತೀಯ ರಿಸರ್ವ್ ಬ್ಯಾಂಕ್ ಮಾರ್ಗಸೂಚಿಯಂತೆ ನೈಸರ್ಗಿಕ ವಿಕೋಪಗಳಿಂದ ಮಧ್ಯಮಾವಧಿಯ ಸಾಲಗಳಾಗಿ ಮಾರ್ಪಡಿಸಿದ ಮತ್ತು ಮೂರರಿಂದ ಐದು ವರ್ಷಗಳ ಅವಧಿಯಲ್ಲಿ ಮರುಪಾವತಿಸಬಹುದಾದ ಸಾಲಗಳು.

iii. **ಅವಧಿ ಮೀರಿದ ಸುಸ್ತಿ ಬೆಳೆ ಸಾಲಗಳು:** ದಿ:31.12.2017 ರಂದು ಅವಧಿ ಮೀರಿದ ಸಾಲವನ್ನು ಹೊಂದಿರುವ ಬೆಳೆ ಸಾಲಗಳು.

ಬ) **<u>ಸುಸ್ತಿಯಲ್ಲದ ಸಾಲಗಳಿಗೆ ಪ್ರತಿ ರೈತ ಕುಟುಂಬಕ್ಕೆ ರೂ. 25,000/– ಗಳವರೆಗೆ ಪ್ರೋತ್ಸಾಹಧನ:</u>**
ದಿ: 31.12.2017 ರಂದು ಬಾಕಿಯಿರುವ ಸುಸ್ತಿಯಲ್ಲದ ಬೆಳೆ ಸಾಲಗಳನ್ನು ಹೊಂದಿರುವ ಹಾಗೂ ಹಿಂದಿನ ಸಾಲಿನ ಬೆಳೆ ಸಾಲಗಳನ್ನು ನಿಯಮಿತವಾಗಿ ಮರುಪಾವತಿ ಮಾಡಿದ ರೈತ ಕುಟುಂಬಕ್ಕೆ ಅವರು ಪಡೆದ ಬೆಳೆ ಸಾಲದ ಮೊತ್ತ ಅಥವಾ ರೂ. 25,000/– ಇವೆರಡರಲ್ಲಿ ಯಾವುದು ಕಡಿಮೆಯೋ ಆ ಮೊತ್ತವನ್ನು ಪ್ರೋತ್ಸಾಹಧನವಾಗಿ ನೀಡಲಾಗುವುದು.

ಕೃಷಿ, ತೋಟಗಾರಿಕಾ ಮತ್ತು ಪ್ಲಾಂಟೇಷನ್ ಬೆಳೆಗಳನ್ನು ಬೆಳೆಯುವುದಕ್ಕಾಗಿ, ಗರಿಷ್ಠ 12 ರಿಂದ 18 ತಿಂಗಳುಗಳೊಳಗೆ ಮರುಪಾವತಿಸಬೇಕಾದ ಅಲ್ಪಾವಧಿ ಸಾಲಗಳನ್ನು ಬೆಳೆ ಸಾಲಗಳೆಂದು ಅರ್ಥೈಸಲಾಗಿದೆ. ಇವು ಸಾಂಪ್ರದಾಯಿಕ ಮತ್ತು ಸಾಂಪ್ರಾದಾಯಿಕವಲ್ಲದ ತೋಟಗಾರಿಕಾ ಬೆಳೆ ಸಾಲಗಳನ್ನು ಒಳಗೊಂಡಿರುತ್ತದೆ. ಸಾಲವನ್ನು ತೆಗೆದುಕೊಂಡಿರುವ ರೈತ, ಸಾಲ ನೀಡುವ ಸಂಸ್ಥೆಗಳ ಶಾಖೆ ಹಾಗೂ ರೈತನ ಭೂಮಿಯು ಕರ್ನಾಟಕ ರಾಜ್ಯದಲ್ಲಿ ಇರಬೇಕು.

2. **ಸಾಲ ನೀಡುವ ಸಂಸ್ಥೆಗಳು:**

ಎಲ್ಲಾ ನಿಗದಿತ ಷೆಡ್ಯೂಲ್ಡ್ ವಾಣಿಜ್ಯ ಬ್ಯಾಂಕುಗಳು ಮತ್ತು ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳನ್ನು ಒಟ್ಟಾಗಿ ಸೇರಿಸಿ. **"ಸಾಲ ನೀಡುವ ಸಂಸ್ಥೆಗಳು"** ಎಂದು ಕರೆಯಲಾಗುತ್ತದೆ.

3. **ಕುಟುಂಬದ ವ್ಯಾಖ್ಯಾನ:**

ಕುಟುಂಬವೆಂದರೆ, ರೈತ, ಅವನ / ಅವಳ ಸಂಗಾತಿ ಮತ್ತು ಅವರ ಅವಲಂಬಿತ ಮಕ್ಕಳನ್ನು ಒಳಗೊಂಡಿದೆ.

4. **ಯೋಜನೆಯಲ್ಲಿ ಒಳಪಡದ ವರ್ಗಗಳು:**

ಈ ಯೋಜನೆಯಲ್ಲಿ ಕೆಳಗಿನವುಗಳು ಅರ್ಹವಾಗಿರುವುದಿಲ್ಲ:–

i. ವೈಯಕ್ತಿಕ ರೈತ ಕುಟುಂಬಗಳನ್ನು ಹೊರತುಪಡಿಸಿ ಎಲ್ಲಾ ಕಾನೂನುಬದ್ಧ ಸಂಸ್ಥೆಗಳಿಗೆ ನೀಡಲಾದ ಬೆಳೆ ಸಾಲ.

ii. ಕಂಪನಿಗಳು ರೈತರಿಗೆ ನೀಡಿದ ಸಾಲಗಳು, ಸಾಲ ನೀಡುವ ಸಂಸ್ಥೆಗಳು ಕಾರ್ಪೋರೇಟ್ ಗ್ಯಾರಂಟಿ ಆಧಾರದ ಮೇಲೆ ರೈತರಿಗೆ ನೀಡಿದ ಸಾಲಗಳು, ಟ್ರಸ್ಟ್‌ಗಳು ಮತ್ತು ಪಾಲುದಾರಿಕೆ

ಸಂಸ್ಥೆಗಳು ಬ್ಯಾಂಕುಗಳಿಂದ ಪಡೆದ ಸಾಲಗಳು, ಮೈಕ್ರೋ ಫೈನಾನ್ಸ್ ಇನ್ಸ್ಟಿಟ್ಯೂಷನ್ಸ್ / ನಗರ ಸಹಕಾರ ಬ್ಯಾಂಕುಗಳಿಂದ ನೀಡಲಾದ ಸಾಲಗಳು.

iii. ಕೃಷಿ ಉತ್ಪನ್ನಗಳನ್ನು ಅಡವಿಟ್ಟುಕೊಂಡು ನೀಡಿರುವ ಸಾಲಗಳು, ರೈತರಿಗೆ ನೀಡಲಾದ ಒಡವೆ / ಆಭರಣದ ಸಾಲಗಳು ಮತ್ತು ಮೀನುಗಾರಿಕೆ / ಹೈನುಗಾರಿಕೆ ಮತ್ತು ಕೃಷಿ ಸಂಬಂಧಿತ ಇತರೆ ಸಾಲಗಳು.

iv. ಸರ್ಕಾರಿ, ಅರೆ- ಸರ್ಕಾರಿ ಅಥವಾ ಅನುದಾನಿತ ಸಂಸ್ಥೆಗಳ ಮತ್ತು ಸಾರ್ವಜನಿಕ ವಲಯದ ಅಧೀನದಲ್ಲಿರುವ ನೌಕರರಿಗೆ ನೀಡಿದ ಬೆಳೆ ಸಾಲಗಳು.

v. ರಾಜ್ಯ / ಕೇಂದ್ರದ ಸಂಚಿತ ನಿಧಿಯಿಂದ ತಿಂಗಳಿಗೆ ರೂ. 15,000/- ಕ್ಕೂ ಹೆಚ್ಚಿನ ಪಿಂಚಣಿ ಪಡೆಯುವ ನಿವೃತ್ತಿ ವೇತನದಾರರಿಗೆ (ಮಾಜಿ ಸೈನಿಕರನ್ನು ಹೊರತುಪಡಿಸಿ) ನೀಡಲಾದ ಸಾಲಗಳು, ಕಳೆದ 3 ಮೌಲ್ಯಮಾಪನ ವರ್ಷಗಳಲ್ಲಿ ಯಾವುದಾದರು ಒಂದು ವರ್ಷ ಆದಾಯ ತೆರಿಗೆ ಪಾವತಿ ಮಾಡಿದವರಿಗೆ ನೀಡಲಾದ ಬೆಳೆ ಸಾಲಗಳು.

vi. ಸ್ವಸಹಾಯ ಗುಂಪುಗಳು (ಎಸ್.ಹೆಚ್.ಜಿ.ಗಳು) ಮತ್ತು ಜಂಟಿ ಹೊಣೆಗಾರಿಕೆಯ ಗುಂಪುಗಳು (JLG) / ರೈತರಿಗೆ ಸಾಲವನ್ನು ನೀಡಲು ಸಕ್ಕರೆ ಕಾರ್ಖಾನೆಗಳಿಗೆ ನೀಡಿದ ಸಾಲಗಳು, ಕಂಪನಿಗಳು / ಸಹಭಾಗಿತ್ವ ಸಂಸ್ಥೆಗಳು ಕಾಂಟ್ರಾಕ್ಟ್ ಫಾರ್ಮಿಂಗ್ ಪಡೆದುಕೊಂಡಿರುವ ಸಾಲಗಳು,

vii. ರಾಜ್ಯದ ಸಹಕಾರ ಸಂಸ್ಥೆ / ಬ್ಯಾಂಕುಗಳಿಗೆ ಘೋಷಿಸಿರುವ ಬೆಳೆ ಸಾಲ ಮನ್ನಾ ಯೋಜನೆಯ ಫಲಾನುಭವಿಗಳು ಈ ಯೋಜನೆಯ ವ್ಯಾಪ್ತಿಯಲ್ಲಿ ಬರುವುದಿಲ್ಲ.

5. ಅನುಷ್ಠಾನ ಪ್ರಕ್ರಿಯೆ:

ಮಾಹಿತಿ ಸಂಗ್ರಹಣೆ ಮತ್ತು ಪರಿಶೀಲನೆ

i. ಬ್ಯಾಂಕುಗಳು ಸಲ್ಲಿಸಬೇಕಾದ ದತ್ತಾಂಶ ಛರಿವಿನೊಂದಿಗೆ ಅನುಷ್ಠಾನ ಪ್ರಕ್ರಿಯೆಯು ಪ್ರಾರಂಭವಾಗುತ್ತದೆ. ರೈತರು ಸಲ್ಲಿಸಿದ ಅಗತ್ಯ ವಿವರಗಳನ್ನು (ಆಧಾರ್ ಸಂಖ್ಯೆ, ರೇಷನ್ ಕಾರ್ಡ್ ಸಂಖ್ಯೆ, ಸರ್ವೆ ಸಂಖ್ಯೆ ಮುಂತಾದವು) ಕ್ರೂಢೀಕರಿಸಿದ ನಂತರ ಬ್ಯಾಂಕುಗಳು ತಮ್ಮ ಕೋರ್ ಬ್ಯಾಂಕಿಂಗ್ ವ್ಯವಸ್ಥೆಯಿಂದ ಕ್ರೋಢಿಕೃತ ಮಾಹಿತಿಯನ್ನು ಸಲ್ಲಿಸುತ್ತವೆ.

ii. ಪ್ರಕ್ರಿಯೆಯ ಪ್ರಕಾರ ಬೆಳೆ ವಿಮೆ ಕ್ಲೈಮ್‌ಗಳ ಮೊತ್ತವನ್ನು ಬೆಳೆ ಸಾಲಗಳ ಖಾತೆಗೆ ಜಮಾ ಮಾಡಬೇಕು. ಕಳೆದ ಎರಡು ವರ್ಷಗಳಲ್ಲಿ ಯಾವುದೇ ಬೆಳೆ ಸಾಲಗಳು ಅಥವಾ ರೈತರ ಅವದಿ ಮೀರಿದ ಇತರ ಸಾಲಗಳಿಗೆ ಕ್ಲೈಮ್‌ಗಳ ಮೊತ್ತಗಳು ಬಂದಿದ್ದಲ್ಲಿ, ಅವುಗಳನ್ನು ರೈತರ ಬೆಳೆ ಸಾಲಗಳಿಗೆ ಜಮಾ ಮಾಡಿದ ಬಗ್ಗೆ ಬ್ಯಾಂಕುಗಳು ಕಡ್ಡಾಯವಾಗಿ ದೃಢೀಕರಿಸಬೇಕು. ಬೆಳೆ ವಿಮಾ ಕ್ಲೈಮ್ ಮೊತ್ತವನ್ನು ರೈತರ ಉಳಿತಾಯ ಖಾತೆಗೆ ಜಮಾ ಮಾಡಲಾಗಿದ್ದರೆ, ಈ ಯೋಜನೆಯಡಿಯಲ್ಲಿ ಅರ್ಹವಿರುವ ಸಾಲ ಮನ್ನಾ ಮೊತ್ತದಲ್ಲಿ ಬೆಳೆ ವಿಮಾ ಕ್ಲೈಮ್ ಮೊತ್ತವನ್ನು ಕಡಿತಗೊಳಿಸಲಾಗುವುದು.

iii. ಈ ಯೋಜನೆಯಡಿಯಲ್ಲಿ ನೀಡಿರುವ ಮಾಹಿತಿಯ ನಿಖರತೆ ಮತ್ತು ಸಮಗ್ರತೆಗೆ ಪ್ರತಿ ಸಾಲ ನೀಡುವ ಸಂಸ್ಥೆಗಳು ಜವಾಬ್ದಾರರಾಗಿರತಕ್ಕದ್ದು. ಈ ಯೋಜನೆಯ ಅನುಷ್ಠಾನಕ್ಕೆ ಸಾಲ ನೀಡುವ ಸಂಸ್ಥೆಗಳು ಸಲ್ಲಿಸಿದ ಪ್ರತಿಯೊಂದು ದಸ್ತಾವೇಜು / ದಾಖಲೆ, ತಯಾರಿಸಲಾದ ಪಟ್ಟಿಗಳು ಮತ್ತು ಪ್ರಮಾಣ ಪತ್ರಗಳು ಪ್ರತಿಯೊಂದು ಸಾಲ ನೀಡುವ ಸಂಸ್ಥೆಗಳ ಅಧಿಕೃತ

ಅಧಿಕಾರಿಯ ಸಹಿ ಮತ್ತು ಅವರ / ಅವಳ ಹೆಸರನ್ನು ಉದ್ಯೋಗಿ ಕೋಡ್ ಸಂಖ್ಯೆಯೊಂದಿಗೆ ಸಂಸ್ಥೆಯ ಮುದ್ರೆಗಳನ್ನು ಒಳಗೊಂಡಿರಬೇಕು.

iv. ವಿಭಿನ್ನ ಬ್ಯಾಂಕುಗಳು, ವಿವಿಧ ವರ್ಷಗಳಲ್ಲಿ ಎನ್‌ಪಿಎ (NPA) ಖಾತೆಗಳನ್ನು ಮತ್ತು ಮರುನಿರ್ಮಾಣ ಮಾಡಿದ (ರಿಸ್ಟ್ರಕ್ಚರ್ಡ್) ಸ್ಟ್ಯಾಂಡರ್ಡ್ ಸ್ವತ್ತುಗಳನ್ನು / ಖಾತೆಗಳನ್ನು ಇತ್ಯರ್ಥಗೊಳಿಸಲು ವಿವಿಧ "ಒನ್ ಟೈಮ್ ಸೆಟಲ್‌ಮೆಂಟ್" (OTS) ಯೋಜನೆಗಳನ್ನು ಪರಿಚಯಿಸಿವೆ. ಚಾಲ್ತಿಯಲ್ಲಿರುವ ಒಟಿಎಸ್ ಯೋಜನೆಗಳು ಮತ್ತು ಆಂತರಿಕ ನೀತಿಗಳಿಗೆ ಅನುಸಾರವಾಗಿ ಬ್ಯಾಂಕುಗಳು ಎನ್‌ಪಿಎ ಖಾತೆಗಳು / ಸ್ಟ್ಯಾಂಡರ್ಡ್ ಪುನರ್ ರಚಿಸಲಾದ ಅರ್ಹ ಖಾತೆಗಳನ್ನು ಬೆಳೆ ಸಾಲದ ಮನ್ನಾ ಯೋಜನೆಯಡಿಯಲ್ಲಿ ತೀರ್ಮಾನ ಮಾಡಿಕೊಳ್ಳಬೇಕು. ತಮ್ಮ ವೈಯಕ್ತಿಕ ಒಟಿಎಸ್ ಯೋಜನೆಯಡಿ ಬ್ಯಾಂಕುಗಳು ಮಾಡಿದ ಒಪ್ಪಂದದ ಮೇಲೆ ಪ್ರತಿ ಕುಟುಂಬಕ್ಕೂ ರೂ.2.00 ಲಕ್ಷಗಳ ಮಿತಿಗೊಳಪಟ್ಟು ಸರ್ಕಾರದ ಸಹಾಯವು ಲಭ್ಯವಿರುತ್ತದೆ.

v. ಅರ್ಹ ಸಾಲಗಾರರ ಪಟ್ಟಿಯಲ್ಲಿ ಬರುವ ಎಲ್ಲಾ ಸಾಲ ಸಂಸ್ಥೆಗಳಿಂದ ಸಂಗ್ರಹಿಸಲಾದ ಮಾಹಿತಿಯನ್ನು ಗೊತ್ತುಪಡಿಸಿದ ಪ್ರಾಧಿಕಾರದಿಂದ ಸಂಗ್ರಹಿಸಲಾಗುತ್ತದೆ. ಅದೇ ರೀತಿಯಾಗಿ ನಿಖರವಾಗಿ ಪ್ರಮಾಣೀಕರಿಸಿದ ನಂತರ ಸೂಕ್ತವಾದ ಹಣವನ್ನು ಅರ್ಹ ಖಾತೆಗಳಿಗೆ ಜಮಾ ಮಾಡಲಾಗುತ್ತದೆ. ರಾಜ್ಯ ಸರ್ಕಾರವು ಯೋಜನೆಯ ಅಡಿಯಲ್ಲಿ ಸ್ವೀಕರಿಸಿದ ಕ್ಲೈಮ್‌ಗಳನ್ನು ತೀರ್ಮಾನಿಸಿ / ನಿರ್ಧರಿಸಿ ಆಯಾ ಬ್ಯಾಂಕುಗಳು ನೋಡಲ್ ಶಾಖೆಗಳ ಮೂಲಕ ಸಂಬಂಧಪಟ್ಟ ಶಾಖೆಗೆ ಪ್ರಯೋಜನಗಳನ್ನು ತಲುಪಿಸಲಾಗುವುದು. ಬ್ಯಾಂಕುಗಳ ಸಾಲ ಮನ್ನಾ ಆದ್ಯತೆಯ ಕ್ರಮವು ಈ ರೀತಿಯಾಗಿರುತ್ತದೆ. ಎನ್‌ಪಿಎಗಳನ್ನು ಮೊದಲು ಮರುಪಾವತಿಸಿದ ನಂತರ ರೀಸ್ಟ್ರಕ್ಚರ್ಡ್ ಸಾಲಗಳನ್ನು ಪಾವತಿಸಲಾಗುವುದು. ತದನಂತರ ಸರಿಯಾದ ಸಮಯಕ್ಕೆ ಸಾಲಗಳನ್ನು ಮರುಪಾವತಿಸಿದ ರೈತರಿಗೆ ಪ್ರೋತ್ಸಾಹಧನವನ್ನು ಪಾವತಿಸಲಾಗುವುದು.

vi. ಅರ್ಹ ರೈತರ ಸದಸ್ಯರ ಪಟ್ಟಿಯಲ್ಲಿ ಅವನ / ಅವಳ ಹೆಸರನ್ನು ಸೇರಿಸಲಾಗಿಲ್ಲ ಎಂದು ಅಥವಾ ಅವರ ಸಾಲ ಮನ್ನಾ ಮೊತ್ತವನ್ನು ತಪ್ಪಾಗಿ ಲೆಕ್ಕ ಹಾಕಲಾಗಿದೆಯೆಂದು ಯಾವುದೇ ರೈತರು ಅಭಿಪ್ರಾಯಪಟ್ಟಲ್ಲಿ, ಅಂತಹವರು ತಾವು ಸಾಲ ತೆಗೆದುಕೊಂಡ ಬ್ಯಾಂಕ್ ಶಾಖೆಯ ಮೂಲಕ ದೂರು ಅರ್ಜಿಯನ್ನು ಕರ್ನಾಟಕ ಸರ್ಕಾರದಿಂದ ಗೊತ್ತುಪಡಿಸಿದ ಪ್ರಾಧಿಕಾರಕ್ಕೆ ಸಲ್ಲಿಸಬಹುದು.

vii. ತಾಂತ್ರಿಕ ಅವಶ್ಯಕತೆಗಳನ್ನು ಮ್ಯಾಪ್ ಮಾಡುವ ಮತ್ತು ರೂಪರೇಷೆಯ ಚೌಕಟ್ಟನ್ನು ರಚಿಸುವಲ್ಲಿ ಸರಿಯಾದ ರೀತಿಯಲ್ಲಿ ಸೂಕ್ತ ಅನುಷ್ಠಾನದ ಸವಾಲಿನ ಅವಶ್ಯಕತೆಗಳನ್ನು ಕ್ರೋಢೀಕರಿಸುವ ಹಿನ್ನೆಲೆಯಲ್ಲಿ ರಚಿಸಲಾದ ಸಮಿತಿಗಳು ಸಮರ್ಥ ರೀತಿಯಲ್ಲಿ ಯೋಜನೆಯನ್ನು ಅನುಷ್ಠಾನಗೊಳಿಸುವ ಪ್ರಕ್ರಿಯೆಯನ್ನು ತೀರ್ಮಾನಿಸುತ್ತವೆ. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ರಚಿಸಿದ ಮೇಲ್ವಿಚಾರಣಾ ಸಮಿತಿಯ ಯೋಜನೆಯು ಪೂರ್ಣಗೊಳ್ಳುವವರೆಗೆ ನಿಯಮಿತ ಸಮಯದಲ್ಲಿ ಅನುಷ್ಠಾನ ಪ್ರಕ್ರಿಯೆಯನ್ನು ಮಾರ್ಗದರ್ಶನ ಮತ್ತು ಮೇಲ್ವಿಚಾರಣೆ ಮಾಡುವುದು, ಯೋಜನೆಯ ಪ್ರಗತಿಯ ವರದಿಗಳನ್ನು ನಿಯಮಿತ ಸಮಯದಲ್ಲಿ ನೋಡಲ್ ಇಲಾಖೆಯು ಮೇಲ್ವಿಚಾರಣಾ ಸಮಿತಿಗೆ ಸಲ್ಲಿಸಬೇಕು. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ (ಇ-ಆಡಳಿತ) ಇಲಾಖೆಯ ಅಧ್ಯಕ್ಷತೆಯಲ್ಲಿ ತಾಂತ್ರಿಕ ಸಮಿತಿಯು ಮೇಲ್ವಿಚಾರಣಾ ಸಮಿತಿಯ ಮಾರ್ಗದರ್ಶನದಲ್ಲಿ ಬೆಳೆ ಸಾಲದ ಮನ್ನಾ ಯೋಜನೆಯ ಅನುಷ್ಠಾನಕ್ಕಾಗಿ ಮಾಹಿತಿ ತಂತ್ರಜ್ಞಾನ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸುತ್ತದೆ. ತಾಂತ್ರಿಕ ಸಮಿತಿಯಿಂದ ದತ್ತಾಂಶ ಏಕೀಕರಣ ಮತ್ತು ನಿರ್ವಹಣೆಗಾಗಿ

ಮಾಹಿತಿ ತಂತ್ರಜ್ಞಾನ (ಐಟಿ) ವ್ಯವಸ್ಥೆಯನ್ನು ಈ ಯೋಜನೆಯ ಸಮರ್ಥ ಅನುಷ್ಠಾನಕ್ಕೆ ಬಳಸಲಾಗುತ್ತದೆ.

viii. ಈ ಯೋಜನೆಯನ್ನು ಕಾರ್ಯಗತಗೊಳಿಸಲು ರಾಜ್ಯ ಸರ್ಕಾರದ ಕಂದಾಯ ಇಲಾಖೆಯು ನೋಡಲ್ ಇಲಾಖೆಯಾಗಿದೆ. ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳು ಈ ಯೋಜನೆಯ ಅನುಷ್ಠಾನದ ಜವಾಬ್ದಾರಿ ವಹಿಸುವ ನೋಡಲ್ ಅಧಿಕಾರಿಯಾಗಿತ್ತಾರೆ. ಜಿಲ್ಲಾ ಮಟ್ಟದ ಬ್ಯಾಂಕರುಗಳ ಸಮಿತಿ ಫಲಾನುಭವಿಗಳ ಗುರುತಿಸುವಿಕೆ ಮತ್ತು ಅರ್ಹ ಮನ್ನಾ / ಪ್ರೋತ್ಸಾಹಕ ಮೊತ್ತವನ್ನು ತೀರ್ಮಾನಿಸಲು ಜಿಲ್ಲಾಧಿಕಾರಿಗಳಿಗೆ ಎಲ್ಲಾ ರೀತಿಯ ಸಹಾಯವನ್ನು ನೀಡುವುದು. ಈ ಯೋಜನೆಯ ಸುಗಮ ಅನುಷ್ಠಾನಕ್ಕೆ ರಾಜ್ಯ ಮಟ್ಟದ ಬ್ಯಾಂಕರುಗಳ ಸಮಿತಿಯು ರಾಜ್ಯ ಸರ್ಕಾರದೊಂದಿಗೆ ಮತ್ತು ಯೋಜನೆಯನ್ನು ಅನುಷ್ಠಾನಗೊಳಿಸುವ ಬ್ಯಾಂಕುಗಳೊಂದಿಗೆ ಸಮನ್ವಯ ಸಾಧಿಸಬೇಕು.

ix. ಕಂದಾಯ ಇಲಾಖೆಯು ಈ ಯೋಜನೆಯ ಸಂಪೂರ್ಣ ಮತ್ತು ಸಮರ್ಪಕ ಅನುಷ್ಠಾನ ಮತ್ತು ಮೇಲ್ವಿಚಾರಣೆಗಾಗಿ ಅವಶ್ಯಕವಾಗುವ ತಾಂತ್ರಿಕ ಅಧಿಕಾರಿಗಳನ್ನು ಹೊಂದಿದ ಹಾಗೂ ಆಯುಕ್ತರ ಶ್ರೇಣಿಯ ಒರ್ವ ಅಧಿಕಾರಿಯ ನೇತೃತ್ವದಲ್ಲಿ ಒಂದು ವಿಶೇಷ ಕೋಶವನ್ನು ರಚಿಸಬೇಕು. ಈ ಉದ್ದೇಶಕ್ಕಾಗಿ ಕಂದಾಯ ಇಲಾಖೆಯು ವಿಶೇಷ ಕೋಶವನ್ನು ರಚಿಸಿದ ನಂತರ ಇಲಾಖೆಯು ನೇಮಕಮಾಡಿದ ಒರ್ವ ಹಿರಿಯ ಅಧಿಕಾರಿಯು ಮೇಲ್ವಿಚಾರಣಾ ಸಮಿತಿ ಮತ್ತು ತಾಂತ್ರಿಕ ಸಮಿತಿಯ ಸಂಚಾಲಕರಾಗುತ್ತಾರೆ. ಯೋಜನೆಯ ಅನುಷ್ಠಾನವನ್ನು ತ್ವರಿತಗೊಳಿಸಲು ವಿಶೇಷ ಕೋಶವನ್ನು ದಿನಾಂಕ: 30.09.2018ರೊಳಗೆ ರಚಿಸಬೇಕು, ಅಲ್ಲಿಯವರೆಗೆ ಸರ್ಕಾರದ ಅಪರ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವಿತ್ತೀಯ ಸುಧಾರಣೆ) ಇವರು ಮೇಲ್ವಿಚಾರಣಾ ಸಮಿತಿ ಮತ್ತು ತಾಂತ್ರಿಕ ಸಮಿತಿಯ ಸಂಚಾಲಕರಾಗಿತ್ತಾರೆ.

x. ಈ ವಿಶೇಷ ಕೋಶವು ಮನ್ನಾ ಮೊತ್ತಗಳನ್ನು ಪರಿಶೀಲಿಸಿ ಬಿಡುಗಡೆಗಾಗಿ ಪ್ರಸ್ತಾವನೆಗಳನ್ನು ಕಂದಾಯ ಇಲಾಖೆಗೆ ಸಲ್ಲಿಸಬೇಕು. ಕಂದಾಯ ಇಲಾಖೆಯು ತನ್ನ ಶಿಫಾರಸ್ಸುಗಳನ್ನು ಪರಿಶೀಲನೆ ಮತ್ತು ಹಣ ಬಿಡುಗಡೆಗೆ ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆಗೆ ಸಲ್ಲಿಸಬೇಕು.

xi. ಯೋಜನೆಯ ಅನುಷ್ಠಾನಕ್ಕಾಗಿ ವಿವರವಾದ ಮಾರ್ಗಸೂಚಿಗಳನ್ನು ನೋಡಲ್ ಇಲಾಖೆಯಿಂದ ಪ್ರತ್ಯೇಕವಾಗಿ ನೀಡುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಪವನ್ ಕುಮಾರ್ ಮಾಲಪಾಟಿ)
ಸರ್ಕಾರದ ಉಪ ಕಾರ್ಯದರ್ಶಿ
(ಆಯವ್ಯಯ ಮತ್ತು ಸಂಪನ್ಮೂಲ)
ಆರ್ಥಿಕ ಇಲಾಖೆ

ಇವರಿಗೆ,

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ ಬೆಂಗಳೂರು ಇವರಿಗೆ – ಕರ್ನಾಟಕ ರಾಜ್ಯ ಪತ್ರದಲ್ಲಿ ಕೂಡಲೇ ಪ್ರಕಟಿಸಿ ಅದರ 250 ಪ್ರತಿಗಳನ್ನು ಒದಗಿಸಲು ಕೋರಿದೆ.

ಪ್ರತಿಗಳು:

1. ಪ್ರಧಾನ ಮಹಾಲೇಖಪಾಲರು, (ಜಿ&ಎಸ್‌ಎಸ್‌ಎ) / (ಇ&ಆರ್‌ಎಸ್‌ಎ) / (ಎ&ಇ), ಕರ್ನಾಟಕ ರಾಜ್ಯ, ಬೆಂಗಳೂರು.
2. ಸನ್ಮಾನ್ಯ ಮುಖ್ಯ ಮಂತ್ರಿಯವರ ಪ್ರಧಾನ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
3. ಸರ್ಕಾರದ ಮುಖ್ಯ ಕಾರ್ಯದರ್ಶಿರವರು, ವಿಧಾನ ಸೌಧ, ಬೆಂಗಳೂರು
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರು, ವಿಧಾನ ಸೌಧ, ಬೆಂಗಳೂರು.
5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
6. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಸಿಆಸು ಇಲಾಖೆ (ಇ-ಆಡಳಿತ), ಬಹುಮಹಡಿ ಕಟ್ಟಡ, ಬೆಂಗಳೂರು.
7. ಸರ್ಕಾರದ ಪ್ರಧಾನ ಕಾರ್ಯದರ್ಶಿ (ಆಯವ್ಯಯ ಮತ್ತು ಸಂಪನ್ಮೂಲ), ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
8. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
9. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಹಕಾರ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
10. ಸರ್ಕಾರದ ಕಾರ್ಯದರ್ಶಿ, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ವಿಕಾಸ ಸೌಧ, ಬೆಂಗಳೂರು.
11. ಸರ್ಕಾರದ ಕಾರ್ಯದರ್ಶಿ, ಕೃಷಿ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
12. ಸಹಕಾರ ಸಂಘಗಳ ನಿಬಂಧಕರು, #1, ಅಲಿ ಆಸ್ಕರ್ ರಸ್ತೆ, ಬೆಂಗಳೂರು.
13. ಆಯುಕ್ತರು, ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ, ಸರ್ವೆ ಭವನ, ಕೆ.ಆರ್. ವೃತ್ತ, ಬೆಂಗಳೂರು.
14. ಆಯುಕ್ತರು, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ಮಿಲ್ಲರ್ಸ್ ಟ್ಯಾಂಕ್ ಬೆಡ್ ಪ್ರದೇಶ, ವಸಂತನಗರ, ಬೆಂಗಳೂರು.
15. ಆಯುಕ್ತರು, ಕೃಷಿ ಇಲಾಖೆ, ಶೇಷಾದ್ರಿ ರಸ್ತೆ, ಕೆ.ಆರ್. ವೃತ್ತ, ಬೆಂಗಳೂರು.
16. ತಾಂತ್ರಿಕ ನಿರ್ದೇಶಕರು, ರಾಷ್ಟ್ರೀಯ ಮಾಹಿತಿ ಕೇಂದ್ರ (NIC), 6&7ನೇ ಮಹಡಿ, ವಿಶ್ವೇಶ್ವರಯ್ಯ ಚಿಕ್ಕಗೋಪುರ, ಡಾ. ಅಂಬೇಡ್ಕರ್ ವೀಧಿ, ಬೆಂಗಳೂರು.
17. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿ, ಆರ್ಥಿಕ ಇಲಾಖೆ ವಿಧಾನಸೌಧ, ಬೆಂಗಳೂರು.
18. ಸರ್ಕಾರದ ಅಪರ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವಿತ್ತೀಯ ಸುಧಾರಣೆ), ಬಹುಮಹಡಿ ಕಟ್ಟಡ, ಬೆಂಗಳೂರು.
19. ಸಂಚಾಲಕರು, ರಾಜ್ಯಮಟ್ಟದ ಬ್ಯಾಂಕರುಗಳ ಸಮಿತಿ ಹಾಗೂ ಪ್ರಧಾನ ವ್ಯವಸ್ಥಾಪಕರು- ಸಿಂಡಿಕೇಟ್ ಬ್ಯಾಂಕ್, ಕಾರ್ಪೊರೇಟ್ ಕಚೇರಿ, ಗಾಂಧಿನಗರ, ಬೆಂಗಳೂರು.
20. ಎಲ್ಲಾ ವಾಣಿಜ್ಯ ಮತ್ತು ಗ್ರಾಮೀಣ ಬ್ಯಾಂಕುಗಳ ಪ್ರಾದೇಶಿಕ ಮುಖ್ಯಸ್ಥರುಗಳಿಗೆ
21. ರಾಜ್ಯ ಹುಜೂರ್ ಖಜಾನೆ, ನೃಪತುಂಗ ರಸ್ತೆ, ಬೆಂಗಳೂರು.
22. ರಾಜ್ಯ ಖಜಾನೆ ಅಧಿಕಾರಿ, ಜೆ.ಸಿ. ರಸ್ತೆ ಬೆಂಗಳೂರು.
23. ಶಾಖಾ ರಕ್ಷಾ ಕಡತ – ಹೆಚ್ಚುವರಿ ಪ್ರತಿ.

ಅನುಬಂಧ - 2.

BANKWISE DATA ON CROP LOAN/ KCC DATA AS AT SEPT 2018		
Sl. No	Name of the Bank	KCC/Crop Loan O/s as SEPT 2018
		No. of loans
(A)	**Major Banks**	
1	Canara Bank	624170
2	Corporation Bank	244102
3	Syndicate Bank	283210
4	State Bank of India	301043
5	Vijaya Bank	88328
	Total (A)	**1540853**
(B)	**OtherNationalised Banks**	
1	Allahabad Bank	306
2	Andhrabank	6906
3	Bank of Baroda	5532
4	Bank of India	32032
5	Bank of Maharastra	9125
6	Central Bank of India	7100
7	Dena Bank	5715
8	Indian Bank	25313
9	Indian Overseas Bank	15452
10	Oriental Bank of Commerce	3402
11	Punjab National Bank	9650
12	Punjab and Synd Bank	5
13	UCO Bank	3330
14	Union Bank Of India	60871
15	United Bank of India	11
16	IDBI Bank	11044
	Total (B)	**195794**
(C)	**Other Comm.Banks**	
1	Karnataka Bank Ltd	21970
2	Kotak Mahendra Bank	2116
3	Cathelic Syrian Bank Ltd.	1
4	City Union Bank Ltd	2014
5	Dhanalaxmi Bank Ltd.	0
6	Federal Bank Ltd.	44296
7	J and K Bank Ltd	0
8	Karur Vysya Bank Ltd.	239
9	Lakshmi Vilas Bank Ltd	0
10	Ratnakar Bank Ltd	3076
11	South Indian Bank Ltd	6912
12	Tamil Nadu Merchantile Ban	3257
13	IndusInd Bank	0
14	HDFC Bank Ltd	111310
15	Axis Bank Ltd	11221
16	ICICI Bank Ltd	62584
17	YES BANK Ltd.	17263
18	Bandhan Bank	0
	Total(C)	**286259**
(D)	**R R B 's**	
1	Kavery Grameena Bank	240188
2	Pragathi Krishna Grameena	164842
3	Karnataka Vikas Grameena	270228
	Total (D)	**675258**
Total (Comm.Banks) A+B+C		**2022906**
Grand Total (A+B+C+D)		**2698164**

Source. SLBC, Bengaluru (11.02.2019)



ಕರ್ನಾಟಕ ಸರ್ಕಾರ

ಸಂ:ಬಿಸಿಡಬ್ಲ್ಯು 161 ಬಿಎಂಎಸ್ 2019

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ: 02.2019

ಇವರಿಂದ:
ಸರ್ಕಾರದ ಕಾರ್ಯದರ್ಶಿಗಳು,
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ,
ವಿಕಾಸಸೌಧ,
ಬೆಂಗಳೂರು.

ಇವರಿಗೆ:
ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ/ಪರಿಷತ್ತು,
ವಿಧಾನಸೌಧ,
ಬೆಂಗಳೂರು.

ಮಾನ್ಯರೇ,

ವಿಷಯ: ಮಾನ್ಯ ವಿಧಾನ ಸಭೆ/ಪರಿಷತ್ತಿನ ಸದಸ್ಯರಾದ ಶ್ರೀ ಕುಮಾರ್ ಬಂಗಾರಪ್ಪ ಎಸ್ ಇವರ ಚುಕ್ಕೆ ಗುರುತಿನ/ಗುರುತಿಲ್ಲದ ಪ್ರ.ಸಂ. 430 ಕ್ಕೆ ಉತ್ತರಿಸುವ ಕುರಿತು.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಮಾನ್ಯ ವಿಧಾನ ಸಭೆ/ಪರಿಷತ್ತಿನ ಸದಸ್ಯರಾದ ಶ್ರೀ ಕುಮಾರ್ ಬಂಗಾರಪ್ಪ ಎಸ್ ಇವರ ಚುಕ್ಕೆ ಗುರುತಿನ/ಗುರುತಿಲ್ಲದ ಪ್ರ.ಸಂ. 430 ಕ್ಕೆ ಸಂಬಂಧಿಸಿದಂತೆ ಉತ್ತರದ 250 ಪ್ರತಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ ಮುಂದಿನ ಅಗತ್ಯ ಕ್ರಮಕ್ಕಾಗಿ ಕಳುಹಿಸಿಕೊಡಲಾಗಿದೆ.

ತಮ್ಮ ನಂಬುಗೆಯ,

[signature] 9/2

ಶಾಖಾಧಿಕಾರಿ
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	430
ಮಾನ್ಯ ಸದಸ್ಯರ ಹೆಸರು	ಶ್ರೀ ಕುಮಾರ್ ಬಂಗಾರಪ್ಪ ಎಸ್.(ಸೊರಬ)
ಉತ್ತರಿಸಬೇಕಾದ ದಿನಾಂಕ	15.02.2019
ಉತ್ತರಿಸುವ ಸಚಿವರು	ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ	ಸೊರಬ ವಿಧಾನಸಭಾ ಕ್ಷೇತ್ರದಲ್ಲಿ ಸರ್ಕಾರ ನಿಗಧಿಪಡಿಸಿದಂತೆ ವಿದ್ಯಾರ್ಥಿಗಳ ವಸತಿನಿಲಯಗಳಿಗೆ ಆಹಾರವನ್ನು ಸರಬರಾಜು ಮಾಡಲಾಗುತ್ತಿದೆಯೇ;	ಹೌದು.
ಆ	ಆಹಾರ ಗುಣಮಟ್ಟವನ್ನು ಯಾರು ಪರೀಕ್ಷಿಸುತ್ತಿದ್ದಾರೆ;	ವಿದ್ಯಾರ್ಥಿನಿಲಯಗಳ ನಿಲಯಪಾಲಕರು / ನಿಲಯ ಮೇಲ್ವಿಚಾರಕರು ಸರಬರಾಜು ಏಜೆನ್ಸಿಯವರಿಂದ ಆಹಾರ ಸಾಮಗ್ರಿಗಳನ್ನು ಪಡೆಯುವ ಮುಂಚೆ ಆಹಾರದ ಗುಣಮಟ್ಟದ ಬಗ್ಗೆ ಖಚಿತಪಡಿಸಿಕೊಂಡು ದಾಸ್ತಾನನ್ನು ಪಡೆದುಕೊಳ್ಳುತ್ತಾರೆ.
ಇ	Below tender ಕೂಗುತ್ತಿರುವವರ ವಿರುದ್ಧ ಯಾವ ರೀತಿಯಲ್ಲಿ ಕ್ರಮ ಜರುಗಿಸಲಾಗುತ್ತಿದೆ?	ಕೆ.ಟಿ.ಪಿ.ಪಿ. ನಿಯಮಗಳನ್ವಯ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಪ್ರಕ್ರಿಯೆ ನಡೆಸಿ, ಟೆಂಡರ್‌ನಲ್ಲಿ ವಿಧಿಸಲಾಗಿರುವ ಎಲ್ಲಾ ಷರತ್ತುಗಳನ್ನು ಪೂರೈಸಿದ ಹಾಗೂ ಸ್ಥಳೀಯ ಮಾರುಕಟ್ಟೆ ದರಕ್ಕೆ ಸಮೀಪವಿರುವ ಎಲ್-1 ಟೆಂಡರ್‌ದಾರರಿಗೆ ಜಿಲ್ಲಾಧಿಕಾರಿಯ ಅಧ್ಯಕ್ಷತೆಯಲ್ಲಿ ರಚಿಸಲಾಗಿರುವ ಜಿಲ್ಲಾ ಸಮಿತಿಯ ಅನುಮೋದನೆಯನ್ನು ಪಡೆದು, ಸರಬರಾಜು ಆದೇಶ ನೀಡಲಾಗುತ್ತದೆ.

ಸಂ: ಹಿಂವಕ 161 ಬಿಎಂಎಸ್ 2019

(ಸಿ.ಪುಟ್ಟರಂಗಶೆಟ್ಟಿ)
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.



ಕರ್ನಾಟಕ ಸರ್ಕಾರ

ಸಂಖ್ಯೆ:ಪ್ರಇ 48 ಪ್ರವಾವಿ 2019

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ
ಬೆಂಗಳೂರು ದಿನಾಂಕ: 12.02.2018

U/S
15/02/19

ಇವರಿಂದ,

ಸರ್ಕಾರದ ಕಾರ್ಯದರ್ಶಿ,
ಪ್ರವಾಸೋದ್ಯಮ ಇಲಾಖೆ
ವಿಕಾಸ ಸೌಧ, ಬೆಂಗಳೂರು.

ಇವರಿಗೆ,

ಕಾರ್ಯದರ್ಶಿಗಳು,
ಕರ್ನಾಟಕ ವಿಧಾನ ಸಭೆ,
ವಿಧಾನ ಸೌಧ. ಬೆಂಗಳೂರು.

ಮಾನ್ಯರೆ,

ವಿಷಯ: ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ [illegible] ([illegible]) [illegible] ರವರು ಮಂಡಿಸಿರುವ ಚುಕ್ಕೆ ಗುರುತಿನ/ಗುರುತಿಲ್ಲದ ಪ್ರಶ್ನೆ ಸಂಖ್ಯೆ: 126 ಕ್ಕೆ ಉತ್ತರ.

* * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ಸದಸ್ಯರು ಮಂಡಿಸಿರುವ ಚುಕ್ಕೆ ಗುರುತಿನ/ಗುರುತಿಲ್ಲದ ಪ್ರಶ್ನೆ ಸಂಖ್ಯೆ: 126 ಕ್ಕೆ ಉತ್ತರದ 10 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಮುಂದಿನ ಕ್ರಮಕ್ಕಾಗಿ ಕಳುಹಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ವಿಶ್ವಾಸಿ,

[ಬಿ.ಎನ್.ಯತಿರಾಜ್]
ಸರ್ಕಾರದ ಅಧೀನ ಕಾರ್ಯದರ್ಶಿ
ಪ್ರವಾಸೋದ್ಯಮ ಇಲಾಖೆ

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 126

ಮಾನ್ಯ ಸದಸ್ಯರ ಹೆಸರು : ಶ್ರೀ ಅಪ್ಪಚ್ಚು (ರಂಜನ್) ಎಂ. ಪಿ. (ಮಡಿಕೇರಿ)

ವಿಷಯ : ಹೋಂ ಸ್ಟೇ ರೆಸಾರ್ಟ್‌ಗಳು

ಉತ್ತರಿಸುವ ಸಚಿವರು : ಪ್ರವಾಸೋದ್ಯಮ ಮತ್ತು ರೇಷ್ಮೆ ಸಚಿವರು

ಉತ್ತರಿಸುವ ದಿನಾಂಕ : 15-02-2019

ಕ್ರ.ಸ	ಪ್ರಶ್ನೆ	ಉತ್ತರ
ಅ)	ಕೊಡಗು ಜಿಲ್ಲೆ ಮಡಿಕೇರಿಯಲ್ಲಿರುವ ಪುರಾತನ ಹಾಗೂ ಐತಿಹಾಸಿಕ ಹಿನ್ನೆಲೆಯುಳ್ಳ ಕೋಟೆಯ ಮೇಲ್ಛಾವಣಿಯು ಕುಸಿಯುತ್ತಿರುವುದು ಹಾಗೂ ಮುಂದಿನ ಮಳೆಗಾಲದಲ್ಲಿ ಗೋಡೆಯು ಸಹ ಕುಸಿಯುವ ಹಂತದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಕೊಡಗು ಜಿಲ್ಲೆ ಮಡಿಕೇರಿ ನಗರದಲ್ಲಿರುವ ಕೋಟೆಯು ಕೇಂದ್ರ ಸಂಸ್ಕೃತಿ ಮಂತ್ರಾಲಯ ಅಧೀನದ ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯ ವ್ಯಾಪ್ತಿಗೆ ಒಳಪಡುತ್ತದೆ. ಕೋಟೆಯು ಸುಸ್ಥಿತಿಯಲ್ಲಿರುತ್ತದೆ.
